ಶ್ರೀ ವಾಟಾಳ್ ನಾಗರಾಜ್.—ಇಲ್ಲ, ನಿನ್ನೆ ಮಾತನಾಡುವಾಗ ಅವರು ಏನು ಹೇಳಿದರು ಎನ್ನುವುದು ನಮಗೆ ಗೊತ್ತಿದೆ. ಏಕೆಂದರೆ, ಅವರು ಮೊಸರಿನಲ್ಲಿ ಕಲ್ಲು ಹುಡುಕುವುದಕ್ಕೆ ಹೋಗಿದ್ದರು ಅಂದರು. ನಾವು ಕಲ್ಲು ಗಿಲ್ಲು ಹುಡುಕುವುದಕ್ಕೆ ಹೋಗಲಿಲ್ಲ. ಇದುವರೆಗೆ ನಮಗೆ ಮೊಸರಿನಲ್ಲಿ ಕಲ್ಲು ಸಿಕ್ಕಿಲ್ಲ. ಆದುದರಿಂದ ತಾವು ಈ ಒಂದು ನಿಲುವನ್ನು ತೆಗೆದುಕೊಂಡು ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯುವುದರಲ್ಲಿ ಅಪಾರವಾದಂಥ ಬೆಲೆಯನ್ನು ಕೊಟ್ಟಿದ್ದೀರಿ ಎಂದು ಹೇಳಿ, ತಮ್ಮ ನಿಲುವನ್ನು ನಾವು ಸಂಪೂರ್ಣವಾಗಿ ಅಭಿನಂದಿಸುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಅವರು ಕೃಷ್ಣನ ರಕ್ಷಣೆ ಇರಬೇಕು ಎಂದು ಹೇಳುತ್ತಾರಲ್ಲ, ಮಹಾಭಾರತದಲ್ಲಿ ಕೌರವರಿಗೆ ಕೃಷ್ಣ ರಕ್ಷಣೆ ಕೊಟ್ಟಿದ್ದನ್ನು ನಾವು ನೋಡಲಿಲ್ಲ. ಆದುದರಿಂದ ಅವರು ಪಾಂಡವರ ಪಾತ್ರ ವಹಿಸಿದರೆ ರಕ್ಷಣೆ ಕೊಡಬಹುದು, ಕೌರವರ ಪಾತ್ರವೇ ವಹಿಸುತ್ತಾ ಇದ್ದರೆ ಹೇಗೆ ರಕ್ಷಣೆ ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಅಧ್ಯಕ್ಷರು.—ನಿನ್ನೆ ಶ್ರೀಮಾನ್ ಹನುಮೇಗೌಡರ ಭಾಷಣ ಮುಗಿದಿತ್ತು ಎಂದು ನಾನು ಭಾವನೆ ಮಾಡುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

೧೯೮೦–೮೧ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

(ಸಣ್ಣ ನೀರಾವರಿ, ನೀರಾವರಿ ಜಲಸಂಚಾರ, ಒಳ ಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು, ಲೋಕೋಪಯೋಗಿ ಕಾಮಗಾರಿಗಳು (ನಿರ್ಮಾಣ ಹೊರತು), ಕಟ್ಟಡಗಳು, ರಸ್ತೆಗಳು ಮತ್ತು ಸೇತುವೆಗಳು)

† ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷರೇ, ಒಂದೆರಡು ಪಾಯಿಂಟ್ಸ್ ಹೇಳುವುದಿತ್ತು, ಅದನ್ನು ಹೇಳಿಬಿಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ನಾನು ಬರಗಾಲ ಪ್ರದೇಶದಿಂದ ಬಂದವನು, ಜನರು ನನಗೆ ಮತಗಳನ್ನು ಕೊಟ್ಟಿದ್ದಾರೆ. ಮಲೆನಾಡು ಹೋಯಿತು. ನಾನು ಚಿಕ್ಕ ವಯಸ್ಸಿನಲ್ಲಿ ಪ್ರಾಥಮಿಕ ಶಾಲೆಯಲ್ಲಿ ಓದುತ್ತಾ ಇದ್ದಾಗ ೧೯೩೭–೩೮ನೇ ಇಸವಿಯಲ್ಲಿ ೪೫–೫೦ ಇಂಚು ಮಳೆಯಾಗುತ್ತಿತ್ತು, ಇವತ್ತು ೧೦–೧೨ ಇಂಚು ಕೂಡ ಮಳೆಯಾಗುತ್ತಾ ಇಲ್ಲ. ಕಳೆದ ೫–೭ ವರ್ಷಗಳಿಂದ ನಿರಂತರವಾಗಿ ಬರಗಾಲ ಬರುತ್ತಾ ಇದೆ. ಜನರ ಹತ್ತಿರ ಇದ್ದದ್ದನ್ನೆಲ್ಲ ಮಣ್ಣಿಗೆ ಮಾಡಿ ಇವತ್ತು ಜೀವನ ನಡೆಸುವುದು ಬಹಳ ಕಷ್ಟದ ಪರಿಸ್ಥಿತಿಗೆ ಬಂದಿದೆ. ಸಾವಿರಾರು ಜನ ಪಶ್ಚಿಮ ಘಟ್ಟಗಳಿಗೆ, ಕಾಫಿ ತೋಟಗಳಿಗೆ ಕೂಲಿಗೆ ಹೋಗುವಂಥ ದೃಶ್ಯವನ್ನು ಕಣ್ಣಾರೆ ನೋಡಿದಾಗ ಎಂತಹವರಿಗೂ ಕರುಳು ಕಿತ್ತು ಬರುತ್ತದೆ. ಆ ಜನರು ತಮ್ಮ ಮನೆ ಮಠ ಬಿಟ್ಟು, ತಮ್ಮಲ್ಲಿದ್ದಂಥ ಪ್ರಾಣಿಗಳನ್ನೂ ಕೂಡ ಮಾರಿ ಇದ್ದ ಬದ್ದ ಸ್ವಲ್ಪ ಸಾಮಾನುಗಳನ್ನು ಹೊತ್ತುಕೊಂಡು ಕೂಲಿ ಕೆಲಸಕ್ಕೆ ಹೋಗತಕ್ಕಂಥ ಪರಿಸ್ಥಿತಿ ಬಂದಿದೆ. ಈಗಿನ ವಾತಾವರಣವನ್ನು ನೋಡಿದರೆ ಇನ್ನು ಮೇಲೆ ಮಳೆ ಹೀಗೆ ಆಗುತ್ತದೇನೊ ಎಂದು ನನಗೆ ಅನಿಸುತ್ತಾ ಇದೆ. ಹಿಂದೆ ನಾನು ವ್ಯವಸಾಯ ಮಾಡುತ್ತಾ ಇದ್ದೆ. ೧೦ ವರ್ಷಗಳ ಹಿಂದೆ ಒಂದು ಸಲಕ್ಕೆ ಮಳೆಗಾಲದಲ್ಲಿ ೪–೫ ಸಲ ಡಿಪ್ರೆಷನ್ ಬಂಗಾಳ ಕೊಲ್ಲಿಯಲ್ಲಿ ಆಗುತ್ತಿತ್ತು. ಬಂಗಾಳ ಕೊಲ್ಲಿಯಲ್ಲಿ ಡಿಪ್ರೆಷನ್ ಆದಾಗ ಮೈಸೂರಿಗೆ ಅಂದರೆ ಪ್ರಮುಖವಾಗಿ ಕರ್ನಾಟಕದಲ್ಲಿ ಮಳೆ ಆಗೇ ಆಗುವುದು.

ಕಳೆದ ೪–೫ ವರ್ಷಗಳಿಂದ ಏನು ದುರಾದೃಷ್ಟವೊ ಏನೋ ಡಿಪ್ರೆಷನ್ ಕೂಡ ಆಗುತ್ತಿಲ್ಲ. ಮುಂಗಾರಾಗಲೀ, ಹಿಂಗಾರಾಗಲೀ ಸಕಾಲದಲ್ಲಿ ಬರುತ್ತಿಲ್ಲ. ಕೆಲವು ನೀರಾವರಿ ಜಾಗಗಳನ್ನು ಬಿಟ್ಟರೆ ಅನೇಕ ಪ್ರದೇಶ ಬೆಂಗಾಡು ಪ್ರದೇಶವಾಗಿ ಮಾರ್ಪಾಟಾಗಿದೆ. ಕೆಲವು ತಜ್ಞರು ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ೮೦೦ ಟಿ. ಎಂ. ಸಿ. ನೀರು ಹರಿದುಹೋಗುತ್ತದೆ ಎಂದು ಹೇಳುತ್ತಾರೆ ಮತ್ತೆ ಕೆಲವರು ೨೦೦೦ ಟಿ. ಎಂ. ಸಿ. ನೀರು ಹರಿದು ಹೋಗುತ್ತದೆಂದು ಹೇಳುತ್ತಾರೆ. ಹಿಂದೆ ಇದ್ದು ಈಗ ರಿಟೈರ್ಡ್ ಆಗಿರುವಂಥ ತಜ್ಞ ಇಂಜಿನಿಯರ ಬಬ್ಬಾಗು ವೇದಾವಿ ಒಬ್ಬರು, ಪಶ್ಚಿಮ ಘಟ್ಟದಲ್ಲಿ ಹೆಚ್ಚು ಮಳೆಯಾಗಿ ಅರಬ್ಬಿ ಸಮುದ್ರಕ್ಕೆ ಹೋಗತಕ್ಕಂಥ ಸುಮಾರು ೨೦೦ ಟಿ. ಎಂ. ಸಿ. ಯಷ್ಟು ನೀರನ್ನು ಕನಿಷ್ಠಪಕ್ಷ ಎಕನಾಮಿಕಲ್ಲಾಗಿ ಪೂರ್ವಭಾಗಕ್ಕೆ ಹರಿಸಬಹುದು. ಹೀಗೆ ಹರಿಸುವುದರಿಂದ ನಿರಂತರವಾಗಿ ಶಿವಮೊಗ್ಗ, ಹಾಸನ, ಚಿಕ್ಕಮಗಳೂರು ಹಾಗು ಮೈಸೂರು ಜಿಲ್ಲೆಗಳಲ್ಲಿ ಮಳೆ ನೆರಳಿನ ಪ್ರದೇಶ ಎನಿದೆ, ರೈನಿ ಷಾಡೋ ಏರಿಯಾ ಎನಿದೆ ಆ ಭಾಗದ ರೈತರಿಗೆ, ಜನರಿಗೆ ನೀರನ್ನು ಕೊಡಬಹುದು, ಅವರನ್ನು ಕ್ಷಾಮದ ದವಡೆಯಿಂದ ಬಿಡುಗಡೆ ಮಾಡಿ ಅವರಿಗೆ ಶಾಶ್ವತವಾದ ಪರಿಹಾರ ಒದಗಿಸಬಹುದು ಎನ್ನುವ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಈಗ ಸದ್ಯದ ಪರಿಸ್ಥಿತಿಯಲ್ಲಿ ಕೃಷ್ಣ ಮೇಲ್ದಂಡೆ ಯೋಜನೆ,

ಕಾವೇರಿ ಬೇಸಿನ್ ಯೋಜನೆಗಳನ್ನು ಪೂರ್ತಿಗೊಳಿಸದೆ ರಾಜ್ಯ ಸರ್ಕಾರದವರು ಈ ಯೋಜನೆಗೆ ಹಣ ಹಾಕತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲ. ಈ ಎರಡೂ ಯೋಜನೆಗಳನ್ನು ಪೂರೈಸಲು ಇಡೀ ದೇಶದ ಜನ ಯಾವ ತ್ಯಾಗಕ್ಕಾದರೂ ತಯಾರಿದ್ದಾರೆ. ನಮ್ಮ ಪಾಲಿನ ನೀರನ್ನು ಯಾವ ರೀತಿಯಲ್ಲಾದರೂ ಉಪಯೋಗಿಸಿಕೊಳ್ಳಲೇಬೇಕಾಗಿ ಬರುತ್ತದೆ. ಈ ವಿಚಾರದಲ್ಲಿ ನನ್ನ ಸಲಹೆ ಏನೆಂದರೆ, ಈಗ ಶುರು ಮಾಡಿ, ಸರ್ವೆ ಮಾಡಿ ಪ್ರಾಜೆಕ್ಟ್ ಮಾಡಿ ಇಟ್ಟುಕೊಂಡರೆ, ಕಾವೇರಿ ಮತ್ತು ಕೃಷ್ಣ ಬೇಸಿನ್ ಯೋಜನೆಗಳು ೨೦೦೦ ಇಸವಿಯೊಳಗೆ ಮುಗಿದುಹೋಗುತ್ತವೆ. ಅವು ಮುಗಿದ ತಕ್ಷಣ ಪಶ್ಚಿಮ ಘಟ್ಟದ ಯೋಜನೆಯನ್ನು ತೆಗೆದುಕೊಂಡರೆ, ವೇಸ್ಟಾಗಿ ಅರಬ್ಬೀಸಮುದ್ರಕ್ಕೆ ಬೀಳತಕ್ಕ ನೀರನ್ನು ಜಮೀನುಗಳಿಗೆ ಬಳಸಿಕೊಳ್ಳಬಹುದು. ಈ ಒಂದು ಯೋಜನೆಗೆ ವರ್ಲ್ಡ್ ಬ್ಯಾಂಕ್ ನಿಂದಲಾದರೂ ಸರಿಯೇ ಎಲ್ಲಿಂದಲಾದರೂ ಸರಿಯೇ ಹಣ ತೆಗೆದುಕೊಂಡು ಬನ್ನಿ. ನಮ್ಮ ದೇಶದ ರೈತರಿಗೆ ನೀರು ಕೊಟ್ಟು ವ್ಯವಸಾಯಕ್ಕೆ ಅವಕಾಶ ಕಲ್ಪಿಸಿ ಕೊಟ್ಟರೆ, ಅವರು ಋಣವನ್ನು ತೀರಿಸುತ್ತಾರೆ. ರೈತರು ಎಂದೂ ಕೂಡ ಬೇರೆಯವರ ಹಂಗಿನಲ್ಲಿ, ಋಣದಲ್ಲಿ ಬದುಕುವಂಥ ಜನರಲ್ಲ ಎಂಬುದನ್ನು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಸರ್ಕಾರ ಇದರ ಬಗ್ಗೆ ತಕ್ಷಣ ತಜ್ಞರನ್ನು ನೇಮಕ ಮಾಡಬೇಕು. ಈ ಪ್ರಾಜೆಕ್ಟನ್ನೂ ತಕ್ಷಣ ಮಾಡಿಸಬೇಕು. ಮತ್ತು ನಿರಂತರವಾಗಿ ಬರಗಾಲಕ್ಕೆ ತುತ್ತಾಗತಕ್ಕ ಪ್ರದೇಶದ ಜನರಿಗೆ ಶಾಶ್ವತ ಪರಿಹಾರ ಒದಗಿಸಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯಿಸುತ್ತೇನೆ. ಸ್ವಾಮಿ, ಇನ್ನು

ರಸ್ತೆಗಳಿಗೆ ಟಾರ್ ಹಾಕುವುದನ್ನು ಬಹುಶಃ ಎಲ್ಲರೂ ನೋಡಿರಬಹುದು. ರಸ್ತೆಗಳಿಗೆ ಟಾರ್ ಹಾಕುವುದಕ್ಕೆ ಎಷ್ಟು ಖರ್ಚಾಗುತ್ತದೆ, ಕಾಸ್ಟ್ ಎನ್ನುವುದು ಎಲ್ಲರಿಗೂ ಗೊತ್ತಿದೆ. ನೀವು ಎಲ್ಲಿ ನೋಡಿದರೂ ಹಸಿ ಮರ ಕಡಿಯುತ್ತಾರೆ, ಅದನ್ನು ಉರಿ ಹಾಕುತ್ತಾರೆ, ಅದು ಉರಿಯುವುದಿಲ್ಲ, ಅವಕ್ಕೆ ಟಾರ್ ಹಾಕುತಾರೆ. ಕೊಟ್ಟಂಥ ಹಸ್ಟಾರಿಗೆ ಅರ್ಧ ಭಾಗವನ್ನು ಮೆಲ್ಟ್ ಮಾಡುವುದಕ್ಕೆ ಉರಿಸಿ ಹಾಳು ಮಾಡುತ್ತಾರೆ. ಅವರಿಗೆ ಕೊಟ್ಟದ್ದರಲ್ಲಿ ಅರ್ಧವನ್ನೂ ಕೂಡ ರೋಡಿಗೆ ಹಾಕುವುದಿಲ್ಲ. ಇಲಾಖೆಯಲ್ಲಿ ಬೇಕಾದಷ್ಟು ಜನ ಇಂಜಿನಿಯರುಗಳು ಇದ್ದಾರೆ, ಅಧಿಕಾರಿಗಳು ಇದ್ದಾರೆ, ಅವರು ಅಲ್ಲಿಗೆ ಹೋಗುತ್ತಿರುತ್ತಾರೆ, ಬರುತ್ತಿರುತ್ತಾರೆ, ಇದನ್ನು ನೋಡುವುದಿಲ್ಲವೆ ಇಂಥ ಅನ್ಯಾಯವನ್ನು ಏಕೆ ತಪ್ಪಿಸುವುದಕ್ಕೆ ಆಗುವುದಿಲ್ಲ ಎಂದು ನನಗನ್ನಿಸುತ್ತದೆ. ಇವತ್ತು ಪೆಟ್ರೋಲ್ ಪ್ರಾಡಕ್ಟ್‌ಗಳ ರೇಟ್ ಎಷ್ಟೊಂದು ಜಾಸ್ತಿಯಾಗಿದೆ. ಒಂದು ಡ್ರಂಟಾರ್‌ಗೆ ಎಷ್ಟು ದುಡ್ಡು ಆಗುತ್ತದೆ. ನಾವು ದಾರಿಯಲ್ಲಿ ಹೋಗುತ್ತಿರುವಾಗ ನೋಡಿರುತ್ತೇನೆ. ೧೦ ಡ್ರಂಗಳು ಇದ್ದರೆ ನಾಲ್ಕು ನೆಟ್ಟಗೆ ನಿಂತಿರುತ್ತವೆ. ಮೂರು ಡ್ರಂಗಳು ಕೆಳಗೆ ಬಿದ್ದು ಎಲ್ಲಾ ಸೋರಿ ಹೋಗಿರುತ್ತದೆ. ಈ ಬಗ್ಗೆ ಇಲಾಖೆಯ ಅಧಿಕಾರಿಗಳಿಗೆ ಕಂಟ್ರಾಕ್ಟ್‌ದಾರರನ್ನು ಕೇಳುವಂಥ ದಾಕ್ಷಿಣ್ಯ ಇಲ್ಲವೆ. ನಾನು ಈ ಸದನದ ಮೂಲಕ ಇಂಜಿನಿಯರುಗಳನ್ನು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಇಂಥ ಬಡ ದೇಶದಲ್ಲಿ ಇಷ್ಟೊಂದು ವ್ಯರ್ಥವಾಗಿ ಹಾಳು ಮಾಡುವುದರ ಕಡೆಗೆ ಸ್ವಲ್ಪ ಗಮನಕೊಟ್ಟು ಕೆಲಸ ಕಾರ್ಯಗಳನ್ನು ಮಾಡಿಸಬೇಕೆಂದು ವಿನಂತಿಸುತ್ತೇನೆ.

ಇನ್ನು ಲೋಕೋಪಯೋಗಿ ಇಲಾಖೆಯವರು ಡ್ಯಾಂಗಳನ್ನು ಕಟ್ಟುತ್ತಾರೆ. ಅಲ್ಲಿನ ರೈತರ ಜಮೀನು ಮುಳುಗಡೆಯಾಗುತ್ತದೆ. ಮುಳುಗಡೆಯಾಗಲೇಬೇಕು. ೧೦ ಜನ ಮುಳುಗಡೆಯಾದರೆ, ಸಾವಿರಾರು ಜನಕ್ಕೆ ಅನುಕೂಲವಾಗುತ್ತದೆ. ಒಂದು ಸಂಕಟದ ವಿಚಾರ ಏನೆಂದರೆ, ೧೦,೦೦೦ ರೂ. ಬೆಲೆ ಕೊಡುತ್ತಾರೆಂದು ಇಟ್ಟುಕೊಳ್ಳಿ. ಒಂದು ಎಕರೆಗೆ ೨೫–೩೦ ಸಾವಿರ ರೂಪಾಯಿ ಇದ್ದರೆ, ಇವರು ತೀರ್ಮಾನ ಮಾಡಿ ಅವಾರ್ಡ್ ಕೊಡುವುದು ೧೨–೧೩ ಸಾವಿರ ರೂಪಾಯಿಗಳಿಗೆ. ಈ ರೀತಿ ಯಾದರೆ ಅವರು ನ್ಯಾಚುರಲ್ ಆಗಿ ಕೋರ್ಟಿಗೆ ಹೋಗುತ್ತಾರೆ. ಎಷ್ಟೋ ಸಂದರ್ಭಗಳಲ್ಲಿ ಕೋರ್ಟಿಗೆ ಹೋದ ಮೇಲೆ ದುಡ್ಡು ಸಿಗದೇ ಏನಾಹ್ಯಾನ್ಸ್ ಮಾಡಿದ್ದೂ ಕೈ ಸೇರುವುದಿಲ್ಲ. ಕೈಸೇರಿದರೂ ಎಷ್ಟು ದುಡ್ಡು ವ್ಯರ್ಥವಾಗಿ ಕೋರ್ಟು ಕಚೇರಿ, ಲಾಯರ್‌ಗಳು ಎಂದು ಹಾಳಾಗಿ ಹೋಗುತ್ತಾರೆ. ಇದರ ಬದಲು ಸರ್ಕಾರದವರು ಸಂಬಂಧಪಟ್ಟ ಇಂಜಿನಿಯರುಗಳು ಮತ್ತು ರೆವಿನ್ಯೂ ಅಧಿಕಾರಿಗಳನ್ನು ಕೆಲಸಕ್ಕೆ ಗೊತ್ತು ಮಾಡಿ ಯಾವ ಯಾವ ಹಳ್ಳಿಗಳು ಮುಳುಗಡೆಯಾಗಿವೆ ಎನ್ನುವ ಲೆಕ್ಕ ತೆಗೆದುಕೊಂಡು, ಆ ಹಳ್ಳಿಯ ರೈತರನ್ನು ಕರೆಸಿ, ನಿಮ್ಮ ಜಮೀನಿಗೆ ಇಷ್ಟು ರೇಟಿದೆ, ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಕೂಡ ಇಂತಿಥ ರೇಟಿಗೆ ಮಾರಾಟ ಮಾಡಿದ್ದೀರಿ, ಅಕಸ್ಮಾತ್ ಜಾಸ್ತಿ ಇದ್ದರೆ ದುಡ್ಡು ಕೊಡುತ್ತೇವೆಂದು ಹೇಳಿದರೆ, ರೈತರು ಸಂತೋಷವಾಗಿ ಜಮೀನು ಕೊಡುತ್ತಾರೆ. ಇದರಿಂದ ಅವರಿಗೆ ಒಂದೇ ಸಾರಿ ಹಣ ಸಿಕ್ಕಿದಂತಾಗುತ್ತದೆ. ಕೋರ್ಟು ಕಚೇರಿಗೆ ಹೋಗುವುದು ತಪ್ಪುತ್ತದೆ. ಎರಡನೇದು ಪ್ರಾಜೆಕ್ಟ್ ಕೂಡ ಬೇಗ ಮುಗಿಯುತ್ತದೆ. ಅಧ್ಯಕ್ಷರೆ, ಈ ಕೆಲಸವನ್ನು ಅವರು ಮಾಡುವುದಿಲ್ಲ. ಎಷ್ಟೋ ಸಂದರ್ಭಗಳಲ್ಲಿ ಇವರು ಕಡಿಮೆ ರೇಟ್ ಕೊಡುತ್ತಾರೆ. ಅವರು ಕೋರ್ಟಿಗೆ ಹೋಗುತ್ತಾರೆ ಅಲ್ಲಿಂದ ಹೈಕೋರ್ಟಿಗೆ ಹೋಗಿ ಸ್ಟೇ ತರುತ್ತಾರೆ. ಆದುದರಿಂದ ಬರೀ ತಿನ್ನುವವರ ಪಾಲು ಆಗುತ್ತದೆ.

ಆ ನಿರ್ಭಾಗ್ಯ ಜೀವಿಗಳು ಏನು ಇದ್ದಾರೋ, ಅವರ ಕೈಗೆ ಎಷ್ಟೋ ಸಂದರ್ಭಗಳಲ್ಲಿ ಹಣ ಸೇರುವುದಿಲ್ಲ, ಈಗ ಇಂತಹ ಒಳ್ಳೊಳ್ಳೆಯ ಉತ್ಕೃಷ್ಟವಾದ ಭೂಮಿಯೆಲ್ಲವನ್ನು ಕಳೆದುಕೊಂಡು ಕೊನೆಗೆ ಎಲ್ಲೋ ಬಾರೆ ಜಮೀನನ್ನು ಪಡೆದು ಕೊಳ್ಳುತ್ತಾರೆ. ಒಂದೂವರೆ ಎಕರೆ ಎರಡು ಎಕರೆ ಇವರಿಗೆ ಕೊಡಬಹುದು ಇಲ್ಲದಿದ್ದರೆ ದುಡ್ಡು ಪಡೆದುಕೊಂಡರೆ ಇನ್ನು ದುಡ್ಡು ಸಿಕ್ಕಿತಲ್ಲ ಎಂದು ಹೇಳಿ, ಮನೆಯಲ್ಲಿ ಯಾರಾದರೂ ಓದಿದವರು ಇದ್ದರೆ, ಅವರು ತೆಗೆದುಕೊಂಡು ಹೋಗಿ ಮಜಾಮಾಡುತ್ತಾರೆ. ಆ ಬಡಪಾಯಿಗಳು ಮತ್ತೆ ಯಥಾ ಪ್ರಕಾರ ಕೂಲಿಗೆ ಹೋಗಬೇಕು. ಆದ್ದರಿಂದ ಕೊನೇ ಪಕ್ಷ ಇದನ್ನು ರೂಲ್ ಎಂದಾದರೂ ಮಾಡಿ. ಜಮೀನು ಅಕ್ವೈರ್ ಮಾಡಬೇಕಾದರೆ ಕೊನೇ ಪಕ್ಷ ಆ ಹಳ್ಳಿಗೆ ಹೋಗಿ ನೆಗೋಷಿಯೇಟ್ ಮಾಡಿ ಸಂಬಂಧಪಟ್ಟ ಜಮೀನುದಾರರಿಗೆ ತಕ್ಷಣ ಹಣವನ್ನು ಕೊಟ್ಟು ಆ ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಈ ಇಲಾಖೆಯಲ್ಲಿ ಟೆಂಡರ್‌ಗಳನ್ನು ಕರೆಯತಕ್ಕಂಥಾದ್ದು ಇದೆ. ಟೆಂಡರ್ ಕರೆಯುವುದರಲ್ಲಿ ೬ ತಿಂಗಳು, ೧೨ ತಿಂಗಳು, ಒಂದೂವರೆ ವರ್ಷ ಎರಡು ವರ್ಷ ಎಂದು ಮಾಡುತ್ತಾರೆ. ಆ ರೀತಿ ಟೆಂಡರ್ ಕರೆದಮೇಲೆ ಆ ಷೆಡ್ಯೂಲ್ ಟೈಮ್‌ಗೆ ಸ್ಟಿಕ್ ಆನ್ ಆಗುವುದಿಲ್ಲ. ೩ ತಿಂಗಳು ೬ ತಿಂಗಳು ಸುಮ್ಮನೆ ಇರುತ್ತಾರೆ. ಏನೇನೋ ಕಾರಣ ಕೊಡುತ್ತಾರೆ. ಆಮೇಲೆ ನೆಗೋಷಿಯೇಷನ್ ಮಾಡಿ ಏನಾದರೂ ವ್ಯವಹಾರ ಮಾಡಿಕೊಂಡು ೫೦ ಲಕ್ಷ ರೂಪಾಯಿಗಳ ಎಸ್ಟಿಮೇಟ್ ಒಂದೂವರೆ ಕೋಟಿಯಿಂದ ನಾಲ್ಕು ಕೋಟಿ ರೂಪಾಯಿಗಳಿಗೆ ಹೊರಟು ಹೋಗುತ್ತದೆ. ಇವರಿಗೆ ಟೈಮ್‌ಗೆ ಸರಿಯಾಗಿ ಕೆಲಸವೂ ಆಗುವುದಿಲ್ಲ ಹಣವೂ ವ್ಯರ್ಥ ಆಯಿತು. ಜನಗಳಿಗೆ ಏನು ಉಪಕಾರವಾಗ ಬೇಕಾಗಿತ್ತೋ ಅದು ಕೂಡ ಮೂರು ನಾಲ್ಕು ವರ್ಷಗಳ ಕಾಲ ಮುಂದೆ ಹೋಗುತ್ತದೆ. ಇಂತಹ ಅನಾನುಕೂಲ ಆಗುವಂತಾದ್ದನ್ನು ತಪ್ಪಿಸಬೇಕಾದರೆ ಇಲಾಖೆಯ ಇಂಜಿನಿಯರ್‌ಗಳು ಸ್ಟ್ರಿಕ್ಟ್ ಆಗಿದ್ದು, ಏನು ಟೈಮ್‌ಬಾಂಡ್ ಪ್ರೋಗ್ರಾಮ್ ಹಾಕಿರುತ್ತಾರೆ, ಆ ಪ್ರೋಗ್ರಾಂ ಪ್ರಕಾರ ಕೆಲಸಕಾರ್ಯಗಳನ್ನು ಮಾಡಿಸಬೇಕು ನನ್ನ ಆಸೆ ಏನೆಂದರೆ, ಈ ದೇಶದಲ್ಲಿ ನಿರಂತರವಾಗಿ ಆಗತಕ್ಕಂಥ ಅಭಿವೃದ್ಧಿಯನ್ನು ಮಾಡಬೇಕಾಗಿರುವುದು ಇಂಜಿನಿಯರ್‌ಗಳು ಯಾರಮನೆಗೆ ಹೋಗಿ ನೋಡಿದರೂ ವಿಶ್ವೇಶ್ವರಯ್ಯನವರ ಫೋಟೋ ಇಟ್ಟುಕೊಂಡಿರುತ್ತಾರೆ, ನನಗೆ ಬಹಳ ಸಂತೋಷವಾಗುತ್ತದೆ. ವಿಶ್ವೇಶ್ವರಯ್ಯನವರ ಆದರ್ಶದಲ್ಲಿ ಕೊನೇಪಕ್ಷ ಒಂದು ಸ್ವಲ್ಪಭಾಗವನ್ನಾದರೂ ಅವರ ಜೀವನದಲ್ಲಿ ಅಳವಡಿಸಿಕೊಂಡು ಏನು ಬಡ ಜನತೆ ಇದ್ದಾರೆ, ಆ ಬಡ ಜನತೆಗೆ ಅನುಕೂಲವಾಗತಕ್ಕ ಕೆರೆ, ರಸ್ತೆ, ಕಟ್ಟಡಗಳು, ಒಳ್ಳೆಯ ಉತ್ತಮವಾದ ಕೆಲಸಗಳನ್ನು ಮಾಡುವುದರಿಂದ, ಅವರಿಗೂ ನೆಮ್ಮದಿ ಇರುತ್ತದೆ. ಜನರಿಗೂ ಒಳ್ಳೆಯದಾಗುತ್ತದೆ. ಎಷ್ಟೋ ಜನರು ನಮ್ಮ ಇಂಜಿನಿಯರ್ ಸಾಹೇಬರು ಇದ್ದರು, ಇಂತಹ ಒಂದು ಒಳ್ಳೆಯ ಕೆಲಸವನ್ನು ಮಾಡಿಕೊಟ್ಟರು. ಇನ್ನೂ ಚೆನ್ನಾಗಿದೆ ಎಂದು ನಿರಂತರ ಸ್ಮರಿಸಿಕೊಳ್ಳುತ್ತಾರೆ. ಇಂತಹ ಒಂದು ಒಳ್ಳೆಯ ಸುಸಂಸ್ಕೃತರಾಗಿ ಈ ದೇಶದ ಅಭಿವೃದ್ಧಿ ದೃಷ್ಟಿಯಿಂದ, ಬಡವರ ಹಿತದೃಷ್ಟಿಯಿಂದ ಉತ್ತಮವಾದ ಒಳ್ಳೆಯ ಕೆಲಸಕಾರ್ಯಗಳನ್ನು ಮಾಡಿ ಅವರು ಕೀರ್ತಿಶಾಲಿಗಳಾಗಬೇಕೆಂದು ಈ ಸದನದ ಮುಖಾಂತರ ಈ ಇಲಾಖೆಯ ಇಂಜಿನಿಯರ್‌ಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಮೈನರ್ ಇರಿಗೇಷನ್ ಬಗ್ಗೆ ಮಾತನಾಡಬೇಕಾಗಿತ್ತು, ಈಗ ಸಮಯ ಆಗಿರುವುದರಿಂದ, ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ).—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಸಚಿವರು ಮಂಡಿಸಿರುವಂಥ ಬೇಡಿಕೆಗಳ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದ ಮತ್ತು ರಾಷ್ಟ್ರದ ಸಂಪತ್ತನ್ನು ಹೆಚ್ಚಿಸುವುದರಲ್ಲಿ ನೀರಾವರಿ ಇಲಾಖೆ ಪ್ರಮುಖವಾದಂಥ ಪಾತ್ರವನ್ನು ವಹಿಸಬೇಕಾಗಿದೆ. ನಮ್ಮ ರಾಜ್ಯದಲ್ಲಿರುವ ಸುಮಾರು ೧೦೫ ಲಕ್ಷ ಎಕರೆ ಸಾಮಾನ್ಯ ಬಿತ್ತನೆ ಪ್ರದೇಶ ಇದ್ದರೆ, ಅದರಲ್ಲಿ ಸುಮಾರು ೫೫ ಲಕ್ಷ ಎಕರೆ ನೀರಾವರಿ ಮಾಡಲಿಕ್ಕೆ ಸಾಧ್ಯತೆ ಇದೆ. ಅದನ್ನು ಗಮನದಲ್ಲಿಟ್ಟುಕೊಂಡು ನಮ್ಮ ರಾಜ್ಯದಲ್ಲಿ ಎಷ್ಟು ನೀರನ್ನು ಉಪಯೋಗಿಸಲಿಕ್ಕೆ ಸಾಧ್ಯ ಇದೆ ಎಂಬುದರ ಬಗ್ಗೆ ಸ್ವಲ್ಪ ಮಟ್ಟಿಗೆ ನಾವು ವಿಚಾರ ಮಾಡಬೇಕಾದ್ದು ಅವಶ್ಯಕ ಎಂದು ನಾನು ಭಾವಿಸುತ್ತೇನೆ. ನಮ್ಮ ರಾಜ್ಯದಲ್ಲಿ ೧೯೫೧ನೇ ಇಸವಿಯಿಂದ ಸುಮಾರು ಎರಡು ಸಾವಿರದ ನಾಲ್ಕು ನೂರು ಐವತ್ತು ಕೋಟಿ ರೂಪಾಯಿಗಳನ್ನು ನಾವು ಇಲ್ಲಿಯವರೆಗೆ ನೀರಾವರಿ ಸಾಮರ್ಥ್ಯವನ್ನು ಹೆಚ್ಚು ಮಾಡಲು ಖರ್ಚು ಮಾಡುತ್ತಿದ್ದೇವೆ. ಅದರಲ್ಲಿ ಮಧ್ಯಮ ಮತ್ತು ದೊಡ್ಡ ಪ್ರಮಾಣದ ನೀರಾವರಿ ಕಾಮಗಾರಿಗಳನ್ನು ನಿರ್ಮಾಣ ಮಾಡಲಿಕ್ಕೆ ಸುಮಾರು ೨,೦೬೭ ಕೋಟಿ ರೂಪಾಯಿಗಳನ್ನು ಮತ್ತು ಸಣ್ಣ ನೀರಾವರಿ ಯೋಜನೆಗೆ ೩೮೮ ಕೋಟಿ ರೂಪಾಯಿಗಳನ್ನು ೧೯೫೧ನೇ ಇಸವಿಯಿಂದೀಚೆಗೆ ನಾವು ಖರ್ಚು ಮಾಡುತ್ತಿದ್ದೇವೆ. ಅದರಲ್ಲಿ ದೊಡ್ಡ ಮತ್ತು ಮಧ್ಯಮ ನೀರಾವರಿಗೆ ಯೋಗ್ಯವಾದಂತಹ ಪ್ರದೇಶ ನಮ್ಮಲ್ಲಿ ೩೫ ಲಕ್ಷ ಎಕರೆ ಇದೆ. ಸಣ್ಣ ನೀರಾವರಿಯಿಂದ

ಅಭಿವೃದ್ಧಿ ಪಡಿಸಲಿಕ್ಕೆ ಯೋಗ್ಯವಾದಂತಹ ಪ್ರದೇಶ ಸುಮಾರು ೧೦ ಲಕ್ಷ ಎಕರೆ ಇದ್ದು ಅಂತರ್‌ಜಲವನ್ನು ಉಪಯೋಗಿಸಿಕೊಂಡು ನಾವು ಈ ೧೦ ಲಕ್ಷ ಎಕರೆಯನ್ನು ನೀರಾವರಿ ಮಾಡುವುದಕ್ಕೆ ಸಾಧ್ಯವಿದೆ ಕೃಷ್ಣಾ ಕಣಿವೆ ಯೋಜನೆಯಲ್ಲಿ ೭೫೦ ಟಿ. ಎಂ. ಸಿ. ಯಲ್ಲಿ ನಾವು ಇಲ್ಲಿಯವರೆಗೂ ಏನು ಪ್ರಗತಿ ಮಾಡಿದ್ದೇವೆಂದರೆ ೨೧೪ ಟಿ. ಎಂ. ಸಿ. ನೀರನ್ನು ಮಾತ್ರ ನೀರಾವರಿಗೆ ಉಪಯೋಗಿಸುವುದಕ್ಕೆ ಸಾಧ್ಯವಾಗಿದೆ. ೪೪೧ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ವಿವಿಧ ಹಂತದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇನೆ. ಇನ್ನೂ ಪ್ರಾರಂಭ ಮಾಡದೇ ಇರುವಂತಹ ಕಾಮಗಾರಿಗಳ ನೀರಿನ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡರೆ ಅದು ಸುಮಾರು ೧೧೨ ಟಿ.ಎಂ.ಸಿ. ಇದೆ. ಅದೇ ರೀತಿಯಾಗಿ ಕಾವೇರಿಯಲ್ಲಿ ೪೧೪ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳುವಂತಹ ಅಂದಾಜು ಇದ್ದರೆ ಇಲ್ಲಿಯವರೆಗೆ ಕೇವಲ ೧೮೨ ಟಿ.ಎಂ.ಸಿ. ನೀರನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಯೋಗ್ಯವಾದಂತಹ ಕಾಮಗಾರಿಗಳನ್ನು ಮಾಡಿದ್ದೇವೆ. ಮತ್ತು ೧೭೯ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಲಿಕ್ಕೆ ವಿವಿಧ ಹಂತದ ಕಾಮಗಾರಿಗಳನ್ನು ನಾವು ಪ್ರಾರಂಭ ಮಾಡಿದ್ದೇವೆ. ಇನ್ನೂ ಸುಮಾರು ೫೨ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ವಿವಿಧ ಕಾಮಗಾರಿಗಳನ್ನು ಪ್ರಾರಂಭ ಮಾಡಬೇಕಾಗಿದೆ. ಒಟ್ಟಿನಲ್ಲಿ ಸುಮಾರು ೧೦೩೮ ಟಿ.ಎಂ.ಸಿ. ಯಷ್ಟು ನೀರು ಇದ್ದರೆ ಆ ಪೈಕಿ ಕೇವಲ ೨೦೯ ಟಿ.ಎಂ.ಸಿ. ನೀರನ್ನು ಪೂರ್ಣವಾಗಿ ಉಪಯೋಗಿಸಿಕೊಂಡಿದ್ದು ೬೧೯ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಲಿಕ್ಕೆ ವಿವಿಧ ಹಂತದ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಮತ್ತು ೨೦೯ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಇನ್ನೂ ಕೆಲವನ್ನು ಪ್ರಾರಂಭ ಮಾಡಬೇಕಾಗಿದೆ. ಅದೇ ರೀತಿ ಸಣ್ಣ ನೀರಾವರಿಯಲ್ಲೂ ಕೂಡ ಹೆಚ್ಚು ಉಪಯೋಗಿಸಿಕೊಂಡಿದ್ದೇವೆ. ಕೇವಲ ೧೧ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯತೆ ಇದೆ ಎಂಬುದನ್ನು ನಾವು ನೀರಾವರಿ ಇಲಾಖೆಯ ವರದಿಯಲ್ಲಿ ನೋಡಿದ್ದೇವೆ. ಈ ರೀತಿ ಇದ್ದಾಗ ನಾವು ಇಲ್ಲಿಯವರೆಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೇವೆ, ಅದಕ್ಕೆ ಎಷ್ಟು ಹಣ ಖರ್ಚು ಮಾಡಬೇಕಾಗಿತ್ತು ಎಂಬುದರ ಬಗ್ಗೆ ಸ್ವಲ್ಪ ಮಟ್ಟಿಗೆ ಗಮನ ಹರಿಸಬೇಕಾದುದು ಅಗತ್ಯವೆಂದು ನಾನು ಭಾವಿಸಿದ್ದೇನೆ. ಕೃಷ್ಣಾ ಕಣಿವೆ ಯೋಜನೆಯ ಒಟ್ಟು ಖರ್ಚಿನ ಅಂದಾಜು ೩,೮೯೫ ಕೋಟಿ ರೂಪಾಯಿಗಳು ಇದ್ದರೆ ನಾವು ಇಲ್ಲಿಯವರೆಗೆ ೧೧೫೫ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೇವೆ, ಇನ್ನೂ ಸುಮಾರು ೨,೭೪೦ ಕೋಟಿ ರೂಪಾಯಿಗಳನ್ನು ಈ ಹಿಂದಿನ ಅಂದಾಜಿನಂತೆ ನಾವು ಖರ್ಚು ಮಾಡಬೇಕಾಗುತ್ತದೆ. ಈ ವರ್ಷ ಸುಮಾರು ೧೪೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಿಕ್ಕೆ ಈ ಆಯವ್ಯಯದಲ್ಲಿ ಸೇರಿಸಿದ್ದೇವೆ, ಅದರಂತೆ ಕಾವೇರಿ ಯೋಜನೆಗೂ ಸಹ ಒಟ್ಟು ಖರ್ಚು ಮಾಡಬೇಕಾದಂತಹ ಅಂದಾಜು ಮೊಬಲಗು ೧೫೫೩ ಕೋಟಿ ರೂಪಾಯಿಗಳು ಆಗಿದೆ. ೧೯೯೦ರ ಮಾರ್ಚ್‌ವರೆಗೆ ಕೇವಲ ೭೦೫ ಕೋಟಿ ರೂಪಾಯಿಗಳನ್ನು ಅದಕ್ಕೆ ಖರ್ಚು ಮಾಡಿದ್ದೇವೆ ; ಇನ್ನೂ ಸುಮಾರು ೮೫೦ ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಬೇಕಾಗಿದೆ. ಈ ವರ್ಷ ಆಯವ್ಯಯದಲ್ಲಿ ೧೧೩ ಕೋಟಿ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೇವೆ. ಈ ರೀತಿಯಾಗಿ ಕೃಷ್ಣಾ, ಕಾವೇರಿ ಗೋದಾವರಿ ಹಾಗೂ ಇತರೆ ಎಲ್ಲಾ ನದಿಗಳಲ್ಲಿ ಹರಿಯುವಂತಹ ನೀರಿನ ಪ್ರಮಾಣವನ್ನು ಉಪಯೋಗಿಸಿಕೊಳ್ಳಬೇಕಾದರೆ ೫೬೩೭ ಕೋಟಿ ರೂಪಾಯಿಗಳನ್ನು ಈ ಹಿಂದಿನ ಅಂದಾಜಿನಂತೆ ಖರ್ಚು ಮಾಡಬೇಕಾಗಿದ್ದು, ಈವರೆಗೆ ಕೇವಲ ೧೯೧೭ ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಇನ್ನೂ ೩,೭೨೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಈ ರೀತಿಯಾಗಿ ಖರ್ಚು ಮಾಡಬೇಕಾಗಿರುವ ಪರಿಸರದ ಹಿನ್ನೆಲೆಯಲ್ಲಿ ೧೯೮೯-೯೦ರಲ್ಲಿ ಖರ್ಚು ಮಾಡಿದಂಥಹ ಹಣವನ್ನು ಗಮನಿಸಿದಾಗ ಅದು ಬಹಳ ಅತ್ಯಲ್ಪ ಪ್ರಮಾಣದ್ದೆಂದು ಅನಿಸುತ್ತದೆ. ೧೯೯೦-೯೧ರಲ್ಲಿ ಸಹ ಎಷ್ಟು ಖರ್ಚು ಮಾಡಬೇಕೆಂದು ನಿರ್ಧಾರ ಮಾಡಿದ್ದೇವೆ ಅದೂ ಕೂಡ ಬಹಳ ಕಡಿಮೆ ಪ್ರಮಾಣದ್ದು ಎನ್ನುವುದನ್ನು ನಾವೆಲ್ಲರೂ ಒಪ್ಪುತ್ತೇವೆ. ಈ ವರ್ಷದ ಬಜೆಟ್ಟಿನಲ್ಲಿ ಸುಮಾರು ೩೦೩ ಕೋಟಿ ರೂಪಾಯಿಗಳ ಗುರಿಯನ್ನು ಹೊಂದಿದ್ದೇವೆ. ಸುಮಾರು ೪೭,೦೦೦ ಹೆಕ್ಟೇರ್ ಭೂಮಿಯಲ್ಲಿ ನೀರಾವರಿ ಸಾಮರ್ಥ್ಯವನ್ನು ಹೆಚ್ಚು ಮಾಡುವುದಕ್ಕೆ ಇಲ್ಲಿ ಪ್ರಯತ್ನ ಮಾಡಿದ್ದೇವೆ. ಈ ಹಿನ್ನೆಲೆಯಲ್ಲಿ ನಾವು ಸಾಧಿಸಿರುವಂತಹ ಸಾಧನೆಯನ್ನು ನೋಡಿದಾಗ ಯಾವುದೆ ಸರಕಾರ ಈ ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೂ ಸಹ ಅಂದರೆ ಅವರು ಈ ಕಡೆ ಇದ್ದಾಗ ನೀವು ಮಾಡಲಿಲ್ಲವೆಂದು ಹೇಳುತ್ತಿದ್ದರು. ಆದರೆ ನಾವು ಈಗ ಅದೇ ಮಾತನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಒಟ್ಟಿನಲ್ಲಿ ನಮ್ಮ ಪ್ರಯತ್ನ ಏನಾಗಬೇಕು ಎಂದರೆ, ಸುಮಾರು ೨ ಸಾವಿರದ ಇಸವಿಯೊಳಗೆ ಕೃಷ್ಣಾ ಕಣಿವೆಯಲ್ಲಿರತಕ್ಕಂತಹ ಎಲ್ಲಾ ನೀರಾವರಿ ಯೋಜನೆಗಳನ್ನು ಪೂರೈಸಬೇಕಾದರೆ ಮತ್ತು ಕಾವೇರಿ ಜಲಾನಯನ ಪ್ರದೇಶದಲ್ಲಿರುವಂತಹ ಎಲ್ಲಾ ಯೋಜನೆಗಳನ್ನು ಪೂರೈಸಬೇಕಾದರೆ ಇವುಗಳಿಗೆ ಬೇಕಾದಂತಹ ಹಣವನ್ನು ನಾವು ಒದಗಿಸಿಕೊಳ್ಳಬೇಕಾಗುತ್ತದೆ. ಹಾಗಾದರೆ ಆ ಹಣವನ್ನು ಎಲ್ಲಿಂದ ತರುವುದು

ಎಂಬ ಮಾತನ್ನು ನಾವೆಲ್ಲರೂ ಹೇಳುತ್ತೇವೆ. ಸುಮಾರು ೩೦೦–೪೦೦ ಕೋಟಿ ರೂಪಾಯಿಗಳನ್ನು ಕೊಡಬೇಕು ಎಂಬ ಮಾತನ್ನು ಮಾತ್ರ ಹೇಳುವುದರಿಂದ ನಾವು ಆ ಹಣವನ್ನು ಒದಗಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರ ಈ ಬಗ್ಗೆ ತೀವ್ರವಾದ ಆಲೋಚನೆ ಮಾಡಬೇಕಾಗಿದೆ. ಮುಂದಿನ ದಶಕದಲ್ಲಿ ಮತ್ತು ಮುಂದಿನ ಒಂದೆರಡು ವರ್ಷಗಳಲ್ಲಿ ಕಾವೇರಿ ಯೋಜನೆಗಳನ್ನು ಹಾಗೂ ಮುಂದಿನ ಹತ್ತು ವರ್ಷಗಳಲ್ಲಿ ಕೃಷ್ಣಾ ಯೋಜನೆಗಳಲ್ಲಿರುವಂತಹ ಎಲ್ಲಾ ಕಾಮಗಾರಿಗಳನ್ನು ಪೂರೈಸಬೇಕಾದರೆ ಅದಕ್ಕೆ ಬೇಕಾದ ಹಣವನ್ನು ವಿಶೇಷವಾದಂಥ ಕಾರ್ಯಕ್ರಮವನ್ನು ಏರ್ಪಡಿಸುವುದರ ಮುಖಾಂತರ, ರೂಪಿಸುವುದರ ಮುಖಾಂತರ ನಾವು ಪಡೆಯಲಿಕ್ಕೆ ಪ್ರಯತ್ನ ಮಾಡಬೇಕಾಗಿದೆ. ಸಾರ್ವಜನಿಕರಿಂದ ನೀರಾವರಿ ಬಾಂಡುಗಳ ಮುಖಾಂತರ ಅಥವಾ ಬೇರೆ ಯಾವುದಾದರೂ ಮುಖಾಂತರ ಹಣವನ್ನು ಪಡೆಯುವ ಪ್ರಯತ್ನ ಮಾಡಬೇಕು. ವಿಶ್ವಬ್ಯಾಂಕ್‌ನ ಹಾಗೂ ಇತರ ಮೂಲಗಳಿಂದ ಮತ್ತು ಕೇಂದ್ರ ಸರಕಾರದಿಂದ ಹಣವನ್ನು ಪಡೆಯುವಂತಹ ಪ್ರಯತ್ನ ಮಾಡದಿದ್ದರೆ ನಮ್ಮ ದೇಶದ ಜನರು, ಮುಖ್ಯವಾಗಿ ರೈತರು ಈ ನೀರಾವರಿಯನ್ನು ಉಪಯೋಗಿಸಿಕೊಂಡು ದೇಶದ ಸಂಪತ್ತನ್ನು ಹೆಚ್ಚು ಮಾಡಬೇಕೆಂಬ ಭಾವನೆಯಿಂದ ಏನು ಕೆಲಸ ಮಾಡುತ್ತಿದ್ದಾರೆ ಅವರಿಗೆ ಖಂಡಿತವಾಗಿ ವಂಚನೆ ಮಾಡಿದಂತಾಗುತ್ತದೆ. ಆ ರೀತಿಯಾಗದಂತೆ ನೋಡಿಕೊಳ್ಳಬೇಕಾದರೆ ಆಡಳಿತ ಪಕ್ಷದವರ ಮೇಲೆ ಎಷ್ಟು ಹೊಣೆ ಇದೆಯೋ ಅಷ್ಟೇ ಹೊಣೆ ನಮ್ಮ ಮೇಲೂ ಇದೆ ಎಂಬ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ.

ಈ ದಿಸೆಯಲ್ಲಿ ಸರ್ಕಾರ ಯಾವ ಯೋಜನೆಗಳನ್ನು ರೂಪಿಸುತ್ತದೆ ಅವೆಲ್ಲಕ್ಕೂ ನಮ್ಮ ಪಕ್ಷದ ಬೆಂಬಲ ಖಂಡಿತವಾಗಿಯೂ ಇದೆ ಎಂಬ ಮಾತನ್ನು ನಾನು ಪ್ರಾಸ್ತಾವಿಕವಾಗಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಇದು ನಮ್ಮ ಗುರಿಯ ಬಗ್ಗೆ ಹೇಳಿದಂಥ ಮಾತಾಯಿತು.

ಇನ್ನು ಈ ನೀರಾವರಿ ಇಲಾಖೆಯ ಕಾರ್ಯ ನಿರ್ವಹಣೆಯ ಬಗ್ಗೆ ಒಂದೆರಡು ವಿಚಾರಗಳನ್ನು ನಾನು ಪ್ರಸ್ತಾಪ ಮಾಡಲಿಕ್ಕೆ ಇಚ್ಛಿಪಡುತ್ತೇನೆ. ಮೊದಲಿನಿಂದಲೂ ಈ ದೇಶದಲ್ಲಿ ಅಥವಾ ಈ ರಾಜ್ಯದಲ್ಲಿರತಕ್ಕ ಬೇರೆ ಎಲ್ಲ ಇಲಾಖೆಗಳ ಕಾರ್ಯ ನಿರ್ವಹಣೆಗೂ ಈ ಇಲಾಖೆಯ ಕಾರ್ಯ ನಿರ್ವಹಣೆಗೂ ವಿಶೇಷವಾದ ಅಂತರವನ್ನು ನಾವು ಕಾಣುತ್ತಿದ್ದೇವೆ. ಭ್ರಷ್ಟಾಚಾರ ಇಲ್ಲದೇ ಇರತಕ್ಕ ಕ್ಷೇತ್ರ ಇಲ್ಲದಿರಬಹುದು. ಆದರೆ ಇಷ್ಟೊಂದು ನಿರ್ಲಜ್ಜತನದಿಂದ ಬೀದಿಯಲ್ಲಿ ಭ್ರಷ್ಟಾಚಾರ ಏನಾದರೂ ನಡೆಯುತ್ತಿದ್ದರೆ ಅದು ಇವತ್ತಿನ ದಿವಸ ಈ ಇಲಾಖೆಯಲ್ಲಿ ಎಂಬುದನ್ನು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಅದಕ್ಕೆ ಕಾರಣಗಳನ್ನೂ ಕೂಡ ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಯಾವುದೇ ಸರ್ಕಾರ ಬದಲಾವಣೆಯಾದ ಮಾತ್ರಕ್ಕೆ ಈ ಇಲಾಖೆಯ ಕಾರ್ಯ ನಿರ್ವಹಣೆ ಬದಲಾಗಿದೆ ಎಂಬ ಮಾತನ್ನು ನಾವು ಖಂಡಿತ ಒಪ್ಪಬೇಕಾದಂಥ ಅವಶ್ಯಕತೆಯಿಲ್ಲ. ಆ ಕಡೆ ಕುಳಿತಿರತಕ್ಕ ಆಡಳಿತ ಪಕ್ಷದ ಸದಸ್ಯರು ೧೯೮೩ರಿಂದ ೧೯೮೮–೮೯ರವರೆಗೂ ನಡೆದಂಥ ಅವ್ಯವಹಾರಗಳ ಬಗ್ಗೆ ಭ್ರಷ್ಟಾಚಾರಗಳ ಬಗ್ಗೆ ಹೇಳುತ್ತಿದ್ದರು.

ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ. ಈ ಭ್ರಷ್ಟಾಚಾರ, ಅವ್ಯವಹಾರ ಅಥವಾ ಲಾಭ ಬಡುಕತನ ಏನಿದೆ ಇದು ಕೇವಲ ಈ ಒಂದು ಅವಧಿಗೆ ಮಾತ್ರ ಸೀಮಿತವಾಗಿ ಇದೆಯೆ? ೧೯೮೩ನೇ ಇಸವಿಗೆ ಮುಂಚೆ ಇದ್ದಂಥ ಸರ್ಕಾರ ಅಥವಾ ಆಗ ಇದ್ದಂಥ ಲೋಕೋಪಯೋಗಿ ಇಲಾಖೆಯಲ್ಲಿ ನಡೆದಂಥ ಅವ್ಯವಹಾರಗಳು, ಭ್ರಷ್ಟಾಚಾರಗಳು ಏನಾದರೂ ಕಡಿಮೆ ಪ್ರಮಾಣದಲ್ಲಿ ಇದ್ದುವೆ? ನಮ್ಮ ನಿಮ್ಮ ಗಮನಕ್ಕೆ ಬಂದಂತೆ ಅನೇಕ ರೀತಿಯ ವರದಿಗಳನ್ನು ನೋಡಿದಾಗ ನಮಗನಿಸುತ್ತದೆ, ಈ ಇಲಾಖೆ ಹುಟ್ಟಿದಾಗಿನಿಂದಲೂ ಭ್ರಷ್ಟಾಚಾರ, ಅವ್ಯವಹಾರಗಳು ತಾನೇ ತಾನಾಗಿ ತೀವ್ರವಾಗಿ ಬೆಳೆದುಕೊಂಡು ಬರುತ್ತಿವೆ. ಇದು ಕೇವಲ ೧೯೮೩ನೇ ಇಸವಿಯಿಂದ ಹಿಂದಕ್ಕೆ ಮಾತ್ರ ಸೀಮಿತವಾಗಿಲ್ಲ, ಅಥವಾ ೧೯೫೬–೮೮ರವರೆಗೆ ಮಾತ್ರ ಸೀಮಿತವಾಗಿಲ್ಲ, ಆದಿಯಿಂದಲೂ ಇದೆ. ಈ ಇಲಾಖೆ ಬೆಳೆದಂತೆಲ್ಲಾ ಭ್ರಷ್ಟಾಚಾರವೂ ಕೂಡ ದೊಡ್ಡ ದೊಡ್ಡ ಪ್ರಮಾಣದಲ್ಲಿ ಬೆಳೆದುಕೊಂಡು ಬರುತ್ತಿದೆ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೂ ಕೂಡ ಈ ಭ್ರಷ್ಟಾಚಾರ ನಿಲ್ಲುತ್ತದೆಂಬ ಸೂಚನೆ ನಮಗೇನೂ ಕಂಡು ಬರುತ್ತಿಲ್ಲ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕೇವಲ ಸರ್ಕಾರದ ಬದಲಾವಣೆಯಿಂದ ಭ್ರಷ್ಟಾಚಾರವನ್ನು ಕಳೆಯಲು ಸಾಧ್ಯವಿಲ್ಲ. ಈ ಇಲಾಖೆಯಲ್ಲಿನ ಭ್ರಷ್ಟಾಚಾರವನ್ನು, ಅವ್ಯವಹಾರವನ್ನು ತಡೆಯಬೇಕಾದರೆ ಸರ್ಕಾರದವರು ಕಠಿಣ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ. ಅಂಥ ಕ್ರಮವನ್ನು ಈ ಸರ್ಕಾರ ತೆಗೆದುಕೊಳ್ಳುತ್ತದೆಂಬ ಸೂಚನೆಯನ್ನು ಇದುವರೆಗೂ ನಾವು ಕಾಣಲಿಲ್ಲ. ಈ ದಿಸೆಯಲ್ಲಿ ಸರ್ಕಾರವಾಗಲಿ, ಮಂತ್ರಿಗಳಾಗಲಿ ದಿಟ್ಟ ಕ್ರಮವನ್ನು ತೆಗೆದುಕೊಳ್ಳುವುದಾದರೆ ಅದಕ್ಕೆ ಖಂಡಿತವಾಗಿ ನಮ್ಮ ಸಂಪೂರ್ಣವಾದ ಬೆಂಬಲ ಇದೆಯೆಂಬ ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ಇಲಾಖೆಯ

ಕೆಲಸಕಾರ್ಯಗಳದ್ದೇ ಒಂದು ವಿಶೇಷ ರೀತಿಯ ವೈಖರಿಯದ್ದಾಗಿದೆ. ಈ ಇಲಾಖೆ ಲೋಕೋಪಯೋಗಿ ಇಲಾಖೆ ಆಗಿಲ್ಲ. ಅದಕ್ಕೆ ಬದಲಾಗಿ ಇಂಜನಿಯರ್‌ಗಳ ಮತ್ತು ಕಂಟ್ರಾಕ್ಟರ್‌ಗಳ ಇಲಾಖೆಯಾಗಿದೆ ಯೆಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ. ಈ ಇಲಾಖೆಯ ಕಾರ್ಯ ನಿರ್ವಹಣೆಯಿಂದ ಜನಸಾಮಾನ್ಯರಿಗೆ ಏನು ಉಪಯೋಗವಾಗಬೇಕೋ ಅದಕ್ಕೆ ಬದಲಾಗಿ ಶೋಷಣೆಯಾಗಿದ್ದರೆ, ಅದು ಈ ಇಲಾಖೆಯ ಕಂಟ್ರಾಕ್ಟರ್ ಮತ್ತು ಇಂಜನಿಯರ್‌ಗಳಿಂದ ಆಗಿವೆಯೆಂಬ ಮಾತನ್ನು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ಏನಾದರೂ ಆಧಾರ ಇದೆಯೇ ಎಂದರೆ ಖಂಡಿತವಾಗಿಯೂ ಇದೆ. ಮಾನ್ಯ ಪುಟ್ಟಸ್ವಾಮೀಗೌಡರೂ ಕೂಡ ಇದನ್ನು ಒಪ್ಪುತ್ತಾರೆಂದು ನಾನು ಭಾವಿಸಿದ್ದೇನೆ. ಈ ಇಲಾಖೆಯ ಕಾರ್ಯ ನಿರ್ವಹಣೆಯ ಬಗ್ಗೆ ಅನೇಕಸಾರಿ ಆಡಿಟ್ ಮಾಡಿದಂಥ, ಟೀಕೆ ಮಾಡಿದಂಥ

ಆಡಿಟರ್ ಜನರಲ್‌ರವರು ಏನು ವರದಿಯನ್ನು ಕೊಟ್ಟಿದ್ದಾರೆ ಅದನ್ನು ಒಮ್ಮೆ ಓದಿದರೇ ಸಾಕು. ಈ ಇಲಾಖೆ ಯಾವರೀತಿಯಲ್ಲೂ ಸುಧಾರಣೆ ಆಗಿಲ್ಲ, ಅದಕ್ಕೆ ಬದಲಾಗಿ ಇನ್ನಷ್ಟು ದುಷ್ಟಪ್ರವೃತ್ತವಾಗಿ ಬೆಳೆದಿದೆ ಎಂಬುದು ಗೊತ್ತಾಗುತ್ತದೆ. ಈ ಬಗ್ಗೆ ಸವಿಸ್ತಾರವಾಗಿ ಹೇಳಲು ಕಾಲಾವಕಾಶವಿಲ್ಲದ ಕಾರಣ ಕೇವಲ ಒಂದೆರಡು ವಿಚಾರಗಳನ್ನು ಮಾತ್ರ ಇಲ್ಲಿ ನಾನು ಪ್ರಸ್ತಾಪ ಮಾಡುತ್ತೇನೆ. ಈ ಇಲಾಖೆಯವರು ಕಂಟ್ರಾಕ್ಟರ್‌ಗಳಿಂದ ಅಗ್ರಿಮೆಂಟ್‌ನ್ನು ಬರೆಸಿಕೊಳ್ಳುತ್ತಾರೆ. ಅದರಲ್ಲಿರತಕ್ಕ ಪ್ರತಿಯೊಂದು ಷರತ್ತು, ಪ್ರತಿಯೊಂದು ನಿಬಂಧನೆಯೂ ಕೂಡ ಈ ಸರ್ಕಾರಕ್ಕಾಗಲಿ, ಈ ರಾಜ್ಯದ ಜನತೆಗಾಗಲಿ ಉಪಯೋಗವಾಗತಕ್ಕ ರೀತಿಯಲ್ಲಿರುವುದಿಲ್ಲ. ಅದರಲ್ಲಿರತಕ್ಕ ಪ್ರತಿಯೊಂದು ಅಂಶವೂ ಕೂಡ ಕಂಟ್ರಾಕ್ಟರ್‌ಗಳ ಪರವಾಗಿರುತ್ತದೆಯೇ ಹೊರತು ಜನತೆಯ ಅಥವಾ ಸರ್ಕಾರದ ಪರವಾಗಿ ಇರುವುದಿಲ್ಲ ಎಂಬ ಮಾತನ್ನು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಅನೇಕ ಸಂದರ್ಭಗಳಲ್ಲಿ ಗುತ್ತಿಗೆದಾರರು ಸೇರಿಸಿಕೊಂಡಿರತಕ್ಕ ಆರ್ಬಿಟ್ರೇಷನ್ ಕ್ಲಾಸ್‌ಗಳ ಬಗ್ಗೆ ಅಥವಾ ಬೇರೆ ಷರತ್ತುಗಳ ಬಗ್ಗೆ ನಾನು ಬಹಳ ವಿವರವಾಗಿ ಹೇಳುವುದಕ್ಕೆ ಕಾಲಾವಕಾಶ ಇಲ್ಲದಿರುವುದರಿಂದ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಸಮಯ ಬಂದಾಗ ನಾನು ಹೇಳುತ್ತೇನೆ. ನಾನು ಈಗಾಗಲೇ ಹೇಳಿದಂತೆ ಅಗ್ರಿಮೆಂಟ್‌ನಲ್ಲಿರತಕ್ಕ ಪ್ರತಿಯೊಂದು ಷರತ್ತೂ, ಪ್ರತಿಯೊಂದು ನಿಬಂಧನೆಯೂ ಹೆಚ್ಚೂ ಕಡಿಮೆ ಗುತ್ತಿಗೆದಾರರ ಪರವಾಗಿರುತ್ತದೆಯೇ ಹೊರತು ಸರ್ಕಾರದ ಪರವಾಗಿ ಅಥವಾ ಜನಸಾಮಾನ್ಯರ ಪರವಾಗಿ ಇಲ್ಲ. ಸರ್ಕಾರ ಇದರ ಬಗ್ಗೆ ಗಮನಹರಿಸಿ ಶೀಘ್ರವಾಗಿ ಇದನ್ನು ಪರಿಷ್ಕರಿಸಬೇಕು, ಅವಶ್ಯಕತೆ ಕಂಡುಬಂದರೆ ಅದರಲ್ಲಿರತಕ್ಕ ಅನೇಕ ವಿಧಿಗಳನ್ನು ಕಿತ್ತುಹಾಕಬೇಕೆಂದು ತಮ್ಮ ಮೂಲಕ ನಾನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಯಾರಿಗಾದರೂ ಒಂದು ಕೆಲಸವನ್ನು ಗುತ್ತಿಗೆಗೆ ಕೊಡುವುದಾದರೆ, ಗುತ್ತಿಗೆ ಕೊಡುವುದಕ್ಕೆ ಮುಂಚೆ ಕೆಲವು ಷರತ್ತುಗಳನ್ನು ಅಥವಾ ಕೆಲವು ಕರ್ತವ್ಯಗಳನ್ನು ಸಂಬಂಧಪಟ್ಟ ಇಲಾಖೆ ಮಾಡಬೇಕಾಗಿದೆ. ಅಂದಾಜನ್ನು ತಯಾರಿಸಬೇಕಾಗಿದೆ. ಅಂದಾಜುಗಳನ್ನು ತಯಾರಿಸುವಾಗ ನಮ್ಮ ಇಂಜನಿಯರುಗಳು ಯಾವ ನೀತಿಯನ್ನು ಅನುಸರಿಸುತ್ತಾರೆಂದರೆ, ಎಲ್ಲದರಲ್ಲಿಯೂ ಸಹ ಗುತ್ತಿಗೆದಾರರಿಗೆ ಅನುಕೂಲವಾಗುವಂಥ ಒಂದು ನೀತಿಯನ್ನು ಅನುಸರಿಸುವಂಥದ್ದನ್ನು ನಾವು ನೋಡಿದ್ದೇವೆ. ಒಂದು ಉದಾಹರಣೆಯನ್ನು ಕೊಡುವುದಾದರೆ, ಒಂದು ಅಂದಾಜಿನಲ್ಲಿ ಎಕ್ಸ್‌ಟ್ರಾ ಐಟಮ್ ಏನು ಇರಬೇಕೆಂದು ಹೇಳುವುದಿಲ್ಲ. ಅಥವಾ ಮಣ್ಣನ್ನು ಪರೀಕ್ಷೆ ಮಾಡಿ ಇಲ್ಲಿ ಯಾವರೀತಿ ಒಂದು ಅಂದಾಜನ್ನು ತಯಾರಿಸಬೇಕೆಂದು ಇರುವುದಿಲ್ಲ. ಅಲ್ಲಿ ಅಂದಾಜಿನಲ್ಲಿ ಹೇಳುವುದೇ ಒಂದು ಕ್ವಾಂಟಮ್, ಅಂತಿಮವಾಗಿ ಬಿಲ್ ಆಗುವುದೇ ಒಂದು ಕ್ವಾಂಟಂ ಅಂತಿಮವಾಗಿ ಬಿಲ್ ಆದಾಗ ಕೊಡುವಂಥ ಹಣ ಏನು ಇರುತ್ತದೆ ಅದು ಅಂದಾಜಿನಲ್ಲಿ ಇರುವುದಿಲ್ಲ, ಆದ್ದರಿಂದ

ಅವರು ನಿಮ್ಮ ಗುತ್ತಿಗೆ ಪ್ರಕಾರ ಹೆಚ್ಚಿನ ಹಣವನ್ನು ಕೊಡಬೇಕಾಗುತ್ತದೆ ಎನ್ನುವ ಮಾತನ್ನು ಹೇಳುತ್ತಾರೆ. ನಮ್ಮ ಆರ್ಬಿಟ್ರೇಷನ್ ಕ್ಲಾಸ್ ಪ್ರಕಾರ ಎಲ್ಲ ವ್ಯವಹಾರವನ್ನು ನೋಡಿಕೊಳ್ಳುವಂಥ ಜನರು ಏನಿದ್ದಾರೆ ಅವರು ಬಹಳ ಚೆನ್ನಾಗಿ ಶಾಮೀಲಾಗಿ ವ್ಯವಸ್ಥಿತವಾದ ರೀತಿಯಲ್ಲಿ ಈ ದೇಶದ ಜನಸಾಮಾನ್ಯರ ಹಣವನ್ನು ದರೋಡೆ ಮಾಡುತ್ತಿದ್ದಾರೆ ಎಂದು ಹೇಳಿದರೆ ಖಂಡಿತವಾಗಿಯೂ ಸಹ ಅದಕ್ಕಿಂತ ಉತ್ತಮವಾದ ಪದವನ್ನು ಈ ಇಲಾಖೆಯ ಬಗ್ಗೆ ಉಪಯೋಗಿಸಲಿಕ್ಕೆ ಸಾಧ್ಯವಿಲ್ಲವೆಂದು ನಾನು ತಿಳಿದುಕೊಂಡಿರುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ. ಒಂದೆರಡು ವಿಚಾರಗಳನ್ನು ನಾನು ಪ್ರಸ್ತಾಪ ಮಾಡುತ್ತೇನೆ. ಒಂದು ಯೋಜನೆಯನ್ನು ನಾವು ೧೨೨ ಲಕ್ಷ ರೂಪಾಯಿಗಳಿಗೆ ಅಂದರೆ ೧೧ ಕೋಟಿ ರೂಪಾಯಿಗಳಿಗೆ ಅಂದಾಜು ತಯಾರು ಮಾಡಿದರೆ ಆ ಅಂದಾಜು ಕಾರ್ಯಗತವಾಗುವಷ್ಟರಲ್ಲಿ ೧೨೨ ಕೋಟಿ ರೂಪಾಯಿಗಳಾಗುತ್ತದೆ.

ಒಂದಕ್ಕೆ ಹನ್ನೊಂದರಷ್ಟು ಹೆಚ್ಚಾಗುವುದಾದರ ಎಂತಹ ಒಂದು ಅಂದಾಜನ್ನು ಇವರು ತಯಾರಿಸಿರಬಹುದು. ಅದಕ್ಕಿಂತ ಮೊದಲಾಗಿ ಕಮ್ಯಾಂಡ್ ಏರಿಯಾ ಜಾಸ್ತಿಯಾಗಿದೆ ಎನ್ನುವ ಮಾತನ್ನು ಅವರು ಹೇಳುತ್ತಾರೆ. ಆದರೆ, ಕಮ್ಯಾಂಡ್ ಏರಿಯಾ ಜಾಸ್ತಿಯಾಗಿದ್ದರೂ ಸಹ ಸರ್ವೆ ಮಾಡುವುದಕ್ಕಿಂತ

ಮುಂಚೆ ಆ ಕಮ್ಯಾಂಡ್ ಏರಿಯಾ ಎಷ್ಟಿದೆ ಎಂಬುದನ್ನು ತಾವು ಮಾಡುವುದಿಲ್ಲವೇ ? ಆ ಕಮ್ಯಾಂಡ್ ಏರಿಯಾ ಸೇರಿಸಿ ಮೊದಲೇ ಏತಕ್ಕೋಸ್ಕರ ನೀವು ಯೋಜನೆಯನ್ನು ರೂಪ ಮಾಡಬಾರದಾಗಿತ್ತು ಎಂಬ ಮಾತನ್ನು ಹೇಳಿದರೆ, ಅವರ ಉತ್ತರ ನಿರುತ್ತರ. ಇದಕ್ಕೆ ಏನು ಕಾರಣ ? ಇದಕ್ಕೆ ರಾಜಕೀಯ ಪ್ರಭಾವ ಕಾರಣ ಎಂದರೆ ಖಂಡಿತವಾಗಿಯೂ ಅಲ್ಲ. ನಾನು ಯಾವುದೇ ವ್ಯಕ್ತಿಯನ್ನು ಇದಕ್ಕೆ ಕಾರಣವೆಂದು ಹೇಳುವುದಿಲ್ಲ, ನಾವು ಅನುಸರಿಸುವಂಥ ನೀತಿ ಏನಿದೆ, ವ್ಯವಸ್ಥೆ ಏನಿದೆ ಈ ವ್ಯವಸ್ಥೆಯಲ್ಲಿ ತಾನೇ ತಾನಾಗಿ ಮೊದಲಿನಿಂದ ನಡೆದುಕೊಂಡು ಬಂದಿರುವಂತಹ ಕ್ರಮವಿದೆಯೇ ಹೊರತು, ಇದು ಕೇವಲ ಒಂದು ಇಲಾಖೆಗೆ ಸಂಬಂದಪಟ್ಟ ಮಾತೆಂದು ಹೇಳುವುದಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ಅದೇ ರೀತಿ ಅನೇಕ ವಿಚಾರಗಳನ್ನು ಇಲ್ಲಿ ಹೇಳಲಿಕ್ಕೆ ಇಷ್ಟಪಡದಿದ್ದರೂ, ಒಂದೆರಡು ವಿಚಾರಗಳನ್ನು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಅನೇಕ ಸಂದರ್ಭದಲ್ಲಿ ಅವರು ಹೇಳು ತ್ತಾರೆ, ಮಣ್ಣನ್ನು ಸರಿಯಾದ ರೀತಿಯಲ್ಲಿ ಪರೀಕ್ಷೆ ಮಾಡದಿರುವುದು. ಸರಿಯಾದ ಅಂದಾಜನ್ನು ತಯಾರು ಮಾಡದಿರುವುದು ತಯಾರಾದ ಅಂದಾಜಿಗೆ ಗುತ್ತಿಗೆದಾರರಿಗೆ ಕೊಡಬೇಕಾದಂಥ ಗುತ್ತಿಗೆ

ಏನಿದೆ ಆ ಗುತ್ತಿಗೆಯಲ್ಲಿ ವಿವಿಧವಾದಂಥ ನಿಬಂಧನೆಗಳನ್ನು ಸೇರಿಸುವಾಗ ಅವರಿಗೆ ಸಹಾಯಕವಾದ ರೀತಿಯಲ್ಲಿ ಅವರು ಕೆಲಸ ಮಾಡುವುದನ್ನು ನಾವು ಇವತ್ತಿನ ದಿವಸ ನೋಡುತ್ತಿದ್ದೇವೆ. ಅದಕ್ಕಿಂತ ಹೆಚ್ಚಾಗಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ. ಪ್ರತಿಯೊಂದು ಸಂದರ್ಭದಲ್ಲೂ ಸಹ ಶಾಸ್ತ್ರೀಯವಾದಂಥ ರೀತಿಯಲ್ಲಿ ಮಣ್ಣನ್ನು ಪರೀಕ್ಷೆ ಮಾಡದೆ ಅವರು ಈ ಯೋಜನೆಗಳನ್ನು ಮಾಡುವುದೆಂದರೆ ಸರಿಯಾದ ರೀತಿಯಲ್ಲಿ ತನಿಖೆ ಮಾಡದೆ ಈ ರೀತಿ ಮಾಡುವುದರಿಂದ ಹೆಚ್ಚು ಹಣವನ್ನು ನಾವು ಕೊಡಲಿಕ್ಕೆ ಸಾಧ್ಯವಿದೆ. ಈ ರೀತಿ ಕೊಟ್ಟಂಥ ಹಣ ಅನೇಕ ಸಂದರ್ಭಗಳಲ್ಲಿ ಲಕ್ಷಗಟ್ಟಲೇ ಮಾತ್ರವಲ್ಲ ಕೋಟಿಗಟ್ಟಲೇ ಹಣ ಆಗಿದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಅದೇ ರೀತಿಯಲ್ಲಿ ಯಾವ ಯಾವ ಕೆಲಸವನ್ನು ಮಾಡಬೇಕು, ಯಾವ ರೀತಿಯಾಗಿ ಎಕ್ಸ್‌ಟ್ರಾ ಐಟಮ್ ಸೇರಿಸಬೇಕು ಎನ್ನುವ ಬಗ್ಗೆ ಕಲ್ಪನೆ ಇಲ್ಲದಿರುವುದರಿಂದ ಸರಿಯಾದ ರೀತಿಯಲ್ಲಿ ಅದನ್ನು ಅರ್ಥೈಸದಿರುವುದರಿಂದ ಇವತ್ತು ಕೋಟ್ಯಂತರ ರೂಪಾಯಿಗಳನ್ನು ಅವರು ಖರ್ಚು ಮಾಡುತ್ತಿದ್ದಾರೆ ಇಷ್ಟೆ ಅಲ್ಲ, ಸನ್ಮಾನ್ಯ ಅಧ್ಯಕ್ಷರೆ ಇನ್ನು ಒಂದು ಮಾತನ್ನು ಹೇಳಿದರೆ ನಗೆಪಾಟಲಾಗಬಹುದು. ಒಂದು ಅಗ್ರಿಮೆಂಟ್‌ನಲ್ಲಿ ಮೈಲೇಜ್ ಚಿಹ್ನೆಯನ್ನು ಬರೆಯದಿರುವುದರಿಂದ ಕೋಟಿ ಗಟ್ಟಲೆ ಅಲ್ಲದಿದ್ದರೂ ಲಕ್ಷಗಟ್ಟಲೆ ಹಣವನ್ನು ಸಂಬಂಧಪಟ್ಟ ಇಂಜಿನಿಯರುಗಳಿಗೆ ಇವತ್ತು ನಾವು ಕೊಡಲಿಕ್ಕೆ ಸಾಧ್ಯವಾಗಿದೆ ಮತ್ತು ಅವರು ಹಣವನ್ನು ಹೊಡೆದಿದ್ದಾರೆ ಎಂದರೆ ತಪ್ಪಾಗಲಾರದು.

(ಶ್ರೀ ಜಿ. ಎಸ್. ಆಚಾರ್ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಹೀಗೆ ದುರುದ್ದೇಶಪೂರ್ವಕವಾಗಿ ಅಂದಾಜನ್ನು ತಯಾರು ಮಾಡಿ ಸಂಬಂಧಪಟ್ಟ ಗುತ್ತಿಗೆ ದಾರರಿಗೆ ಸಹಾಯ ಮಾಡುವಂಥ ಕೆಲಸವನ್ನು ಮಾಡಿದಂಥ ಜನರ ಮೇಲೆ ತಾವು ಯಾವ ಕ್ರಮವನ್ನು ತೆಗೆದುಕೊಂಡಿರುತ್ತೀರೆಂದು ಕೇಳಿದರೆ ಅದಕ್ಕೆ ಉತ್ತರವಿಲ್ಲ. ಇದೇನು ಹೊಸದಲ್ಲ. ಇಂಥ ಅನೇಕ ವಿಧವಾದ ತಕರಾರುಗಳನ್ನು ಅಬ್ಜೆಕ್ಷನ್ ಎಂದು ನಾವು ಏನು ಹೇಳುತ್ತೇವೆ ಅದನ್ನು ಸರ್ಕಾರದ ಗಮನಕ್ಕೆ ತಂದಾಗ ಅದು ಕೇವಲ ೧೯೮೩ ರಿಂದ ಅಲ್ಲ ಸನ್ಮಾನ್ಯ ಪುಟ್ಟಸ್ವಾಮೀಗೌಡರೇ ಈ ಇಲಾಖೆ ಸ್ಥಾಪನೆಯಾದಂದಿನಿಂದ ಅನೇಕ ದಶಕಗಳಿಂದ ಇದು ನಡೆದು ಬಂದಿದೆ. ಇದನ್ನು ತಪ್ಪಿಸುವ ಹೊಣೆಗಾರಿಕೆಯನ್ನು ನಾವು ಇವತ್ತಿನದಿವಸ ಸರಿಯಾದ ರೀತಿಯಲ್ಲಿ ನಿರ್ವಹಿಸಬೇಕಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕೆಲವು ಸಂದರ್ಭಗಳಲ್ಲಿ ಯಾವ ಜಾಗದಲ್ಲಿ ಅಣೆಕಟ್ಟನ್ನು ಕಟ್ಟಬೇಕಾಗಿದೆ, ಕಾಮಗಾರಿಗಳನ್ನು ಮಾಡಬೇಕಾಗಿದೆ ಆ ಭೂಮಿಯನ್ನು ನೀವು ಸ್ವಾಧೀನ ಪಡಿಸಿ ಕೊಂಡಿರುವುದಿಲ್ಲ. ಆದರೂ ಸಹ ತಾವು ಟೆಂಡರನ್ನು ಕರೆಯುತ್ತೀರಿ. ಗುತ್ತಿಗೆದಾರರಿಗೆ ಕೊಟ್ಟುಬಿಡು ತ್ತೀರಿ ಆಮೇಲೆ ಸ್ಟೇಟ್ ಹತ್ತಿರ ಹೋಗುತ್ತೀರಿ. ಇನ್ನೂ ಭೂ ಸ್ವಾಧೀನ ತೆಗೆದುಕೊಂಡಿಲ್ಲ ಎಂದು ಆಗ ಭೂ ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡುತ್ತೀರಿ. ಅದು ಆದ ಮೇಲೆ ತಾವು ಕೊಡುವಂಥ ಡಿಸೈನ್ ಏನಿದೆ ಅವುಗಳನ್ನು ಕೊಡಲಿಕ್ಕೆ ತಮ್ಮದೇ ಆದಂಥ ಕಾಲವನ್ನು ತೆಗೆದುಕೊಳ್ಳು ವುದರ ಮುಖಾಂತರ ಡಿಸೈನ್‌ಗಳನ್ನು ಸಕಾಲದಲ್ಲಿ ಕೊಡುತ್ತಿಲ್ಲ. ತಮ್ಮ ಇಲಾಖೆಯವರು ಸಂಬಂಧಪಟ್ಟ ಗುತ್ತಿಗದಾರರಿಗೆ ಸಕಾಲದಲ್ಲಿ ಇವುಗಳನ್ನು ಕೊಡದಿರುವುದರಿಂದ ಕೋಟ್ಯಾಂತರ ರೂಪಾಯಿಗಳ ಲಾಭವನ್ನು ಆ ಯೋಜನೆಗಳ ಮುಖಾಂತರ ಗುತ್ತಿಗೆದಾರರಿಗೆ ಮಾಡಿಕೊಟ್ಟಂತಾಗುತ್ತದೆ.

ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ? ಯಾವುದೇ ಸರ್ಕಾರ ಇರಬಹುದು ನಾನು ಯಾವುದೇ ಸರ್ಕಾರವನ್ನು ಟೀಕೆ ಮಾಡುತ್ತಿಲ್ಲ. ಸರ್ಕಾರದಲ್ಲಿರತಕ್ಕ ದೊಡ್ಡ ದೊಡ್ಡ ಅಧಿಕಾರಿಗಳೂ ಸೇರಿದಂತೆ ಆ ಹೊಣೆಗಾರಿಕೆ ಅಂತಿಮವಾಗಿ ಮಂತ್ರಿಗಳಿಗೆ ಬರಬಹುದು. ಈ ಎಲ್ಲ ಕೆಲಸ ಗಳನು ಮಂತ್ರಿಗಳೇ ಮಾಡುವುದಕ್ಕೆ ಸಾಧ್ಯವಿಲ್ಲ. ೩೦-೪೦ ಜನ ಚೀಫ್ ಇಂಜಿನಿಯರ್‌ಗಳನ್ನು

ಇಟ್ಟುಕೊಂಡಿದ್ದೀರಿ ಅವರಿಗೆಲ್ಲ ಏನು ಹೊಣೆಗಾರಿಕೆ ಕೊಟ್ಟಿದ್ದೀರಿ ? ಇಲಾಖೆಯಲ್ಲಿ ನಡೆಯುವ ಅವ್ಯವಹಾರಗಳನ್ನು ಗಮನಕ್ಕೆ ತೆಗೆದುಕೊಂಡಾಗ ನಾವು-ನೀವು ತಿಳಿದುಕೊಂಡಿರುವ ಮಟ್ಟಕ್ಕೆ ಸರಿಯಾಗಿಲ್ಲ. ಇದು ಅತ್ಯಂತ ಭ್ರಷ್ಟರಿಂದ ಕೂಡಿದ ಇಲಾಖೆಯಾಗಿದೆ. ಇದನ್ನು ಸರಿ ಮಾಡಬೇಕಾದರೆ ನೀವು ದೃಢವಾದ ನೀತಿಯನ್ನು ಅನುಸರಿಸಬೇಕಾಗಿದೆ. ಇಂಥ ನೀತಿಯನ್ನು ಅನುಸರಿಸುವ ಪರಿಸ್ಥಿತಿಯಲ್ಲಿ ತಾವು ಇದ್ದೀರೊ ಇಲ್ಲವೊ ಗೊತ್ತಿಲ್ಲ. ಭ್ರಷ್ಟಾಚಾರವನ್ನು ತೆಗೆದುಹಾಕಿ ಇಲಾಖೆಯಿಂದ ಜನರಿಗೆ ಉಪಯೋಗವಾಗುವ ಕಲ್ಯಾಣಕರವಾದಂಥ ಕಾರ್ಯಕ್ರಮಗಳನ್ನು ರೂಪಿಸಿ ಜಾರಿ ಮಾಡುವುದಾದರೆ ಆಗ ನಾವು ಖಂಡಿತವಾಗಿ ಒಪ್ಪುತ್ತೇವೆ. ಅದಕ್ಕಿಂತ ಮೊದಲೇ ನಮ್ಮ ಸರ್ಕಾರ ಛಿದಿದೆ ಎಂದು ಕಾಗೋಡು ತಿಮ್ಮಪ್ಪನವರಾಗಲಿ, ಮತ್ಯಾರೆ ಆಗಲಿ ಅಷ್ಟರಿಂದ ತೃಪ್ತಿಪಟ್ಟರೆ ಸಾಧ್ಯವಿಲ್ಲ ; ನಿಜವಾಗಲೂ ನಿಮ್ಮ ಸರ್ಕಾರದ ನೀತಿಯಿಂದ ಭ್ರಷ್ಟಾಚಾರವನ್ನು ತಡೆದು ಜನರಿಗೆ ಕಲ್ಯಾಣಕರವಾದಂಥ ಕಾರ್ಯಕ್ರಮಗಳನ್ನು ಸರಿಯಾದಂಥ ರೀತಿಯಲ್ಲಿ ರೂಪಿಸಿ ಜಾರಿಗೆ ತರುವುದಾದರೆ ನೀವು ಸಂತೋಷ ಪಡುವುದರ ಜೊತೆಗೆ ನಾವೂ ಸಹ ಸಂತೋಷಪಡುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ಇವತ್ತು ತಾವು ಅನುಸರಿಸುವ ಕಾರ್ಯನೀತಿ ಏನಿದೆ ಅದು ಇದಕ್ಕೆ ಸಹಕಾರಿಯಾದಂಥ ನೀತಿ ಅಲ್ಲವೆಂಬ ಮಾತನ್ನು ನಾನು ಬಹಳ ವಿನಯದಿಂದ ಹೇಳುತ್ತಿದ್ದೇನೆ. ನಾವು ಕಾದು ನೋಡಬೇಕಾಗಿದೆ, ನೋಡುತ್ತೇವೆ. ಮುಂದಿನ ಬಡ್ಜೆಟ್ ಅಧಿವೇಶನದವರೆಗೆ ಕಾದು ನೋಡುತ್ತೇವೆ. ಇವತ್ತು ನಾವು ಯಾವುದೇ ಟೀಕೆ ಮಾಡುವುದಿಲ್ಲ. ಆದರೆ ಎಲ್ಲ ವಿಚಾರಗಳು ತಮಗೆ ಗೊತ್ತಿಲ್ಲವೆಂದು ಅನ್ನಿಸುವುದಿಲ್ಲ. ಎಲ್ಲ ಸದಸ್ಯರಿಗೆ ಈ ಇಲಾಖೆ ಚೆನ್ನಾಗಿ ನಡೆಯುತ್ತಿದೆ ಎಂದು ಅನ್ನಿಸುವುದಿಲ್ಲ. ಇನ್ನು ರಸ್ತೆಗಳ ವಿಚಾರವಾಗಿ ಹೇಳುವುದಾದರೆ, ನ್ಯಾಷನಲ್ ಹೈವೇ ಮತ್ತು ಪ್ರಮುಖವಾದಂಥ ಜಿಲ್ಲಾ ಹೆದ್ದಾರಿಗಳನ್ನು ತಾವು ಇಟ್ಟುಕೊಂಡಿದ್ದೀರಿ. ಅವುಗಳಿಗೆ ಸಂಬಂಧಪಟ್ಟ ಕೆಲಸ ಮಾಡುತ್ತೀರಿ. ಅದೇ ರೀತಿ ಜಿಲ್ಲಾ ಪರಿಷತ್ತಿನವರು ಕೆಲವು ರಸ್ತೆಗಳನ್ನು ಅಂದರೆ ಜಿಲ್ಲಾ ರಸ್ತೆಗಳನ್ನು ಮತ್ತು ಗ್ರಾಮ ರಸ್ತೆಗಳನ್ನು ಇಟ್ಟುಕೊಂಡಿದ್ದಾರೆ. ಈ ರಸ್ತೆ ಕೆಲಸ ಹೇಗೆ ನಡೆಯುತ್ತಿದೆ ಎಂದರೆ, ನನಗೆ ನಾಚಿಕೆಯಾಗುತ್ತಿದೆ. ಬೆಂಗಳೂರು ನಗರದಲ್ಲಿ ತಾವು ಟಾರ್ ಹಾಕುತ್ತೀರಿ, ಟಾರ್ ಹಾಕಿದ ಮೇಲೆ ಅಲ್ಲಿ ಹುಲುಸಾಗಿ ಗರಿಕೆ ಹುಲ್ಲು ಬೆಳೆಯುತ್ತದೆ. ಜಿಲ್ಲಾ ಮಟ್ಟದಲ್ಲಿರತಕ್ಕ ಟಾರ್ ರಸ್ತೆಯಲ್ಲಿ ನಿಮ್ಮ ಅಲ್ಲ ನಮ್ಮ ಕಾಂಗ್ರೆಸ್ ಹುಲ್ಲು ಬೆಳೆಯುತ್ತದೆ. ಈ ಕಾಂಗ್ರೆಸ್ ಹುಲ್ಲು ಸಹ ಬೆಳೆಯುವಂತಹ ರೀತಿಯಲ್ಲಿ ಡಾಂಬರು ರಸ್ತೆಯನ್ನು ಮಾಡುವುದಾದರೆ, ಅವರು ಯಾವ ರೀತಿ ರಸ್ತೆಗಳನ್ನು ಮಾಡಬಹುದು? ಇದರ ಬಗ್ಗೆ ಯಾರಾದರೂ ಅಧಿಕಾರಿಗಳು ವಿಚಾರ ಮಾಡಿದ್ದಾರೆಯೆ? ನೀವೇ ಕಾರಿನಲ್ಲಿ ಹೋಗುವಾಗ ನೋಡಿದರೆ, ಗೊತ್ತಾಗುತ್ತದೆ ಗರಿಕೆ ಹುಲ್ಲು, ಕಾಂಗ್ರೆಸ್ ಹುಲ್ಲು ಬೆಳೆಯುವಂತಹ ರೀತಿಯಲ್ಲಿ ಡಾಂಬರ್ ರಸ್ತೆಯನ್ನು ಮಾಡುವುದಾದರೆ ಎಷ್ಟರಮಟ್ಟಿಗೆ ಯೋಗ್ಯವಾದ ರಸ್ತೆ ಮಾಡಿದ್ದಾರೆಂದು ಆಲೋಚನೆ ಮಾಡಬೇಕಾಗುತ್ತದೆ ; ನಾನು ಇದನ್ನು ದುರುದ್ದೇಶದಿಂದ ಹೇಳುತ್ತಿಲ್ಲ. ನಾವು ರಸ್ತೆಯಲ್ಲಿ ಹಾದುಹೋದಾಗ ಇದೆಲ್ಲ ಕಾಣುತ್ತದೆ. ಇದಕ್ಕಿಂತ ಹೆಚ್ಚಾಗಿ ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. ಅಧಿಕಾರಿಗಳು ಹೇಗೆ ಲಾಭ ಮಾಡುತ್ತಾರೆ ಎಂಬುದನ್ನು ನೋಡಬಹುದು. ಗುತ್ತಿಗೆದಾರರ ಪರವಾಗಿ ಇರತಕ್ಕ ಅಧಿಕಾರಿಗಳ ಸಂಖ್ಯೆ ಹೆಚ್ಚಾಗಿದೆ, ಪ್ರಾಮಾಣಿಕ ಅಧಿಕಾರಿಗಳ ಸಂಖ್ಯೆ ಕಡಿಮೆಯಾಗಿದೆ. ನ್ಯಾಷನಲ್ ಹೈವೇನಲ್ಲಿ ತಾವೇ ಹೋಗಿ ನೋಡಿ. ಇಲ್ಲಿಂದ ನೆಲಮಂಗಲಕ್ಕೆ ಹೋಗಬೇಕಾದರೆ ಗೊತ್ತಾಗುತ್ತದೆ. ಆ ಕಡೆ ಈ ಕಡೆ ರಸ್ತೆಯ ಪಕ್ಕದಲ್ಲೇ ದೊಡ್ಡ ಗುಂಡಿ ಇಟ್ಟು ಅಲ್ಲಿನ ಮಣ್ಣನ್ನು ತೆಗೆದುಕೊಂಡು ಹೋಗಿ ಇನ್ನೊಂದು ಕಡೆ ಹಾಕುತ್ತಾರೆ. ಇಷ್ಟೆಲ್ಲ ಎದುರಿಗೆ ಕಳ್ಳತನ ಮಾಡಿದರೂ, ಕಾನೂನು ವಿರುದ್ಧವಾಗಿ ಕೆಲಸ ಮಾಡಿದರೂ ಅಧಿಕಾರಿಗಳು ಕಣ್ಮುಚ್ಚಿಕೊಂಡು ಕುಳಿತಿದ್ದಾರೆ. ದೊಡ್ಡ ದೊಡ್ಡ ಮುಖ್ಯ ಇಂಜಿನಿಯರ್‌ಗಳು ಆ ರಸ್ತೆಗಳಲ್ಲಿ ಓಡಾಡುವದಿಲ್ಲವೆ ? ರಸ್ತೆಯ ಪಕ್ಕದಲ್ಲೇ ಗುಂಡಿ ಮಾಡುವುದು, ಅಲ್ಲಿಂದ ಮಣ್ಣು ತೆಗೆದು ಇನ್ನೊಂದು ಗುಂಡಿಗೆ ಹಾಕುವುದು, ಅದನ್ನು ಮುಚ್ಚುವುದಕ್ಕೆ ಮತ್ತೊಂದು ಕಡೆಯಿಂದ ಮಣ್ಣು ತಂದು ಹಾಕುವುದು ಈ ಕೆಲಸ ನಡೆಯುತ್ತಿದೆ. ಯಾವ ಅಧಿಕಾರಿಗಳು ಹೊಣೆಗಾರಿಕೆಯಿಂದ ಸೂಪರ್‌ವಿಷನ್ ಮಾಡಬೇಕೆಂದು ಇದೆ ಅವರು ಖಂಡಿತವಾಗಿ ಮಾಡುತ್ತಿಲ್ಲ, ಅವರಿಗೆ ಪರಿವೀಕ್ಷಣೆ ಮಾಡತಕ್ಕ ಉದ್ದೇಶ ಖಂಡಿತ ಇಲ್ಲ. ಅದಕ್ಕೆ ಬದಲಾಗಿ ದುರುದ್ದೇಶದಿಂದ ಅಥವಾ ಲಾಭ ಗಳಿಸುವಂತಹ ಮನೋಭಾವದಿಂದ ಸುಮ್ಮನಿದ್ದಾರೆ ಅಥವಾ ಶಾಮೀಲಾಗಿದ್ದಾರೆಂದು ನೋಂದ ಮನಸ್ಸಿನಿಂದ ಹೇಳಬೇಕಾಗಿದೆ. ರಸ್ತೆ ರಿಪೇರಿ ಇರಬಹುದು, ಹೊಸ ರಸ್ತೆಗಳ ನಿರ್ಮಾಣ ಇರಬಹುದು. ನೀರಾವರಿ ಕೆಲಸ ಇರಬಹುದು ಯಾವುದೇ ಕೆಲಸವಾದರೂ ವಿಚಕ್ಷಣೆಯಿಂದ ಕೂಡಿದಂತಹ ವ್ಯವಹಾರ ಕೆಲಸ ಆಗಿರುವುದು ನಮಗೆ ಕಾಣುತ್ತಿಲ್ಲ. ಅದಕ್ಕೆ ಬದಲಾಗಿ ಸಂಬಂಧಪಟ್ಟ ಅಧಿಕಾರಿಗಳು ಗುತ್ತಿಗೆದಾರರೊಡನೆ ಶಾಮೀಲಾಗಿ ಈ ರಾಜ್ಯದ ಜನರ ಹಣವನ್ನು ದೋಚುವಂತಹ ಕೆಲಸ ಮಾಡುತ್ತಿದ್ದಾರೆ. ಇದರ ಬಗ್ಗೆ ತಾವು ನಿಗಾವಹಿಸಬೇಕು ಮತ್ತು ಪರಿಣಾಮಕಾರಿಯಾದ ಕೆಲಸ ಮಾಡುವಂತೆ ಮಾಡಬೇಕು. ಇವತ್ತಿನ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ

ರಸ್ತೆಗಳು ವಿಪರೀತ ಕೆಟ್ಟುಹೋಗಿವೆ. ನಾವು ರಾಷ್ಟ್ರೀಯ ಹೆದ್ದಾರಿಗಳಲ್ಲಿ, ರಾಜ್ಯದ ಮುಖ್ಯ ಹೆದ್ದಾರಿಗಳಲ್ಲಿ ಓಡಾಡುತ್ತೇವೆ. ಆದರೆ ಗ್ರಾಮೀಣ ಜನರಿಗೆ ಸೌಕರ್ಯ ಮಾಡಿದ್ದೇವೆಂದು ತಾವೇನಾದರೂ ಹೇಳುವುದಾದರೆ ಶೇಕಡ ೪೦ರಷ್ಟು ಹಳ್ಳಿಗಳಿಗೆ ಇವತ್ತಿನ ದಿವಸ ಸರ್ವಋತು ಯೋಗ್ಯವಾದ ಸಂಪರ್ಕ ರಸ್ತೆಗಳು ಇಲ್ಲ. ಸುಮಾರು ೧೫ ಸಾವಿರ ಹಳ್ಳಿಗಳಿಗೆ

ಎಲ್ಲ ಕಾಲದಲ್ಲಿಯೂ ಉಪಯೋಗಿಸುವಂತಹ, ಸಂಪರ್ಕಿಸುವ ರಸ್ತೆಗಳು ಕರ್ನಾಟಕ ರಾಜ್ಯದಲ್ಲಿ ಇಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶೇಕಡ ಒಂದರಷ್ಟು ಹಳ್ಳಿಗಳಿಗೆ ರಸ್ತೆಗಳೇ ಇಲ್ಲ. ರಸ್ತೆ ಇಲ್ಲದೇ ಇರತಕ್ಕ ಹಳ್ಳಿಗಳ ಪರಿಸ್ಥಿತಿ ಏನಿದೆ ಅದನ್ನು ಖಂಡಿತವಾಗಿಯೂ ಸರಿಪಡಿಸುವ ಕಡೆಗೆ ತಾವು ಹೆಚ್ಚು ಗಮನವನ್ನು ಕೊಡಬೇಕು. ಇವತ್ತಿನ ದಿವಸ ಅವೊಂದು ಫಲ, ಅವೊಂದು ಉಪಯೋಗ ಏನಿದೆ ಅದು ದೇಶದ ಗ್ರಾಮಾಂತರ ಪ್ರದೇಶಗಳ ಜನರಿಗೆ ಸಿಗಬೇಕು. ಕನಿಷ್ಟ ಪಕ್ಷ ಒಂದು ಊರಿಗೆ ಒಂದು ರಸ್ತೆಯನ್ನಾದರೂ ಸಹ ಸಂಪರ್ಕ ರಸ್ತೆಯನ್ನಾಗಿ ತಾವು ಮಾರ್ಪಡಿಸಬೇಕು. ಪ್ರತಿಯೊಂದು ಹಳ್ಳಿಗೂ ಸರ್ವಋತು ರಸ್ತೆ, ಎಲ್ಲ ಕಾಲದಲ್ಲಿಯೂ ಉಪಯೋಗಿಸುವಂತಹ ಸಂಪರ್ಕ ರಸ್ತೆ ಇರಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಕೂಗು ನಮ್ಮಲ್ಲಿದೆ, ಅದೇನೆಂದರೆ, ಜಿಲ್ಲಾಪರಿಷತ್‌ನವರು ರಸ್ತೆಗಳಿಗೆ ಮಣ್ಣು ಹಾಕುತ್ತಾರೆ. ಅವರು ರಸ್ತೆಗಳನ್ನು ಸರಿಯಾಗಿ ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. ಎಲ್ಲ ಜಿಲ್ಲಾಪರಿಷತ್‌ಗಳ ವತಿಯಿಂದ ರಸ್ತೆಗಳಿಗೆ ಮಣ್ಣು ಹಾಕುವವರು ಸಹ ನಿಮ್ಮ ಇಂಜಿನಿಯರ್‌ಗಳೇ. ಅವರೇನು ಬೇರೆಯವರಲ್ಲ. ಅಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಹಾಗಾದರೆ ಭ್ರಷ್ಟಾಚಾರದ ಹೊಣೆಗಾರಿಕೆಯಲ್ಲಿ ನಿಮ್ಮ ಪಾತ್ರ ಇಲ್ಲವೆ ? ಇಂಜಿನಿಯರುಗಳ ಪಾತ್ರ ಇಲ್ಲವೆ ? ಅವರು ಏನು ಮಾಡುತ್ತಿದ್ದಾರೆಂದರೆ, ಜಿಲ್ಲಾಪರಿಷತ್‌ನ ಯೋಜನೆಯ ಅಡಿಯಲ್ಲಿ ಇರಬೇಕೆಂದು, ಯಾವುದೇ ಕಾರ್ಯಕ್ರಮದ ಅಡಿಯಲ್ಲಿರಬಹುದು. ಯಾವುದೇ ಕಾಮಗಾರಿಗಳಾದರೂ ಸಹ ನಿಮ್ಮ ಅಧಿಕಾರಿಗಳು ಆ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಹೇಗೆ ನಿರ್ವಹಿಸುತ್ತಿದ್ದಾರೆ ಎಂದರೆ, ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಗುತ್ತಿಗೆದಾರರು ಇರಬಹುದು. ಸಣ್ಣಪುಟ್ಟ ಗುತ್ತಿಗೆದಾರರು ಇರಬಹುದು. ಇವತ್ತಿನ ದಿವಸ ಹಳ್ಳಿಗಳಲ್ಲಿ ಒಂದು ಪ್ರವೃತ್ತಿ ಬೆಳೆಯುತ್ತಿದೆ. ರಾಜ್ಯ ಮಟ್ಟದಲ್ಲಿ ದೊಡ್ಡ ದೊಡ್ಡ ಕೆಲಸಗಳನ್ನು ಮಾಡುವಾಗ, ದೊಡ್ಡ ದೊಡ್ಡ ಗುತ್ತಿಗೆದಾರರು ಇರಬಹುದು. ಆದರೆ ನಮ್ಮ ಹಳ್ಳಿಗಳಿಗೆ ಹೋದಾಗ, ಅಲ್ಲಿ ಜಿಲ್ಲಾಮಟ್ಟದಲ್ಲಿ ಸಣ್ಣಪುಟ್ಟ ಕೆಲಸಗಳನ್ನು ಮಾಡುವಾಗ ಅಲ್ಲಿರತಕ್ಕ ಇಂಜಿನಿಯರ್‌ಗಳು ಕಂಟ್ರಾಕ್ಟ್ ತೆಗೆದುಕೊಂಡು ಕೆಲಸ ಮಾಡಿಸುತ್ತಿದ್ದಾರೆ. ಮಾನ್ಯ ಕಾಗೋಡು ತಿಮ್ಮಪ್ಪನವರ ಕಾಲದಲ್ಲಿ ಅದಕ್ಕಿಂತ ಒಂದೆ ಶೇಕಡ ಹಿರಷ್ಟು ಲಂಚ ಇತ್ತು. ಲಂಚ ತೆಗೆದುಕೊಳ್ಳುವವರನ್ನು ಲಂಚಕೋರ ಎಂದು ಹೇಳುತ್ತಿದ್ದರು. ಆದರೆ ಇವತ್ತು ಇಂಜಿನಿಯರ್‌ಗಳು ಕಂಟ್ರಾಕ್ಟ್ ಕೆಲಸ ಮಾಡುತ್ತಿದ್ದಾರೆ. ಇಂಜಿನಿಯರ್ ಕಂಟ್ರಾಕ್ಟ್ ತೆಗೆದುಕೊಂಡು

ಕೆಲಸಮಾಡಿ ಪೂರ್ಣ ಪ್ರಮಾಣದ ಲಂಚವನ್ನು ಹೊಡೆಯುವಂತಹ ಪ್ರವೃತ್ತಿ ನಮ್ಮ ದೇಶದಲ್ಲಿ ಜಾಸ್ತಿಯಾಗಿದೆ. ಅದನ್ನು ತಡೆಗಟ್ಟಬೇಕಾಗಿದೆ. ಸಣ್ಣಪುಟ್ಟ ಕೆಲಸಕಾರ್ಯಗಳನ್ನು ಕೊಡಬೇಕಾದರೆ ಬಹುತೇಕವಾಗಿ ಇಂಜಿನಿಯರ್‌ಗಳು ಕಂಟ್ರಾಕ್ಟ್ ತೆಗೆದುಕೊಳ್ಳುತ್ತಾರೆ. ಹೇಗೆ ತೆಗೆದುಕೊಳ್ಳುತ್ತಾರೆಂದರೆ ಅಣ್ಣನ ಹೆಸರಿನಲ್ಲಿ ತಮ್ಮನ ಹೆಸರಿನಲ್ಲಿ ಅಥವಾ ಬೇರೆಯವರ ಹೆಸರಿನಲ್ಲಿ ಕಂಟ್ರಾಕ್ಟ್ ತೆಗೆದುಕೊಂಡು ಕೆಲಸಮಾಡಿ ಪೂರ್ಣ ಪ್ರಮಾಣದ ಲಾಭವನ್ನು ಪಡೆಯುವ ಪ್ರವೃತ್ತಿ ಹೆಚ್ಚಾಗಿದೆ. ಇದೇನೂ ಹೊಸದಾಗಿ ಆಗುತ್ತಿಲ್ಲ. ಮಾನ್ಯ ಪುಟ್ಟಸ್ವಾಮಿಗೌಡರ ಕಾಲದಲ್ಲಿ ಇದು ಬಂದಿದೆಯೆಂದು ನಾನು ಹೇಳುತ್ತಿಲ್ಲ. ಈ ಪ್ರವೃತ್ತಿ ಪರಂಪರೆಯಾಗಿ ಬೆಳೆದುಕೊಂಡು ದಿನೇ ದಿನೇ ಜಾಸ್ತಿಯಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಲೋಕೋಪಯೋಗಿ ಇಲಾಖೆ ಏನಿದೆ ಅದನ್ನು ಜನರಿಗೆ ಬೇಕಾದಂತಹ ಯೋಗ್ಯವಾದ ಇಲಾಖೆಯನ್ನಾಗಿ ಮಾಡಬೇಕಾಗಿದೆ. ಅದನ್ನು ಯೋಗ್ಯವಾದ ಇಲಾಖೆಯನ್ನಾಗಿ ರೂಪಿಸಲಿಕ್ಕೆ ವಿಶೇಷವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಆ ಕ್ರಮವನ್ನು ತಾವು ತೆಗೆದುಕೊಳ್ಳುತ್ತೀರಿ ಎಂಬ ಆಶಯವನ್ನು ವ್ಯಕ್ತಪಡಿಸುತ್ತೇನೆ. ನಾನು ಹೇಳಿದ ಕೆಲವು ವಿಚಾರಗಳು ಏನಿವೆ ಅವು ತಮಗೆ ಗೊತ್ತಿದೆಯೆಂದು ನಾನು ಭಾವಿಸುತ್ತೇನೆ. ನಾನು ಹೇಳಿದಂತಹ

ವಿಚಾರದಲ್ಲಿ ಅವರಿಗೆ ಸಂಶಯವಿದ್ದರೆ ಅವರಿಗೆ ಬೇಕಾದ ಮಾಹಿತಿಯನ್ನು ಬರವಣಿಗೆಯ ಮೂಲಕ ತಮಗೆ ಕೊಡುವುದಕ್ಕೆ ತಯಾರಾಗಿದ್ದೇನೆ. ಮಂತ್ರಿಗಳು ಇಲಾಖೆಯಲ್ಲಿ ಇರತಕ್ಕ ಲೋಪದೋಷಗಳನ್ನು ತಿದ್ದುವುದಕ್ಕೆ ಪ್ರಯತ್ನ ಮಾಡಬೇಕು. ಇನ್ನೊಂದು ವಿಚಾರವನ್ನು ನಾನು ಮೊನ್ನೆ ಸಹ ಹೇಳಿದ್ದೇನೆ. ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಎಂದು ಇದೆ. ಅದಕ್ಕೊಬ್ಬರು ಚೀಫ್ ಇಂಜಿನಿಯರ್ ಇದ್ದಾರೆ. ಅಲ್ಲಿ ಏನು ಕೆಲಸ ಆಗುತ್ತಿದೆ ? ಅದರ ಬಗ್ಗೆ ನಾಚಿಕೆಗೇಡಿನ ಒಂದು ವರದಿ ಬಂದಿದೆ. ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಅದಕ್ಕೆ ಕೊಡತಕ್ಕ ಕೆಲಸವನ್ನು ಗುತ್ತಿಗೆದಾರರಿಗೆ ಕೊಡಿಯೆಂದು ಸಂಬಂಧಪಟ್ಟ ಇಂಜಿನಿಯರ್, ನಿಮ್ಮ

ಇಲಾಖೆಯವರು ಹೇಳುತ್ತಿದ್ದಾರೆಂದರೆ, ಇದಕ್ಕಿಂತ ನಾಚಿಕೆಗೇಡಿನ ಪ್ರಸಂಗ ಇನ್ನೇನಿದೆ? ಈ ಮಾತನ್ನು ಬೇರೆಯವರು ಹೇಳುತ್ತಿಲ್ಲ; ಕರ್ನಾಟಕ ಕನ್ಸ್ಟ್ರಕ್ಷನ್ ಕಾರ್ಪೊರೇಷನ್‌ರವರು ನಾವು ಸಮರ್ಪಕವಾಗಿ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ, ಆ ಕೆಲಸಗಳನ್ನು ಗುತ್ತಿಗೆದಾರರಿಗೆ ಕೊಡಿಯೆಂದು ಹೇಳುವಂತಹ ಪರಿಸ್ಥಿತಿ ಈ ದೇಶದಲ್ಲಿ ಬಂದಿದೆ. ನಾನು ತಮ್ಮನ್ನು ಕೇಳುತ್ತೇನೆ, ಇವರೆಲ್ಲ ಏತಕ್ಕೋಸ್ಕರ ಬರುತ್ತಾರೆ? It is on record. ಸಂಬಂಧಪಟ್ಟ ಇಂಜಿನಿಯರ್‌ಗೆ ಆ ಗುತ್ತಿಗೆದಾರರ ಮೇಲೆ ಆಸಕ್ತಿ ಮತ್ತು ಹಿತ ಇರುತ್ತದೆ. ಇಲ್ಲದಿದ್ದರೆ ಈ ಮಾತನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ನಾನು ಕೇವಲ ಉದಾಹರಣೆಗೆ ಹೇಳುತ್ತಿದ್ದೇನೆ. ನಿಮ್ಮ ಪ್ರತಿಯೊಂದು ಕಾರ್ಯ ನಿರ್ವಹಣೆಯಲ್ಲಿ ಸಣ್ಣವರಿಂದ ಹಿಡಿದು ದೊಡ್ಡವರ ತನಕ ಇರುವ ಈ ಪ್ರವೃತ್ತಿಯನ್ನು ತಡೆಯಬೇಕು. ಕೆಲವರು ಒಳ್ಳೆಯವರು ಇರಬಹುದು, ನಾನು ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಬಹುತೇಕ ಇಂಜಿನಿಯರ್‌ಗಳಲ್ಲಿ ಅತ್ಯಂತ ಭ್ರಷ್ಟರು ಮತ್ತು ನೀಚರು ಇದ್ದಾರೆಂದು ಹೇಳುತ್ತಿದ್ದೇನೆ.

ಅವರ ಈ ಪ್ರವೃತ್ತಿಯನ್ನು ಸರಿಪಡಿಸುವ ಹೊಣೆಗಾರಿಕೆ ನಿಮ್ಮ ಮೇಲೆ ಇದೆ. ಅದನ್ನು ಸರಿಪಡಿಸುತ್ತೀರೆಂಬ ವಿಶ್ವಾಸವನ್ನು ನಾನು ಹೊಂದಿದವನಾಗಿದ್ದೇನೆ. ಇದರ ಬಗ್ಗೆ ನಾನು ಬಹಳಷ್ಟು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ ಹಿಂದೆಯೇ ಸಾಕಷ್ಟು ಸಮಯವನ್ನು ತೆಗೆದುಕೊಂಡಿದ್ದೇನೆ. ಮಾನ್ಯ ಮಂತ್ರಿಗಳು ನಿಜವಾಗಿಯೂ ಈ ಇಲಾಖೆಯನ್ನು ಯೋಗ್ಯವಾದ ಇಲಾಖೆಯನ್ನಾಗಿ ಪರಿವರ್ತನೆ ಮಾಡಬೇಕಾದರೆ ಖಂಡಿತವಾಗಿ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ಇಲಾಖೆ ಕೆಟ್ಟಿರುವಷ್ಟು ಮತ್ತೊಂದು ಇಲಾಖೆ ಕೆಟ್ಟಿರುವುದನ್ನು ನಾನಂತೂ ನೋಡಿಲ್ಲ. ಅವರು ಇವರು ಎಕ್ಸೈಜ್ ಅದು ಇದು ಅಂತ ಹೇಳಬಹುದು. ಖಂಡಿತವಾಗಿ ಇದಕ್ಕಿಂತ ಹೆಚ್ಚು ಹಣ ದುರ್ವ್ಯವಹಾರವಾಗುತ್ತಿರುವ ಇಲಾಖೆ ಮತ್ತೊಂದು ಇಲ್ಲ. ಅಡ್ವಾನ್ಸ್ ಮಿಸಲೇನಿಯಸ್ ಅಂತ ಕೊಟ್ಟಿರುತ್ತೀರಿ. ಎಷ್ಟು ಜನ ಕಂಟ್ರಾಕ್ಟ್‌ದಾರರುಗಳಿಗೆ ಕೊಟ್ಟಿದ್ದೀರಿ? ಅದರ ಲೆಕ್ಕ ಇದೆಯೇ, ಇದೆ. ೧೯೭೦ನೇ ಇಸವಿಯಿಂದಲೂ ಬಾಕಿ ಇರತಕ್ಕ ಅಡ್ವಾನ್ಸ್ ಇದೆ. ಏಕೆ ಇದನ್ನು ರಿಕವರಿ ಮಾಡುವುದಕ್ಕಾಗಲಿಲ್ಲ? ಸಹಕಾರ ಇಲಾಖೆಯ ಬೇಡಿಕೆ ಬಂದಾಗ ಅನೇಕ ಹಿರಿಯ ಸಹಕಾರಿಗಳು ಸೊಸೈಟಿಗಳ ಅಡ್ರೆಸ್ಸೇ ಇಲ್ಲ ಅಂತ ಎಂದು ಹೇಳುತ್ತಾರೆ ಸೊಸೈಟಿಗಳ ಅಡ್ರಸ್ ಇಲ್ಲದೆ ಇರುವಂತಹಗಳು ಕೆಲವು ಇರಬಹುದು. ಎಲ್ಲವೂ ಹಾಗೆಯೇ ಇಲ್ಲ. ನಿಮ್ಮ ಇಲಾಖೆಯಲ್ಲಿ ಕಂಟ್ರಾಕ್ಟ್‌ದಾರರ ವಿಳಾಸವೇ ಇಲ್ಲವಲ್ಲ. ಇಂತಹ ನಿದರ್ಶನ ಮತ್ತೊಂದು ಬೇಕಾಗಿಲ್ಲ. ಎಲ್ಲ ವಿಚಾರಗಳನ್ನು ಸಮಗ್ರವಾದ ರೀತಿಯಲ್ಲಿ ತನಿಖೆಮಾಡಿ ಅದರ ಬಗ್ಗೆ ಕ್ರಮ ತೆಗೆದು ಕೊಳ್ಳಬೇಕು ಎಂದು ಹೇಳಿ ನನಗೆ ಮಾತನಾಡಲು ಸಾಕಷ್ಟು ಅವಕಾಶಕೊಟ್ಟ ಮಾನ್ಯಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಅಧ್ಯಕ್ಷರೆ, ಕಾಮಗಾರಿ ನೀರಾವರಿ ಬೇಡಿಕೆಗಳ ಮೇಲೆ ಚರ್ಚೆ ನಡೆಯುತ್ತಿರುವ ಈ ಸಮಯದಲ್ಲಿ ಕಳೆದ ೫-೬ ವರ್ಷಗಳಿಂದ ನಾವು ಕಾಣುತ್ತಿರುವ ಕಾಮಗಾರಿಗಳು ಅಭಿವೃದ್ಧಿಯಲ್ಲಿ ಕುಂಠಿತಗೊಂಡಿದ್ದು, ನಮ್ಮ ಈ ಸರ್ಕಾರದ ಅಧಿಕಾರಾವಧಿಯಲ್ಲಿ ಉತ್ತಮ ಹೆಜ್ಜೆಯನ್ನು ಇಟ್ಟುಕೊಂಡು ಹೋಗುತ್ತಿರುವ ಈ ಸಂದರ್ಭದಲ್ಲಿ ಈ ಇಲಾಖೆಗಳ ಬೇಡಿಕೆಯಲ್ಲಿ ಹಾಗೂ ಹೆಚ್ಚಿನ ಅಭಿವೃದ್ಧಿ ಕಾರ್ಯಗಳನ್ನು ಹಾಕಿಕೊಂಡಿರುವ ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳನ್ನು ಅಭಿನಂದಿಸುತ್ತ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ ಬಹುಶಃ ಇವತ್ತು ಜಿಲ್ಲಾ ಪರಿಷತ್ತಿನ ಇಂಜಿನಿಯರಿಂಗ್ ವಿಭಾಗ ಮತ್ತು ಕಾಮಗಾರಿಗಳ ವಿಭಾಗಗಳ ಮಧ್ಯದಲ್ಲಿ ನಿಜವಾಗಿಯೂ ಅಭಿವೃದ್ಧಿ ಕಾರ್ಯಗಳು ನಶಿಸುತ್ತಿರುವ ಸ್ಥಿತಿಯಲ್ಲಿರುವ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಇತ್ತಕಡೆ ಜಿಲ್ಲಾ ಪರಿಷತ್ತಿನ ವಿಭಾಗದಲ್ಲಿ ನಮ್ಮ ಕಾಮಗಾರಿಗಳ ಬಗ್ಗೆ ಕೇಳಿಕೆಗಳನ್ನು ಮಂಡಿಸಿದಾಗ ಯಾವಾಗಲೂ ನಮ್ಮ ಅಭಿವೃದ್ಧಿ ಕಾಮಗಾರಿಗಳಿಗೆ ತೊಂದರೆಯಾಗುತ್ತಿರುವ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಇತ್ತ ಕಡೆ ಸರ್ಕಾರ ಅಥವಾ ಲೋಕೋಪಯೋಗಿ ಇಲಾಖೆಯ ವತಿಯಿಂದ ಕಾಮಗಾರಿಗಳ ಬೇಡಿಕೆಯನ್ನು ಇಟ್ಟಾಗ ಅಲ್ಲೂ ತೊಂದರೆಗೆ ಒಳಪಡುವ ವಿಷಯವನ್ನೇ ನಾವು ಕಾಣುತ್ತಿದ್ದೇವೆ. ಉದಾಹರಣೆಗೆ ಹೇಳುವುದಾದರೆ, ೧೯೮೪-೮೫ನೇ ಇಸವಿಯಲ್ಲಿ ನಾವು ವಿರೋಧಪಕ್ಷದಲ್ಲಿದ್ದೆವು. ಆ ಸಾಲಿನ ಬಜೆಟ್‌ನಲ್ಲಿ ಸೇರಿಸಿರುವ ಕಾಮಗಾರಿಗಳಿಗೆ ೬-೭ ವರ್ಷಗಳಾದರೂ ಒಂದು ಚಿಕ್ಕಾಸೂ ಕೂಡ ವೆಚ್ಚವಾಗದೆ ಇರತಕ್ಕ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಆ ಕಾಮಗಾರಿಗಳನ್ನು ಇದುವರೆವಿಗೂ ಪ್ರಾರಂಭಿಸದೆ ಇರತಕ್ಕ ಪರಿಸ್ಥಿತಿಯನ್ನು ನಾವು ನಮ್ಮ ಕ್ಷೇತ್ರದಲ್ಲಿ ಕಾಣುತ್ತಿದ್ದೇವೆ ಅದೇ ರೀತಿ ೧೯೮೪-೮೫ನೇ ಸಾಲಿನಲ್ಲಿ ಆಯವ್ಯಯದಲ್ಲಿ ಸೇರಿದ ಕಾಮಗಾರಿಗಳಿಗೆ ಹಣವನ್ನು ಪೂರೈಸಿಲ್ಲ. ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬರುವುದಕ್ಕೆ ಹಿಂದೆ ಇದ್ದಂತಹ ಸರ್ಕಾರ ೧೯೮೫ ರಿಂದ ೧೯೮೭ರ ವರೆಗೂ ತನ್ನ ಯಾವುದೇ ಅಭಿವೃದ್ಧಿ ಕಾಮಗಾರಿಗಳಿಗೆ ಹಣವನ್ನು ಪೂರೈಸದೆ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದ್ದು, ಆ ಕಾಮಗಾರಿಗಳಿಗೆ ಹಣವನು ಒದಗಿಸದೆ ತೊಳಲಾಡುತ್ತಿರುವ

ಸಂದರ್ಭವನ್ನು ನಾವು ಕಂಡಿದ್ದೇವೆ. ಅದೇ ರೀತಿ ೧೯೮೪-೮೫ರಲ್ಲಿ ಪ್ರಾರಂಭವಾದ ಕಾಮಗಾರಿಗಳು ೧೯೮೫ ರಿಂದ ೧೯೮೭ರ ವರೆಗೆ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತಿತ್ತು, ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದ ನಂತರ ಕೆಲವು ಕಾಮಗಾರಿಗಳನ್ನು ಜಿಲ್ಲಾ ಪರಿಷತ್ತಿಗೆ ವರ್ಗಾಯಿಸಲಾಗಿದ್ದು ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರುವ ಕಾಮಗಾರಿಗಳಿಗೆ ಸರ್ಕಾರ ಹಣವನ್ನು ಪೂರೈಸದೆ ಇದ್ದುದರಿಂದ ಆ ಕಾಮಗಾರಿಗಳು ಪೂರ್ತಿ ನಿಂತು ಹೋಗಿರುವ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ನನ್ನ ಕ್ಷೇತ್ರದಲ್ಲಿ ಸಾಧಾರಣ ೪೫ ಲಕ್ಷ ರೂಪಾಯಿಗಳ ಕಾಮಗಾರಿಯೊಂದು ಮಂಜೂರಾಗಿತ್ತು. ಅದಕ್ಕೆ ಇವತ್ತಿನ ವರೆವಿಗೂ ಒಂದು ಪೈಸೆ ಕೂಡ ಖರ್ಚು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಅದೇ ರೀತಿಯಲ್ಲಿ ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದ ನಂತರ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳಿಗೆ ಪ್ರತ್ಯೇಕವಾದ ಹಣವನ್ನು ಒದಗಿಸದೆ ಇದ್ದುದರಿಂದ ಇವತ್ತಿನ ದಿವಸ ರಾಜ್ಯಾದ್ಯಂತ ಸಾವಿರಾರು ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ.

೧೨-೩೦ ಪಿ.ಎಂ.

ಅದೇ ರೀತಿಯಲ್ಲಿ ಇವತ್ತು ಜಿಲ್ಲಾಪರಿಷತ್ತಿನ ಎಂಜಿನಿಯರಿಂಗ್ ವಿಭಾಗ ಒದಗಿಸುವ ಹಣಕಾಸಿನ ಕೊರತೆಯಿಂದ ಇವತ್ತು ಕಾಮಗಾರಿಗಳನ್ನೂ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇವತ್ತಿನ ದಿವಸ ಜಿಲ್ಲಾಪರಿಷತ್ತಿನ ಕಾರ್ಯಕಲಾಪಗಳನ್ನು ಹಾಗೂ ಅದರ ಹಣಕಾಸಿನ ಸ್ಥಿತಿ ನೋಡಿ ಜನತೆ ದಿಗಿಲು ಬೀಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಇವತ್ತು ಜನತೆಗೆ, ಆ ಕಡೆ ಜಿಲ್ಲಾಪರಿಷತ್ತಿನವರೂ ಇಲ್ಲ, ಈ ಕಡೆ ಇಲಾಖೆಯೂ ಇಲ್ಲ ಎಂದರೆ ಅವರು ಎಲ್ಲಿಗೆ ಹೋಗಬೇಕು ? ಇವತ್ತು ಕಾಮಗಾರಿ ಕೆಲಸಗಳು ಸರ್ಕಾರದಿಂದ ಅಥವಾ ಜಿಲ್ಲಾಪರಿಷತ್ತಿನಿಂದ ಆಗದಿದ್ದರೆ ಜನತೆ ಮುಂದೆ ಏನು ಮಾಡಬೇಕು ? ಉದಾಹರಣೆಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲಾಪರಿಷತನ್ನು ತೆಗೆದುಕೊಂಡರೆ, ಈ ಜಿಲ್ಲಾಪರಿಷತ್ತು ೧೨.೭ ಕೋಟಿ ರೂಪಾಯಿಗಳ ಅಂದಾಜು ಪಟ್ಟಿಯನ್ನು ಸರ್ಕಾರಕ್ಕೆ ಕೊಟ್ಟಿದ್ದರೆ ಬಹುಶಃ ಕಾಮಗಾರಿ ಇಲಾಖೆಯಲ್ಲಿ ಕೇವಲ ೩.೭ ಕೋಟಿ ರೂಪಾಯಿಗಳ ಕಾಮಗಾರಿಗಳನ್ನು ಸರ್ಕಾರದ ವತಿಯಿಂದ ಜಿಲ್ಲಾಪರಿಷತ್ತಿಗೆ ಕೊಟ್ಟಿದೆ. ಇದನ್ನು ವಿವಿಧ ಶೀರ್ಷಿಕೆಯವರು ಹಂಚಿಕೆ ಮಾಡುವಾಗ ನಾನು ಈಗಾಗಲೇ ಹೇಳಿದಂತೆ ನನ್ನ ಕ್ಷೇತ್ರದಲ್ಲಿ ಬರುವಂತಹ ೭ ಸೇತುವೆಗಳ ಅಂದಾಜು ವೆಚ್ಚ ೧೯೮೪-೮೫ರಲ್ಲಿ ೪೫ ಲಕ್ಷ ರೂಪಾಯಿಗಳು ಆಗಿದ್ದು ಈಗ ಒಂದು ಸೇತುವೆಗೆ ವರ್ಷಕ್ಕೆ ೨೦ ಲಕ್ಷ ಇಡಬೇಕದ್ದರೂ ಕೇವಲ ೫ ಸಾವಿರ ರೂಪಾಯಿ ಇಟ್ಟಿರುವುದರಿಂದ ಇನ್ನು ನೂರು ವರ್ಷಗಳಾದರೂ ಈ ಸೇತುವೆಗಳ ಕೆಲಸ ಆಗುವುದಿಲ್ಲ. ಈ ರೀತಿಯಾದರೆ ಹೇಗೆ ಕಾಮಗಾರಿಗಳನ್ನು ಪೂರೈಸುವುದಕ್ಕಾಗುತ್ತದೆ ? ಈಗ ಮಾನ್ಯ ಮಂತ್ರಿಗಳು ಕೂಡಾ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ನಮ್ಮ ಸರ್ಕಾರ ಕೂಡಾ ಆರ್ಥಿಕ ಸ್ಥಿತಿಯ ಸುಧಾರಣೆಯನ್ನು ಅನುಸರಿಸಿಕೊಂಡು ಒಳ್ಳೆಯ ಯೋಜನೆಗಳನ್ನು ಹಾಕಿಕೊಂಡು ಮುಂದೆ ಹೋಗುತ್ತಿದೆ. ಅಲ್ಲದೆ ಹೆಚ್ಚಿನ ರೀತಿಯ ಕಾರ್ಯಕ್ರಮಗಳನ್ನು ಅದರಲ್ಲೂ ಗ್ರಾಮೀಣ ಹಾಗೂ ಮಲೆನಾಡು ಪ್ರದೇಶಗಳ ಇನ್ನಿತರ ಸಮಸ್ಯೆಗಳನ್ನು ಅರಿತುಕೊಂಡು ಒಳ್ಳೆಯ ಯೋಜನೆಗಳನ್ನು ಹಾಕಿಕೊಂಡು ಸರ್ಕಾರ ಇವತ್ತು ಮುಂದೆ ಹೋಗುತ್ತಿದೆ. ನಾನು ಕೇಳುವುದು ಇಷ್ಟೆ, ೧೯೮೪-೮೫ರಲ್ಲಿ ಜಿಲ್ಲಾಪರಿಷತ್ ಅಸ್ತಿತ್ವಕ್ಕೆ ಬರುವುದಕ್ಕೆ ಮೊದಲು ಯಾವ ಕಾರ್ಯಕ್ರಮಗಳನ್ನು ಸರ್ಕಾರ ಮಂಜೂರು ಮಾಡಿತ್ತೋ ಅಂತಹವನ್ನು ಪಟ್ಟಿಮಾಡಿ ಆ ಕಾಮಗಾರಿಗಳಿಗೆ ಸರ್ಕಾರವೇ ಹಣವನ್ನು ಒದಗಿಸುವ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ನಾನು ಮಾನ್ಯ ಸಚಿವರನ್ನು ಕೇಳುತ್ತೇನೆ. ಅದೇ ರೀತಿಯಲ್ಲಿ ಇನ್ನೂ ಕೆಲವು ಸಮಸ್ಯೆಗಳು ನಮಗೆ ಕಾಣುತ್ತವೆ. ಬಹುಶಃ ಇವತ್ತು ಈ ಶೀರ್ಷಿಕೆಯಲ್ಲಿ ಕೊಟ್ಟ ಹಣವನ್ನು ಜಿಲ್ಲಾಪರಿಷತ್ತು ಕ್ಷೇತ್ರವಾರು, ತಾಲ್ಲೂಕುವಾರು ವಿಂಗಡಿಸುವಾಗ ಕೇವಲ ಅಲ್ಪ ಸ್ವಲ್ಪ ಹಣ ಉಳಿಕೆಯಾಗುವುದರಿಂದ ಅಂದಾಜು ಪಟ್ಟಿಯಲ್ಲಿರುವ ಸೇತುವೆಗಳ ಕಾಮಗಾರಿಗಳಿಗೆ ಸಾಕಷ್ಟು ಹಣವನ್ನು ಪೂರೈಸುವುದಕ್ಕಾಗುವುದಿಲ್ಲ. ಇವತ್ತು ಆ ಕಾಮಗಾರಿಗಳನ್ನು ಮುಗಿಸಬೇಕಾದರೆ ವರ್ಷಕ್ಕೆ ಮೂರನೇ ಒಂದು ಭಾಗದ ಹಣವನ್ನು ಒದಗಿಸಿದರೆ ಅಂತಹ ಕಾಮಗಾರಿಗಳು ಮೂರು ವರ್ಷಗಳಲ್ಲಿ ಮುಗಿಯುವುದಕ್ಕೆ ಸಾಧ್ಯವಿದೆ. ಆದರೆ ಈಗ ಒದಗಿಸಿರುವ ಹಣವನ್ನು ನೋಡಿದರೆ ಇನ್ನು ನೂರು ವರ್ಷಗಳಾದರೂ ಈ ಕೆಲಸ ಮುಗಿಯುವುದಿಲ್ಲ. ಒಂದು ಕಾಮಗಾರಿಗೆ ೧೯೮೪-೮೫ರಲ್ಲಿ ೩೦ ಲಕ್ಷ ಎಂದು ಅಂದಾಜು ಮಾಡಿದರೆ ಅದಕ್ಕೆ ಮೂರನೆ ಒಂದು ಭಾಗದ ಹಣ ಎಂದರೆ ಸುಮಾರು ೭ ಲಕ್ಷ ರೂಪಾಯಿಗಳನ್ನು ಇಟ್ಟು ಆ ಕಾಮಗಾರಿ ಕೆಲಸವನ್ನು ಪ್ರಾರಂಭ ಮಾಡಬೇಕಾಗುತ್ತದೆ. ಆದರೆ ಈ ಕಾಮಗಾರಿಗಳನ್ನು ಜಿಲ್ಲಾಪರಿಷತ್ತು ವಹಿಸಿಕೊಂಡು ಮೇಲೆ ಕೇವಲ ೫ ಸಾವಿರ ರೂಪಾಯಿಗಳನ್ನು ಮಾತ್ರ ಕೊಟ್ಟಿರುವುದರಿಂದ ೬-೭ ವರ್ಷ ಕಳೆದರೂ ಈ ಕಾಮಗಾರಿಗಳನ್ನು ಪೂರೈಸುವುದಕ್ಕೆ ಸಾಧ್ಯ

ವಾಗುವುದಿಲ್ಲ. ತಾವು ಏನು ೩ ವರ್ಷಗಳ ಅವಧಿಯಲ್ಲಿ ಮುಗಿಸಬೇಕೆಂದು ಅಂದಾಜು ಪಟ್ಟಿಯನ್ನು ತಯಾರಿಸಿ ಕಾಮಗಾರಿಯನ್ನು ಪೂರೈಸುವಂತಹ ಕಾರ್ಯಕ್ರಮ ಇಟ್ಟುಕೊಂಡಿದ್ದೀರಿ ಅಂತಹ ಕಾಮಗಾರಿಯ ಬದಲಿಗೆ ವರ್ಷದ ಒಳಗೆ ಪೂರೈಸುವಂತಹ ಕಾಮಗಾರಿಗೆ ಅದರ ಅಂದಾಜು ಪಟ್ಟಿಯಲ್ಲಿರುವ ಸಂಪೂರ್ಣ ಹಣವನ್ನು ಬಿಡುಗಡೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ನನ್ನ ಸಲಹೆಯನ್ನು ಸೂಚಿಸುತ್ತೇನೆ. ೧೯೮೭-೮೮ ರಲ್ಲಿ ಮಂಜೂರಾದಂಥ ಕಾಮಗಾರಿಗಳು ಜಿಲ್ಲಾಪರಿಷತ್ತಿನ ಅಸ್ತಿತ್ವದ ನಂತರ ಅದರ ವ್ಯಾಪ್ತಿಯಲ್ಲಿ ಬಂದಿದ್ದು ಇಂತಹ ತೊಂದರೆ ಅನುಭವಿಸಬೇಕಾದ ಸ್ಥಿತಿ ಬಂದಿದೆ. ಇದನ್ನೆಲ್ಲಾ ಮನಗಂಡು ಸರ್ಕಾರ ಈ ಬಗ್ಗೆ ಮಾರ್ಗೋಪಾಯ ಕಂಡುಹಿಡಿಯಲು ೫ ಲಕ್ಷ ರೂಪಾಯಿಗಳಿಗೂ ಮೇಲ್ಪಟ್ಟಿನ ಕಾಮಗಾರಿಗಳಿಗೆ ನೇರವಾಗಿ ಸರ್ಕಾರವೇ ಹಣಕಾಸಿನ ವ್ಯವಸ್ಥೆ ಮಾಡುವ ಬಗ್ಗೆ ಪರಿಶೀಲಿಸಲು ಒಂದು ಸಮಿತಿಯನ್ನು ರಚನೆಮಾಡುವ ಉದ್ದೇಶವನ್ನು ಸರ್ಕಾರ ಹೊಂದಿದೆ, ಈ ಬಗ್ಗೆ ಚರ್ಚೆ ನಡೆದಿದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಆ ಒಂದು ಚರ್ಚೆಯಂತೆ ಯೋಜನೆಯನ್ನು ಹಾಕಿಕೊಂಡ ಮೇಲೆ, ಆ ಕಾಮಗಾರಿಗಳ ಕೆಲಸ ಆಗಬೇಕು. ನಮ್ಮ ಮತದಾರ ಕ್ಷೇತ್ರಗಳಲ್ಲಿ ಜನರು ಏನು ಕಷ್ಟ ಪಡುತ್ತಿದ್ದಾರೆ, ಆ ಜನರ ಸಮಸ್ಯೆಗಳನ್ನು ಬಗೆಹರಿಸಲು ಆ ರೀತಿ ಹಣವನ್ನು ಒದಗಿಸುವಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ತಿಳಿಸಬಯಸುತ್ತೇನೆ. ನಮ್ಮ ಮಲೆನಾಡಿನ ಪ್ರದೇಶಗಳ ಬಗ್ಗೆ ಹೇಳುವುದಾದರೆ, ರಾಜ್ಯಾದ್ಯಂತ ಮಲೆನಾಡು ಪ್ರದೇಶ ಇರುವುದಿಲ್ಲ. ಕೆಲವು ಪ್ರದೇಶಗಳಲ್ಲಿ ಮಾತ್ರ ಮಲೆನಾಡುಪ್ರದೇಶ ಇರುತ್ತದೆ. ಕಳೆದ ೧೯೮೬-೮೭ ರಿಂದ ಈ ವಿಷಯದ ಬಗ್ಗೆ ನಾವು ಮಾತನಾಡುತ್ತಾ ಬಂದಿದ್ದೇವೆ. ಮಲೆನಾಡು ಏರಿಯಾದಲ್ಲಿ ಅಲ್ಲಿನ ಸಮಸ್ಯೆಗಳಿಗೆ ಸೂಕ್ತಪರಿಹಾರವನ್ನು ಕೊಡುವಂತಹ ಮಲೆನಾಡು ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂಬ ಸಂಸ್ಥೆಯನ್ನು ರಚನೆಮಾಡಿ ಈ ಒಂದು ಪರಿಹಾರವನ್ನು ನೀಡುವಂತೆ ಮಾಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ವರ್ಷದಲ್ಲಿ ಮುಗಿಯುವಂಥ ಕಾಮಗಾರಿಗಳಿಗೆ ಮೂರು ವರ್ಷದ ಅಂದಾಜು ಪಟ್ಟಿಯನ್ನು ತಯಾರು ಮಾಡಿ ಮೂರು ವರ್ಷಗಳ ಕಾಲ ಹಣವನ್ನು ಬಿಡುಗಡೆಮಾಡುತ್ತಾ ಹೋದರೆ ಆ ಕಾಮಗಾರಿಗಳು ಮುಗಿಯುವುದಿಲ್ಲ. ಈ ವರ್ಷದ ಅಂದಾಜು ಪಟ್ಟಿಯಲ್ಲಿ ೧೦ ಲಕ್ಷ ಇದ್ದರೆ ಅದು ಮೂರು ವರ್ಷಗಳಲ್ಲಿ ಆಗುವಾಗ ಅನುಕೂಲವಾಗುವ ಬದಲು ಅನಾನುಕೂಲವಾಗುತ್ತದೆ, ಮೆಟೀರಿಯಲ್ ಕಾಸ್ಟ್ ಉಲ್ಬಣವಾಗಿ ಅದರ ಕೆಲಸ ಆಗುವುದಿಲ್ಲ, ಜನರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಅಂತಹ ಕಾಮಗಾರಿಗಳನ್ನು ಈಗಾಗಲೇ ಕೆಲ ಕಡೆಗಳಲ್ಲಿ ಅಧಿಕಾರೇತರರ ಅಧಿಕಾರಿಗಳ ಹಸ್ತಕ್ಷೇಪದಿಂದ ಅವರ ಸಂಬಂಧಿಕರಿಗೆ ಜಿಲ್ಲಾಪರಿಷತ್ತಿನ ಮೂಲಕ ನೀಡಿರುವುದರಿಂದ ಈ ಮಾನ್ಯತೆಗಳು ಬಂದಿವೆ. ಇಂತಹ ಸಂದರ್ಭದಲ್ಲಿ ನೇರವಾಗಿ ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ಕೊಡುವಂತೆ ಮಾಡಿದಾಗ ಹೆಚ್ಚಿನ ಫಲದಾಯಕವಾಗಿ ಕಾಮಗಾರಿಗಳನ್ನು ಪೂರೈಸುವುದಕ್ಕೆ ಸಾಧ್ಯವಿದೆ. ಇಂತಹ ಸಮಯದಲ್ಲಿ ಗುತ್ತಿಗೆ ಪಡೆಯಬೇಕಾದರೆ ಮೂರನೆಯ ಒಂದು ಭಾಗ ಹಣವನ್ನು ಒದಗಿಸದಿದ್ದರೆ ಆ ಕಾಮಗಾರಿಗಳು ತಾಂತ್ರಿಕ ಮಂಜೂರಾತಿಯನ್ನು ಪಡೆಯುವುದಕ್ಕೆ ಸಾಧ್ಯವಿಲ್ಲ. ಆ ದೃಷ್ಟಿಯಿಂದ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಕಾಮಗಾರಿಗಳನ್ನು ಮಾಡುವಂತೆ ಸರ್ಕಾರ ಕ್ರಮತೆಗೆದುಕೊಳ್ಳಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ. ಇನ್ನು ನೀರಾವರಿ ಇಲಾಖೆ ಬಗ್ಗೆ ಹೇಳುವುದಾದರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವಂತಹ ವರಾಹಿ ಯೋಜನೆಯ ಕೆಲಸ ಇನ್ನೂ ಕೂಡ ಪ್ರಾರಂಭವಾಗಿಲ್ಲ. ಅಲ್ಲಿಗೆ ಅಧಿಕಾರಿಗಳನ್ನು ನೇಮಕ ಮಾಡಿಕೊಂಡು ಅವರಿಗೆ ವೇತನವನ್ನು ನೀಡುತ್ತಿದ್ದಾರೆಯೇ ಹೊರತು ಅಲ್ಲಿ ಕೆಲಸ ಸ್ಥಗಿತವಾಗಿದೆ. ಇಂಜಿನಿಯರ್‌ಗಳು ಸಂಬಳ ಪಡೆದುಕೊಂಡು ತಿರುಗಾಡುತ್ತಿದ್ದಾರೆಯೇ ಅಲ್ಲಿ ಕೆಲಸ ಆಗುತ್ತಿಲ್ಲ. ಇಂತಹ ಕೆಲಸಗಳನ್ನು ಕೂಡಲೇ ಕೈಗೆತ್ತಿಕೊಳ್ಳಬೇಕು. ನೀರಾವರಿ ಬಗ್ಗೆ ಇನ್ನಷ್ಟು ಹೇಳುವುದಾದರೆ, ಹಿಂದಿನ ಸರ್ಕಾರ ಆರೇಳು ವರ್ಷಗಳ ಹಿಂದೆ ಗ್ರಾಮಾಂತರ ಪ್ರದೇಶಗಳಿಗೆ ಮತ್ತು ಮಲೆನಾಡು ಪ್ರದೇಶಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತಿದ್ದೇವೆಂದು ಪದೇ ಪದೇ ಹೇಳುತ್ತಿತ್ತು. ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸುವಾಗ ಹೆಚ್ಚಿನ ಕಡೆಗಳಲ್ಲಿ ವಾಹನ ಸಂಚಾರಕ್ಕೆ ಅನುಕೂಲ ಇರುವುದಿಲ್ಲ. ರಿಗ್‌ಗಳು ಹೋಗಲಿಕ್ಕೆ ತೊಂದರೆ ಇರುವಂಥ ಸ್ಥಳಗಳಲ್ಲಿ ಮಿನಿ ರಿಗ್ಗನ್ನು ಪರ್ಚೇಸ್ ಮಾಡಿಕೊಡುತ್ತೇವೆಂದು ಹೇಳಿದ್ದರು. ಆದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಮಲೆನಾಡು ಪ್ರದೇಶಗಳಲ್ಲಿ ಮಿನಿ ರಿಗ್ಗಿನ ಹಾಗೂ ಕುಡಿಯುವ ನೀರಿನ ಸಮಸ್ಯೆಯನ್ನು ಬಹಳಷ್ಟು ಎದುರಿಸುತ್ತಿದ್ದೇವೆ. ಸಂಚಾರಕ್ಕೆ ಯೋಗ್ಯವಲ್ಲದ ಸ್ಥಳಗಳಲ್ಲಿ ಕುಡಿಯುವ ನೀರನ್ನು ಒದಗಿಸಲಿಕ್ಕಾಗಿ ತೆರೆದ ಬಾವಿಗಳನ್ನು ಮಾಡಬೇಕೆಂದುಕೋರಿ ಸರ್ಕಾರಕ್ಕೆ ಹಲವಾರು ಬೇಡಿಕೆಗಳು ಬಂದಿವೆ. ವಾಹನ ಸಂಚಾರ ಇಲ್ಲದ ಕಡೆ ತೆರೆದ ಬಾವಿಗಳನ್ನು ಮಾಡುವಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗಿದೆ. ಈಗಾಗಲೆ ಏತನೀರಾವರಿ ಯೋಜನೆಗೆ ನಮ್ಮ ಸರ್ಕಾರ ಉದಾರಭಾವನೆ ತಾಳಿ ಹೆಚ್ಚಿನ ಹಣವನ್ನು ಬಿಡುಗಡೆಗೊಳಿಸುವಂತಹ ಕಾರ್ಯಕ್ರಮ

ವನ್ನು ಇಟ್ಟುಕೊಂಡಿದೆ. ಬಹುಶಃ ಮಲೆನಾಡು ಪ್ರದೇಶಗಳಲ್ಲಿ ಕಾರ್ಯಕ್ರಮಗಳನ್ನು ರೂಪಿಸುವಾಗ ಕೆಲವು ನಾರ್ಮ್ಸ್ ಅಥವಾ ನಿಯಮಗಳಿವೆ, ಈ ನಿಯಮಗಳನ್ನು ಅಳವಡಿಸಿದಾಗ ಮಲೆನಾಡು ಭಾಗಕ್ಕೆ ತೊಂದರೆಯಾಗುವ ಪರಿಸ್ಥಿತಿಯಲ್ಲಿವೆ. ಆದುದರಿಂದ ಆ ನಾರ್ಮ್ಸ್‌ನ್ನು ಸ್ವಲ್ಪ ಸಡಿಲಗೊಳಿಸಿದರೆ ಆ ಭಾಗದಲ್ಲಿ ಏತನೀರಾವರಿ ಕಾಮಗಾರಿಯನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಈ ಬಗ್ಗೆ ಪರಿಶೀಲನೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ ಯಡಿಯಲ್ಲಿ ಕೆಲವೊಂದು ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದೆ. ಮಲೆನಾಡ ಪ್ರದೇಶದಲ್ಲಿ ಕೆಲವೊಂದು ರಸ್ತೆಗಳನ್ನು ಈ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾಗಿದೆ. ಅದರ ಜೊತೆಗೆ ಮೊಟಾರ್ ಡ್ಯಾಂಗಳನ್ನು ಕಾಲು ಸಂಕಗಳನ್ನು ಮಾಡುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗಿದೆ. ಮಲೆನಾಡು ಪ್ರದೇಶಗಳಲ್ಲಿ ಕಾಲುಸಂಕಗಳನ್ನು ಮಾಡದಿದ್ದರೆ ತಿರುಗಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಕೆಲವೊಂದು ಕಡೆಗಳಲ್ಲಿ ಯೋಗ್ಯ ರಸ್ತೆಯನ್ನು ಮಾಡಲಿಕ್ಕೆ ಆಗುವುದಿಲ್ಲ. ಆದುದರಿಂದ ಕಾಲುಸಂಕ ಮಾಡುವ ಯೋಜನೆಯನ್ನು ಮುಂದುವರಿಸಿಕೊಂಡು ಹೋಗಬೇಕು. ಅದರಲ್ಲೂ ಸಹ ನಿಯಮ ಗಳನ್ನು ಸಡಿಲಗೊಳಿಸಿ ಹೆಚ್ಚಿನ ಕೆಲಸಕಾರ್ಯಗಳು ಆಗುವಂತೆ ತಾವು ಮಾಡಬೇಕೆಂದು ವಿನಂತಿಸಿ ಕೊಳ್ಳುತ್ತೇನೆ ಹಿಂದಿನ ಸರ್ಕಾರ ಮಾಡದೇ ಇದ್ದಂತಹ ಕೆಲಸಗಳನ್ನು ನಮ್ಮ ಸರ್ಕಾರ ಮಾಡಲಿಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡು ಮಾನ್ಯ ಲೋಕೋಪಯೋಗಿ ಸಚಿವರೂ ಕೂಡ ಒಳ್ಳೆಯ ಹೆಜ್ಜೆ ಯನ್ನು ಇಟ್ಟಿದ್ದಾರೆ. ಅವರು ಕರ್ನಾಟಕ ಜನತೆಯ ಅಭಿಮಾನಕ್ಕೆ ಪಾತ್ರರಾಗಿ ಹೆಚ್ಚಿನ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಪ್ರೊ : ಎಂ. ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮೀಣ).—ಸನ್ಮಾನ್ಯ ಸಭಾಧ್ಯಕ್ಷರೇ, ಇವತ್ತಿನ ಬೇಡಿಕೆಗಳಲ್ಲಿ ೩೫ ಮತ್ತು ೩೬ ನೇ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ವಿರೋಧಿಸ ಬೇಕಾಗಿದೆ. ಅದಕ್ಕೆ ಇಷ್ಟೆ. ನಮ್ಮ ರಾಜ್ಯ ಸರ್ಕಾರ ಸಮಗ್ರವಾಗಿ ಆಲೋಚನೆ ಮಾಡಿದಂಥ ಒಂದು ಜಲ ನೀತಿಯನ್ನು ಇನ್ನೂ ರೂಪಿಸಿ ಕೊಂಡಿಲ್ಲ. ನಮ್ಮ ರಾಜ್ಯ ಸರ್ಕಾರ ಸ್ವಾತಂತ್ರ್ಯ ಬಂದು ನಲ್ವತ್ತು ವರ್ಷಗಳ ಮೇಲಾದರೂ ಕೂಡ ಇನ್ನೂ ಸಮಗ್ರವಾದ ಒಂದು ಜಲ ನೀತಿಯನ್ನು ರೂಪಿಸಿ ಕೊಂಡಿಲ್ಲ. ನಮ್ಮ ಸರ್ಕಾರಕ್ಕೆ ನೀರಾವರಿ ಎಂದಕೂಡಲೇ ನೆನಪಿಗೆ ಬರುವುದು ಕಾವೇರಿ ಜಲಾನಯನ ಪ್ರದೇಶ ಮತ್ತೆ ಕೃಷ್ಣಾ ಜಲಾಯನ ಪ್ರದೇಶ. ನೀರಾವರಿ ಎಂದರೆ ಇಷ್ಟೇ ಅಲ್ಲ. ಈ ನಲ್ವತ್ತು ವರ್ಷಗಳಲ್ಲಿ ನಾವು ಎಷ್ಟು ನಾಲಾ ನೀರಾವರಿ ಸಾಧನೆ ಮಾಡಿರುವುದು ಎಷ್ಟು ಎಂದರೆ, ಕರ್ನಾಟಕದ ಒಟ್ಟು ವ್ಯವಸಾಯ ಯೋಗ್ಯ ಪ್ರದೇಶವೆಂದು ಏನು ಹೇಳುತ್ತೇವೆ, ಅದರಲ್ಲಿ ಶೇಕಡ ೧೦ ಪೈಸೆ ಭಾಗ ಮಾತ್ರ ಮತ್ತೆ ಇದೇ ರೀತಿಯಾದಂಥ ನೀರಾವರಿ ಪ್ರಯತ್ನವನ್ನು ನಾವು ಗರಿಷ್ಟ ಪ್ರಮಾಣದಲ್ಲಿ ಮಾಡಿದರೂ ಕೂಡ, ದೊಡ್ಡ ನೀರಾವರಿ ಕ್ಷೇತ್ರದಲ್ಲಿ ಇನ್ನು ಹತ್ತು ಪೈಸೆ ಭಾಗ ನೀರಾವರಿ ಸಾಧನೆ ಮಾಡಬಹುದು ಅಲ್ಲಿಗೆ ಸಮಸ್ಯೆ ಬಗೆಹರಿಯುವುದಿಲ್ಲ. ಏಕೆಂದರೆ ಈ ಎಲ್ಲ ಕೆಲಸ ಮುಗಿದಮೇಲೂ ಕೂಡಾ ಶೇಕಡಾ ಎಂಭತ್ತು ಭಾಗ ವ್ಯವಸಾಯ ಯೋಗ್ಯ ಭೂ ಪ್ರದೇಶ ಏನಿದೆ, ಅದು ಖಾಯಂ ಬರಗಾಲದ ಸ್ಥಿತಿಯಲ್ಲೇ ಮುಂದುವರೆಯುತ್ತದೆ. ಆದ್ದರಿಂದ ಮಾನ್ಯ ನೀರಾವರಿ ಮಂತ್ರಿಗಳಿಗೆ ನನ್ನ ಸವಿನಯ ಪ್ರಾರ್ಥನೆ ಏನೆಂದರೆ, ತಾವು ನೀರಾವರಿ ಎಂದರೆ. ಏನೆಂದು ಅರ್ಥ ಮಾಡಿಕೊಂಡಿದ್ದೀರಿ? ಆ ಒಂದು ಅರ್ಥವನ್ನು ಅಥವಾ ತಿಳುವಳಿಕೆಯನ್ನು ದಯವಿಟ್ಟು ಸಂಪೂರ್ಣವಾಗಿ ಬದಲಾವಣೆ ಮಾಡಿ ಕೊಳ್ಳಬೇಕು. ಏಕೆಂದರೆ. ತಾವು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ನಾವು ಐದು ವರ್ಷ ಬರಗಾಲ ವನ್ನು ಅನುಭವಿಸಿದ್ದೇವೆ. ತಮ್ಮ ಕಾಲದ ನಂತರವೂ ಬರಗಾಲವನ್ನು ಬಿಟ್ಟು ತಾವು ಅಧಿಕಾರ ಬಿಡ ಬಾರದು ಎಂಬುದು ನನ್ನ ಆಸೆ. ಏಕೆಂದರೆ ನೀರಾವರಿ ಅಂದ ಕೂಡಲೆ ನಾವು ತತ್‌ಕ್ಷಣ ಆಲೋಚನೆ ಮಾಡಬೇಕಾಗಿರುವುದು. ಅತ್ಯಂತ ಪ್ರಧಾನವಾಗಿ ಪ್ರಾಮುಖ್ಯತೆ ಕೊಡಬೇಕಾಗಿರುವುದು ಶಾಶ್ವತ ಬರಗಾಲ ಪರಿಹಾರ ಯೋಜನೆಗೆ. ಅದನ್ನು ತಾವು ಮಾಡದಿದ್ದರೆ ತಾವು ನೀರಾವರಿ ಮಂತ್ರಿಯಾಗಿ ಯಾವುದೇ ಕೆಲಸ ಮಾಡಿದಂತೆ ಆಗುವುದಿಲ್ಲ. ಈ ಕಾರಣದಿಂದ ನಾನು ಸರ್ಕಾರಕ್ಕೆ ವಿನಂತಿ ಮಾಡಿ ಕೊಳ್ಳುವುದು ಏನೆಂದರೆ, ನೀರಾವರಿ ಅಂದ ಕೂಡಲೆ ತಾವು ಒಟ್ಟು ನೀರಿನ ಆಲೋಚನೆಯನ್ನು ಪ್ರಾರಂಭ ಮಾಡಬೇಕು. ಬರೀ ನದಿ ನೀರಿನ ಆಲೋಚನೆ ಅಲ್ಲ. ಏಕೆಂದರೆ, ನಮ್ಮ ದೇಶದಲ್ಲಿ ಏನೇನು ನೀರು ಲಭ್ಯ ಆಗುತ್ತಿದೆ. ಅದರಲ್ಲಿ ನಾವು ಶೇಕಡಾ ೨೦ ಭಾಗ ಕೂಡ ಉಪಯೋಗ ಮಾಡುತ್ತಿಲ್ಲ. ನಾನು ತಜ್ಞರ ಅಂಕಿ ಅಂಶಗಳನ್ನು ತಮಗೆ ಕೊಡುತ್ತೇನೆ. ನಮ್ಮ ದೇಶದಲ್ಲಿ ಆಗುವಷ್ಟು ಮಳೆ ಬೇರೆ ಯಾವ ದೇಶದಲ್ಲೂ ಆಗುತ್ತಿಲ್ಲ. ತಜ್ಞರ ಅಂಕಿ ಅಂಶಗಳ ಪ್ರಕಾರ ಭಾರತದ ಭೂಪಟ ಏನಿದೆ. ಅದರ ಮೇಲೆ ಮೀಟರ್ ದಪ್ಪ ನೀರು ಪ್ರತಿ ವರ್ಷ ನಿಲ್ಲುತ್ತದೆ. ಪ್ರತಿ ವರ್ಷ ಎಷ್ಟು ಮಳೆ ನಮ್ಮ ದೇಶದಲ್ಲಿ ಆಗುತ್ತದೆಂದು ಹೇಳಿದರೆ, ಇಡೀ ಭಾರತದ ಭೂಪಟದಲ್ಲಿ. ಒಂದು ಮೀಟರ್ ದಪ್ಪ ನೀರು

ನಿಲ್ಲುವಂಥ ಮಳೆಯಾಗುತ್ತದೆ. ಆದರಲ್ಲಿ ಶೇಕಡ ೧೦ ಭಾಗ ಕೂಡ ಉಪಯೋಗ ಮಾಡುತ್ತಾ ಇಲ್ಲ. ಎಲ್ಲಾ ನೀರು ಸಮುದ್ರಕ್ಕೆ ಹೋಗುತ್ತಿದೆ. ಈ ನೀರನ್ನು ನಿಲ್ಲಿಸುವಂಥ ಕೆಲಸ, ನೀರಾವರಿ ಇಲಾಖೆ ಮಾಡಬೇಕಾಗಿರುವಂಥ ಮೊದಲನೇ ಕೆಲಸ. ಇದನ್ನು ಬಿಟ್ಟು ಅವೈಜ್ಞಾನಿಕವಾಗಿ. ಮಿಶ್ರಿ ಬೇಸಾಯ ಏನಿದೆ, ಆ ಪ್ರದೇಶದಲ್ಲಿ ನಾವು ನೀರಾವರಿ ಪ್ರಯತ್ನ ಮಾಡುತ್ತಿದ್ದೇವೆ. ಮುಖ್ಯವಾಗಿ ಅದು ಬಾವಿ ತೋಡುವಂಥ ಕೆಲಸ ಬಾವಿ ತೋಡುತ್ತಿದ್ದೇವೆ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರೂ ಇಲ್ಲಿಯೇ ಇದ್ದಾರೆ. ದಯಮಾಡಿ ತಾವು ಗಮನವಿಟ್ಟು ಕೇಳಿದರೆ ಒಳ್ಳೆಯದು ಏಕೆಂದರೆ, ನೀರಾವರಿ ಮಂತ್ರಿಗಳು ಮತ್ತು ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಇಬ್ಬರೂ ಒಟ್ಟಿಗೆ ಸೇರಿ ಮಾಡಬೇಕಾದ ಕೆಲಸ ಬಹಳ ಇದೆ. ಇನ್ನು ಮುಂದೆ ಕರ್ನಾಟಕದಲ್ಲಿ ಬರಗಾಲ ಇರಬಾರದು ಎಂಬ ಆಸೆ ಇದ್ದರೆ, ನೀವಿಬ್ಬರೂ ಒಟ್ಟಿಗೆ ಸಮಾಲೋಚನೆ ಮಾಡಿ ಒಂದು ಸಮಗ್ರ ನೀರಾವರಿ ನೀತಿಯನ್ನು ರೂಪಿಸಬೇಕು. ಕುಡಿಯುವ ನೀರಿಗೆ ಬಾವಿಗಳನ್ನು ತೋಡುತ್ತಿದ್ದೀರಿ ಮತ್ತು ನೀರಾವರಿಗೋಸ್ಕರ ಕೊಳವೆ ಬಾವಿಗಳನ್ನು ತೋಡುತ್ತಿದ್ದೀರಿ. ಆದರೆ ಅವು ಮತ್ತೆ ತುಂಬುವ ರೀತಿಯಲ್ಲಿ ಏನಾದರೂ ಕೆಲಸ ಮಾಡುತ್ತಿದ್ದೇವೋ ಅಥವಾ ನಿರ್ಲಕ್ಷ್ಯ ಮಾಡಿದ್ದೇವೋ ಎಂಬುದನ್ನು ತಾವು ಆಲೋಚನೆ ಮಾಡಬೇಕು. ಇದನ್ನು ತಾವು ಮಾಡಬೇಕಾದರೆ, ನೀರಾವರಿ ಎಂದಕೂಡಲೇ ಬರೀ ದೊಡ್ಡ ನೀರಾವರಿ ನಾಲಾ ನೀರಾವರಿ ಬಗ್ಗೆ ಆಲೋಚನೆ ಮಾಡಬೇಡಿ. ಅದರ ಜೊತೆಗೆ, ಸರ್‌ಫೇಸ್ ವಾಟರ್ ಮ್ಯಾನೇಜ್‌ಮೆಂಟ್ ಹಾಗೂ ಗ್ರೌಂಡ್ ವಾಟರ್ ಮ್ಯಾನೇಜ್‌ಮೆಂಟ್ ಎಂದು ಉಂಟು ಇದಕ್ಕೆ ನಾವು ಈಗ ನಮ್ಮ ದೇಶದಲ್ಲಿ ಹೆಚ್ಚು ಪ್ರಾಧಾನ್ಯತೆ ಕೊಡಬೇಕು. ಬರೀ ಕರ್ನಾಟಕದ ಮಾತಲ್ಲ. ಇಡೀ ಇಂಡಿಯಾ ದೇಶದಲ್ಲಿಯೇ ಗ್ರೌಂಡ್ ವಾಟರ್ ಯಾವರೀತಿ ರೀಚಾರ್ಜ್ ಮಾಡಬೇಕೆಂದು ಕಾರ್ಯಕ್ರಮ ಹಾಕಿಕೊಳ್ಳದೇ ನಿರ್ಲಕ್ಷ್ಯ ಮಾಡಿದರೆ ನಾವು ತೋಡಿದ ಬಾವಿಗಳೆಲ್ಲ ಖಾಲಿಯಾಗಿ ಹೋಗಿ ನಮ್ಮ ದೇಶ ಹಾಳು ಹಂಪೆಯಾಗಿ ಹೋಗಿರುತ್ತವೆ. ಹಾಳು ಹಂಪೆಯನ್ನು ನೋಡುವುದಕ್ಕೆ ಜನರು ಯಾವ ರೀತಿ ಹೋಗುತ್ತಾರೋ ಅದೇ ರೀತಿ ಮುಂದೆ ನಮ್ಮ ಮಕ್ಕಳು' ಮರಿ ಮಕ್ಕಳು ವಿಧಾನ ಸೌಧ ನೋಡುವುದಕ್ಕೆ ಬರುತ್ತಾರೆ. ಆದ್ದರಿಂದ ನೀವು ನೀರಿನ ನೀತಿ ಬಗ್ಗೆ ಜವಾಬ್ದಾರಿಯಿಂದ ಕೆಲಸ ಮಾಡದೇ ಹೋದರೆ ಈ ನಾಗರೀಕತೆ, ಬರೀ ಕರ್ನಾಟಕದ ವಿಷಯವಲ್ಲ ನಾನೂ ಮಾತನಾಡುತ್ತಿರುವುದು. ಇಡೀ ಇಂಡಿಯಾ ದೇಶದ ನಾಗರೀಕತೆ ನೀರು ಇಲ್ಲದೇ ನಾಶವಾಗುವಂಥ ಸಾಧ್ಯತೆಗಳುಂಟು .ಆದ ಕಾರಣ ತಾವು ಕೇವಲ ದೊಡ್ಡ ನೀರಾವರಿಗೆ ಪ್ರಾಶಸ್ತ್ಯ ಕೊಡದೇ ಗ್ರೌಂಡ್ ವಾಟರ್ ಮ್ಯಾನೇಜ್‌ಮೆಂಟ್ ಮತ್ತು ಸರ್‌ಫೇಸ್ ವಾಟರ್ ಮ್ಯಾನೇಜ್‌ಮೆಂಟನ್ನು ಬಹಳ ದಕ್ಷತೆಯಿಂದ ಮಾಡುವುದರ ಕಡೆಗೆ ಗಮನ ಕೊಡಬೇಕು. ಇದನ್ನು ಮಾಡಬೇಕಾದರೆ, ತಾವು ಇದಕ್ಕೆ ಸಂಬಂಧಪಟ್ಟ ಎಲ್ಲಾ ತಜ್ಞರನ್ನೂ ಕೂಡಿಸಿ, ಒಂದು ವಿಶೇಷ ತಜ್ಞರ ಸಮಿತಿ ಮಾಡಿ. ರಾಜ್ಯದ ನೀರಾವರಿ ನೀತಿಯನ್ನು ರೂಪಿಸುವುದಕ್ಕೆ ಆಲೋಚನೆ ಮಾಡದಿದ್ದರೆ ನಿಮ್ಮ ಇಲಾಖೆ ಈ ಬೇಡಿಕೆಗಳನ್ನು ತೆಗೆದುಕೊಂಡು ಏನೂ ಪ್ರಯೋಜನ ಇಲ್ಲ. ಏಕೆಂದರೆ ಶೇಕಡ ೨೦ ಭಾಗ ಕರ್ನಾಟಕದ ಭೂಮಿಯನ್ನು ನೀರಾವರಿ ಮಾಡುವಂಥದ ತಮ್ಮ ಪ್ರಯತ್ನವೇ ಹೊರತು, ಶಾಶ್ವತ ಬರಗಾಲ ಪೀಡಿತವಾಗಿರುವಂಥ ಶೇಕಡ ೮೦ ಭಾಗ ರೈತರನ್ನು ಮರೆತ ಹಾಗೆ ಆಗುತ್ತದೆ, ಶೇಕಡ ೮೦ ಭಾಗ ಕರ್ನಾಟಕವನ್ನು ಮರೆತ ಹಾಗೆ ಆಗುತ್ತದೆ. ಇಂತಹ ಕೆಲಸ ಮಾಡಿದರೆ, ನಮ್ಮ ಎಲ್ಲ ಬೆಂಬಲ ನಿಮ್ಮ ಬೇಡಿಕೆ ೩೫. ೩೬ಕ್ಕೆ ಉಂಟು, ಅಲ್ಲಿಯವರೆಗೆ ನಮ್ಮ ವಿರೋಧವಿದೆ. ನಮಸ್ಕಾರ.

† ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ).—ಸನ್ಮಾನ್ಯ ಸಭಾಧ್ಯಕ್ಷರೇ, ಈ ಸದನದಲ್ಲಿ ಮಾನ್ಯ ಲೋಕೋಪಯೋಗಿ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಸ್ವಾಗತಿಸುತ್ತಾ, ನನ್ನ ಕೆಲವಾರು ಅನಿಸಿಕೆಗಳನ್ನು ಈ ಸಭೆಯಲ್ಲಿ ಹೇಳಬೇಕೆಂದು ಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಈ ರಾಜ್ಯದ ಮೂರನೇ ಎರಡು ಭಾಗದ ಜನಗಳಿಗೆ, ರೈತ ಬಾಂಧವರಿಗೆ ಉಪಯೋಗ ಆಗುವಂತಹ ಕೆಲಸಗಳನ್ನು ನಮ್ಮ ಕಾಮಗಾರಿ ಇಲಾಖೆಯಲ್ಲಿ ಮಾಡುತ್ತಿದ್ದರೂ, ಈ ಪರಿಸ್ಥಿತಿಯನ್ನು ನೋಡುತ್ತಿದ್ದರೆ ನಮ್ಮ ರಾಜ್ಯದ ನಾಲ್ಕನೇ ಒಂದು ಭಾಗದ ಹಣವನ್ನು ಇದಕ್ಕೆ ಖರ್ಚು ಮಾಡುತ್ತಿದ್ದರೂ ಕೂಡಾ ಅದು ಸಮರ್ಪಕವಾಗಿ ಜನತೆಗೆ ಸೇರುತ್ತಿಲ್ಲ, ಜನಗಳಿಗೆ ಉಪಯೋಗ ಆಗುತ್ತಿಲ್ಲ ಎಂದು ರೈತಬಾಂಧವರಿಂದ, ಸಾರ್ವಜನಿಕರಿಂದ ದೂರುಗಳನ್ನು ಕೇಳುತ್ತಿದ್ದೇವೆ. ಇವತ್ತಿನದಿವಸ ಎಂಜಿನಿಯರ್ಸ್ ಆಗಬೇಕಾದರೆ ನಮ್ಮ ರಾಜ್ಯದ ಜನತೆಯ ಸುಮಾರು ಒಂದೂವರೆ ಲಕ್ಷ ರೂಪಾಯಿ ಹಣ ಒಬ್ಬ ಇಂಜಿನಿಯರ್‌ಗೆ ಸೇರುತ್ತದೆ ಎಂಬುದನ್ನು ಅವರು ತಿಳಿದುಕೊಂಡಿದ್ದಾರೋ ಇಲ್ಲವೋ ಗೊತ್ತಾಗುತ್ತಿಲ್ಲ. ಏಕೆಂದರೆ, ಇವತ್ತಿನದಿವಸ ಅವರು ಎಂಜಿನಿಯರ್ ಆದ ತಕ್ಷಣ ರಾಜ್ಯದ ಜನತೆಯ ಬಗ್ಗೆ, ರಾಜ್ಯದ ಪ್ರಗತಿಯ ಬಗ್ಗೆ ಯೋಚನೆ ಮಾಡಬೇಕು. ಎಂಜಿನಿಯರ್ ಆದ ತಕ್ಷಣ ನನ್ನ ಮನೆ

ಗೋಸ್ಕರ ನನ್ನ ಸ್ವಾರ್ಥಕ್ಕೋಸ್ಕರ ಆಗಿದ್ದೇನೆಂದು ತಿಳಿಯಬಾರದು. ರಾಜ್ಯದ ಪ್ರಗತಿಯ ಬಗ್ಗೆ ರಾಜ್ಯದ ಜನತೆಯ ಬಗ್ಗೆ ಯೋಚನೆ ಮಾಡತಕ್ಕಂಥ ದೃಷ್ಟಿಯನ್ನೂ ಸಹ ಇಟ್ಟುಕೊಳ್ಳಬೇಕು. ಅದರ ಜೊತೆಯಲ್ಲಿ ಅವರು ಏನು ಜವಾಬ್ದಾರಿ ಹೊತ್ತಿದ್ದಾರೆ ಅದನ್ನು ಪ್ರಾಮಾಣಿಕವಾಗಿ ನಿರ್ವಹಿಸಬೇಕು. ಮತ್ತು ಅವರ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವ ಪ್ರವೃತ್ತಿಯನ್ನು ಅವರು ಬೆಳೆಸಿಕೊಳ್ಳಬೇಕು. ಇಲ್ಲದೇ ಹೋದರೆ ಮುಂದಿನ ಪೀಳಿಗೆಗೆ ಮುಂದಿನ ಜನತೆಗೆ ನಾವು, ಅವರು ಎಲ್ಲಾ ಸೇರಿ ಮೋಸಮಾಡುತ್ತಿದ್ದೇವೆ ಎಂಬುದನ್ನು ನೆನಸಿಕೊಳ್ಳಬೇಕಾಗುತ್ತದೆ ಇವತ್ತಿನ ದಿವಸ ಅನೇಕ ಕೆಲಸಗಳ, ಜಲಾಶಯಗಳ ಕಾರ್ಯ ಪ್ರಗತಿ ನೋಡಿದರೆ ಅವೆಲ್ಲಾ ನಿಧಾನ ರೀತಿಯಲ್ಲಿ ನಡೆಯುತ್ತಿವೆ. ಇವತ್ತು ೧೦–೧೫ ವರ್ಷಗಳಾದರೂ ಜಲಾಶಯಗಳ ಕೆಲಸ ಮುಗಿಯದಿದ್ದರೆ ಏನು ಸಾಧನೆ ಮಾಡಿದಹಾಗೆ ಆಗುತ್ತದೆ ಎಂದು ಕೇಳುತ್ತೇನೆ. ದಿನೇದಿನೇ ಸಿಮೆಂಟ್ ಮತ್ತು ಕಬ್ಬಿಣದ ಬೆಲೆ ಹೆಚ್ಚಾಗುತ್ತಿರುವುದರಿಂದ, ರಾಜ್ಯದ ಬೊಕ್ಕಸದ ಹಣ ಕೂಡಾ ಹೆಚ್ಚಿನ ರೀತಿಯಲ್ಲಿ ಖರ್ಚಾಗುತ್ತಾ ಹೋಗುತ್ತದೆ. ಅದಕ್ಕಾಗಿ ನಾಳೆ ಆಗುವ ಕೆಲಸವನ್ನು ಇಂದೇ ಮಾಡಬೇಕೆಂಬ ಒಂದು ದೃಢ ನಿಲುವನ್ನು ತೆಗೆದುಕೊಳ್ಳಬೇಕು. ಆ ರೀತಿ ದೃಢ ನಿಲುವನ್ನು ತೆಗೆದುಕೊಂಡು ಇಂತಹ ಕೆಲಸಕ್ಕೆ ಇಷ್ಟೇ ಹಣ ಬೇಕು ಎಂದು ಮಂತ್ರಿಯವರನ್ನು ಕೇಳಿ ತೆಗೆದುಕೊಂಡು ಕೆಲಸ ಪೂರೈಸುವ ಕರ್ತವ್ಯ ಮಾಡಬೇಕಾಗಿದೆ. ಅದಿಲ್ಲದೇ ತಮ್ಮ ಕರ್ತವ್ಯವನ್ನು ಮರೆತು ಲೀಲಾಜಾಲವಾಗಿ ನಡೆದುಕೊಂಡರೆ ರಾಜ್ಯದ ಜನತೆಗೆ ಮೋಸ ಮಾಡಿದಹಾಗೆ ಆಗುತ್ತದೆ, ತಮ್ಮ ವೃತ್ತಿಗೆ ಮೋಸ ಮಾಡಿದಂಥಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತಿನದಿವಸ ಯಾವುದೇ ಕೆಲಸ ತೆಗೆದುಕೊಂಡರೂ ಗುಣಮಟ್ಟ ಬಹಳ ಕಡಿಮೆಯಾಗಿದೆ. ಗುಣಮಟ್ಟ ಕಾಪಾಡಿಕೊಳ್ಳಬೇಕು. ಪ್ರತಿ ಹಂತದಲ್ಲೂ ಕೂಡ ಜವಾಬ್ದಾರಿ ಕಳೆದುಕೊಂಡಿದೆ. ಭಯ ಹೋಗಿದೆ, ತಮ್ಮ ವೃತ್ತಿಗಳ ಜವಾಬ್ದಾರಿ ಬಗ್ಗೆ ಭಯ ಹೋಗಿದೆ. ಏತಕ್ಕೆ ಈ ಪರಿಸ್ಥಿತಿ ಬಂದಿದೆ ಎಂದು ಆಲೋಚನೆ ಮಾಡಿದರೆ, ಅವರ ಮೇಲೆ ರಾಜಕೀಯ ಒತ್ತಡ ರಾಜಕೀಯ ಸಹಾಯ ಹೆಚ್ಚಾಗಿದೆ, ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ, ಯಾರೇ ಆಗಲಿ ದಾಕ್ಷಿಣ್ಯ ಬೇಡ. ಶಾಸಕರ ಅಣ್ಣ ಆಗಲಿ - ತಮ್ಮ ಆಗಲಿ, ಮಂತ್ರಿಗಳ ಅಳಿಯ ಆಗಲಿ ಯಾವ ದಾಕ್ಷಿಣ್ಯವೂ ಬೇಡ. ಗುಣಮಟ್ಟದಲ್ಲಿ ಅವರ ಬೇಜವಾಬ್ದಾರಿ ಇದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಈ ರೀತಿ ಕ್ರಮ ತೆಗೆದುಕೊಳ್ಳದಿರುವುದರಿಂದ ಇವತ್ತಿನ ದಿವಸ ಎಲ್ಲಾ ಇಲಾಖೆಗಳಲ್ಲಿ ಬಹಳ ಅಪ್ರಾಮಾಣಿಕರಿದ್ದಾರೆ, ಸ್ವಾರ್ಥಿಗಳು ಇದ್ದಾರೆ. ಯಾರೇ ಆಗಲಿ ಕರ್ತವ್ಯಲೋಪ ಮಾಡಿದ ತಕ್ಷಣ ಅವರ ಮೇಲೆ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆಯನ್ನು ಮಾನ್ಯ ಮಂತ್ರಿಗಳು ಮಾಡಬೇಕು. ರಾಜ್ಯದ ಹಿತದೃಷ್ಟಿಯಿಂದ, ಜನತೆಯ ಹಿತದೃಷ್ಟಿಯಿಂದ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಅವರನ್ನು ಕಳಕಳಿಯಿಂದ ಕೇಳಿ ಕೊಳ್ಳುತ್ತೇನೆ. ಇದೇ ರೀತಿ ಮುಂದುವರೆದರೆ ಈಗೇನು ಹಣ ಪೋಲಾಗುತ್ತಿದೆ. ಅದು ಅದೇ ರೀತಿ ಪೋಲಾಗುತ್ತದೆ. ಇದರಿಂದ ಯಾವ ಕಾರ್ಯಕ್ರಮಗಳನ್ನೂ ಮಾಡುವುದಕ್ಕೆ ಆಗುವುದಿಲ್ಲ. ಜನತೆಯ ಹಿತದೃಷ್ಟಿಯನ್ನು ಕಾಪಾಡುವುದಕ್ಕೆ ಕಷ್ಟವಾಗುತ್ತದೆ.

ರೈತಬಾಂಧವರು ಈ ದೇಶದಲ್ಲಿ, ಈ ರಾಜ್ಯದಲ್ಲಿ ಏನು ಆಹಾರ ಸಾಮಗ್ರಿಗಳನ್ನು ಏನು ದಿನನಿತ್ಯದ ಬಳಕೆಗಾಗಿ ಬೆಳೆಯುತ್ತಿದ್ದಾರೆ ಅವರಿಗೆ ಸಮರ್ಪಕವಾದ ನೀರಿನ ವ್ಯವಸ್ಥೆಯನ್ನಾಗಲೀ, ವಿದ್ಯುತ್ ವ್ಯವಸ್ಥೆಯನ್ನಾಗಲೀ ಗೊಬ್ಬರದ ವ್ಯವಸ್ಥೆಯನ್ನಾಗಲೀ ಸರಿಯಾದ ರೀತಿಯಲ್ಲಿ ಮಾಡದೆ ಹೋದರೆ ರಾಜ್ಯದ ಆಹಾರದ ಪರಿಸ್ಥಿತಿ ಹದಗೆಡುತ್ತದೆ. ಈ ದಿಸೆಯಲ್ಲಿ ನೀರಾವರಿ ಇಲಾಖೆಯವರು ಹೆಚ್ಚಿನ ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಳ್ಳಬೇಕು. ಇಲ್ಲವಾದರೆ ಬಹಳ ಕಷ್ಟವಾಗುತ್ತದೆ. ಇವತ್ತಿನ ದಿವಸ ಜವಾಹರ್ ರೋಜ್‌ಗಾರ್ ಯೋಜನೆ ಮುಂತಾದ ಎಂತೆಂತಹದೋ ಕಾರ್ಯಕ್ರಮಗಳಲ್ಲಿ ರಸ್ತೆಯ ಮೇಲೆ ಮಣ್ಣನ್ನು ಎಸೆಯತಕ್ಕಂಥ ಕೆಲಸ ಮಾಡುತ್ತಿದ್ದಾರೆ. ಇದರಿಂದ ಯಾರಿಗೂ ಏನೂ ಉಪಯೋಗ ಆಗುವುದಿಲ್ಲ. ಮಣ್ಣನ್ನು ಎಸೆಯುವ ಕಾರ್ಯ ಮಾಡುವುದಕ್ಕೆ ಬದಲಾಗಿ ಕೆರೆ ಕಟ್ಟೆಗಳನ್ನು ಕಟ್ಟಿದರೆ ಅಲ್ಲಿನ ದನಕರುಗಳಿಗೆ ಕುಡಿಯಲು ನೀರಾದರೂ ಸಿಗುತ್ತದೆ. ಸಣ್ಣಪುಟ್ಟ ನೀರಾವರಿ ಕೆಲಸಗಳೂ ಆಗುತ್ತದೆ. ಆದ್ದರಿಂದ ಆ ಕೆಲಸಗಳನ್ನು ಎಂಜಿನಿಯರ್‌ಗಳು ಹಮ್ಮಿಕೊಳ್ಳಬೇಕೆಂದು ನಾನು ಹೇಳುತ್ತೇನೆ. ಸುಮ್ಮನೆ ಮಣ್ಣು ಎರಚುವುದರಿಂದ ಮಳೆ ಬಂದರೆ ಹೋಗುತ್ತದೆ. ಬಿಸಿಲು ಬಂದರೆ ಎಲ್ಲಾ ಒಣಗಿಹೋಗಿ ಮತ್ತೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈ ದಿಸೆಯಲ್ಲಿ ಮಳೆ ನೀರನ್ನು ಬಳಸಿಕೊಳ್ಳಬೇಕಾದರೆ ಸಣ್ಣ ಕೆರೆಕಟ್ಟೆಗಳನ್ನು ಕಟ್ಟುವಂತಹ ಕೆಲಸಗಳನ್ನು ಹಮ್ಮಿಕೊಳ್ಳಬೇಕು. ಈ ಕೆಲಸಗಳನ್ನು ಹಮ್ಮಿಕೊಂಡು ಮಾಡುವುದರಿಂದ ದನಕರುಗಳಿಗೆ ನೀರಾಗುತ್ತದೆ ಮತ್ತು ಕುಡಿಯುವ ನೀರಿನ ವ್ಯವಸ್ಥೆಯಾಗುತ್ತದೆ, ಹಾಗೂ ಸಣ್ಣ ಪುಟ್ಟ ಪ್ರದೇಶದಲ್ಲಿ ನೀರೂ ಕೂಡಾ ಸಿಗುತ್ತದೆಂದು ಹೇಳುತ್ತೇನೆ. ಮತ್ತೆ ಈಗ ಹೇಮಾವತಿ ಜಲಾಶಯದ ಕೆಲಸ ನಡೆಯುತ್ತಿದ್ದು ಇದರ ನೀರನ್ನು ತುಮಕೂರು ಜಿಲ್ಲೆಗೂ ತರಬೇಕೆಂದು ಸರ್ಕಾರದ ಆಲೋಚನೆ ಇದ್ದು, ಹಾಗೆಯೇ ಈ ನೀರನ್ನು ತಿಪ್ಪಗೊಂಡನಹಳ್ಳಿ ಜಲಾಶಯಕ್ಕೂ ಹರಿಯಬಿಟ್ಟರೆ ಆ ಮೂಲಕ

ಬೆಂಗಳೂರಿನ ಜನತೆಗೂ ಕೂಡಾ ಸದಾ ಕಾಲ ಕುಡಿಯುವ ನೀರನ್ನು ಒದಗಿಸಬಹುದಾಗಿದ್ದು ಬೆಂಗಳೂರಿನಲ್ಲಿ ಏನು ನೀರಿನ ಬೇಡಿಕೆ ಇದೆ ಅದನ್ನೂ ಕೂಡ ಪೂರೈಸಬಹುದಾಗಿದೆ. ಆದ್ದರಿಂದ ಆ ನೀರನ್ನು ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ತಿರುಗಿಸುವ ಬಗ್ಗೆ ಯೋಚನೆ ಮಾಡಬೇಕು. ಇನ್ನು ಕಂಟ್ರಾಕ್ಟರುದಾರರೂ ಕೂಡಾ ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕ ಒಂದು ಹವ್ಯಾಸವನ್ನು ಬೆಳೆಸಿಕೊಳ್ಳಬೇಕು. ತಾವು ಹಣಗಳಿಸಿ ರಾಜ್ಯದಲ್ಲಿ ಶ್ರೀಮಂತರಾಗುವುದಕ್ಕಿಂತಲೂ ರಾಜ್ಯದ ಹಿತವನ್ನು ಕಾಪಾಡುವುದಕ್ಕಾಗಿ ಏನು ಕಾರ್ಯ ಮಾಡಬೇಕು. ಎಷ್ಟು ಪ್ರಾಮಾಣಿಕವಾಗಿ ಕೆಲಸ ಮಾಡಬೇಕೆಂಬುದರ ಬಗ್ಗೆ ಗಮನ ಕೊಡಬೇಕೇ ವಿನಃ ಲಾಭವನ್ನು ಮಾಡುವ ದೃಷ್ಟಿಯನ್ನೇ ಇಟ್ಟುಕೊಂಡು ಕಳಪೆ ಕೆಲಸ ಮಾಡಿದರೆ ರಾಜ್ಯದ ಅಭಿವೃದ್ಧಿಗೆ ಧಕ್ಕೆಯಾಗುತ್ತದೆ. ಆದ್ದರಿಂದ ಅವರು ಹೆಚ್ಚಿನ ಆಸೆ ಪಡದೆ ರಾಜ್ಯದ ಹಿತದೃಷ್ಟಿಯಿಂದ ಪ್ರಾಮಾಣಿಕ ಕೆಲಸ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಲೋಕೋಪಯೋಗಿ ಮಂತ್ರಿಗಳು ಎಷ್ಟು ಪ್ರಾಮಾಣಿಕತೆಯಿಂದ, ದಕ್ಷತೆಯಿಂದ ರೈತರಿಗೆ ಸಹಾಯ ಮಾಡಬೇಕೆಂದು ಆಸಕ್ತಿ ಹೊಂದಿದ್ದಾರೋ ಅಷ್ಟೇ ದೃಢತೆಯಲ್ಲಿ ಅವರ ಇಲಾಖೆ ಕೂಡಾ ಕೆಲಸ ಮಾಡಬೇಕಾಗುತ್ತದೆ. ಇಂತಿಷ್ಟೇ ದಿವಸದಲ್ಲಿ ಇಂತಿಂತಹ ಕಾಮಗಾರಿಗಳು ಮುಗಿಯಬೇಕು ಎಂದು ಒಂದು ಕಾಲ ನಿಗದಿ ಮಾಡಿ ಅದಕ್ಕೆ ತಕ್ಕ ಪ್ರಮಾಣದಲ್ಲಿ ಹಣ ಒದಗಿಸಿ ಆದಷ್ಟು ವೇಗದಲ್ಲಿ ಕೆಲಸ ಮುಗಿಸುವತ್ತ ಎಂಜಿನಿಯರ್‌ಗಳೂ ಕೂಡಾ ತಮ್ಮ ಕರ್ತವ್ಯದೃಷ್ಟಿಯನ್ನು ಹೊಂದಬೇಕೆಂದು ಹೇಳುತ್ತೇನೆ. ಮಂತ್ರಿಗಳ ಪ್ರಾಮಾಣಿಕತೆ ಇಲಾಖೆಯಲ್ಲೂ ಪ್ರತಿಬಿಂಬಿತವಾಗಬೇಕು ಎಂದು ಹೇಳಿ ಸಮಯದ ಅಭಾವ ಇರುವುದರಿಂದ ಇಷ್ಟು ಸಮಯ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್).—ಸನ್ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆಯ ಬೇಡಿಕೆಗಳ ಬಗ್ಗೆ ಈಗಾಗಲೇ ಅನೇಕ ಮಾನ್ಯ ಸದಸ್ಯರು ಸವಿಸ್ತಾರವಾದ ಟೀಕೆ ಮತ್ತು ಸಲಹೆ ಸೂಚನೆಗಳನ್ನು ನೀಡಿದ್ದಾರೆ ಈ ಸಂದರ್ಭದಲ್ಲಿ ನಾನೂ ಕೂಡಾ ಕೆಲವು ನನ್ನ ಅನಿಸಿಕೆ ಮತ್ತು ಸೂಚನೆಗಳನ್ನು ನೀಡಬೇಕೆಂದು ಬಯಸುತ್ತೇನೆ. ಯಾವುದೇ ಪ್ರದೇಶವಾಗಲೀ, ಭಾಗವಾಗಲೀ ಅಭಿವೃದ್ಧಿ ಹೊಂದಿದೆ ಎಂದು ಮೇಲ್ನೋಟಕ್ಕೆ ಕಾಣಬೇಕಾದರೆ ಆ ಪ್ರದೇಶದ ನೀರಾವರಿಯಿಂದ ಇದು ಸಾಧ್ಯವಾಗುತ್ತದೆ. ಯಾವ ಭಾಗದಲ್ಲಿ ನೀರಾವರಿ ಹೆಚ್ಚು ಇದೆಯೋ ಅಲ್ಲಿ ಸಾಮಾಜಿಕ ಸ್ಥಿತಿ ಮತ್ತು ಆರ್ಥಿಕ ಸ್ಥಿತಿ ಸರಿಯಾಗಿ ಇದ್ದು ಅಲ್ಲಿ ಶಾಂತಿಯನ್ನು ಕಾಪಾಡುವುದಕ್ಕೆ ಸಾಧ್ಯವಾಗುತ್ತದೆ, ಈಗ ನಮ್ಮ ಕರ್ನಾಟಕವನ್ನು ಬೇರೆ ಒಂದು ಪ್ರಾಂತ್ಯಕ್ಕೆ ಹೋಲಿಸಿದರೆ ಬಹುಶ: ನೀರಾವರಿಯಲ್ಲಿ ನಾವು ಎಷ್ಟು ಸಾಧನೆ ಮಾಡ ಬೇಕಾಗಿತ್ತೋ ಅಷ್ಟು ಸಾಧಿಸಿಲ್ಲ ಎಂದು ನನಗನ್ನಿಸುತ್ತದೆ.

೧೨–೫೦ ಪಿ. ಎಂ.

ಎರಡು ನೂರು ಹೆಕ್ಟೇರ್ ಒಳಗಿರುವ ನೀರಾವರಿ ಯೋಜನೆಗಳು ಜಿಲ್ಲಾಪರಿಷತ್ತಿನ ಮೂಲಕ ಆಗಬೇಕು ಅದರ ಮೇಲ್ಪಟ್ಟಂತು ಯೋಜನೆಗಳು ಪಿ. ಡಬ್ಲ್ಯೂ. ಡಿ. ಇಲಾಖೆ ಮೂಲಕ ಆಗಬೇಕೆಂದು ಏನೊಂದು ಯೋಜನೆ ಇದೆ ಆ ದೃಷ್ಟಿಯಿಂದ ನೋಡಿದಾಗ ನನ್ನ ಮಾಹಿತಿ ಪ್ರಕಾರ ಬಹುಶ: ಜಿಲ್ಲಾ ಪರಿಷತ್ತಿನ ಮೂಲಕ ಆಗಬೇಕಾದಂಥ ಕಾಮಗಾರಿಗಳೂ ಕೂಡಾ ಇಲ್ಲಿಯುವರೆಗೆ ಆಗಿಲ್ಲ. ಕೆರೆಗಳ ಕೆಲಸವೂ ಆಗಿಲ್ಲವೆಂದು ಹೇಳಬಯಸುತ್ತೇನೆ. ಅನೇಕ ರಾಜಕೀಯ ಪಕ್ಷದವರು ಫೌಂಡೇಷನ್ ಸ್ಟೋನ್‌ಗಳನ್ನು ಹಾಕಿ ಕೆರೆಗಳ ಕೆಲಸವನ್ನು ಉದ್ಘಾಟನೆ ಮಾಡಿರಬಹುದು. ಆದರೆ ಯಾವುದೇ ಕೆರೆಯ ಕೆಲಸ ಇಲ್ಲಿಯವರೆಗೆ ಮುಗಿದಿಲ್ಲ. ಆ ಮೇಲೆ ಸಣ್ಣ ನೀರಾವರಿ ಯೋಜನೆಯ ಪ್ರಮಾಣವನ್ನು ಹೆಚ್ಚು ಮಾಡಿದರೆ ನಾವು ರೈತರುಗಳಿಗೆ ಅನುಕೂಲ ಮಾಡಿದ ಹಾಗೆ ಆಗುತ್ತಿದೆ ಮತ್ತು ಜಲ ಸಂಪನ್ಮೂಲಗಳನ್ನು ಹೆಚ್ಚು ಬಳಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಜಲ ಸಂಪನ್ಮೂಲಗಳನ್ನು ಹೆಚ್ಚು ಬಳಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಕಳೆದ ಅಧಿವೇಶನದಲ್ಲಿ ನಾನು ಈ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ. ನಮ್ಮ ಪ್ರಾಂತ್ಯದಲ್ಲಿ ಏನು ಹಳೇ ಕೆರೆಗಳು ಇವೆ, ಅವುಗಳು ಸುಮಾರು ೩೩ ಸಾವಿರ ಇವೆ. ಸಧ್ಯಕ್ಕೆ ಅವೆಲ್ಲಾ ಡ್ರೈ ಆಗಿವೆ ಮತ್ತು ಆ ಕೆರೆ ಜಾಗದಲ್ಲಿ ಎನ್‌ಕ್ರೋಚ್‌ಮೆಂಟ್ ಆಗಿ ಅಲ್ಲಿ ಸಾಗುವಳಿ ನಡೆಯುತ್ತಿದೆ. ಇಂಥ ಕೆರೆಗಳ ಸಂಖ್ಯೆ ಬಹುಶ: ನಮ್ಮ ಹೈದರಾಬಾದ್ ಕರ್ನಾಟಕದಲ್ಲಿ ಭಾಗದಲ್ಲಿ ಹೆಚ್ಚಾಗಿವೆ. ಇಂಥಾ ಕೆರೆಗಳ ಜಾಗವನ್ನು ರೀ–ಸರ್ವೆ ಮಾಡಿ ಆ ಕೆರೆಗಳಲ್ಲಿ ತುಂಬಿರುವ ಹೂಳನ್ನು ತೆಗೆಸಿದರೆ ಒಳ್ಳೆಯದು. ಈ ಕೆಲಸ ಕಮ್ಮಿ ಖರ್ಚಿನಲ್ಲಿ ಆಗುವುದಕ್ಕೆ ಸಾಧ್ಯವಿದೆ. ಆ ಕೆರೆಗಳಲ್ಲಿ ನೀರು ಶೇಖರಣೆ ಮಾಡಿದರೆ ನಮ್ಮ ಒಕ್ಕಲಿಗರಿಗೆ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮತ್ತೆ ವರ್ಲ್ಡ್ ಬ್ಯಾಂಕ್ ನೆರವಿನಿಂದ ನಾವು ಈ ಕೆರೆಗಳನ್ನು ಏನು ಮಾಡುತ್ತಿದ್ದೇವೆ, ಬಹುಶ: ದೊಡ್ಡ ಯೋಜನೆಯಾಗಲೀ ಅಥವಾ ಸಣ್ಣ ಯೋಜನೆಯಾಗಲಿ, ಇಲ್ಲಿಯವರೆಗೆ ಟೈಮ್ ಬಾಂಡ್ ಪ್ರೋಗ್ರಾಂ ಪ್ರಕಾರ ಕಂಪ್ಲೀಟ್ ಆಗಿಲ್ಲವೆಂದು ನಾನು ಹೇಳಬೇಕಾಗುತ್ತದೆ, ಅನೇಕ ಸಲ ನಾವು ಇಂಥಾ ಯೋಜನೆ

ಗಳು ಇಷ್ಟು ಅವಧಿಯೊಳಗೆ ಪೂರ್ಣ ಮಾಡಬೇಕೆಂದು ಹೇಳಿದಾಗಲೂ ಕೂಡ ಆ ಅವಧಿಯೊಳಗೆ ಪೂರ್ಣವಾಗದೇ ಇರುವುದರಿಂದ ಅದರ ವೆಚ್ಚ ಹೆಚ್ಚು ಆಗುವ ಸಾಧ್ಯತೆ ಇದೆ. ಅದರ ಸಲುವಾಗಿ ಯಾವುದೇ ಯೋಜನೆಯಾಗಲೀ, ಯೋಜನೆಯಂತೂ ಸರಿಯಾಗಿರುತ್ತನೆ. ಆದರೆ ಆ ಯೋಜನೆ ಟೈಮ್ ಬಾಂಡ್ಡ್ ಪ್ರೊಗ್ರಾಂ ಪ್ರಕಾರ ಕಾರ್ಯಗತವಾದರೆ ಆ ಯೋಜನೆ ಸಫಲವಾಗುತ್ತದೆ, ಜನರುಗಳಿಗೆ ಹಿತವಾಗುತ್ತದೆ. ಆಮೇಲೆ ಗಂಗಾ ಕಲ್ಯಾಣ ಯೋಜನೆಯಲ್ಲಿ ನಾವು ನೋಡಿದ್ದೇವೆ. ಹೋದ ಸಲ ನಾವು ೭೫೦ ಹೆಕ್ಟೇರ್ ಭೂಮಿಗೆ ನೀರು ಕೊಡಬೇಕೆಂದು ಒಂದು ಗುರಿಯನ್ನು ಈ ಯೋಜನೆಯಲ್ಲಿ ಇಟ್ಟುಕೊಂಡಿದ್ದೆವು, ಆದರೆ ಈ ಗುರಿಯು ಬಹಳ ಕಡಿಮೆ ಇದೆಯೆಂದು ನನಗನಿಸುತ್ತದೆ. ಗಂಗಾ ಕಲ್ಯಾಣ ಯೋಜನೆಯಲ್ಲಿ ಅತಿ ಬಡವರು, ದೀನದಲಿತರು, ಸಣ್ಣ ಹಿಡುವಳಿದಾರರಿಗೆ ಹೆಚ್ಚು ಸಹಾಯವಾಗುತ್ತದೆ. ಈ ಸ್ಕೀಮ್‌ನಲ್ಲಿ ಹೆಚ್ಚು ಪ್ರದೇಶಕ್ಕೆ ನೀರು ಕೊಡುವ ಯೋಜನೆಯನ್ನು ಹಾಕಿಕೊಳ್ಳಬೇಕು. ಇಲ್ಲಿ ಒಂದು ವಿಷಯವನ್ನು ನಾವು ಗಮನಿಸಬೇಕಾಗುತ್ತದೆ. ಈ ಯೋಜನೆ ಮುಖಾಂತರ ಸಾಮೂಹಿಕವಾಗಿ ಒಂದು ಬಾವಿಯನ್ನು ಅಥವಾ ಒಂದು ಕೊಳವೆ ಬಾವಿಯನ್ನು ತೋಡಿಸಿ ನೀರಿನ ಅನುಕೂಲ ಮಾಡಿಕೊಡಲಾಗುತ್ತಿದೆ, ಬಹುಶ: ಈ ಯೋಜನೆ ಸರಿಯಾಗಿ ಫಲಪ್ರದವಾಗುತ್ತಿಲ್ಲ. ಏಕೆಂದರೆ, ಅಲ್ಲಿ ಒಬ್ಬರಿಗೊಬ್ಬರಿಗೆ ಕಚ್ಚಾಟ ಬರುತ್ತದೆ. ಬಾವಿ ಯಾರೋ ಒಬ್ಬರ ಸರ್ವೆ ನಂಬರಿನಲ್ಲಿ ಇರುತ್ತದೆ, ಅವನು ಬೇರೆ ಸರ್ವೆ ನಂಬರಿನವರಿಗೆ ನೀರು ಕೊಡುವುದಕ್ಕೆ ತೊಂದರೆ ಮಾಡುತ್ತಾನೆ. ಆದ್ದರಿಂದ, ಈ ಕಚ್ಚಾಟವನ್ನು ತಪ್ಪಿಸಬೇಕಾದರೆ ಪ್ರತಿಯೊಬ್ಬ ವ್ಯಕ್ತಿಗೂ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಬಾವಿ ತೋಡಿಸಿಕೊಟ್ಟರೆ ಬಡವರಿಗೆ ಹಿತ ಮಾಡಿದ ಹಾಗಾಗುತ್ತದೆ. ಆ ಮೇಲೆ ಲಿಫ್ಟ್ ಇರಿಗೇಷನ್ ಬಗ್ಗೆ ಹೇಳಬೇಕಾದರೆ, ಈಗ ಕಾವೇರಿ ಬೇಸಿನ್ ಆಗಲೀ, ಕೃಷ್ಣಾ ಬೇಸಿನ್ ಆಗಲೀ ಇಲ್ಲಿ ನಾವು ಸಾಕಷ್ಟು ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಆದರೆ ನಮ್ಮ ಗೋದಾವರಿ ಬೇಸಿನ್ ಏನಿದೆ, ಆ ಬೇಸಿನ್‌ನಲ್ಲಿ ಲಿಫ್ಟ್ ಇರಿಗೇಶನ್ನ ಬಗ್ಗೆ ಬಹುಶ: ಈ ಬಜೆಟ್‌ನಲ್ಲಿ ಯಾವುದರ ಪ್ರಕಾರವೂ ಅಳವಡಿಸಿಲ್ಲ. ಏಕೆಂದರೆ ಬಚಾವತ್ ಆಯೋಗದ ಅವಾರ್ಡ್ ಪ್ರಕಾರ ಒಂಭತ್ತು ವರ್ಷಗಳೊಳಗಾಗಿ ನಮ್ಮ ಎಲ್ಲ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕಾಗುತ್ತದೆ. ಅದರ ಸಲುವಾಗಿ ಗೋದಾವರಿ ಬೇಸಿನ್‌ನಲ್ಲಿ ಬರುವಂಥ ಸಣ್ಣ ಸಣ್ಣ ಯೋಜನೆಗಳಿಗೆ ಲಿಫ್ಟ್ ಇರಿಗೇಷನ್‌ಗಳಿಗೆ ಹಣವನ್ನು ಒದಗಿಸಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ, ಈಗಾಗಲೇ ಲಿಫ್ಟ್ ಇರಿಗೇಷನ್ ಸಲುವಾಗಿ ಏನು ಬಜೆಟ್ ನಿಗದಿ ಮಾಡಿದ್ದಾರೆ, ಆ ರೀತಿ ನಿಗದಿ ಮಾಡಿರುವಂಥ ಬಜೆಟ್‌ನ ಹಣವನ್ನು ಪೂರ್ಣವಾಗಿ ಖರ್ಚು ಮಾಡಿರಲಿಲ್ಲ. ೨೫೦ ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದ್ದರೆ ಅದರಲ್ಲಿ ಕೇವಲ ೫೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಮಾತ್ರ ನಮ್ಮಿಂದ ಸಾಧ್ಯವಾಗಿದೆ ಹೀಗಾಗಿ ಬಜೆಟ್ ಹಣವು ಲ್ಯಾಪ್ಸ್ ಆಗಿದೆ. ಏಕೆಂದರೆ ಈ ಲ್ಯಾಪ್ಸಿನ ಪದ್ಧತಿ ಪಿ.ಡಬ್ಲ್ಯೂಡಿಯಲ್ಲಿ ಬಹಳ ಇದೆ. ಬಜೆಟ್‌ನಲ್ಲಿ ಒಂದು ಬಾಬಿಗೆ ಹಣವನ್ನು ನಿಗದಿ ಮಾಡುವುದೇ ಕಷ್ಟದ ಕೆಲಸವಾಗಿರುವಾಗ ಆ ರೀತಿ ನಿಗದಿ ಮಾಡಿದ ಹಣವನ್ನು ಖರ್ಚು ಮಾಡಲಿಲ್ಲ ಎನ್ನುವುದು ಚಿಂತಾಜನಕ ವಿಚಾರ ಎಂದೇ ಹೇಳಬೇಕಾಗುತ್ತದೆ. ಇದರಿಂದ ಯಾವುದೇ ಯೋಜನೆಗೆ ಧಕ್ಕೆ ಬರುತ್ತದೆ. ಇನ್ನಾದರೂ ಇಂಥ ಬಜೆಟ್ ಹಣದ ಲ್ಯಾಪ್ಸ್ ಆಗಕೂಡದು ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ನಮ್ಮ ಭಾಗವಾದ ಹೈದ್ರಾಬಾದ್-ಕರ್ನಾಟಕ ವಿಭಾಗದಲ್ಲಿ ಈ ತೆಹರದ ತೊಂದರೆಗಳು ಬಹಳಷ್ಟು ಇವೆ.

ನಮ್ಮಲ್ಲಿ ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳು ಫೆಬ್ರುವರಿ ತಿಂಗಳಲ್ಲಿ ಪ್ರಾರಂಭವಾಗಿ ಮಾರ್ಚ್ ತಿಂಗಳಲ್ಲಿ ಕೊನೆಗೊಳ್ಳುತ್ತವೆ. ಈ ತರಹದಲ್ಲಿ ನಡೆದರೆ ಕೆಲಸಗಳು ಹೇಗೆ ನಡೆಯುತ್ತವೆ ? ಹೀಗಾಗಿ ಅಲ್ಲಿ ಕೆಲಸ ಸರಿಯಾಗಿ ಆಗುವಹಾಗಿಲ್ಲ, ಕೆಲಸ ನಡೆಯುವಾಗ ಬಜೆಟ್ ಇರುವ ಹಾಗಿಲ್ಲ ಎಂಬ ಪರಿಸ್ಥಿತಿಯು ಬಂದಿದೆ. ಇದರಿಂದಾಗಿ ಕೆಲಸಗಳಿಗೆ ತೊಂದರೆಯಾಗುತ್ತಿದೆಯಲ್ಲದೆ ದುಡ್ಡು ಕೂಡ ಪೋಲಾಗುತ್ತಿದೆ. ಆದ್ದರಿಂದ ಎಷ್ಟು ಹಣವನ್ನು ಬಜೆಟ್‌ನಲ್ಲಿ ನಿಗದಿ ಮಾಡುತ್ತೀರೋ ಅಷ್ಟು ಹಣವನ್ನು ಅದೇ ಅವಧಿಯಲ್ಲಿ ಖರ್ಚು ಮಾಡುವಂಥ ಒಂದು ಕ್ರಮವನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೂ ಫ್ಲಡ್ ಕಂಟ್ರೋಲ್ ವಿಚಾರದಲ್ಲಿ ಹೇಳಿದ್ದಾರೆ. ಸದನದಲ್ಲಿ ಪ್ರಸ್ತಾಪ ಮಾಡಿದಂತೆ ಕರಾವಳಿಯಲ್ಲಿ ೩೦೦ ಕಿ.ಮೀ. ಉದ್ದದಷ್ಟು ಸಮುದ್ರ ದಂಡೆ ಇದೆ. ಅಲ್ಲಿ ಮಣ್ಣು ಕೊಚ್ಚಿಕೊಂಡು ಹೋಗಿ ನಮ್ಮ ರೈತರಿಗೆ ಅಪಾರ ಹಾನಿಯಾಗತಕ್ಕಂಥ ಸಂಭವವಿದೆ ಎಂದು ತಿಳಿದಿದ್ದೇವೆ. ಅದೇ ಪ್ರಕಾರ ನಮ್ಮ ಭಾಗದಲ್ಲಿಯೂ ಕೂಡ ಭೂಸವಕಳಿ ನಡೆಯುತ್ತಿದೆ. ನಮ್ಮ ಭಾಗದಲ್ಲಿ ಹೆಚ್ಚು ಮಳೆ ಬಿದ್ದರೆ ಹೊಲದಲ್ಲಿದ್ದಂಥ ಮಣ್ಣು ಕೊಚ್ಚಿಕೊಂಡು ಹೋಗಿ ಕೆರೆಗಳಲ್ಲಿ ಹೋಗಿ ತುಂಬಿಕೊಳ್ಳುತ್ತದೆ. ಇದರಿಂದಾಗಿ ಅನೇಕ ಕೆರೆಗಳಲ್ಲಿ ಹೂಳು ಜಾಸ್ತಿಯಾಗುತ್ತಿದೆ. ಇದರ ಹಾನಿಯನ್ನು ತಪ್ಪಿಸುವ ಸಲುವಾಗಿ ಸಣ್ಣ ಸಣ್ಣ ಕೆರೆಗಳ ಸುತ್ತ ಮುತ್ತ ಗಿಡಮರಗಳನ್ನು ಅಧಿಕ ಪ್ರಮಾಣದಲ್ಲಿ ಬೆಳೆಸುವ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಅದರ ಮೂಲಕ ಈ ಭೂಸವೆತವನ್ನು ತಪ್ಪಿಸಬೇಕೆಂದೂ ಕೇಳಿಕೊಳ್ಳುತ್ತೇನೆ.

ಇನ್ನು ಲೋಕೋಪಯೋಗಿ ಕಾಮಗಾರಿಗಳ ಬಗ್ಗೆ ಹೇಳಬೇಕಾದರೆ ನಮ್ಮ ವಿಭಾಗದಲ್ಲಿ ಕಳೆದ ೩-೪ ತಿಂಗಳುಗಳಿಂದ ಎಲ್ಲಾ ಕಾಮಗಾರಿಗಳು ಸ್ಥಗಿತವಾಗಿವೆ. ನಿಮ್ಮ ಭಾಗಗಳಲ್ಲಿ ಅದು ಯಾವ ಸ್ಥಿತಿಯಲ್ಲಿದೆ ಎಂದೂ ನನಗಂತೂ ಗೊತ್ತಿಲ್ಲ. ಒಟ್ಟಾಗಿ ಎಲ್ಲಾ ಕೆಲಸಗಳೂ ನಿಂತಿವೆ. ಕಾಮಗಾರಿಗಳು ಏಕೆ ಸ್ಥಗಿತಗೊಂಡಿವೆಯೆಂದು ಕೇಳಿದರೆ ಸಿಮೆಂಟ್ ಇಲ್ಲ, ಕಬ್ಬಿಣ ಇಲ್ಲ ಎಂದು ಸಬೂಬು ಹೇಳುತ್ತಾರೆ ಇನ್ನೂ ಅನೇಕ ರೀತಿಯ ನೆಪಗಳನ್ನು ಹೇಳುತ್ತಾರೆ. ಇದು ಏಕೆ ನಿಂತಿದೆ ಎಂದು ದಯಮಾಡಿ ತಿಳಿಸಬೇಕು. ನಿಜವಾಗಿಯೂ ಸಿಮೆಂಟ್ ಕಬ್ಬಿಣ ಕಾಮಗಾರಿಗಳಿಗೆ ಲಭ್ಯವಾಗುತ್ತಿಲ್ಲವೆ? ಕೆಲಸವನ್ನು ಅರ್ಧದಲ್ಲಿಯೇ ನಿಲ್ಲಿಸಲು ಕಾರಣ ಏನು? ಎಂಬ ಬಗ್ಗೆ ತತ್‌ಕ್ಷಣವೇ ಗಮನಕೊಟ್ಟು ಆ ಕುರಿತು ಇರುವ ದೋಷಗಳನ್ನು ನಿವಾರಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿಯ ಮೆಕ್ಯಾನಿಕಲ್ ಡಿವಿಜನ್‌ನಲ್ಲಿ ಸಾಕಷ್ಟು ದೋಷಗಳು ಇವೆ. ಯಾವುದೇ ಒಂದು ಕೆಲಸ ಆಗಬೇಕಿದ್ದರೂ ಈ ಮೆಕ್ಯಾನಿಕ್ ಡಿವಿಜನ್ ರವರು ತೊಂದರೆ ಒಡ್ಡುತ್ತಾರೆ. ರಸ್ತೆ ಕಾಮಗಾರಿ ಬಂದಾಗ ರೋಡ್‌ರೋಲರ್ ಕರಾಬ್ ಆಗಿದೆ ಎಂದು ಹೇಳುತ್ತಾರೆ. ಇನ್ನೂ ಅನೇಕ ಕಾರಣಗಳನ್ನು ಹೇಳುತ್ತಾರೆ. ಇಂಥ ನೂರಾರು ವಿಚಾರಗಳನ್ನು ಎಲ್ಲರೂ ತಿಳಿದಿರುವ ಕಾರಣ ನಾನು ಪುನಃ ಅವುಗಳನ್ನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಇಂಥ ಲೋಪದೋಷಗಳನ್ನು ಸರಿಪಡಿಸದೆ ಯಾವುದೇ ಕೆಲಸವನ್ನು ಪೂರ್ಣಗೊಳಿಸಲು ಸಾಧ್ಯವಿಲ್ಲ. ಆದುದರಿಂದ ಅಂತಹ ದೋಷಗಳ ಬಗ್ಗೆ ಗಮನಕೊಟ್ಟು ಈ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕಟ್ಟಡಗಳ ವಿಚಾರದಲ್ಲಿ ಹೇಳಬೇಕಾದರೆ, ನಾವು ರಾಜ್ಯದಲ್ಲಿ ಗೆಸ್ಟ್‌ಹೌಸ್‌ಗಳ ನಿರ್ಮಾಣಕ್ಕೆ ಕೊಟ್ಟ ಗಮನವನ್ನು ಸ್ಕೂಲ್‌ಬಿಲ್ಡಿಂಗ್‌ಗಳ ಬಗೆಗಾಗಲೀ, ಆಸ್ಪತ್ರೆಗಳ ಕಟ್ಟಡಗಳ ಬಗೆಗಾಗಲೀ ಕೊಡಲಿಲ್ಲ ಎಂದು ಹೇಳಬೇಕಾಗುತ್ತದೆ. ಗೆಸ್ಟ್‌ಹೌಸ್‌ಗಳು ಬೇಡವೇ ಬೇಡ ಎಂಬ ಧೋರಣೆ ನನ್ನದಲ್ಲ ಆದರೂ ಅದಕ್ಕೆ ವ್ಯಯವಾಗುತ್ತಿರುವ ಹಣ ಹೆಚ್ಚು ಎನ್ನುವುದು ನನ್ನ ಭಾವನೆ. ಅಗತ್ಯ ಕಟ್ಟಡಗಳ ಬಗ್ಗೆ ಹೆಚ್ಚು ಗಮನಕೊಟ್ಟರೆ ಅದರಿಂದ ಸಾರ್ವಜನಿಕರ ಹಿತದೃಷ್ಟಿಯ ಪಾಲನೆ ಆಗುತ್ತದೆ. ಬಿಲ್ಡಿಂಗ್ ಎಸ್ಟಿಮೇಟ್ ಮಾಡುವಾಗ ಬೆಂಗಳೂರಿನಲ್ಲಿ ಒಂದು ರೀತಿಯಲ್ಲಿ ಆದರೆ, ಬೀದರ್ ಭಾಗದಲ್ಲಿ ಇನ್ನೊಂದು ರೀತಿಯಲ್ಲಿ ಆಗುತ್ತದೆ. ಎಲ್ಲಾ ಕಡೆಗಳಿಗೂ ಒಂದೇ ರೀತಿಯ ಎಸ್ಟಿಮೇಟ್ ಮಾಡುವುದು ಸರಿಯಲ್ಲ. ಕಟ್ಟಡಗಳಿಗೆ ಬೇಕಾದ ಸಾಮಾಗ್ರಿಗಳನ್ನು ಆಯಾಯ ಪ್ರದೇಶದಲ್ಲಿ ಸಿಗುವ ವಸ್ತುಗಳ ದೂರದ ಮೇಲೆ ಹೋಗಂತ್ತದೆ. ನಮ್ಮಲ್ಲಿ ಕಟ್ಟಡಕ್ಕೆ ಬೇಕಾದ ಕೆಂಪುಕಲ್ಲನ್ನು ೫೦-೧೦೦ ಕಿ.ಮೀ. ದೂರದಿಂದ ತರಬೇಕಾಗುತ್ತದೆ. ಅಂಥ ಕಲ್ಲನ್ನು ಅಲ್ಲಿ ಉಪಯೋಗಿಸಿಕೊಂಡರೆ ಕಡಿಮೆ ವೆಚ್ಚವಾಗುತ್ತದೆ ಸ್ಥಳೀಯವಾಗಿ ಸಿಗುವಂಥ ಸಾಮಾಗ್ರಿಗಳನ್ನು ಉಪಯೋಗಿಸಿಕೊಂಡು ಅಲ್ಲಿಯೇ ಎಸ್ಟಿಮೇಟ್ ತಯಾರು ಮಾಡುವುದರಿಂದ ವೆಚ್ಚದಲ್ಲಿ ಕಡಿಮೆಯಾಗುವುದಕ್ಕೆ ಸಾಧ್ಯವಿದೆ ಎಂದು ಹೇಳಬಯಸುತ್ತೇನೆ.

ಇನ್ನು ರಸ್ತೆಗಳ ವಿಚಾರದಲ್ಲಿ ಹೇಳುವಾಗ ನಮ್ಮ ಭಾಗದ ರಸ್ತೆಗಳ ಅವ್ಯವಸ್ಥೆಯ ಬಗ್ಗೆ ಹೇಳಲು ಬಹಳ ಬೇಸರವಾಗುತ್ತದೆ. ಹೈದ್ರಾಬಾದ್ ಕರ್ನಾಟಕದ ಭಾಗದ ರಸ್ತೆಗಳು ಬಹಳ ದುಸ್ಥಿತಿಯಲ್ಲಿವೆ. ನಮ್ಮಲ್ಲಿ ಸುಮಾರು ೭ಸಾವಿರ ಹಳ್ಳಿಗಳಿಗೆ ಸರಿಯಾದ ರಸ್ತೆಗಳು ಇಲ್ಲ ಎಂದು ಒಂದು ಸಂಖ್ಯೆ ಹೇಳುತ್ತದೆ ಈ ೭ ಸಾವಿರ ಹಳ್ಳಿಗಳಲ್ಲಿ ಅನೇಕ ಹಳ್ಳಿಗಳು ನಮ್ಮ ಹೈದ್ರಾಬಾದ್ ಕರ್ನಾಟಕದ ಭಾಗದಲ್ಲಿ ಇರಬಹುದೆಂದು ನನ್ನ ಭಾವನೆ. ಆದುದರಿಂದ ದಯಮಾಡಿ ಈ ಹಳ್ಳಿಗಳ ರಸ್ತೆಗಳನ್ನು ಮಾಡಿಕೊಡುವಲ್ಲಿ ತಾವುಗಳು ಆಸಕ್ತಿ ವಹಿಸಿ ಹಣ ಒದಗಿಸಬೇಕಾಗಿ ಕೇಳಿಕೊಳ್ಳುತ್ತೇನೆ. ಈ ಸಣ್ಣ ಸಣ್ಣ ಹಳ್ಳಿಗಳಿಗೆ ಸರ್ವಋತು ರಸ್ತೆಗಳನ್ನು ಮಾಡಿಸಿಕೊಡಬೇಕಾಗಿಯೂ ಕೇಳಿಕೊಳ್ಳುತ್ತೇನೆ. ನಮ್ಮದು ಗಡಿಪ್ರದೇಶ. ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯದ ಗಡಿಭಾಗ ನಮ್ಮದು ಆ ರಾಜ್ಯಗಳ ಗಡಿಭಾಗದಲ್ಲಿನ ರಸ್ತೆಗಳನ್ನು ನೋಡಿದಾಗ ನಮ್ಮ ಜನರಿಗೆ ತುಂಬಾ ಸಮಾಧಾನವಾಗುತ್ತದೆ. ಅಷ್ಟು ಚೆನ್ನಾಗಿ ರಸ್ತೆಗಳ ವ್ಯವಸ್ಥೆಯನ್ನು ಮಾಡಿಕೊಟ್ಟಿದ್ದಾರೆ ನಮ್ಮ ಕರ್ನಾಟಕ ಭಾಗದ ರಸ್ತೆಗಳನ್ನು ನೋಡಿದ ಕೂಡಲೆ ನೋಡಿದವರ ಮನಸ್ಸಿನ ಮೇಲೆ ಒಂದು ಕೆಟ್ಟ ಭಾವನೆ ಬರುವ ಹಾಗೆ ಇದೆ. ಇದರಿಂದಾಗಿ ನಮ್ಮಂಥ ಜನಪ್ರತಿನಿಧಿಗಳ ಹೆಸರು ಕೂಡ ಕೆಡುತ್ತದೆ, ಪ್ರತಿನಿಧಿಗಳು ಸರಿಯಾಗಿ ಸರಕಾರದಲ್ಲಿ ಕೆಲಸ ಮಾಡಿಸಿಕೊಳ್ಳುತ್ತಿಲ್ಲ ಎಂದು ಜನರು ಭಾವಿಸುವಂತಾಗುತ್ತದೆ. ಆದುದರಿಂದ ರಸ್ತೆಗಳ ವಿಚಾರದಲ್ಲಿ ಸೂಕ್ತ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ಬ್ಲಾಕ್ ಕಾಟನ್ ಸಾಯ್ಲ್ ಪ್ರದೇಶ ಇರುತ್ತದೆ. ಇದರಿಂದಾಗಿ ಒಂದೇ ವರ್ಷದಲ್ಲಿ ಸಾಧಾರಣ ರೀತಿಯಲ್ಲಿ ಮಾಡಿದ ರಸ್ತೆಗಳು ಹಾಳಾಗುತ್ತವೆ. ಇದಕ್ಕಾಗಿ ಬೋರ್ಡರ್ಸ್ ಹಾಕಿ ಸೈಡ್ ಡ್ರೈನ್ಸ್ ಕೊಟ್ಟು, ಸೂಕ್ತ ರೀತಿಯಲ್ಲಿ ಬಾಳಿಕೆ ಬರುವಂತೆ ಹಲವಾರು ವರ್ಷಗಳು ಬರುವಂತೆ ಒಳ್ಳೆಯ ರೀತಿಯಲ್ಲಿ ರಸ್ತೆಗಳ ನಿರ್ಮಾಣ ಮಾಡಬೇಕು. ದಯಮಾಡಿ ಈ ಬಗ್ಗೆ ಸೂಕ್ತ ಗಮನಕೊಡುವಿರೆಂದು ನಂಬಿಕೆಯುಳ್ಳವನಾಗಿದ್ದೇನೆ. ನಾವು ಅನೇಕ ವರ್ಷಗಳಿಂದ ಮಾಂಜ್ರಾ ನದಿಯ ಮೇಲೆ ಒಂದು ಬ್ರಿಡ್ಜ್ ಆಗಬೇಕೆಂದು ಕೇಳುತ್ತಿದ್ದೇವೆ. ಅದು ಇನ್ನೂ ಆಗಿಲ್ಲ. ಕಳೆದ

ಅಧಿವೇಶನದಲ್ಲಿ ಇದರ ಬಗ್ಗೆ ಪ್ರಶ್ನೆಯನ್ನು ಸಹ ಕೇಳಿದ್ದೆ, ಆಗ ಮಂತ್ರಿಗಳು ಅದಕ್ಕೆ ಏಜೆನ್ಸಿ ಬಂದಿಲ್ಲ ಅದಕ್ಕಾಗಿ ಈ ಕೆಲಸ ಆಗಿಲ್ಲವೆಂದು ಹೇಳಿದರೂ ಈ ವರ್ಕ್‌ಗೆ ಸ್ಯಾಂಕ್ಷನ್ ಆಗಿ ಆರು ವರ್ಷವಾಗಿದೆ ಇದಕೆ ನಮ್ಮ ಬಜೆಟ್‌ನಿಂದ ಹಣ ಕೊಡಬೇಕಾಗಿಲ್ಲ. ಇದಕ್ಕೆ ಆಂಧ್ರ ಬಜೆಟ್‌ನಲ್ಲಿ ಹಣ ಸ್ಯಾಂಕ್ಷನ್ ಆಗಿದೆ. ಅವರು ಹಣವನ್ನು ಕೊಡುತ್ತಾರೆ, ಆದರೂ ಕೂಡ ಈ ಕೆಲಸವನ್ನು ಇನ್ನೂ ಪೂರ್ಣಮಾಡಿಲ್ಲ. ಆದ್ದರಿಂದ ತಾವು ತ್ವರಿತಗತಿಯಿಂದ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು. ಇದು ಆಂಧ್ರ ಮತ್ತು ಕರ್ನಾಟಕ ಎರಡೂ ರಾಜ್ಯಗಳನ್ನು ಲಿಂಕ್ ಮಾಡತಕ್ಕ ಬ್ರಿಡ್ಜ್ ಆಗಿದೆ. ಈ ಬ್ರಿಡ್ಜ್ ಕಂಪ್ಲೀಟ್ ಆದರೆ ನಮ್ಮ ಬೀದರ್ ವ್ಯಾಪಾರ ದೃಷ್ಟಿಯಿಂದ ಬಹಳಷ್ಟು ಬೆಳೆಯಲಿಕ್ಕೆ ಸಾಧ್ಯವಿದೆ. ಸನ್ಮಾನ್ಯ ಸಚಿವರು ನಮ್ಮ ಹೈದರಾಬಾದ್-ಕರ್ನಾಟಕಕ್ಕೆ ವಿಶೇಷ ಆದ್ಯತೆಯನ್ನು ಕೊಡಬೇಕು ಮತ್ತು ಹೆಚ್ಚು ಲಕ್ಷ್ಯವನ್ನು ಹರಿಸಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಗೋಪಿನಾಥ್ ಆರ್. ಸಾಂಡ್ರ. (ಹುಬ್ಬಳ್ಳಿ).—ಸನ್ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಮಂತ್ರಿಗಳಾದ ಶ್ರೀ ಪುಟ್ಟಸ್ವಾಮಿ ಗೌಡರು ಈ ಸದನಕ್ಕೆ ಸಾದರಪಡಿಸಿದ ಬಜೆಟ್ಟಿನ ಬೇಡಿಕೆಗಳನ್ನು ಸಂಪೂರ್ಣ ಮನಸ್ಸಿನಿಂದ ಸ್ವಾಗತಿಸುತ್ತೇನೆ.

ಶ್ರೀ ಪುಟ್ಟಸ್ವಾಮಿಗೌಡರು ನಾನು ತಿಳಿದ ಹಾಗೆ ಶಾಂತ ಮೂರ್ತಿಗಳು, ತಮ್ಮ ಖಾತೆಯನ್ನು ಚೆನ್ನಾಗಿ ಬಲ್ಲವರು, ಮತ್ತು ಮತ್ತೆಗೆ ಕಂಡರೂ ಕೂಡ ಪ್ರಸಂಗಬಂದರೆ ಕಠಿಣ ಕ್ರಮಗಳನ್ನು ಕೈಗೊಳ್ಳುವುದರಲ್ಲಿ ಎಳ್ಳಷ್ಟೂ ಹಿಂದೆ ಮುಂದೆ ನೋಡದಂತಹ ವ್ಯಕ್ತಿ. ಉದಾಹರಣಾರ್ಥವಾಗಿ ಹೇಳಬೇಕಾದರೆ, ಮೊನ್ನೆ ಕೆಲವು ಅಸಿಸ್ಟೆಂಟ್ ಇಂಜಿನಿಯರ್‌ಗಳನ್ನು ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿರುವುದು ನಮ್ಮ ಮನಸ್ಸಿಗೆ ಬಂದಿದೆ, ಕಾವೇರಿ ನದಿ ವಿವಾದದ ಬಗ್ಗೆ ತಮಿಳುನಾಡು ಮತ್ತು ನಮ್ಮ ರಾಜ್ಯದ ನಡುವೆ ತಿಕ್ಕಾಟ ನಡೆದಾಗ ಅವರು ಗಟ್ಟಿ ಮನಸ್ಸಿನಿಂದ ಅಂಜದೆ ಅಳುಕದೆ ತಮ್ಮ ನಿಲುವನ್ನು ತೋರಿಸಿ ತಮ್ಮ ಗಟ್ಟಿತನವನ್ನು ಪ್ರದರ್ಶಿಸಿದ್ದಾರೆ. ಇವರ ಅವಧಿಯಲ್ಲಿ ಕೈಗೊಂಡಿರುವ ಹಲವಾರು ಕೆಲಸಕಾರ್ಯಗಳನ್ನು ಪೂರ್ತಿ ಮಾಡಿಕೊಡುವಂತ ವ್ಯಕ್ತಿ ಎಂದರೆ ತಪ್ಪಾಗಲಿಕ್ಕಿಲ್ಲ. ನಾನು ಈಗ ಉತ್ತರ ಕರ್ನಾಟಕದ ಪ್ರತಿನಿಧಿಯಾಗಿ ಕೆಲವು ಸಲಹೆ ಸೂಚನೆಗಳನ್ನು ಶ್ರೀಮಾನ್ ಪುಟ್ಟಸ್ವಾಮಿಗೌಡರ ಎದುರಿಗೆ ಮತ್ತು ಈ ಸದನದ ಮುಂದೆ ಇಡಬಯಸುತ್ತೇನೆ. ಇವರು ಅಧಿಕಾರವನ್ನು ತೆಗೆದುಕೊಂಡ ಕೆಲವೇ ತಿಂಗಳುಗಳಲ್ಲಿ ನಮ್ಮ ಉತ್ತರ ಕರ್ನಾಟಕದ ಭಾಗಕ್ಕೆ ಭೇಟಿ ಇತ್ತಾಗ ಶಾಸಕರನ್ನು ಕಾರ್ಯಕರ್ತರನ್ನು ಮತ್ತು ಅಧಿಕಾರಿಗಳನ್ನು ಕರೆದು ಎಲ್ಲೆಲ್ಲಿ ನ್ಯೂನತೆಗಳು ಇವೆ, ಎಲ್ಲೆಲ್ಲಿ ಅಡ್ಡಿ ಅಡಚಣೆಗಳು ಇವೆ, ಅವುಗಳನ್ನು ನೋಡಿ ಕೂಡಲೇ ಕ್ರಮಕೈಗೊಳ್ಳಲು ಆದೇಶ ನೀಡಿದ್ದು ನನಗೆ ಇನ್ನೂ ನೆನಪಿದೆ: ನನ್ನ ಹಾಗೆ ಇನ್ನು ಅನೇಕ ಉತ್ತರ ಕರ್ನಾಟಕದ ಭಾಗದ ಶಾಸಕರ ಒಂದು ಅನಿಸಿಕೆ ಏನಿದೆ ಎಂದರೆ, ಇವರ ಕಾಲದಲ್ಲಿ ಉತ್ತರ ಕರ್ನಾಟಕದ ಭಾಗದಲ್ಲಿ ಕೆಲಸಗಳು ಇನ್ನೂ ಹೆಚ್ಚು ಆಗಬೇಕು ಎಂಬುದಾಗಿದೆ. ಕ್ಷಮಿಸಬೇಕು. ನಾನು ಒಂದು ಮಾತನ್ನು ಇಲ್ಲಿ ಹೇಳಲೇಬೇಕಾಗುತ್ತದೆ. ಈವರೆಗೆ ಇದುತಹ ಕೆಲಸಗಳು ಕೇವಲ ಹಳೆಯ ಮೈಸೂರು ಭಾಗಗಳಲ್ಲಿ ಆಗಿದೆ. ನಮ್ಮ ಭಾಗದಲ್ಲಿ ಬಹಳಷ್ಟು ಕಡಿಮೆ ಆಗಿದೆಯೆಂದರೆ ತಪ್ಪಾಗಲಿಕ್ಕಿಲ್ಲ. ಈಗ ನಮ್ಮೆಲ್ಲರ ಇಚ್ಛೆ ಶ್ರೀಮಾನ್ ಪುಟ್ಟಸ್ವಾಮಿಗೌಡರಿಂದ ಕೈಗೂಡುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಈ ಲೋಕೋಪಯೋಗಿ ಖಾತೆ ಬಡವರ, ಸಾಮಾನ್ಯ ಜನರ ಪ್ರಗತಿಯ ಬಗ್ಗೆ ಕಾಮಗಾರಿಗಳನ್ನು ಮಾಡುವಂತಹ ಅತ್ಯಂತ ದೊಡ್ಡ ಖಾತೆಯಾಗಿದೆ. ಬಜೆಟ್‌ನ ಬಹುಭಾಗ ಹಣ ಇವರ ಖಾತೆಗೆ ಹೋಗುತ್ತದೆ. ಇದು ಜನಸಾಮಾನ್ಯರಿಗೆ ಮುಟ್ಟುವಂತಹ ಒಂದು ದೊಡ್ಡ ಏಜೆನ್ಸಿ ಎಂದರೆ ತಪ್ಪಾಗಲಿಕ್ಕಿಲ್ಲ. ಸನ್ಮಾನ್ಯ ಸಚಿವರು ಸಾಕಷ್ಟು ಅಂಕಿಅಂಶಗಳನ್ನು ಕೊಟ್ಟಿದ್ದಾರೆ ನಾನು ಉದ್ದವಾದ ಭಾಷಣವನ್ನು ಮಾಡಲು ಹೋಗುವುದಿಲ್ಲ. ನಾನು ಕೇವಲ ರಸ್ತೆಗಳ ಬಗ್ಗೆ ಕಟ್ಟಡಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ, ರಸ್ತೆಗಳ ಬಗ್ಗೆ ಕಟ್ಟಡಗಳ ಬಗ್ಗೆ ನಾವು ಇದುವರೆಗೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಅವುಗಳನ್ನು ಪೂರ್ತಿ ಮಾಡಲು ಕ್ರಮ ಕೈಗೊಳ್ಳಬೇಕು. ಇದರಲ್ಲಿ ಅಧಿಕಾರಿಗಳಿಗೆ ಮತ್ತು ಕಂಟ್ರಾಕ್ಟರುಗಳಿಗೆ ನೇರವಾದ ಸೌಹಾರ್ದಯುತವಾದ ಸಂಬಂಧವಿರಬೇಕು. ಈ ಸಂಬಂಧವನ್ನು ಇಟ್ಟುಕೊಂಡು ಹೋದರೆ ಕೆಲಸ ಕಾರ್ಯಗಳು ಬಹಳ ಚೆನ್ನಾಗಿ ಆಗುತ್ತವೆ. ಆದರೆ ದುರ್ದೈವ ನನ್ನ ಅನೇಕ ಮಿತ್ರರು ಈ ಲೋಕೋಪಯೋಗಿ ಖಾತೆಯೆಂದರೆ ಭ್ರಷ್ಟಾಚಾರದ ಒಂದು ಹೆಡ್ ಆಫೀಸ್ ಎಂದು ಹೇಳಿದರು.

ಅದನ್ನು ನಾನು ಪುಷ್ಟೀಕರಿಸಿ ಸಲಹೆಗಳನ್ನು ಕೊಡುತ್ತಿದ್ದೇನೆ. ಈ ಕಂಟ್ರಾಕ್ಟರ್ ಏನು ಮಾಡುತ್ತಾನೆ ಎಂದರೆ ಟೆಂಡರ್ ಹಾಕುತ್ತಾನೆ, ಟೆಂಡರನ್ನು ಹಾಕಿದ ಮೇಲೆ ಅರ್ಧಂಬರ್ಧ ಕೆಲಸ ಮಾಡಿ ಅದು ನಿಂತುಹೋಗುತ್ತದೆ. ಈ ಕಂಟ್ರಾಕ್ಟರ್ ಮತ್ತು ಸರ್ಕಾರದ ನಡುವೆ ಒಂದು ಅಗ್ರಿಮೆಂಟ್ ಆಗಿರುತ್ತದೆ. ಈ ಅಗ್ರಿಮೆಂಟ್ ಪ್ರಕಾರ ಅವರು ನಡೆಯದೆ, ನಮಗೆ ಹಣ ಕಡಿಮೆ ಇದೆ, ನಾವು ಸ್ವಲ್ಪ

ಹಣಕ್ಕೆ ಟೆಂಡರ್ ಹಾಕಿದ್ದೇವೆ, ನಮಗೆ ಹೆಚ್ಚಿನ ಹಣ ಕೊಟ್ಟರೆ, ರಿವೈಸ್ಡ್ ಎಸ್ಟಿಮೇಟ್ ಮಾಡಿದರೆ ನಾವು ಕೆಲಸವನ್ನು ಮಾಡುತ್ತೇವೆ. ಇಲ್ಲದಿದ್ದರೆ ಮಾಡುವುದಿಲ್ಲ ಎನ್ನುವುದು, ಸರ್ವೇಸಾಮಾನ್ಯವಾಗಿ ನನಗೆ ಗೊತ್ತಿದ್ದಂತೆ ಉತ್ತರ ಕರ್ನಾಟಕದಲ್ಲಿ ನಡೆಯುತ್ತಿದೆ. ಕಂಟ್ರಾಕ್ಟರ್ ಇಲ್ಲದಿದ್ದರೆ ನಮ್ಮ ಪ್ರಗತಿಯಾಗುವುದಿಲ್ಲ ಎನ್ನುವುದು ನಿಜ. ಆದರೆ ಕಂಟ್ರಾಕ್ಟರ್‌ರಿಗೆ ಹೆಚ್ಚಿನ ಅನುಕೂಲಗಳನ್ನು ಮಾಡಿಕೊಡುವುದು ಅಷ್ಟೊಂದು ಸರಿಯಲ್ಲ. ಇದನ್ನು ತಪ್ಪಿಸಬೇಕು. ಯಾರು ಈ ಕಂಟ್ರಾಕ್ಟರ್ ತಮ್ಮ ಕಂಡೀಷನ್ಸ್ ಪ್ರಕಾರ ಕೆಲಸ ಮಾಡುವುದಿಲ್ಲ, ಅವರ ವಿರುದ್ಧ ಯೋಗ್ಯ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಒಬ್ಬ ಕಂಟ್ರಾಕ್ಟರ್ ಒಂದು ಕಾರ್ಯವನ್ನು ತೆಗೆದುಕೊಳ್ಳುತ್ತಾನೆ. ಆರು ತಿಂಗಳಲ್ಲಿ ಅದನ್ನು ಮುಗಿಸಬೇಕು ಎಂದು ಹೇಳಿ ಅವನ ಮೇಲೆ ನಿರ್ಬಂಧವನ್ನು ಹಾಕಿರುತ್ತಾರೆ. ಆದರೆ ಆರು ತಿಂಗಳು ಹೋಗಿ ಎರಡು-ಮೂರು ವರ್ಷಗಳಾದರೂ ಕೂಡಾ ಆ ಕೆಲಸ ಆಗುವುದಿಲ್ಲ. ಇಂಥ ಕೆಲಸಗಳು ಉತ್ತರ ಕರ್ನಾಟಕದಲ್ಲಿ ಮತ್ತು ನಮ್ಮ ಜಿಲ್ಲೆಯಲ್ಲಿಯೂ ಕೂಡಾ ಸಾಕಷ್ಟು ಇದೆ. ನಾನು ಅಧಿಕಾರಿಗಳನ್ನು ಏತಕ್ಕೆ ಕೆಲಸ ನಿಂತುಹೋಗಿದೆ ಎಂದು ಕೇಳಿದಾಗ ಅವರ ನೇರವಾದ ಉತ್ತರ ಏನೆಂದರೆ, ಕಂಟ್ರಾಕ್ಟರ್ ಮಾಯವಾಗಿದ್ದಾನೆ. ಎಸ್ಟಿಮೇಟ್ ಮಾಡಿದಂತೆ ಟೆಂಡರ್ ಪ್ರಕಾರ ಕೊಟ್ಟಿದ್ದ ಹಣ ಸಾಲದು, ಆದಕ್ಕಾಗಿ ಅವನು ಬಿಟ್ಟುಹೋಗಿದ್ದಾನೆ ಎಂದು ಹೇಳುತ್ತಾರೆ. ಹಾಗಾದರೆ ಅವರ ಮೇಲೆ ತಕ್ಷಣ ಏಕೆ ಕ್ರಮ ಕೈಗೊಳ್ಳುವುದಿಲ್ಲ ಎಂದು ಪ್ರಶ್ನೆ ಕೇಳಿದೆ. ಅದಕ್ಕೆ ಅವರು, ನಾವು ಕ್ರಮ ತೆಗೆದುಕೊಳ್ಳುವುದಿಲ್ಲ ಅವರಿಗೆ ನೋಟೀಸನ್ನು ಕೊಟ್ಟಿದ್ದೇವೆ, ಅದು ಮಾಡಿದ್ದೇವೆ, ಇದು ಮಾಡಿದ್ದೇವೆ ಎಂದು ಹೇಳಿದರು. ತಿಂಗಳಾನುಗಟ್ಟಲೆ, ವರ್ಷಾನುಗಟ್ಟಲೇ ಇಂಥ ಕೆಲಸಗಳನ್ನು ಅವರು ಮಾಡುತ್ತಾರೆ. ಅದನ್ನು ತಡೆಹಿಡಿಯಲಿಕ್ಕೆ ಕಾಯ್ದೆ ಅಡ್ಡಿ ಬರುವುದಾದರೆ, ಕಾಯ್ದೆಯನ್ನು ತಿದ್ದುಪಡಿ ಮಾಡಬೇಕಾದರೆ ತಿದ್ದುಪಡಿ ಮಾಡಿ, ಇಲ್ಲದಿದ್ದರೆ ಅವರ ಲೈಸೆನ್ಸ್‌ನ್ನು ಕ್ಯಾನ್ಸಲ್ ಮಾಡಿ. ಆ ರೀತಿ ಅಗ್ರಿಮೆಂಟ್‌ನಲ್ಲಿ ಇರುತ್ತದೆ. ನಿರ್ದಿಷ್ಟ ಅವಧಿಯಲ್ಲಿ ಸಂಬಂಧಪಟ್ಟ ಕೆಲಸಗಳನ್ನು ಮಾಡದಿದ್ದರೆ ಈ ಕಂಟ್ರಾಕ್ಟ್ ಕ್ಯಾನ್ಸಲ್ ಆಗುತ್ತದೆ ಎಂದು ಕೂಡಾ ಅಗ್ರಿಮೆಂಟ್‌ನಲ್ಲಿ ಇರುತ್ತದೆ. ಇದನ್ನು ಅಮಲಿನಲ್ಲಿ ತರುವಂಥ ಅಧಿಕಾರಿಗಳು ನಮಗೆ ಬೇಕು. ಆ ಕೆಲಸವನ್ನು ಸಾಕಷ್ಟು ಜನ ಮಾಡುತ್ತಿಲ್ಲ. ಮತ್ತೆ ಅವರಿಗೆ ಗೈಡ್ ಮಾಡಿ ಡಬಲ್, ಟ್ರಿಬಲ್ ಹಣವನ್ನು ಕೊಡುವಂತಹ ವ್ಯವಸ್ಥೆಯನ್ನು ಕೂಡ ಅಧಿಕಾರಿಗಳು ಮತ್ತು ಕಂಟ್ರಾಕ್ಟರ್ ಒಂದಾಗಿ ಮಾಡುತ್ತಾರೆ. ಆದರೆ ನಾನು ಎಲ್ಲಾ ಅಧಿಕಾರಿಗಳ ಬಗ್ಗೆ ಹೇಳುತ್ತಿಲ್ಲ. ಆದರೆ ನನ್ನ ನಜರಿಗೆ ಬಂದ ಕಂಟ್ರಾಕ್ಟರ್ ಈ ರೀತಿ ಮಾಡುತ್ತಿದ್ದಾರೆ ಎನ್ನುವ ಮಾತನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಆಮೇಲೆ ಕಂಟ್ರಾಕ್ಟರ್‌ರಿಗೆ ಸಿಮೆಂಟನ್ನು ಕೊಡುತ್ತಾರೆ. ಕಬ್ಬಿಣವನ್ನು ಕೊಡುತ್ತಾರೆ, ಇನ್ನೂ ಅನೇಕ ಸಕಲ ಸಲಕರಣೆಗಳನ್ನು ಕೊಡುತ್ತಾರೆ. ಆದರೆ ಅದನ್ನು ಸಾಕಷ್ಟು ಉಪಯೋಗ ಮಾಡದೇ ಉಳಿಸಿಕೊಂಡು ಮಾರುಕಟ್ಟೆಯಲ್ಲಿ ಮಾರುವಂಥ ಅನೇಕ ಇನ್ಸಿಡೆಂಟ್‌ಗಳನ್ನು ನಾನು ನೋಡಿದ್ದೇನೆ. ಮಾನ್ಯ ಪುಟ್ಟಸ್ವಾಮಿಗೌಡರು ತಮ್ಮ ಅಧಿಕಾರಿಗಳ ಮೂಲಕ ಇದನ್ನು ತಡೆಹಿಡಿಯಬೇಕು ಎಂದು ನಾನು ಅವರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ನಾವು ಬಿಲ್ಡಿಂಗ್ ಅಥವಾ ರಸ್ತೆಗಳನ್ನು ನೋಡಿದರೆ ಸಾಕಷ್ಟು ಪ್ರಮಾಣದಲ್ಲಿ ಸ್ಟ್ಯಾಂಡರ್ಡ್ ಆದ ಕೆಲಸ ಆಗುತ್ತಿಲ್ಲ. ಇದರ ಬಗ್ಗೆ ನಾವು ಎಚ್ಚರಿಕೆ ವಹಿಸಬೇಕು. ನಾವು ಕರಾರಿನಲ್ಲಿ ಕಂಡೀಷನ್ಸ್ ಹಾಕಿರುತ್ತೇವೆ. ಇಷ್ಟು ಪರ್ಸೆಂಟೇಜ್ ಸಿಮೆಂಟ್‌ನ್ನು ಹಾಕಬೇಕು. ಇಷ್ಟು ಪರ್ಸೆಂಟೇಜ್ ಉಸುಕನ್ನು ಹಾಕಬೇಕು, ಇಷ್ಟು ಕಬ್ಬಿಣವನ್ನು ಉಪಯೋಗ ಮಾಡಬೇಕು ಎಂದು ಟರ್ಮ್ಸ್ ಅಂಡ್ ಕಂಡೀಷನ್ಸ್‌ನ್ನು ಹಾಕಿರುತ್ತೇವೆ, ಅವನ್ನು ವಿಜಿಲೆಂಟ್ ಆಗಿ ನೋಡಿ ಆ ಕೆಲಸಗಳು ಪೂರ್ತಿಯಾಗುವಂತೆ ಮಾಡುವಂಥ ಜವಾಬ್ದಾರಿ ಕೆಲಸವನ್ನು ಅಧಿಕಾರಿಗಳು ಮಾಡಬೇಕು. ಹೀಗೆ ಮಾಡುವಲ್ಲಿ ಅವರು ಯಾವುದೇ ರೀತಿಯಲ್ಲಿ ಹಿಂದುಮುಂದೆ ನೋಡಬಾರದು. ಯಾವ ಅಧಿಕಾರಿ ಈ ವಿಷಯದಲ್ಲಿ ಹಿಂದುಮುಂದು ನೋಡುತ್ತಾನೋ ಅವನ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ನ್ಯಾಷನಲ್ ಹೈವೇ ಬಗ್ಗೆ ಒಂದೆರಡು ಸಲಹೆಗಳನ್ನು ಕೊಡಬೇಕೆಂದು ಇಚ್ಛೆಪಡುತ್ತೇನೆ. ನಮ್ಮ ರಾಜ್ಯದಲ್ಲಿ ನ್ಯಾಷನಲ್ ಹೈವೇ ನೂರಾರು ಕಿಲೋಮೀಟರ್‌ಗಳು ಇದೆ. ಬೆಳಗಾವಿಯಿಂದ ಹಿಡಿದು ಮದ್ರಾಸ್ ಬಾರ್ಡರ್‌ವರೆಗೂ ನಮ್ಮ ನ್ಯಾಷನಲ್ ಹೈವೆ ಇದೆ. ಇದಕ್ಕಾಗಿ ಖರ್ಚು ಮಾಡುವಂಥ ಹಣ ನಮ್ಮ ಸರ್ಕಾರದ್ದಲ್ಲ. ಕೇಂದ್ರ ಸರ್ಕಾರದ ದುಡ್ಡನ್ನು ತೆಗೆದುಕೊಂಡು ಇದಕ್ಕೆ ಖರ್ಚು ಮಾಡಲಾಗುತ್ತಿದೆ. ಆದ್ದರಿಂದ ಇದಕ್ಕೆ ಯಾವುದೇ ಕಾರಣದಿಂದ ಹಣದ ಕೊರತೆ ಇಲ್ಲ. ಸಾಕಷ್ಟು ಹಣವನ್ನು ಕೇಂದ್ರ ಸರ್ಕಾರದವರು ನಮಗೆ ಕೊಡುತ್ತಾರೆ. ಅದನ್ನು ಉಪಯೋಗ ಮಾಡಿಕೊಂಡು ಈ ನ್ಯಾಷನಲ್ ಹೈವೇ ಕೆಲಸ ಏನು ಇದೆ ಅದನ್ನು war footing basis ನಲ್ಲಿ ಪೂರ್ತಿಯಾಗಿ ಮಾಡಬೇಕು. ಇವತ್ತು ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಬೈಪಾಸ್ ರಸ್ತೆ ಮಾಡಬೇಕು ಎಂದು ೧೦೦ ಕೋಟಿ ರೂಪಾಯಿ ಬಂದಿದೆ. ಆದರೆ ಇವೊತ್ತು ಸಾಕಷ್ಟು ಪ್ರಮಾಣದಲ್ಲಿ ಎಷ್ಟು ಕೆಲಸ ಆಗಬೇಕಾಗಿತ್ತು,

ಅಷ್ಟು ಆಗಲಿಲ್ಲ. ಇದಕ್ಕೆ ಕಾರಣವನ್ನು ನೀವು ಹುಡುಕಿ ತೆಗೆಯಬೇಕು. ನಾವು ಸ್ಥಳಕ್ಕೆ ಭೇಟಿ ಕೊಟ್ಟಾಗ ಅಲ್ಲಿನ ಅಧಿಕಾರಿಗಳು ಡಿಸೆಂಬರ್ ಒಳಗೆ ಈ ಕೆಲಸವನ್ನು ಮುಗಿಸುತ್ತೇವೆ ಎಂದು ಹೇಳಿದರು. ಆದರೆ ಲಕ್ಷಣ ನೋಡಿದರೆ ಅದು ಆಗುವುದಿಲ್ಲ ಎಂದು ಎನಿಸುತ್ತದೆ. ಆದುದರಿಂದ ಆ ಕಡೆ ತೀವ್ರಗತಿ ಯಿಂದ ಲಕ್ಷ್ಯ ಕೊಟ್ಟು ಬೈಪಾಸ್ ರೋಡ್ ಮಾಡಬೇಕು, ವೈದೆನ್ ರೋಡ್ ಮಾಡಬೇಕು. ನ್ಯಾಷನಲ್ ಹೈವೇಗೆ ಇನ್ನೂ ಏನೇನು ಬೇಕೋ ಅದನ್ನು ಮಾಡಲಿಕ್ಕೆ ನೀವು ತಕ್ಷಣ ಅಣಿಯಾಗಬೇಕು. ಈಗ ನೀವು ಟೆಂಡರ್ ಕರೆಯುತ್ತೀರಿ, ಪಿಹೆಚ್‌ಇ ಒಳಗೆ ಬೋರ್‌ವೆಲ್ ತೆಗೆಯಲಿಕ್ಕೆ ಮೆಷಿನರಿಗಳು ಸಾಕಷ್ಟು ಇದೆ. ಬುಲ್ಡೋಜರ್ ಮತ್ತಿತರ ಮೆಷಿನರಿಗಳಿವೆ. ಆದರೆ ಒಂದೂ ಸುಸ್ಥಿತಿಯಲ್ಲಿ ಇಲ್ಲ. ನಾನು ಈ ಮಾತನ್ನು ಬಹಳ ಖೇದದಿಂದ ಹೇಳಬೇಕಾಗುತ್ತದೆ. ನೀವು ಡಿಪಾರ್ಟ್‌ಮೆಂಟ್‌ನವರು ಬೇರೆಯವರಿಂದ ಮಿಷನರಿಗಳನ್ನು ಬಾಡಿಗೆಗೆ ತೆಗೆದುಕೊಂಡಿರುವಂತಹ ಅನೇಕ ಉದಾಹರಣೆಗಳನ್ನು ನಾನು ಕೊಡಬಲ್ಲೆ. ಇಲಾಖೆಯಲ್ಲಿ ಬುಲ್‌ಡೋಜರ್‌ಗಳು ಏನಿವೆ, ಗಾಡಿಗಳು ಏನಿವೆ ಅವು ಸುಸ್ಥಿತಿ ಯಲ್ಲಿ ಇಲ್ಲ. ಅವು ಸುಸ್ಥಿತಿಯಲ್ಲಿರುವಂತೆ ಮಾಡುವುದು ನಿಮ್ಮ ಕರ್ತವ್ಯ. ಅದನ್ನು ಮಾಡದೇ ಹೋದರೆ ಸರ್ಕಾರಕ್ಕೆ ಹಾನಿಯಾಗುತ್ತದೆ. ಸರ್ಕಾರಕ್ಕೆ ಹಾನಿಯಾದರೆ ನೇರವಾಗಿ ಪ್ರಗತಿ ಆಗಬೇಕಾದ ಕೆಲಸ ಕಾರ್ಯಗಳು ಆಗುವುದಿಲ್ಲ. ಯಾವುದೇ ಕೆಲಸ ಮಾಡಬೇಕಾದರೆ, ಯುದ್ಧ ಮಾಡಬೇಕಾದರೆ ಯುದ್ಧದ ಸಲಕರಣೆಗಳನ್ನು ನಾವು ತೆಗೆದುಕೊಂಡು ಹೋಗಬೇಕಾಗುತ್ತದೆ. ಬರೇ ಸ್ಯಾಂಕ್ಷನ್ ಮಾಡಿ ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳಿ ಸಮಾಧಾನ ಪಡುವುದು ಸರಿಯಲ್ಲ, ಸಮಾಧಾನ ಆಗುವುದು ಸರಿಯಲ್ಲ. ನೀವು ಅಧಿಕಾರಿಗಳ ಮೇಲ್ವಿಚಾರಣೆಗಾಗಿ ಒಂದು ಸ್ಪೆಷಲ್ ಸ್ಕ್ವಾಡ್ ಮಾಡಿ. ಅಧಿಕಾರಿಗಳ ಒಂದು ಸ್ಕ್ವಾಡ್ ಮಾಡಿ. ಅವರು ಯಾವ್ಯಾವ ಟೆಂಡರ್ ಎಷ್ಟು ಕೊಟ್ಟಿದ್ದಾರೆ, ಎಷ್ಟು ಕೆಲಸ ಮಾಡಿದ್ದಾರೆ, ಏಕೆ ತಡೆ ಆಗಿದೆ, ಯಾವುದು ಅಡ್ಡಿ ಆಗಿದೆ ಎಂದು ವಿಜಿಲೆಂಟ್ ಆಗಿ ಇಡೀ ರಾಜ್ಯದೊಳಗೆ ಓಡಾಡಬೇಕು. ಆ ಕೆಲಸವನ್ನು ಮಾಡಬೇಕು.

ಛೇರ್ಮನ್.—ಬೇಗ ಮುಗಿಸಿ......

ಶ್ರೀ ಗೋಪಿನಾಥ ಆರ್. ಸಾಂದ್ರ,—ಅಧ್ಯಕ್ಷರೆ, ಉತ್ತರ ಕರ್ನಾಟಕದಿಂದ ನಾನೊಬ್ಬನೇ ಮಾತನಾಡುವವನಿದ್ದೇನೆ. ನನಗೆ ಇನ್ನು ಐದು ನಿಮಿಷ ಅವಕಾಶ ಕೊಡಿ. ಮುಗಿಸುತ್ತೇನೆ. ರಸ್ತೆಗಳು ಮತ್ತು ಕಟ್ಟಡದ ವಿಚಾರ ಆದ ಮೇಲೆ ಟ್ಯಾಂಕ್‌ಗಳ ವಿಚಾರಕ್ಕೆ ಬರುತ್ತೇನೆ. ಇವೊತ್ತು ನಮ್ಮ ರಾಜ್ಯದಲ್ಲಿ ೨೫೦೦೦ ಟ್ಯಾಂಕ್‌ಗಳಿವೆ. ಟ್ಯಾಂಕ್‌ಗಳನ್ನು ಡೀಸೆಲ್ಟಿಂಗ್ ಮಾಡುವಂತಹ ಕೆಲಸವನ್ನು ಕೈಗೊಂಡಿದ್ದೀರಿ. ಆದರೆ ನನ್ನ ಅನಿಸಿಕೆ ಏನು ಅಂದರೆ, ಉತ್ತರ ಕರ್ನಾಟಕದಲ್ಲಿ ಹೆಚ್ಚು ಕೆರೆಗಳು ಇಲ್ಲ. ಹೆಚ್ಚು ಕೆರೆಗಳು ಇಲ್ಲದ್ದರಿಂದ ಆ ಕಡೆ ಲಕ್ಷ್ಯ ಕೊಡಲಿಕ್ಕೆ ನಿಮಗೆ ಆಗಿಲ್ಲ. ಆದ್ದರಿಂದ ನೀವು ಅದಕ್ಕೆ ಸಾಕಷ್ಟು ಹಣ ಪೂರೈಸಿಕೊಡಬೇಕೆಂದು ನಾನು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ. ಉತ್ತರ ಕರ್ನಾಟಕದಲ್ಲಿರುವ ಕೆರೆಗಳನ್ನು ಡಿ-ಸೆಲ್ಟಿಂಗ್ ಮಾಡಬೇಕು ಅಥವಾ ಎಲ್ಲೆಲ್ಲಿ ವಾಟರ್ ಸೋರ್ಸಸ್ ಇದೆ ಅಲ್ಲಿ ಹೊಸ ಕೆರೆಕಟ್ಟೆಗಳನ್ನು ಕಟ್ಟಬೇಕು, ಅದಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀವು ಕೊಡಬೇಕೆಂದು ನಾನು ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತದನಂತರ ಲಿಫ್ಟ್ ಇರಿಗೇಷನ್ ವಿಚಾರಕ್ಕೆ ಬರುತ್ತೇನೆ. ಕರ್ನಾಟಕ ರಾಜ್ಯ ಸರ್ಕಾರ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಮಾಡಿದೆ. ಇದರ ಕೆಲಸ, ಇನ್‌ವೆಸ್ಟಿಗೇಷನ್ ಮಾಡುವುದು, ಪ್ಲಾನ್ ಅಂಡ್ ಎಸ್ಟಿಮೇಟ್ ತಯಾರು ಮಾಡುವುದು ಮತ್ತೂ ಅದನ್ನು ಇಂಪ್ಲಿಮೆಂಟ್ ಮಾಡುವುದು. ನನ್ನ ಹಲವಾರು ಮಿತ್ರ ಸದಸ್ಯರು ಈ ಕಾರ್ಪೊರೇಷನ್ ಅನ್ನು ತೆಗೆಯಬೇಕು ಎಂದು ಹೇಳಿದ್ದನ್ನು ನಾನು ಕೇಳಿದ್ದೇನೆ. ನನ್ನ ವಿಚಾರ ಅಂದರೆ, ಈ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಅನ್ನು ತೆಗೆಯತಕ್ಕದ್ದಲ್ಲ. ನಮ್ಮ ಸರ್ಕಾರದ, ಶ್ರೀ ವೀರೇಂದ್ರ ಪಾಟೀಲರ ಸರ್ಕಾರದ ಧೋರಣೆ ಅದಲ್ಲ, ಶ್ರೀ ಪುಟ್ಟಸ್ವಾಮಿ ಗೌಡರ ಧೋರಣೆ ಅದಲ್ಲ. ಆರ್ಥಿಕ ಮಂತ್ರಿ ಶ್ರೀ ರಾಜಶೇಖರ ಮೂರ್ತಿಯವರನ್ನು ನಾನು ಅನೇಕ ಸಲ ಕಂಡಿದ್ದೇನೆ. ಅವರು ರಾಜ್ಯದಲ್ಲಿ ಏನೇ ಆದರೂ ಕೂಡ, ಎಷ್ಟೇ ಹಣ ಬೇಕಾದರೂ ಕೂಡ ಲಿಫ್ಟ್ ಇರಿಗೇಷನ್ ಮಾಡೇ ತೀರುತ್ತೇನೆ, ಅದನ್ನು ಮಾಡಲಿಕ್ಕೆ ಈಗ ಮೊದಲನೆ ಕ್ರಮ ತೆಗೆದು ಕೊಳ್ಳುತ್ತೇನೆ ಎಂದು ಹೇಳಿದ್ದಾರೆ. ಹೀಗೆ ಹೇಳಿದಾಗ ಅದನ್ನು ಮುಚ್ಚುವ ಪ್ರಶ್ನೆ ಇಲ್ಲ. ಅದಕ್ಕೆ ಇನ್ನೂ ಹೆಚ್ಚಿನ ಹಣ ಕೊಡಬೇಕು, ಅದರಿಂದ ಹೆಚ್ಚಿಗೆ ಕೆಲಸ ಮಾಡಿಸಬೇಕು. ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಲಿಫ್ಟ್ ಇರಿಗೇಷನ್ ಅನ್ನು ಮಾಡುವುದಕ್ಕೆ ಆದಷ್ಟು ಬೇಗ ನೀವು ಕಾರ್ಯವನ್ನು ಕೈಗೊಳ್ಳ ಬೇಕು. ನೀವು ಹಣದ ಬಗ್ಗೆ ಚಿಂತೆ ಮಾಡಬೇಡಿ. ನಮ್ಮ ಆರ್ಥಿಕ ಮಂತ್ರಿಗಳಾದ ಶ್ರೀ ರಾಜಶೇಖರ ಮೂರ್ತಿಯವರು ಸಾಕಷ್ಟು ಹಣ ಕೊಡುತ್ತೇನೆ ಎಂದು ಅನೇಕ ಶಾಸಕರ ಮುಂದೆ ಹೇಳಿದ್ದಾರೆ. ಹೇಳಿದ್ದು ಅಷ್ಟೇ ಅಲ್ಲ, ಅವರು ನಮಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಆದ್ದರಿಂದ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ನನ್ನು ಮುಚ್ಚುವ ಗೊಡವೆಗೆ ಹೋಗಬೇಡಿ, ಅದನ್ನು ಸ್ಟ್ರೆಂಥನ್ ಮಾಡಿ

ಎಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಲಿಫ್ಟ್ ಇರಿಗೇಷನ್‌ನಲ್ಲಿ ಇಲ್ಲಿ ಏನಾಗಿದೆ ಅಂದರೆ, ಇನ್‌ವೆಸ್ಟಿಗೇಷನ್ ಆಯಿತು, ಪ್ಲಾನ್ ಆಯಿತು, ಎಸ್ಟಿಮೇಟ್ ಆಯಿತು. ಅದು ಕಾರ್ಯ ರೂಪದಲ್ಲಿ ಬರಬೇಕು.

೧-೨೦ ಪಿ. ಎಂ.

ಉತ್ತರ ಕರ್ನಾಟಕದಲ್ಲಿ ಮಲಪ್ರಭ, ಘಟಪ್ರಭ, ದೂದ್‌ಗಂಗ ಹೀಗೆ ೩-೪ ದೊಡ್ಡ ಸ್ಕೀಮು ಗಳಿವೆ. ಕೃಷ್ಣ ಬೇಸಿನ್‌ನಲ್ಲಿ ಬರತಕ್ಕಂಥ ನಮ್ಮ ಧಾರವಾಡ ಜಿಲ್ಲೆ, ಬೆಳಗಾಂ ಜಿಲ್ಲೆ, ಕಾರವಾರ ಜಿಲ್ಲೆ ಮತ್ತು ಬಿಜಾಪುರ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ. ಈ ಮೂರು-ನಾಲ್ಕು ಸ್ಕೀಂಗಳಿವೆ ಈಗ ಅಲ್ಲಿ ಏನು ಕೆಲಸ ನಡೆದಿವೆ ಅದು ಬಹಳ ಮಂದಗತಿಯಿಂದ ನಡೆದಿದೆ. ಅಲ್ಲಿ ಹೆಚ್ಚು ತ್ವರಿತಗತಿಯಿಂದ ಆ ಕೆಲಸಗಳನ್ನು ಪ್ರಾರಂಭಿಸಬೇಕು, ಪ್ರಾರಂಭಿಸಿದರೆ ಮಾತ್ರ ಜನರಿಗೆ ಏನು ಆಶ್ವಾಸನೆಯನ್ನು ಕೊಟ್ಟಿದ್ದೇವೆ ಅದನ್ನು ಪೂರೈಸಿದಂತಾಗುತ್ತದೆ. ಈ ಲಿಫ್ಟ್ ಇರಿಗೇಷನ್ ವಿಚಾರದಲ್ಲಿ ಒಂದು ಮಾತನ್ನು ನಾನು ಹೇಳಬಯಸುತ್ತೇನೆ. ಹುಬ್ಬಳ್ಳಿ-ಧಾರವಾಡದಲ್ಲಾಗಲಿ, ಬಿಜಾಪುರದಲ್ಲಾಗಲಿ, ಬೆಳಗಾಂ ಜಿಲ್ಲೆಯಲ್ಲಾಗಲಿ ಅಲ್ಲಿ ನೀರಿನ ಕೊರತೆ ಬಹಳ ಇದೆ. ಈ ಕೃಷ್ಣ ಬೇಸಿನ್‌ನಲ್ಲಿ ೩-೪ ಯೋಜನೆ ಗಳಿವೆ, ಅವುಗಳಿಂದ ಕಾಲುವೆಗಳು ಬರುತ್ತವೆ. ಆ ಕಾಲುವೆಗಳಿಂದ ನೀರನ್ನು ಎತ್ತುವಂಥ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ನಾವು ಮಾಡಬೇಕು. ಎಂತಹ ಪ್ರದೇಶಗಳಲ್ಲಿ ಮಾಡಬೇಕು ಅಂದರೆ, ಆ ಪ್ರದೇಶ ಬರಗಾಲ ಪ್ರದೇಶವಾಗಿರಬೇಕು. ಕುಡಿಯುವ ನೀರಿನ ಲಭ್ಯತೆ ಎಳ್ಳಷ್ಟೂ ಇರಬಾರದು, ಅಂತಹ ಒಂದೆರಡು ಕಡೆ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಮಾಡಬೇಕು. ವಿಶೇಷವಾಗಿ ಹುಬ್ಬಳ್ಳಿ ತಾಲ್ಲೂಕಿನ ಗ್ರಾಮಾಂತರ ಕ್ಷೇತ್ರದಲ್ಲಿ ಅಂದರೆ ತಾರಿಹಾಳ, ಬೆಹಟ್ಟಿ ಮತ್ತು ಸೂಳ್ಳ ಗ್ರಾಮಗಳಲ್ಲಿ ಇದನ್ನು ಮಾಡಬೇಕು ಏಕೆಂದರೆ ಈ ಗ್ರಾಮಗಳ ಪಕ್ಕದಲ್ಲಿ ಕಾಲುವೆ ಹೋಗುತ್ತದೆ. ನಾನು ಇನ್ನೊಂದು ಮಾತನ್ನು ಕೇಳಿದ್ದೇನೆ. ಈ ಕಾಲುವೆಗಳಿಂದ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಬರುವುದಿಲ್ಲ ಎನ್ನುವ ಮಾತನ್ನು ಕೆಲವು ಅಧಿಕಾರಿಗಳು ಹೇಳಿದರು. ಇದು ಸ್ಪೆಷಲ್ ಕೇಸ್ ಎಂದು ತಿಳಿದುಕೊಂಡು, ಸಾವಿರಾರು ಎಕರೆಗೆ ನೀರು ಉಣಿಸುವಂಥ ಒಂದು ಉತ್ತಮವಾದಂಥ ಕಾರ್ಯಕ್ರಮ ವನ್ನು ತೆಗೆದುಕೊಂಡರೆ, ನೀವು ನಿಜವಾಗಿ ಬಡವರ ಹಿತಚಿಂತಕರು, ರೈತರ ಹಿತಚಿಂತಕರು ಎಂದು ಅನಿಸುತ್ತದೆ ಮಾನ್ಯ ಪುಟ್ಟಸ್ವಾಮಿಗೌಡರು ಇದನ್ನು ಕಾರ್ಯಗತ ಮಾಡುತ್ತಾರೆ, ಆದರಲ್ಲಿ ಏನಾದರೂ ಅಡೆತಡೆಗಳು ಬಂದರೆ ಅವನ್ನು ತೆಗೆದುಹಾಕಿ ಈ ಕಡೆ ವಿಶೇಷವಾದ ಗಮನವನ್ನು ಹರಿಸಿ, ನಮ್ಮ ಬೇಡಿಕೆ ಏನಿದೆ ಅದನ್ನು ಪೂರ್ತಿ ಮಾಡುತ್ತಾರೆಂದು ನನಗೆ ವಿಶ್ವಾಸವಿದೆ.

ಇನ್ನು ನೀರಾವರಿ ಯೋಜನೆಗಳು, ಮಲಪ್ರಭ, ಘಟಪ್ರಭ, ದೂದ್‌ಗಂಗ ಮೊದಲಾದ ಯೋಜನೆ ಗಳಲ್ಲಿ ವರ್ಲ್ಡ್ ಬ್ಯಾಂಕ್‌ನಿಂದ ಕೆಲವು ಆಗುತ್ತವೆ ಸರ್ಕಾರದಿಂದ ಕೆಲವು ಆಗುತ್ತವೆ. ಆದರೆ ನಾನು ಆಗಲೇ ಹೇಳಿದ ಹಾಗೆ ಅವು ಮಂದಗತಿಯಿಂದ ನಡೆಯುತ್ತಿವೆ. ಅವುಗಳ ಬಗ್ಗೆ ಹೆಚ್ಚಿನ ಗಮನ ಕೊಡ ಬೇಕು, ಅವುಗಳನ್ನು ಆದಷ್ಟು ಬೇಗನೆ ಪೂರ್ತಿ ಮಾಡಲಿಕ್ಕೆ ನಾನು ನಿಮ್ಮ ಗಮನವನ್ನು ಸೆಳೆಯುತ್ತೇನೆ. ಕೆಲವೊಂದು ಕಾರ್ಯಕ್ರಮಗಳಿಗೆ ವರ್ಲ್ಡ್ ಬ್ಯಾಂಕ್‌ನವರು ಸಾಲವನ್ನು ಕೊಡುತ್ತಾರೆ, ಅದನ್ನು ಸದುಪಯೋಗ ಮಾಡಿಕೊಳ್ಳಬೇಕು. ವರ್ಲ್ಡ್ ಬ್ಯಾಂಕ್‌ನವರು ಯಾವ ರೀತಿಯಿಂದ ಕೆಲಸ ಮಾಡಬೇಕು ಎನ್ನುವುದನ್ನು ಹೇಳಿದ್ದಾರೆ. ಆ ರೀತಿ ಅವರ ಮನಸ್ಸಿಗೆ ಒಪ್ಪುವಂತೆ ಕೆಲಸ ಮಾಡಬೇಕು. ಒಂದು ವೇಳೆ ಅಕಸ್ಮಾತ್ತಾಗಿ ಆ ಕೆಲಸ ಮಾಡದೇಹೋದರೆ ಆ ಯೋಜನೆ ಫೇಲ್ಯೂರ್ ಆಗುತ್ತದೆ. ನಮಗೆ ಬರುವಂಥ ಹಣ ಬರುವುದಿಲ್ಲ ಎನ್ನುವ ಮಾತನ್ನು ಇಲ್ಲಿ ಹೇಳುತ್ತೇನೆ. ವರ್ಲ್ಡ್ ಬ್ಯಾಂಕ್‌ನಿಂದಾ ಗಲಿ, ಇಂಟರ್‌ನ್ಯಾಷನಲ್ ಸಂಸ್ಥೆಗಳಿಂದಾಗಲಿ ಯಾವುದೋ ಒಂದು ರೀತಿಯಿಂದ ಹಣವನ್ನು ಪಡೆದು ಕೊಂಡು ಅಲೊಕೇಷನ್ ಮಾಡಿದಂಥ ಹಣವನ್ನು ಸರಿಯಾಗಿ ಉಪಯೋಗ ಮಾಡುವಂತೆ ನೀವು ನೋಡಿ ಕೊಳ್ಳಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಮಲಪ್ರಭ, ಘಟಪ್ರಭ, ದೂದ್‌ಗಂಗ, ಹಿಪ್ಪರಗಿ ಯೋಜನೆಗಳೇನಿವೆ ಅವುಗಳ ಎಸ್ಟಿಮೇಟೆಡ್ ಕಾಸ್ಟ್ ೧೯೭೪-೭೫ರಲ್ಲಿ ೯ ಸಾವಿರದ ೫೪ ಲಕ್ಷ ರೂಪಾಯಿಗಳು ಇತ್ತು. ಈಗ ೧೯೮೮-೮೯ರಲ್ಲಿ ಅದು ೩೭ ಸಾವಿರದ ೫೬ ಲಕ್ಷ ರೂಪಾಯಿ ಆಗಿದೆ. ಮಲಪ್ರಭ ಯೋಜನೆಗೆ ಕೂಡ ೧೯೭೪-೭೫ರಲ್ಲಿ ೧೬,೭೦೯ ಲಕ್ಷ ರೂಪಾಯಿಗಳ ಎಸ್ಟಿಮೇಟ್ ಇತ್ತು. ಮತ್ತೆ ೧೯೮೯ರಲ್ಲಿ ರಿವೈಸ್ಡ್ ಎಸ್ಟಿಮೇಟ್ ಮಾಡಿದ್ದಾರೆ, ಅದು ೩೪,೭೦೦ ಲಕ್ಷ ರೂಪಾಯಿ ಆಗಿದೆ. ದೂದ್‌ಗಂಗಾದ್ದು ಕೂಡ ಎಷ್ಟು ತ್ವರಿತಗತಿಯಲ್ಲಿ ಕೆಲಸ ಮಾಡಬೇಕಾಗಿತ್ತೋ ಅಷ್ಟು ತ್ವರಿತಗತಿಯಲ್ಲಿ ಕೆಲಸ ಮಾಡಿಲ್ಲ. ಮತ್ತೆ ಮಹಾರಾಷ್ಟ್ರದವರು ಮತ್ತು ಕರ್ನಾಟಕದವರು ಕೂಡಿ ಮಾಡಿದಂಥ ಒಂದು ಜಂಟಿ ಯೋಜನೆ ಇದೆ, ಆದಕ್ಕೆ ೪ ಕೋಟಿ ರೂಪಾಯಿ ಮಾತ್ರ ಕರ್ನಾಟಕ ಸರ್ಕಾರದವರು ಕೊಟ್ಟಿದ್ದಾರೆ. ೫ ಕೋಟಿ ರೂಪಾಯಿಗಳನ್ನು ಈ ವರ್ಷದ ಬಜೆಟ್‌ನಲ್ಲಿ ಪ್ರೊವೈಡ್

ಮಾಡಿದ್ದಾರೆ. ಇದು ಸಾಲದು. ಈ ಕೆಲಸವನ್ನು ಆದಷ್ಟು ಬೇಗನೆ ಪೂರ್ತಿ ಮಾಡಿರಿ ಎಂದು ಅತ್ಯಂತ ಕಳಕಳಿಯಿಂದ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ಮತ್ತೊಂದು ಎಚ್ಚರ ಕೊಡುತ್ತೇನೆ. ಒಂದು ವೇಳೆ ಆದಷ್ಟು ತಡವಾಗಿ ಈ ಕೆಲಸ ಮಾಡಿದರೆ ಮಹಾರಾಷ್ಟ್ರದವರಾಗಲಿ, ಕೇರಳದವರಾಗಲಿ ಅವರು ತಮ್ಮ ಭಾಗವನ್ನು ಹೆಚ್ಚಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತಾರೆ. ಅವರು ಕೆಲಸ ಮಾಡುತ್ತಾರೆ, ನಾವು ಕೆಲಸ ಮಾಡದೆ ಹಾಗೆ ಇರುತ್ತೇವೆ. ನೀರು ೯ ಟಿಎಂಸಿ ಇದೆ, ಸಾವಿರ ಟಿಎಂಸಿ ಇದೆ. ೭೮೦ ಟಿಎಂಸಿ ಇದೆ ಎಂದು ನಾವು ಬರೀ ಹೇಳಿಕೆಕೊಟ್ಟು ನಮ್ಮಷ್ಟಕ್ಕೆ ನಾವು ಸಮಾಧಾನ ಪಟ್ಟುಕೊಂಡರೆ ಅದು ಆಗುವುದಿಲ್ಲ. ನೀವು ನಿಶ್ಚಿತವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಈ ಯೋಜನೆಗಳನ್ನು ಪೂರ್ತಿ ಮಾಡುತ್ತೇವೆ, ಅದಕ್ಕೆ ಬೇಕಾದಂಥ ಹಣವನ್ನು ಎಲ್ಲಿಂದಲಾದರೂ ಏನಾದರೂ ಮಾಡಿ ತಂದು ಇದನ್ನು ಪೂರ್ತಿ ಮಾಡುತ್ತೇವೆ ಎಂದು ಹೇಳಬೇಕು. ನಾನು ಒಂದು ಉದಾಹರಣೆ ಕೊಡುತ್ತೇನೆ. ನಾವು ಈಗಾಗಲೇ ಮಾನ್ಯ ಪುಟ್ಟಸ್ವಾಮಿಗೌಡರನ್ನು ವಿನಂತಿ ಮಾಡಿಕೊಂಡಿದ್ದೇವೆ. ಮಹದಾಯಿ ನದಿ ಇದೆ. ಆ ನದಿಯು ೯ ಟಿಎಂಸಿ ನೀರು ಕರ್ನಾಟಕಕ್ಕೆ ಸಲ್ಲತಕ್ಕದ್ದು. ಬರತಕ್ಕದ್ದು ಇದೆ. ಅದರ ಬಗ್ಗೆ ಇಷ್ಟು ವರ್ಷಗಳಾದರೂ ಕೂಡ ನಮ್ಮವರು ಚಿಂತನೆ ಮಾಡಿಲ್ಲ. ಈಗ ಏನೋ ಚಿಂತನೆ ಮಾಡುತ್ತಿದ್ದಾರೆ. ಅದರಲ್ಲಿ ೫ ಟಿಎಂಸಿ ನೀರನ್ನು ನೀರಾವರಿಗೆ. ೪ ಟಿಎಂಸಿ ನೀರನ್ನು ಪವರ್ ಉತ್ಪತ್ತಿ ಮಾಡಲಿಕ್ಕೆ ಬಳಸಿಕೊಳ್ಳಬೇಕೆಂದು ನಿರ್ಣಯ ಮಾಡಿಕೊಂಡಿದ್ದಾರೆ. ಈ ೯ ಟಿಎಂಸಿ ನೀರನ್ನು ಅಂದರೆ ಮಹದಾಯಿ ನದಿಯ ನೀರನು ಡೈವರ್ಟ್ ಮಾಡಿ ಮಲಪ್ರಭಾಗೆ ಸೇರಿಸಿದರೆ, ಬೆಳಗಾವಿಯ ಅರ್ಧಭಾಗ, ಧಾರವಾಡ ಜಿಲ್ಲೆಯ ಅರ್ಧಭಾಗದ ರೈತರಿಗೆ ಅನುಕೂಲವಾಗುತ್ತದೆ. ಈ ಒಂದು ಕೆಲಸವನ್ನು ಮಾನ್ಯ ಮಂತ್ರಿಗಳು ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ. ಈ ಯೋಜನೆಯಿಂದ ಹುಬ್ಬಳ್ಳಿ ಮತ್ತು ಧಾರವಾಡ ಮಹಾನಗರದ ಜನತೆಯ ಕುಡಿಯುವ ನೀರಿಗೂ ಕೂಡ ಅನುಕೂಲವಾಗುತ್ತವೆ. ಇದು ಅತ್ಯಂತ ಮುಖ್ಯವಾದ ಯೋಜನೆಯಾಗಿರುವುದರಿಂದ ಇದನ್ನು ಕೈಗೆತ್ತಿಕೊಳ್ಳಬೇಕು. ಇದಕ್ಕೆ ಸಂಬಂಧಪಟ್ಟಂತೆ ೬೦ ಕೋಟಿ ರೂಪಾಯಿಗಳ ರಫ್ ಎಸ್ಟಿಮೇಟ್ ಮಾಡಿದ್ದಾರೆ. ೮ನೇ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಸೇರಿಸಬೇಕೆಂದು ಬೇಗನೆ ಕೆಲಸ ಮಾಡಿಕೊಡಬೇಕೆಂದೂ, ಇದಕ್ಕಾಗಿ ಉತ್ತರ ಕರ್ನಾಟಕದ ಅದರಲ್ಲಿಯೂ ಹುಬ್ಬಳ್ಳಿ ಮತ್ತು ಧಾರವಾಡದ ಜನ ತಮಗೆ ಚಿರಋಣಿಯಾಗಿರುತ್ತಾರೆಂದು ಹೇಳುತ್ತೇನೆ, ಇನ್ನು ಜಿಲ್ಲಾ ಪರಿಷತ್ ರಸ್ತೆಗಳ ಬಗ್ಗೆ ಅನೇಕ ಸದಸ್ಯರು ಮಾತನಾಡಿದ್ದಾರೆ. ಇವತ್ತು ಜಿಲ್ಲಾ ಪರಿಷತ್ತಿನಲ್ಲಿ ಕೆಲಸವಾಗುತ್ತಿಲ್ಲ. ಆದಷ್ಟು ಬೇಗನೆ ಅಮೆಂಡ್‌ಮೆಂಟಾದರೂ ಮಾಡಿ. ಜಿಲ್ಲಾ ಪರಿಷತ್ ರಸ್ತೆಗಳನ್ನು ವಾಪಸ್ಸು ತೆಗೆದುಕೊಂಡು ಕೆಲಸ ಮಾಡಿಸಬೇಕೆಂದು ಹೇಳುತ್ತೇನೆ. ಹುಬ್ಬಳ್ಳಿ ಮತ್ತು ಧಾರವಾಡ ನಗರದ ಮಧ್ಯದಲ್ಲಿ ನ್ಯಾಷನಲ್ ಹೈವೇ ಬರುತ್ತದೆ ಅದು ಸುಮಾರು ೧೮–೨೦ ಕಿಲೋಮೀಟರ್ ಇದೆ. ಈಗಾಗಲೇ ನ್ಯಾಷನಲ್ ಹೈವೇ ಕೆಲಸ ಪ್ರಾರಂಭವಾಗಿದೆ. ಚೆನ್ನಾಗಿ ನಡೆದಿದೆ. ಆದರೆ ನನ್ನ ಒಂದು ಸಲಹೆ ಏನೆಂದರೆ, ಈ ರಸ್ತೆಯನ್ನು ಡಬಲ್ ರೋಡಾಗಿ ಮಾಡಬೇಕು. ಇತ್ತೀಚಿನ ದಿನಗಳಲ್ಲಿ ಪ್ರತಿ ದಿವಸ ೪–೫ ಅಪಘಾತಗಳು ಸಂಭವಿಸಿ ೩–೪ ಜನ ಸಾಯುತ್ತಿರುತ್ತಾರೆ. ದಿನಂಪ್ರತಿ ಡಾಕ್ಟರು ಸತ್ತರು. ಇಂಜಿನಿಯರು ಸತ್ತರು ಎಂದು ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ. ತಾವು ಡಬ್ಬಲ್ ರೋಡನ್ನು ತೀವ್ರಗತಿಯಲ್ಲಿ ಮಾಡಿದರೆ ಅನೇಕ ಮಂದಿ ಸಾಯುವವರು ಉಳಿಯುತ್ತಾರೆ. ಟ್ರಕ್‌ಗಳು ಮತ್ತು ಕಾರ್‌ಗಳು ಆಕ್ಸಿಡೆಂಟ್ ಆಗುವುದಿಲ್ಲ. ತಾವು ಇದಕ್ಕೆ ಹೆಚ್ಚಿನ ಮಹತ್ವ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ನಾನು ಒಂದು ವಿಷಯವನ್ನು ಒತ್ತಿ ಒತ್ತಿ ಹೇಳುತ್ತೇನೆ. ತಾವು ಏನು ಹಣ ಕೊಡುತ್ತೀರಿ. ಕಾರ್ಯಕ್ರಮಗಳನ್ನು ಹಾಕುತ್ತೀರಿ ಯೋಜನೆಗಳನ್ನು ಹಾಕುತ್ತೀರಿ. ಇದರ ಮೇಲ್ವಿಚಾರಣೆಗೆ ವಿಶೇಷವಾದ ಸಿಬ್ಬಂದಿಯನ್ನು ನೇಮಕ ಮಾಡಬೇಕು. ಅದಕ್ಕೆ ಹಣ ಖರ್ಚಾದರೂ ಅಡ್ಡಿಯಿಲ್ಲ. ಇವತ್ತು ಕಾಲಿಗೊಬ್ಬ ಕೈಗೊಬ್ಬ ಇಂಜಿನಿಯರುಗಳು ಇದ್ದಾರೆ. ಇಂಥವರಲ್ಲಿ ಪ್ರಾಮಾಣಿಕರಾದವರನ್ನು ಹಾಕಿಕೆಲಸ ಮಾಡಿಸಿದರೆ ಅನುಕೂಲವಾಗುತ್ತದೆ. ಇನ್ನು ರಾಜ್ಯದಲ್ಲಿ ಕರ್ನಾಟಕ ಕನಸ್ಟ್ರಕ್ಷನ್ ಕಾರ್ಪೊರೇಷನ್ ಇದೆ ಇದರ ಕೆಲಸ ಏನೆಂದರೆ ಕಂಟ್ರಾಕ್ಟ್ ಹಿಡಿಯುವುದು, ನಂತರ ಒಂದೆರಡು ಪರ್ಸೆಂಟ್ ಮೇಲೆ ಮತ್ತೊಬ್ಬ ಸಬ್ ಕಂಟ್ರಾಕ್ಟರಿಗೆ ಕೊಡುವುದು. ಈ ಕೆಲಸ ಇವರು ಮಾಡುವುದು ಬೇಡ. ಇವತ್ತು ಲ್ಯಾಂಡ್ ಆರ್ಮಿಗೆ ಕಟ್ಟಡಗಳನ್ನು ಕಟ್ಟಲಿಕ್ಕೆ ಜನತಾ ಮನೆಗಳನ್ನು ಕಟ್ಟಲಿಕ್ಕೆ ಕೊಡುತ್ತಾರೆ. ಎಷ್ಟೋ ಕಡೆ ಲ್ಯಾಂಡ್ ಆರ್ಮಿ ಕಟ್ಟಿದಂಥ ಕಟ್ಟಡಗಳು ಬಿದ್ದು ಹೋಗಿವೆ. ಈ ರೀತಿ ಆಗಬಾರದು. ಇವರ ಮೇಲೆ ಹಿಡಿತ ಇಟ್ಟುಕೊಳ್ಳಬೇಕು. ತಾವು ಯಾವ ಕೆಲಸಗಳನ್ನು ಮಾಡಲಿಕ್ಕೆ ಹೊರಟಿದ್ದೀರಿ, ಆ ಕೆಲಸಗಳನ್ನು ಕಾರ್ಯಗತ ಮಾಡಲಿಕ್ಕೆ ತಮಗೆ ದೇವರು ಶಕ್ತಿ, ಸಾಮರ್ಥ್ಯಗಳನ್ನು ಕೊಡಲಿ, ನಾನು ಅಧಿಕಾರಿಗಳಲ್ಲಿ ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಮೇಲೆ ದೇಶ ಕಟ್ಟುವುದಕ್ಕೆ ನಾಡನ್ನು ಕಟ್ಟುವುದಕ್ಕೆ ಬಹು ಜನಗಳ ಆಸೆಗಳನ್ನು ಪೂರೈಸಲಿಕ್ಕೆ ನೀವು ಕಂಕಣಬದ್ಧರಾಗಿ ಎಂದು

ಹೇಳುತ್ತೇನೆ. ಮಾನ್ಯ ಪುಟ್ಟಸ್ವಾಮಿಗೌಡರೆ. ತಮ್ಮಿಂದ ಉತ್ತರ ಕರ್ನಾಟಕದ ಜನ ಬಹಳ ಅಪೇಕ್ಷೆ ಪಡುತ್ತಿದ್ದಾರೆ. ಅವರ ನಿರೀಕ್ಷೆಗೆ ತಾವು ಸ್ಪಂದಿಸಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್.—ಉತ್ತರ ಕರ್ನಾಟಕಕ್ಕೆ ಅವರ ಆಫೀಸ್‌ನ್ನು ತೆಗೆದುಕೊಂಡು ಬನ್ನಿ ಎಂದು ಹೇಳುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಮಂತ್ರಿಗಳು, ತಮ್ಮ ಉತ್ತರ ಕನ್ನಡ ಜಿಲ್ಲೆ ಅಷ್ಟೆ, ನೋಡುವಂಥಾದ್ದು ಅಲ್ಲ ಅವರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಭಾಗಗಳನ್ನು, ಕರ್ನಾಟಕದ ಎಲ್ಲ ಭಾಗಗಳನ್ನು ನೋಡಬೇಕಾಗುತ್ತದೆ.

ಶ್ರೀ ಗೋಪಿನಾಥ ಆರ್. ಸಾಂದ್ರ.—ವಿಶೇಷವಾಗಿ ನಮ್ಮ ಭಾಗದಲ್ಲಿ ಕಳೆದ ೪೦ ವರ್ಷಗಳಲ್ಲಿ ಆಗ ಬೇಕಾಗಿದ್ದ ಕೆಲಸಗಳು ಆಗಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ನಮ್ಮ ಭಾಗಕ್ಕೆ ವಿಶೇಷ ಗಮನ, ಪ್ರಾಶಸ್ತ್ಯವನ್ನು ಕೊಡಬೇಕು ಎಂದು ಹೇಳುತ್ತಿದ್ದೇನೆ. ಈಗ ದಕ್ಷಿಣ ಭಾಗ ಅಂದರೆ ಹೈದರಾಬಾದ್-ಕರ್ನಾಟಕದ ಅಭಿವೃದ್ಧಿಗೆ ಬೋರ್ಡ್ ಎಂದು ಮಾಡಿಕೊಂಡಿದ್ದಾರೆ. ಅದಕ್ಕೆ ೪೦-೪೫ ಕೋಟಿ ರೂಪಾಯಿಗಳನ್ನು ಕೊಡಲಾಗಿದೆ, ಅಲ್ಲದೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೋರ್ಡ್ ಇ ದಿದ್ದರೂ ಮಹಾನ್ ವ್ಯಕ್ತಿಗಳು ಇದ್ದಾರೆ ಅವರು ಕೆಲಸಗಳನ್ನೆಲ್ಲಾ ಮಾಡಿಕೊಳ್ಳುತ್ತಾರೆ. ಆ ದೃಷ್ಟಿಯಿಂದ ಹೇಳದ್ದೇನೆಯೇ ಹೊರತು ಬೇರೆ ಯಾವುದೇ ಒಂದು ದೃಷ್ಟಿಯಿಂದ ಹೇಳಿಲ್ಲ. ನಾನು ಮಾನ್ಯ ಪುಟ್ಟಸ್ವಾಮಿಗೌಡರಲ್ಲಿ ಕೇಳಿಕೊಳ್ಳುವುದು ಇಷ್ಟೆ ಇದುವರೆಗೂ ನಾನು ಏನೆಲ್ಲಾ ಹೇಳಿದ್ದೇನೆ, ಅದನ್ನು ಕಾರ್ಯಗತ ಮಾಡಲಿಕ್ಕೆ ಪ್ರಯತ್ನ ಮಾಡಿರಿ. ನಾವು ನಿಮಗೆ ಚಿರಋಣಿಯಾಗಿರುತ್ತೇವೆಂದು ಹೇಳಿ, ನನಗೆ ಮಾತನಾಡಲು ಸಾಕಷ್ಟು ಸಮಯವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್‌ಮನ್.—ಈಗ ಸಭೆ ಮುಂದುವರೆದು ಪುನಃ ೨ ಗಂಟೆ ೩೦ ನಿಮಿಷಕ್ಕೆ ಸೇರುತ್ತದೆ.

(ಸದನವು ಒಂದು ಗಂಟೆ ಮೂವತ್ತು ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ೨ ಗಂಟೆ ೩೦ ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ೨ ಗಂಟೆ ೪೦ ನಿಮಿಷಕ್ಕೆ ಸಮಾವೇಶಗೊಂಡಿತು. ಸನ್ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು).

† ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರ್).—ಸನ್ಮಾನ್ಯ ಸಭಾಧ್ಯಕ್ಷರೆ, ರಾಜ್ಯದಲ್ಲಿ ನೀರಾವರಿ ಯೋಜನೆಗಳ ಬಗ್ಗೆ ಅಂದರೆ ಕಾವೇರಿ, ಕೃಷ್ಣ ಹಾಗೂ ಉಳಿದ ಪ್ರಾಮುಖ್ಯವಾದಂಥ ನೀರಾವರಿ ಯೋಜನೆಗಳ ಬಗ್ಗೆ ಮತ್ತು ರಾಜ್ಯದ ನೀರಿನ ಸಂಪೂರ್ಣ ಬಳಕೆಯನ್ನು ಮಾಡುವ ಬಗ್ಗೆ ಈಗಾಗಲೇ ಅನೇಕ ಸದಸ್ಯರು ಈ ಸದನದಲ್ಲಿ ಹಾಗೂ ಸರಕಾರದಲ್ಲಿ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಸಮಗ್ರವಾಗಿ ರಾಜ್ಯದ ನೀರಾವರಿ ಸಂಪತ್ತನ್ನು ಬಳಕೆ ಮಾಡುವುದಕ್ಕ ಹೇರಳವಾದಂಥ ಹಣ ಬೇಕು. ಈ ಹಣವನ್ನು ನಾವು ಯಾವ ರೀತಿಯಾಗಿ ಕ್ರೋಢೀಕರಿಸಬೇಕು ಎನ್ನುವ ಬಗ್ಗೆ ಸರಕಾರದವರು ಸೂಕ್ತ ಯೋಜನೆಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಏಕೆಂದರೆ, ರಾಜ್ಯದ ರೈತರ ಪರಿಸ್ಥಿತಿಯೂ ಈಗ ಚಿಂತಾಜನಕವಾಗಿದೆ. ಆದುದರಿಂದ ನಮ್ಮ ರಾಜ್ಯದ ಜಲ ಸಂಪತ್ತನ್ನು ಸೂಕ್ತ ರೀತಿಯಲ್ಲಿ ಸಮಗ್ರವಾಗಿ ಬಳಸಿಕೊಳ್ಳುವ ಕಡೆಗೆ ಸರಕಾರದವರು ಆದ್ಯ ಗಮನವನ್ನು ಕೊಟ್ಟುಕೊಂಡು ಬಂದು ರೈತರಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಟ್ಟರೆ ಮಾತ್ರ ರಾಜ್ಯದ ರೈತರ ಏಳಿಗೆ ಯಾಗುವುದು ಶಕ್ಯ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ರಾಜ್ಯದಲ್ಲಿರುವ ಸಂಪೂರ್ಣ ನೀರಿನ ಸಂಪತ್ತನ್ನು ನಾವು ಬಳಸಿಕೊಳ್ಳುವುದಕ್ಕೆ ಬೇಕಾದಂಥ ಹಣವನ್ನು ಯಾವ ರೀತಿ ಕ್ರೋಢೀಕರಿಸಬೇಕು ಮತ್ತು ನೀರಿನ ಬಳಕೆ ಹೇಗೆ ಮಾಡಿಕೊಳ್ಳಬೇಕು ಎಂಬ ಬಗ್ಗೆ ಕೂಡಲೇ ಸೂಕ್ತ ಯೋಜನೆಗಳನ್ನು ಮಾಡಿಕೊಂಡು ಆ ಯೋಜನೆಗಳನ್ನು ಜಾರಿಗೆ ತರಬೇಕು. ನಮ್ಮಲ್ಲಿ ಎಷ್ಟೋ ಯೋಜನೆಗಳು ಇವೆ. ಆದರೆ ಎಲ್ಲಾ ಯೋಜನೆಗಳಿಗೂ ಒಂದೇ ರೀತಿಯ ಪ್ರಾಮುಖ್ಯತೆ ಇರಬೇಕೆ ಎನ್ನುವುದು ನಮ್ಮ ಮುಂದಿರುವ ಪ್ರಶ್ನೆಯಾಗಿದೆ. ಹಳ್ಳಿಗಳಿಗೆ ರಸ್ತೆಯ ಸೌಲಭ್ಯ ಇಲ್ಲ, ಎಂದು ಕೆಲವರು ಹೇಳಿದರೆ, ಇನ್ನು ಕೆಲವರು ಕಚೇರಿಗಳಿಗೆ ಕಟ್ಟಡಗಳು ಬೇಕಾಗಿದೆ ಎಂದು ಒತ್ತಾಯಿಸುತ್ತಾರೆ. ಇವೇ ಮುಂತಾಗಿ ಬೇರೆ ಬೇರೆ ರೀತಿಯಲ್ಲಿ ಖರ್ಚು ಮಾಡಬೇಕಾದ ಸಂದರ್ಭಕ್ಕಾಗಿ ಒತ್ತಾಯ ಬರುತ್ತಾ ಇರುತ್ತದೆ. ಆದರೆ ಪ್ರಮುಖವಾಗಿ ರಾಷ್ಟ್ರದಲ್ಲಿ, ರಾಜ್ಯದಲ್ಲಿ ಸಂಪತ್ತನ್ನು ಉತ್ಪಾದನೆ ಮಾಡತಕ್ಕಂಥ ರೈತರ ಬಗ್ಗೆ ಅತೀ ಹೆಚ್ಚು ಖರ್ಚು ಮಾಡುವ ಬಗ್ಗೆ ನಾವು ಆದ್ಯತೆಯನ್ನು ಕೊಡುತ್ತಿದ್ದೇವೆಯೇ ? ರೈತರ ಮೂಲಕ ಭೂಮಿಯಿಂದ ಮಾತ್ರ ಯಾವುದೇ ಉತ್ಪನ್ನ ಮಾಡುವುದಕ್ಕೆ

ಸಾಧ್ಯ ಎಂಬುದು ಎಲ್ಲರೂ ತಿಳಿದಿರತಕ್ಕಂಥ ವಿಚಾರವಾಗಿದೆ. ಇವತ್ತು ಯಾರೇ ಪಿಡ್ಡಾನಿ ಆಹಾರ ಧಾನ್ಯದ ಒಂದು ಕಣವನ್ನೂ ಸಹ ಹುಟ್ಟಿಸುವುದಕ್ಕೆ ಸಾಧ್ಯವಿಲ್ಲ. ಭೂಮಿಯನ್ನು ಅವಲಂಬಿಸಿದಂಥ ರೈತರು ಅನಿಶ್ಚಿತವಾದಂಥ ಮಳೆಯಿಂದಾಗಿ ಸತತವಾಗಿ ಬರಗಾಲಕ್ಕೆ ತುತ್ತಾಗಿದ್ದಾರೆ. ಇವತ್ತಿನ ದಿವಸ ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ, ರೈತರಿಗೆ ಅತ್ಯಗತ್ಯವಾಗಿ ಬೇಕಾಗಿರುವ ನೀರಾವರಿ ವ್ಯವಸ್ಥೆಗಾಗಿ ಹೆಚ್ಚು ಹಣವನ್ನು ನಾವು ತೊಡಗಿಸಲು ಇನ್ನೂ ಶಕ್ಯರಾಗಿಲ್ಲ. ಆದರೆ ಅದೇ ರಸ್ತೆಗಳ ವಿಚಾರದಲ್ಲಾಗಲಿ, ಕಟ್ಟಡಗಳ ವಿಚಾರದಲ್ಲಾಗಲಿ, ಕೋಟ್ಯಾಂತರ ರೂಪಾಯಿಗಳ ಹಣವನ್ನು ಖರ್ಚು ಮಾಡುತ್ತಾ ಇದ್ದೇವೆ. ಈ ರೀತಿಯಾಗಿ ಕಟ್ಟಡಗಳಿಗೆ ಅಗತ್ಯಕ್ಕಿಂತ ಹೆಚ್ಚಾಗಿ ಖರ್ಚು ಮಾಡುವ ಹಣವನ್ನು ನೀರಾವರಿ ಬಾಬುಗಳಿಗೆ ಉಪಯೋಗಿಸುವ ಬಗ್ಗೆ ಮಾನ್ಯ ನೀರಾವರಿ ಸಚಿವರು ವಿಶೇಷವಾದ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಕಟ್ಟಡಗಳನ್ನು ಕಟ್ಟದಿದ್ದರೆ ಯಾವ ಅನಾಹುತವೂ ಜರುಗಲಾರದು. ಬ್ರಿಟಿಷರ ಆಡಳಿತಾವಧಿಯಲ್ಲಿ ಕಚೇರಿಗಳು ಅಷ್ಟಾಗಿ ಇರಲಿಲ್ಲ. ಏರ್‌ಕಂಡೀಷನ್ ವ್ಯವಸ್ಥೆಯೂ ಇರಲಿಲ್ಲ. ಅವರು ಅಲ್ಲಲ್ಲಿ ಟೆಂಟ್‌ಗಳನ್ನು ಹಾಕಿಕೊಂಡು ತಮ್ಮ ಆಡಳಿತವನ್ನು ಎಷ್ಟು ಚೆನ್ನಾಗಿ ಕಟ್ಟುನಿಟ್ಟಾಗಿ ನಡೆಸಿಕೊಂಡು ಹೋಗುತ್ತಿದ್ದರು ಎಂಬುದನ್ನು ತಾವುಗಳೆಲ್ಲರೂ ತಿಳಿದಿದ್ದೀರಿ. ಆದರೆ ಅದೇ ವ್ಯವಸ್ಥೆಯು ನಮ್ಮಲ್ಲಿ ಏನಾಗಿದೆ ? ಇವತ್ತು ನಾವು ಕಟ್ಟಡಗಳಿಗಾಗಿ ಹೇರಳವಾದ ಹಣವನ್ನೂ ವ್ಯಯ ಮಾಡುತ್ತಾ ಇದ್ದೇವೆ. ಈ ಕಟ್ಟಡಗಳನ್ನು ಇನ್ನು ೫ ವರ್ಷ ಬಿಟ್ಟು ಕಟ್ಟಬಹುದು . ಅಥವಾ ಇನ್ನು ೧೦ ವರ್ಷ ಬಿಟ್ಟು ಕಟ್ಟಬಹುದು. ಆದರೆ ... ನೀರಿನ ಬಳಕೆಯನ್ನು ಮಾತ್ರ ನಿರ್ದಿಷ್ಟ ಅವಧಿಯಲ್ಲಿ ಮಾಡಬೇಕು. ಬಚಾವತ್ ಆಯೋಗದ ಅವಾರ್ಡ್ ಪ್ರಕಾರ ನಾವು ಎರಡು ಸಾವಿರದ ಇಸವಿಯೊಳಗಾಗಿ ಸಂಪೂರ್ಣ ನೀರನ್ನು ಬಳಸಿಕೊಳ್ಳಬೇಕಾಗಿದೆ. ಈಗಾಗಲೇ ಕಾವೇರಿ ವಿಚಾರದಲ್ಲಿ ಆಗಿರತಕ್ಕ ದುರಂತವನ್ನು ನಾವು ಅನುಭವಿಸಿದ್ದೇವೆ. ಈ ರೀತಿ ಇರುವಾಗ ಈ ಸದನದ ಒಂದು ಸಮಿತಿಯನ್ನು ಮಾಡಬೇಕು. ಈ ಸದನವನ್ನು ಸಂಪೂರ್ಣವಾಗಿ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಮಾನ್ಯ ಸಚಿವರು ಹಾಗೂ ಸರ್ಕಾರ ಸದನದ ಸದಸ್ಯರನ್ನಷ್ಟೇ ಅಲ್ಲ. ಸಮಗ್ರವಾಗಿ ರಾಜ್ಯದ ಜನತೆಯ ವಿಶ್ವಾಸವನ್ನು ತೆಗೆದುಕೊಂಡು ಸಂಪತ್ತನ್ನು ಉತ್ಪಾದನೆ ಮಾಡಬಲ್ಲಂಥ ಈ ಭೂಮಿಗೆ ಬೇಕಾದಂಥ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇಲ್ಲದೇ ಹೋದರೆ ಈ ರಾಜ್ಯದ ಜನತೆಗೆ ಅನ್ಯಾಯ ಮಾಡಿದಂತಾಗುತ್ತದೆ. ಎಲ್ಲ ಜನರ ಮನಸ್ಸನ್ನು ಒಲಿಸಿಕೊಂಡು ವಿಶ್ವಾಸಪೂರ್ವಕವಾಗಿ ಈ ಸದನದ ಸಮಿತಿಯ ಮೂಲಕ ಇದಕ್ಕೆ ಬೇಕಾದಂತಹ ಹಣವನ್ನು ಕ್ರೋಢೀಕರಿಸಿ ನಿರ್ದಿಷ್ಟ ಅವಧಿಯಲ್ಲಿ ಈ ನೀರಿನ ಬಳಕೆಯನ್ನು ಮಾಡಿಕೊಳ್ಳಲು ಮಾನ್ಯ ಸಚಿವರು ಒಂದು ಯೋಜನೆಯನ್ನು ಹಾಕಿಕೊಳ್ಳಬೇಕೆಂದು ತಮ್ಮ ಮೂಲಕ ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಇನ್ನು ತುಂಗಾ ಮೇಲ್ದಂಡೆ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈಗ ತುಂಗಾ ಮೇಲ್ದಂಡೆ ಯೋಜನೆಯ ವಿಚಾರದಲ್ಲಿ ಮೊದಲು ಏನಿತ್ತು ಅಂದರೆ, ಇದಕ್ಕಾಗಿ ೨೫ ಸಾವಿರ ಎಕರೆ ಮುಳುಗಡೆಯಾಗುತ್ತಿದೆ. ಹಾಗೂ ತೀರ್ಥಹಳ್ಳಿ ಮುಂತಾದ ಭಾಗಗಳಲ್ಲಿ ತೋಟ. ಜಮೀನುಗಳು ಮುಳುಗಡೆಯಾಗುತ್ತಿದೆ ಎಂದು ಹೇಳುತ್ತಿದ್ದರು. ಆದರೆ ಈಗ ರೂಪಿಸಿರತಕ್ಕ ತುಂಗಾ ಮೇಲ್ದಂಡೆ ಯೋಜನೆಯಿಂದ ಯಾವ ಜಮೀನೂ ಮುಳುಗಡೆಯಾಗುವುದಿಲ್ಲ; ಯಾವುದೇ ವ್ಯಕ್ತಿಯ ಜಮೀನು ಮುಳುಗಡೆಯಾಗುವುದಿಲ್ಲ. ಇದಕ್ಕೆ ಅಣೆಕಟ್ಟೆಯನ್ನು ಕಟ್ಟತಕ್ಕ ಅವಶ್ಯಕತೆ ಇಲ್ಲ. ತುಂಗಾ ನದಿಯ ನೀರನ್ನು ಇಲ್ಲಿಯವರೆಗೆ ಸರಿಯಾಗಿ ಬಳಸಿಕೊಳ್ಳಲು ಯೋಜನೆ ಮಾಡಿಲ್ಲ. ಒಂದಲ್ಲ ಒಂದು ಕಾರಣದಿಂದ ಈ ಯೋಜನೆಯನ್ನು ಮುಂದಕ್ಕೆ ಹಾಕಿಕೊಳ್ಳುತ್ತಾ ಬಂದಿದ್ದಾಗಿದೆ. ಸತತವಾಗಿ ಬರಗಾಲದಿಂದ ಧಾರವಾಡ ಜಿಲ್ಲೆಯ ಹಿರೇಕೆರೂರು, ರಾಣೆಬೆನ್ನೂರು, ಹಾವೇರಿ ಹಾನಗಲ್ ಭಾಗಗಳು ಬಹಳ ಕಷ್ಟವನ್ನು ಅನುಭವಿಸುತ್ತಿವೆ. ಶಿವಮೊಗ್ಗ ಹಾಗೂ ಹೊನ್ನಾಳಿ ಭಾಗಗಳಿಗೂ ಸಹಿತ ಈ ಯೋಜನೆಯಿಂದ ಹೆಚ್ಚಿನ ನೀರಿನ ಸೌಲಭ್ಯ ಸಿಗುತ್ತದೆ. ಈ ನೀರಾವರಿ ಯೋಜನೆಯಿಂದ ಯಾವುದೇ ಜಮೀನು ಮುಳುಗಡೆಯಾಗುವುದಿಲ್ಲವೆಂದು ಮತ್ತೊಂದು ಸಾರಿ ಹೇಳುತ್ತಿದ್ದೇನೆ. ಮೊದಲು ಇದು ಶಾಶ್ವತವಾದ ಒಂದು ನೀರಾವರಿ ಯೋಜನೆ ಆಗಬೇಕೆಂದು ಇತ್ತು. ೧೨ ತಿಂಗಳು ನೀರನ್ನು ಕೊಡುವ ಅನುಕೂಲವಾಗುವಂತಹ ಒಂದು ಶಾಶ್ವತವಾದ ನೀರಾವರಿ ಯೋಜನೆಯನ್ನು ಮಾಡಬೇಕು. ಮಾಲತಿ ಎಂಬಲ್ಲಿ ಒಂದು ಅಣೆಕಟ್ಟೆಯನ್ನು ನಿರ್ಮಾಣ ಮಾಡಿ ಅಲ್ಲಿ ೨೫ ಸಾವಿರ ಎಕರೆಯನ್ನು ಮುಳುಗಡೆ ಮಾಡಿ, ಮಳೆಗಾಲದ ನೀರನ್ನು ಶೇಖರಣೆ ಮಾಡುವಂಥ ಒಂದು ಮಾಲತಿ ಯೋಜನೆ ಇತ್ತು. ಈಗ ನಾವು ಸರ್ಕಾರಕ್ಕೆ ಹೇಳಿದ್ದೇವೆ. ಈ ಯೋಜನೆ ಯಾರು ಮಾಡುವುದನ್ನು ಬಿಟ್ಟುಬಿಡಿ. ಈ ಯೋಜನೆಯಿಂದ ೨ ಸಾವಿರ ಎಕರೆ ಮುಳುಗಡೆಯಾಗುವುದು ಬೇಡ ಎಂದು ಹೇಳಿದ್ದೇವೆ. ಮಳೆಗಾಲದಲ್ಲಿ ತುಂಗಾ ನದಿಯ ಮೇಲೆ ೧೫ ಫುಟ್ ನೀರು ವ್ಯರ್ಥವಾಗಿ ಹರಿದುಹೋಗುತ್ತಿದೆ. ಅಲ್ಲಿ ಕ್ರೆಸ್ಟ್ ಗೇಟನ್ನು ಹಾಕಿ ಕಾಲುವೆ ಮೂಲಕ ನೀರನ್ನು ಬಿಟ್ಟರೆ

ಮುಂಗಾರಿಗೆ ಅದನ್ನು ತೆಗೆದುಕೊಳ್ಳಲು ಅನುಕೂಲವಾಗುತ್ತದೆ. ಇದು ಸುಲಭವಾದ ಯೋಜನೆ. ತುಂಗಾ ನದಿಯು ಮೇಲೆ ಜುಲೈ, ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್ – ಈ ನಾಲ್ಕು ತಿಂಗಳ ಕಾಲ ೧೪ ಫೀಟ್ ನೀರು ವ್ಯರ್ಥವಾಗಿ ಹರಿದುಹೋಗುತ್ತಿದೆ. ಆದ್ದರಿಂದ ಅಲ್ಲಿ ಗೇಟನ್ನು ಕೂಡಿಸಿ ಹೊಳೆಗೆ ಹರಿದು ಹೋಗುವ ನೀರನ್ನು ಕಾಲುವೆ ಮೂಲಕ ೩೧೦ ಕಿ.ಮೀಟರು ದೂರ ಆರು ತಾಲ್ಲೂಕುಗಳಿಗೆ ಹರಿಸಿದರೆ ೨ ಲಕ್ಷ ೩೪ ಸಾವಿರ ಎಕರೆಗೆ ನೀರಾವರಿ ಸೌಲಭ್ಯ ಒದಗುತ್ತದೆ. ತಜ್ಞರ ಒಂದು ವರದಿ ಪ್ರಕಾರ ಇಡೀ ಭಾರತ ದೇಶದಲ್ಲಿಯೇ ಅತ್ಯಲ್ಪ ಖರ್ಚಿನಿಂದ ಅತಿ ಹೆಚ್ಚು ನೀರಾವರಿ ಆಗುವ ಒಂದು ಮಹತ್ವದ ಯೋಜನೆ ನೀರಾವರಿ ಫ್ಲೋ ವಾಟರ್ ಅಂದರೆ ಹರಿಯುವ ನೀರಿನ ಯೋಜನೆ ಇದಾಗಿದೆ.

ಅಧ್ಯಕ್ಷರು.—ಇದಕ್ಕೆ ಎಷ್ಟು ಎಸ್ಟಿಮೇಟ್ ಮಾಡಿದ್ದಾರೆ ?

ಶ್ರೀ ಬಿ. ಹೆಚ್. ಬನ್ನಿಕೋಡ್.—ಇದಕ್ಕೆ ಕೇವಲ ೩೮ ಕೋಟಿ ರೂಪಾಯಿಯೆಂದು ಹಿಂದೆ ಅಂದಾಜು ಮಾಡಲಾಗಿತ್ತು. ಇದಕ್ಕೆ ಅಣೆಕಟ್ಟು ಕಟ್ಟುವ ಹಾಗಿಲ್ಲ. ಭೂಸ್ವಾಧೀನದ ಅವಶ್ಯಕತೆ ಇಲ್ಲ. ಆಲಮಟ್ಟಿ ಯೋಜನೆಗೆ ಇಪತ್ತು ಬಾಗಲಕೋಟೆಯನ್ನು ಬೇರೆ ಕಡೆಗೆ ಸ್ಥಳಾಂತರ ಮಾಡುವುದಕ್ಕೆ ೧೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಆದರೆ ಇಲ್ಲಿ ಭೂಮಿಗೆ ರೊಕ್ಕ ಇಲ್ಲ, ಯಾವ ಖರ್ಚೂ ಇಲ್ಲ. ಇದಕ್ಕೆ ಈಗ ೨೬೧ ಕೋಟಿ ಆಗಬಹುದೆಂದು ಅಂದಾಜು ಮಾಡಿದ್ದಾರೆ. ೩೧೧ ಕಿ.ಮೀ. ಉದ್ದದ ಕಾಲುವೆಯನ್ನು ತೋಡಬೇಕಾಗುತ್ತದೆ.

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೆ, ಇದರಿಂದ ತುಂಗಭದ್ರ ಡ್ಯಾಮ್‌ಗೆ ತೊಂದರೆಯಾಗುತ್ತದೆ. ಈಗಾಗಲೇ ರಾಯಚೂರು, ಬಳ್ಳಾರಿಯವರಿಗೆ ನೀರಾವರಿ ಸೌಲಭ್ಯ ಇಲ್ಲದೆ ಕಷ್ಟವಾಗಿದೆ ಇದನ್ನು ಮಾಡಿದರೆ ಅವರಿಗೆ ಇನ್ನೂ ತುಂಬ ಕಷ್ಟವಾಗುತ್ತದೆ.

ಅಧ್ಯಕ್ಷರು.—ಶಿವಮೊಗ್ಗ, ಹೊನ್ನಾಳಿಗೆ ನೀರು ಬರುತ್ತದೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಬಚಾವತ್ ಆಯೋಗದಲ್ಲಿ ತುಂಗಭದ್ರಕ್ಕೆ ಎಷ್ಟು ಕ್ಯೂಸೆಕ್ಸ್ ನೀರು ಬರುತ್ತದೆ ಎಷ್ಟು ಟಿ. ಎಂ. ಸಿ. ನೀರು ಕೊಡಬೇಕು ಎಂದು ಈಗಾಗಲೇ ಸಂಪೂರ್ಣವಾಗಿ ಇತ್ಯರ್ಥ ಮಾಡಿದ್ದಾರೆ. ಅವರಿಗೆ ಹೋಗತಕ್ಕ ನೀರನ್ನು ನಾವು ಕೇಳುತ್ತಿಲ್ಲ. ನಮಗೆ ಬಚಾವತ್ ಅವಾರ್ಡ್‌ನಲ್ಲಿ ನಿರ್ಣಯಿಸಲ್ಪಟ್ಟಂಥ ನೀರನ್ನು ಹಕ್ಕಿನಿಂದ ನಾವು ಕೇಳುತ್ತಿದ್ದೇವೆಯೇ ವಿನಃ ನಮ್ಮ ನೀರನ್ನು ಕಬಳಿಸಲಿಕ್ಕೆ ಇನ್ನೊಬ್ಬರಿಗೆ ಕೊಡಲಿಕ್ಕೆ ಬಿಡುವುದಿಲ್ಲ ಎನ್ನುವ ಮಾತನ್ನು ಈ ಸದನದ ಮೂಲಕ ಹೇಳುತ್ತಿದ್ದೇನೆ. ಸರ್ಕಾರದ ಈಗಾಗಲೇ ಒಂದು ದುರಾಲೋಚನೆ ಮಾಡಿದೆ ಎಂದು ಕೇಳುತ್ತಿದ್ದೇನೆ ತುಂಗಾದಲ್ಲಿರತಕ್ಕ ನಮಗೆ ಮೀಸಲಾಗಿಟ್ಟಂಥ ನೀರನ್ನು......

ಅಧ್ಯಕ್ಷರು.—ದೂರಾಲೋಚನೆಯೋ ಅಥವಾ ದುರಾಲೋಚನೆಯೊ ?

ಶ್ರೀ ಬಿ. ಹೆಚ್. ಬನ್ನಿಕೋಡ್.—ದುರಾಲೋಚನೆ ಮಾನ್ಯ ಅಧ್ಯಕ್ಷರೆ, ಬಹಳ ವಿಷಾದದಿಂದ ಹೇಳುತ್ತಿದ್ದೇನೆ. ಬಚಾವತ್ ಅವಾರ್ಡ್ ಪ್ರಕಾರ ನಮ್ಮ ಪಾಲಿನ ನೀರನ್ನು ಸಹಸ್ರಾರು ಅಶ್ವಶಕ್ತಿಗಳ ವಿದ್ಯುತ್ ಪಂಪ್‌ಗಳನ್ನು ಹಚ್ಚಿ ಭದ್ರಾ ಜಲಾನಯನಕ್ಕೆ ಪಂಪ್ ಮಾಡಿ ಅಪ್ಪರ್ ಭದ್ರ ಯೋಜನೆ ಮಾಡುವಂಥ ಯೋಚನೆ ಸರ್ಕಾರದಲ್ಲಿದೆಯೆಂದು ಕೇಳಿದ್ದೇನೆ ಅದನ್ನು ಮಾನ್ಯ ಸಚಿವರು ಪರಿಶೀಲಿಸಬೇಕು ಇದಾದರೆ ನಾವು ಸುಮ್ಮನಿರುವುದಿಲ್ಲ ನಮ್ಮ ಭಾಗದ ಜನರು ಮಳೆ ಇಲ್ಲದೆ ಬರಗಾಲಕ್ಕೆ ತುತ್ತಾಗಿದ್ದಾರೆ. ರೈತರ ಸ್ಥಿತಿ ಚಿಂತಾಜನಕವಾಗಿದೆ ಇದನ್ನು ಮಾಡಿದರೆ ಬಹಳ ಅನ್ಯಾಯವಾಗುತ್ತದೆ. ದಯವಿಟ್ಟು ಮಾನ್ಯ ಸಚಿವರು ಸರ್ಕಾರ ಇದನ್ನು ಮಾಡಬಾರದು ನಮ್ಮ ನೀರನ್ನು ನಾವು ಬಳಸುವಂತಹ ಯೋಜನೆಯನ್ನು ಮಾಡಬೇಕು. ಅಧ್ಯಕ್ಷರೇ, ಬಜೆಟ್‌ನಲ್ಲಿ ೨೬೧ ಕೋಟಿ ರೂಪಾಯಿಗಳ ಅಂದಾಜಿನ ಯೋಜನೆಗೆ ಬರೀ ೫ ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಹಿಂದಿನ ಮಂತ್ರಿಗಳೂ ನಮ್ಮ ಯೋಜನೆಗಳನ್ನು ಕೈಗೆತ್ತಿಕೊಳ್ಳಲಿಲ್ಲ. ಈಗ ಯಾವಸ್ಥಿತಿ ಮುಟ್ಟಿದೆ ಎಂದರೆ ಪ್ರತಿ ತಾಲ್ಲೂಕಿನಲ್ಲೂ ರೈತರು ನಮ್ಮ ನೀರಾವರಿ ಯೋಜನೆಗಳಿಗಾಗಿ ಹೋರಾಟ ಮಾಡಲು ಸಿದ್ಧವಾಗಿದ್ದಾರೆ. ಆ ಜನ ಹೋರಾಟಕ್ಕಿಳಿದು ತಮ್ಮ ಕೆಲಸವನ್ನು ಮಾಡಿಕೊಳ್ಳುವ ಪೂರ್ವದಲ್ಲಿ ಆ ಕಡೆ ಸರ್ಕಾರ ಗಮನಹರಿಸಬೇಕು. ಮಾನ್ಯ ಸಚಿವರು ನಮ್ಮ ಯೋಜನೆ ಬಗ್ಗೆ ಒಂದು ತಾಂತ್ರಿಕ ಸಮಿತಿಯನ್ನು ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಆ ತಾಂತ್ರಿಕ ಸಮಿತಿಯಲ್ಲಿ ಈ ಯೋಜನೆಯನ್ನು ಕೂಡಲೆ ಮಂಜೂರಾತಿ ಮಾಡಿ ಅದನ್ನು ಕೇಂದ್ರಕ್ಕೆ ಕಳಿಸಬೇಕು. ಈ ವರ್ಷ ಹೆಚ್ಚಿಗೆ ಹಣ ಕೊಟ್ಟು ಯೋಜನೆಯನ್ನು ಪ್ರಾರಂಭಿಸಬೇಕೆಂದು ಸಚಿವರನ್ನು ಕೇಳಿಕೊಳ್ಳುತ್ತೇನೆ. ನಮ್ಮ ಕಡೆ ಮಳೆ ಇಲ್ಲ, ಕುಡಿಯಲು ನೀರಿಲ್ಲ, ಕೆರೆಕಟ್ಟೆಗಳಲ್ಲಿ ನೀರಿಲ್ಲ ಜನರಿಗೆ ದನಕರುಗಳಿಗೆ ನೀರಿಲ್ಲ ಈ ಯೋಜನೆ ಬಂದರೆ ಕೆರೆಕಟ್ಟೆಗಳಿಗೆಲ್ಲ ನೀರುಬರುತ್ತದೆ. ಎರಡು ಬೆಳೆ ಹೋಗಲಿ, ಒಂದು ಬೆಳೆಯನ್ನಾದರೂ ತೆಗೆಯಬಹುದು

ಆದ್ದರಿಂದ ಆದಷ್ಟು ಬೇಗನೆ ಇದಕ್ಕೆ ಹೆಚ್ಚಿನ ಹಣವನ್ನು ಮಂಜೂರು ಮಾಡಬೇಕೆಂದು ಸದನದ ಮೂಲಕ ನಾನು ಆಗ್ರಹ ಮಾಡುತ್ತಿದ್ದೇನೆ. ಶಿವಮೊಗ್ಗ ಮತ್ತು ಹೊನ್ನಾಳಿ ಹಾಗೂ ನಮ್ಮ ಧಾರವಾಡ ಜಿಲ್ಲೆಯ ನಾಲ್ಕು ತಾಲ್ಲೂಕುಗಳ ರೈತರಿಗೆ ಈ ಯೋಜನೆ ವರದಾನ ಆಗುತ್ತದೆ. ಕಡಿಮೆ ಹಣದಿಂದ ಹೆಚ್ಚು ನೀರನ್ನು ಬಳಕೆಮಾಡುವಂಥ ಈ ಯೋಜನೆಯನ್ನು ದಯವಿಟ್ಟು ಕೈಗೆತ್ತಿಕೊಳ್ಳಬೇಕು ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ ಎಂದು ಹೇಳುತ್ತೇನೆ. ರಸ್ತೆಗಳನ್ನು ಕಟ್ಟಡಗಳನ್ನು ಬೇಕಾದರೆ ಕೈಬಿಡಿ. ಮೊದಲಿನಿಂದಲೂ ಕಟ್ಟಡ ಇಲ್ಲದೆ ರಸ್ತೆ ಇಲ್ಲದೆ ಜೀವನ ಮಾಡಿದ್ದೇವೆ. ಅವಿಲ್ಲದಿದ್ದರೆ ಏನೂ ಆಗುವುದಿಲ್ಲ. ಈಗಾಗಲೆ ನನ್ನ ತಾಲ್ಲೂಕಿನಲ್ಲಿ ಅಂದರೆ ಮಂಜೂರಾಗಿರುವ ಹಳ್ಳೂರು ಮತ್ತು ರಾಮತೀರ್ಥ ಏತ ನೀರಾವರಿ ಯೋಜನೆಗಳಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ಸಿಕ್ಕಿದೆ ಆದರೆ ಈವರೆಗೆ ಆ ಕೆಲಸ ಪ್ರಾರಂಭವಾಗಿಲ್ಲ ಇದನ್ನು ಸಚಿವರು ಈ ಸಲ ಪ್ರಾರಂಭಿಸಿಕೊಡಬೇಕು. ನನ್ನ ಹಿರೇಕೆರೂರು ತಾಲೂಕಿನಲ್ಲೇ ಸುಮಾರು ೭೩೩ ಕೆರೆಗಳಿವೆ ಅಲ್ಲಿ ಮೂರ್ನಾಲ್ಕು ವರ್ಷಗಳಿಂದ ಮಳೆಯಾಗಿಲ್ಲ. ನಮ್ಮದು ಮಲೆನಾಡೂ ಅಲ್ಲ ಬಯಲು ಸೀಮೆಯೂ ಅಲ್ಲ ಅರೆ ಮಲೆನಾಡು ಮಳೆ ಬಂದರೇ ನೀರು. ಅಲ್ಲಿ ಇರತಕ್ಕ ಕೆರೆಗಳಲ್ಲೆಲ್ಲ ಹೂಳು ತುಂಬಿದೆ ಅದನ್ನು ತೆಗೆಸುವ ಕೆಲಸ ಮಾಡಬೇಕು. ಆಗ ನೀರು ಸಂಗ್ರಹಣೆಯಾಗಿ ಅಂತರ್ಜಲ ಹೆಚ್ಚಾಗಿ ಕೆರೆ ಬಾವಿಗಳಲ್ಲಿ ನೀರು ಸಿಗುತ್ತದೆ. ಇಷ್ಟಾದರೂ ನಮ್ಮ ಕಡೆ ನೀರಿನ ಕರವನ್ನು ಹಾಕಿದ್ದೀರಿ ಮಳೆ ಬೆಳೆ ಎರಡೂ ಇಲ್ಲ ಆದರೂ ನೀರಿನ ಕರ ವಿಧಿಸುವುದು ಯಾವ ನ್ಯಾಯ ? ಆದ್ದರಿಂದ ದಯವಿಟ್ಟು ಈ ನೀರಿನ ಕರವನ್ನು ರದ್ದು ಮಾಡಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇನ್ನೊಂದು ಮಾತನ್ನು ಮಾತ್ರ ಹೇಳುತ್ತೇನೆ. ಈ ಕಟ್ಟಡಗಳನ್ನು ಕಟ್ಟಲಿಕ್ಕೆ ಲ್ಯಾಂಡ್ ಆರ್ಮಿಗೆ ಕೊಡುತ್ತಿದ್ದಾರೆ. ಅವರು ಸರ್ಕಾರಕ್ಕೂ ಮತ್ತು ಅವರಿಗೂ ಸಂಬಂಧ ಇಲ್ಲ ಎನ್ನುವ ಹಾಗೆ ನಡೆದುಕೊಳ್ಳುತ್ತಾರೆ. ಲೋಕೋಪಯೋಗಿ ಇಲಾಖೆಯವರು ಕೆಲಸ ಮಾಡಲಾರದೆ ದುಡ್ಡನ್ನು ತೆಗೆದುಕೊಳ್ಳುತ್ತಾರೆ. ಲ್ಯಾಂಡ್ ಆರ್ಮಿಯವರು ಕೋಟ್ಯಾಂತರ ರೂಪಾಯಿ ಹಣವನ್ನು ಸರ್ಕಾರದಿಂದ ಮುಂಗಡವಾಗಿ ತೆಗೆದುಕೊಂಡು ಏನು ಕೆಲಸವನ್ನು ಮಾಡುತ್ತಿದ್ದಾರೆ ಅವರು ಎಲ್ಲಿದ್ದಾರೆ ತಾಲ್ಲೂಕು ಸಮಿತಿಯ ಮೀಟಿಂಗ್‌ಗೆ ಬರುವುದಿಲ್ಲ ಜಿಲ್ಲಾ ಪರಿಷತ್ ಮೀಟಿಂಗ್‌ಗೆ ಬರುವುದಿಲ್ಲ, ಇವರ ಕೆಲಸ ಏನು ಎಂದು ಗೊತ್ತಿಲ್ಲ. ಎಷ್ಟು ಹಣ ಮಂಜೂರಾಗಿದೆ ಎಂದು ಗೊತ್ತಿಲ್ಲ. ಆದರೂ ಕೂಡ ಇನ್ನೂ ಸಹಿತ ಜನತೆಯನ್ನು ಕತ್ತಲೆಯಲ್ಲಿ ಇಡುವುದಕ್ಕೆ ಈ ಇಲಾಖೆ ಪ್ರಯತ್ನವನ್ನು ಮಾಡುತ್ತಿದೆ. ದಯವಿಟ್ಟು ಆ ಇಲಾಖೆಯವರಿಗೆ ತಾವು ಹೇಳಬೇಕು, ಯಾವ ಯೋಜನೆಯನ್ನು ಕೈಗೆತ್ತಿಕೊಂಡಿದ್ದಾರೆ, ಎಷ್ಟು ಹಣ ಇದೆ ಎನ್ನುವುದು ಜನರಿಗೆ ತಿಳಿಯಬೇಕು. ಈ ಕೆಲಸ ಸರಿಯಾಗಿ ಆಗಿದೆಯೋ ಇಲ್ಲವೋ ಎಂದು ನೋಡುವುದಕ್ಕೆ ಅವರಿಗೆ ತಾಲ್ಲೂಕು ಮೀಟಿಂಗ್‌ಗೆ ಬರಲಿಕ್ಕೆ ಅಥವಾ ಮಾಹಿತಿಯನ್ನು ಕೊಡಲಿಕ್ಕೆ ಸರಿಯಾಗಿ ಕೆಲಸವನ್ನು ಮಾಡಲಿಕ್ಕೆ ಅವರಿಗೆ ಹೇಳಬೇಕು ಮತ್ತು ಈ ಇಲಾಖೆಗೆ ವಿಶೇಷವಾಗಿ ಮುಂಗಡವಾಗಿ ಕೊಡತಕ್ಕಂಥ ಹಣವನ್ನು ನಿಲ್ಲಿಸಬೇಕು. ಕೆಲಸ ಆದ ನಂತರ ಉಳಿದ ಇಲಾಖೆಗಳಿಗೆ ಕೊಟ್ಟ ರೀತಿ ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಸಚಿವರು).—ಈ ಭೂ ಸೇನಾ ನಿಗಮ ಲೋಕೋಪಯೋಗಿ ಇಲಾಖೆಗೆ ಬರುವುದಿಲ್ಲ. ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಬರುತ್ತದೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಆ ಇಲಾಖೆಗೆ ತಾವು ಕೊಟ್ಟಿದ್ದೀರಿ. ಆದರೆ ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಗ್ರಾಮೀಣಾಭಿವೃದ್ಧಿ ಇಲಾಖೆಗೆ ಬಂದರೂ ಸಹಿತ ಈ ಕೆಲಸವನ್ನು ಮೊದಲಿಗೆ ತಾವೇ ಮಾಡುತ್ತಿದ್ದಿರಿ. ಈ ಕೆಲಸವನ್ನು ಮೊದಲು ತಮ್ಮ ಇಲಾಖೆಯೇ ಮಾಡುತ್ತಿತ್ತು ಅಲ್ಲಿಂದ ಬೇರ್ಪಡಿಸಿ, ಅದನ್ನು ಪ್ರತ್ಯೇಕ ಮಾಡಿ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಕೊಟ್ಟಿದ್ದೀರಿ. ಪುನ: ಈ ಕಡೆಗೆ ಬಂದರೂ ಕೂಡಾ ಅಡ್ಡಿ ಇಲ್ಲ. ಆ ಒಂದು ಕೆಲಸ ತೃಪ್ತಿಕರವಾಗಿಲ್ಲ. ಇದರ ಬಗ್ಗೆ ತಮಗೆ ಅನೇಕ ದೂರುಗಳು ಬಂದಿವೆ. ಸರಿಯಾಗಿ ಕೆಲಸ ನಡೆಯುತ್ತಿಲ್ಲ. ಕಳಪೆ ಕೆಲಸವನ್ನು ಈ ಇಲಾಖೆಯವರು ಮಾಡುತ್ತಾರೆಂದು ದೂರುಗಳು ಬಂದಿವೆ. ಈ ಬಗ್ಗೆ ತಾವು ಯೋಚನೆ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಈ ಕಡೆಗೆ ಬಂದರೆ ಒಳ್ಳೆಯ ಕೆಲಸ ಮಾಡುತ್ತಾರೆ ಎಂದು ಹೇಳುತ್ತೀರಿ. ಆ ಕಡೆ ಕಳಪೆ ಕೆಲಸ ಇವರ ಕೈಕೆಳಗೆ ಬಂದರೆ ಒಳ್ಳೆಯ ಕೆಲಸವಾಗುತ್ತದೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಈಗಾಗಲೇ ನನ್ನ ಹಿರಿಯ ಸ್ನೇಹಿತರು ಹೇಳಿದ್ದಾರೆ. ನಾನು ಹೇಳುವುದು ಅಷ್ಟು ಸರಿಯಲ್ಲ. ತಾವು ಹೇಳುವುದು ಸೂಕ್ತ ಎಂದು ನಾನು ಭಾವಿಸುತ್ತೇನೆ. ಅವರು

ಈಗ ಎಷ್ಟು ಹಣವನ್ನು ವೆಚ್ಚ ಮಾಡುತ್ತಾರೆ ಎಂದೂ ಸಹಿತ ತಿಳಿಯುವುದಿಲ್ಲ. ಇವರು ಯಾವ ಕೆಲಸ ಮಾಡುತ್ತಿದ್ದಾರೆ ? ಎಲ್ಲಿ ಮಾಡುತ್ತಿದ್ದಾರೆ ? ಎಷ್ಟು ಹಣ ಬಂದಿದೆ ? ಏನು ಮಾಡುತ್ತಾರೆಂದು ಯಾವ ಶಾಸಕರಿಗೂ ಗೊತ್ತಿಲ್ಲ. ಅವರು ಸಭೆಗಳಿಗೆ ಬರುವುದಿಲ್ಲ. ೨೦ ಅಂಶಗಳ ಮೀಟಿಂಗ್‌ಗೆ ಬರುವುದಿಲ್ಲ, ಜಿಲ್ಲಾ ಸಮಿತಿಗಳಿಗೆ ಬರುವುದಿಲ್ಲ. ಅದಕ್ಕಾಗಿ ತಾವು ರಾಜ್ಯಾದ್ಯಂತ ಅವರಿಗೆ ಆದೇಶವನ್ನು ಕೊಡಬೇಕು ಕನಿಷ್ಟ ಪಕ್ಷ ಸಭೆಗಳಿಗೆ ಹಾಜರಾಗಬೇಕು. ಮಾಹಿತಿಯನ್ನು ದೊರಕಿಸಿಕೊಡಬೇಕು ಎಂದೂ ಮತ್ತು ಈ ಇಲಾಖೆಯನ್ನು ಪತ್ತೆ ಮಾಡುವ ಬಗ್ಗೆ ವಿಚಾರ ಮಾಡಬೇಕು ಎಂದು ನಾನು ಹೇಳುತ್ತಿದ್ದೇನೆ. ನಾನು ಹೆಚ್ಚು ಮಾತನಾಡುವುದಿಲ್ಲ ಏಕೆಂದರೆ ಈಗಾಗಲೇ ನಿನ್ನೆ ಮೊನ್ನೆ ನಡೆದ ಘಟನೆಗಳನ್ನು ನಾವು ನೋಡಿದ್ದೇವೆ. ನಾವು ಹಕ್ಕನ್ನು ಕೇಳುತ್ತಿದ್ದೇವೆ, ನಾನು ನನ್ನ ವೈಯಕ್ತಿಕ ವಿಚಾರವನ್ನು ಮಾನ್ಯ ಅಧ್ಯಕ್ಷರಿಗೆ ಹೇಳುತ್ತಿದ್ದೇನೆ. ನಮ್ಮ ವಾದವನ್ನು ಸೂಚನೆಯನ್ನು ಇಡಲಿಕ್ಕೆ ಯಾವರೀತಿ ಸಮಯ ಬೇಕು ಎಂದು ಕೇಳುತ್ತಿದ್ದೇವೆ. ಈರೀತಿ ನಮ್ಮ ಹಕ್ಕನ್ನು ಕೇಳುವುದರ ಜೊತೆಗೆ ಇನ್ನೊಬ್ಬರ ಹಕ್ಕನ್ನು ಮೊಟಕು ಮಾಡಬಾರದು ಎನ್ನುವ ಉದ್ದೇಶದಿಂದ ಸ್ವಲ್ಪ ವಿಶೇಷವನ್ನು ಹೇಳಿ ನನ್ನ ಮಾತನ್ನು ಮುಗಿಸಿ, ನನಗೆ ಇಷ್ಟು ಸಮಯವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ.ಎಸ್. ಆಚಾರ್ (ಬೈಂದೂರ್).—ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಮಂಡಿಸಿರುವ ಬೇಡಿಕೆಗಳನ್ನು ಸಮರ್ಥಿಸುತ್ತಾ ಕೆಲವು ವಿಚಾರಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತಿಗಳ ಕಾಯಿದೆ ಜಾರಿಗೆ ಬಂದ ನಂತರ ಅದಕ್ಕೆ ಮೊದಲು ಲೋಕೋಪಯೋಗಿ ಇಲಾಖೆಯ ವತಿಯಿಂದ ಪ್ರಾರಂಭವಾದ ಅನೇಕ ಕೆಲಸಗಳು ಅಪೂರ್ಣವಾಗಿ ಇದ್ದಾವೆ. ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆಯನ್ನೇ ತೆಗೆದುಕೊಂಡರೆ ಸಾಧಾರಣ ೧.೮ ಕೋಟಿ ರೂಪಾಯಿಗಳಷ್ಟು ರಸ್ತೆ ಸೇತುವೆ ಹಾಗೂ ನೀರಾವರಿ ಕಾಮಗಾರಿಗಳು ಇವೊತ್ತು ಪೆಂಡಿಂಗ್ ಇವೆ. ಸಾಧಾರಣ ೨-೩ ವರ್ಷಗಳಿಂದ ಜಿಲ್ಲಾ ಪರಿಷತ್ ಅಥವಾ ಮಂಡಲ್ ಪಂಚಾಯತಿಗಳಿಗೆ ವಿನಾಸಲಾಗಿಟ್ಟ ಹಣದಲ್ಲಿ ಅದನ್ನು ಮುಂದುವರಿಸಲಿಕ್ಕೆ ಸಾಧ್ಯವಾಗುತ್ತಿಲ್ಲ. ಇನ್ನೂ ೮-೧೦ ವರ್ಷಗಳು ಬೇಕಾಗುತ್ತದೆ ನಮ್ಮ ಅನೇಕ ಮಿತ್ರರು ಈಗಾಗಲೇ ಹೇಳಿದ್ದಾರೆ ಇಂತಹ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಜಿಲ್ಲಾ ಪರಿಷತ್‌ಗಳು ಪ್ರಾರಂಭ ಆಗುವ ಮುಂಚೆ ಯಾವ ಕೆಲಸ ಇದೆ, ಆ ಕೆಲಸ ಮಾಡುವುದು ಲೋಕೋಪಯೋಗಿ ಇಲಾಖೆಯ ಜವಾಬ್ದಾರಿ. ಅಸೆಟ್ಸ್ ಅಂಡ್ ಲಯಾಬಿಲಿಟೀಸ್ ಅನ್ನು ಟ್ರಾನ್ಸ್‌ಫರ್ ಮಾಡುವುದು, ಅಂದರೆ ಅಪೂರ್ಣವಾದ ಕಂಬಗಳುಳ್ಳ ಒಂದು ಸೇತುವೆಯನ್ನು ಟ್ರಾನ್ಸ್‌ಫರ್ ಮಾಡುವುದು ಅದು ಲಯಾಬಿಲಿಟಿ ಅಲ್ಲ. ಅದು ಯಾವ ಅಸೆಟ್ಟೂ ಅಲ್ಲ. ಅದನ್ನು ಸಂಪೂರ್ಣವಾಗಿ ಮಾಡುವಂತಹ ಹೊಣೆಗಾರಿಕೆ ಇದೆ. ಈ ಕುರಿತು ಮಾನ್ಯ ಸಚಿವರು ಚಿಂತನೆ ಮಾಡಿ ಈ ಕೆಲಸಗಳನ್ನು ಮಾಡುವ ಹಾಗೆ ಯೋಜನೆಯನ್ನು ರೂಪಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸೇತು ಬಂಧನ, ಹಳ್ಳಿ ಹೆದ್ದಾರಿ ಎನ್ನುವಂತಹ ಕೆಲವು ಯೋಜನೆಗಳಿವೆ. ನಮ್ಮ ಜಿಲ್ಲೆಯಲ್ಲಿ ಇವು ಆದ ಹಾಗೆ ಕಾಣಲಿಲ್ಲ. ಅದೇ ರೀತಿ ಜನರ ಸಹಭಾಗಿತ್ವದಿಂದ ಮಾಡುವಂತಹ ರಸ್ತೆ ಆಗಿಲ್ಲ. ಆಗಿಲ್ಲ. ನಮಗೆ ಕೊಟ್ಟಂತಹ ವಾರ್ಷಿಕ ವರದಿಯಲ್ಲಿ ಹೇಳುತ್ತಿದ್ದಾರೆ. ಮಣ್ಣಿನ ಕೆಲಸ ೨೫ ಪರ್ಸೆಂಟ್ ಕೂಡ ಆಗಿಲ್ಲ. ನನ್ನ ಕ್ಷೇತ್ರದ ಕೆಲವು ಗ್ರಾಮಗಳಲ್ಲಿ ಈ ಕೆಲಸ ಇನ್ನೂ ಪೂರ್ಣ ಆಗಿಲ್ಲ. ಮಣ್ಣಿನರಸ್ತೆಯ ಕೆಲಸ ಇನ್ನೂ ೨೫ ಪರ್ಸೆಂಟ್ ಆಗಿಲ್ಲ. ಇವೊತ್ತು ಶ್ರಮದಾನದಿಂದ ಪ್ರಾರಂಭ ಮಾಡಿಬಿಟ್ಟಿದ್ದರೂ ಪೂರ್ಣವಾಗಿಲ್ಲ, ಅದಕ್ಕೆ ರಸ್ತೆ ಮಾಡಿ. ಜಲ್ಲಿ ಹಾಕಿ. ಆಸ್ಫಾಲ್ಟಿಂಗ್ ಮಾಡಲಿಕ್ಕೆ ೧೬ ಲಕ್ಷ ರೂಪಾಯಿಯ ಒಂದು ಎಸ್ಟಿಮೇಟ್ ತಯಾರು ಮಾಡಿ, ನಾಲ್ಕು ಲಕ್ಷ ರೂಪಾಯಿಗಳನ್ನು ಊರಿನವರು ಕೊಡಬೇಕು, ಹಾಗಾದರೆ ಮಾತ್ರ ಈ ಕೆಲಸವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಸರ್ಕಾರದ ನೀತಿ ಒಂದು. ಇದರಲ್ಲಿ ಕೊಟ್ಟಂಥ ವಿಧಾನ ಒಂದು, ಅಲ್ಲಿ ಆಗುತ್ತಿರುವ ರೀತಿ ಒಂದು ಈ ರೀತಿ ಆಗಬಾರದು. ದಯಮಾಡಿ ಮಾನ್ಯ ಸಚಿವರು ನೋಡಬೇಕು. ಯಾವ ಉದ್ದೇಶದಿಂದ ಜನರ ಸಹಭಾಗಿತ್ವದಿಂದ ರಸ್ತೆ ಆಯಿತು. ಅಲ್ಲಿ ಬರೀ ಮಣ್ಣಿನ ರಸ್ತೆಯೇ ಸಾಕು ಆಸ್ಫಾಲ್ಟಿಂಗ್ ಮಾಡುವಂಥ ಅಗತ್ಯವೇ ಇಲ್ಲ. ಆದ್ದರಿಂದ ಆ ಕೆಲಸವನ್ನು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದನ್ನು ಕುರಿತು ಹೊಸ ಚಿಂತನೆ ಮಾಡಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ. ಇದೇ ಸದನದಲ್ಲಿ ನಾನು ಕೊಲ್ಲೂರು ಹೊಳೆಯ ಒಂದು ಸೇತುವೆ ಕುರಿತು ಪ್ರಸ್ತಾಪ ಮಾಡಿದ್ದೆ. ಇತ್ತೀಚೆಗೆ ಮಾನ್ಯ ಸಚಿವರೂ ಬಂದು ನೋಡಿದರು. ನ್ಯಾಶನಲ್ ಹೈವೇ ಕುಂದಾಪುರದಿಂದ ಉತ್ತರಕ್ಕೆ ಹೋಗುವ ಸಂದರ್ಭದಲ್ಲಿ ಮರವಂತೆ ಹತ್ತಿರ ಒಂದು ಕಡೆ ಸಮುದ್ರ, ಒಂದು ಕಡೆ ಹೊಳೆ ಸಾಧಾರಣ ಒಂದು ಕಿಲೋ ಮೀಟರ್ ಉದ್ದಕ್ಕೂ ಈ ರೀತಿ ಇದೆ. ಆ ಸಮುದ್ರದ ಕಿನಾರೆಯಲ್ಲಿ ಸಾಧಾರಣ ಒಂದು ಕೋಟಿ ರೂಪಾಯಿ ಖರ್ಚು ಮಾಡಿ ದೊಡ್ಡ ದೊಡ್ಡ ಕಲ್ಲಿನ ಬ್ಲಾಕ್‌ಗಳನ್ನು ಹಾಕಿ ಅದನ್ನು ರಕ್ಷಣೆ ಮಾಡುತ್ತಿದ್ದಾರೆ ಆದರೆ ಹಾಕಿದ ಕಲ್ಲುಗಳು ಸಮುದ್ರದ

ತೆರೆಯ ಹೊಡೆತದಿಂದಾಗಿ ಕೆಳಕ್ಕೆ ಕುಸಿಯುತ್ತಿವೆ ಯಾವುದೇ ದಿವಸ ಈ ರಸ್ತೆಗೆ ಅಪಾಯ ಬರುವಂಥ ಸಂದರ್ಭವಿದೆ ನ್ಯಾಶನಲ್ ಹೈ ವೇ ರಸ್ತೆ ಯಾವತ್ತೂ ಅಪಾಯಕ್ಕೆ ಒಳಗಾಗಬಾರದು. ಅದಕ್ಕಾಗಿ ಮಾನ್ಯ ಸಚಿವರಿಗೆ ಒಂದು ವಿಷಯ ಹೇಳುತ್ತೇನೆ ಕೊಲ್ಲೂರು ಹೊಳೆಗೆ ಒಂದು ರಸ್ತೆಯನ್ನು ಮಾಡಬೇಕು ಇದರಿಂದ ಒಳನಾಡಿನ ೧೦-೨೦ ಗ್ರಾಮಗಳಿಗೆ ಅನುಕೂಲವಾಗುತ್ತದೆ. ಸೇತುವೆ ಮಾಡುವ ವಿಚಾರದಲ್ಲಿ ಸಚಿವರ ಗಮನವನ್ನು ಸೆಳೆದಿದ್ದೇವೆ. ಅದನ್ನು ಸೆಂಟ್ರಲ್ ರೋಡ್ ಫಂಡ್‌ನಿಂದಾದರೂ ತೆಗೆದುಕೊಳ್ಳುವ ಕುರಿತು ಚಿಂತನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಮತ್ತೆ ತಿರುಗಿ ಇದನ್ನು ಇವತ್ತು ಪ್ರಸ್ತಾಪಿಸುತ್ತಿದ್ದೇನೆ. ಈ ಕೃಷ್ಣಾ ಕಾವೇರಿಗಳ ಕುರಿತು ಅನೇಕ ಮಂದಿ ಮಿತ್ರರು ಹೇಳಿದ್ದಾರೆ. ಈಗಾಗಲೆ ತೆಗೆದುಕೊಂಡ ಯಾವ ನೀರಾವರಿ ಯೋಜನೆಗಳು ಇದ್ದಾವೆ, ಅವು ಆದಷ್ಟು ಬೇಗ ಪೂರ್ಣವಾಗಬೇಕು ಅದರ ಜೊತೆಗೆ ವಾರಾಹಿ ನೀರಾವರಿ ಯೋಜನೆ ಎನ್ನುವುದರಲ್ಲಿ ಈಗಾಗಲೇ ಕೆಲವು ಕೋಟಿ ರೂಪಾಯಿಗಳು ಬರೀ ಕಟ್ಟಡಗಳ ನಿರ್ಮಾಣಕ್ಕೆ ಖರ್ಚಾಗಿದೆ. ಉಳಿದ ಕೆಲಸ ಪ್ರಾರಂಭವಾಗಿಲ್ಲ. ವಾರಾಹಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ನಲ್ಲಿ ವಿದ್ಯುತ್ ಉತ್ಪತ್ತಿ ಆದ ನಂತರ ಇರುವಂತಹ ನೀರು ವ್ಯರ್ಥವಾಗಿ ಸಮುದ್ರಕ್ಕೆ ಹೋಗುತ್ತಿದೆ. ಅದಕ್ಕೆ ಒಂದು ಅಣೆಕಟ್ಟನ್ನು ಕಟ್ಟಲು ೧೯೮೨ನೇ ಇಸವಿಯಲ್ಲಿ ಫೌಂಡೇಷನ್ ಸ್ಟೋನ್‌ನನ್ನು ಹಾಕಲಾಗಿದೆ ಮುಂದಿನ ಕೆಲಸ ಆಗಿಲ್ಲ. ಇದೇ ಸದನದಲ್ಲಿ ಹಿಂದಿನ ನೀರಾವರಿ ಸಚಿವರು ಶ್ರೀಮಾನ್ ದೇವೇಗೌಡರು ಇದನ್ನು ನಾನು ತೆಗೆದುಕೊಳ್ಳುತ್ತೇನೆ. ಖಂಡಿತವಾಗಿ ಮಾಡಿಯೇ ಮಾಡುತ್ತೇನೆ ಎಂದು ಆಶ್ವಾಸನೆ ಕೊಟ್ಟಿದ್ದರು. ಈ ಕೆಲಸ ಇನ್ನೂ ಹಾಗೆಯೇ ಇದೆ. ಈ ಕೆಲಸವನ್ನು ಮಾಡಿಸಬೇಕು ಹಾಗೆ ಮಾಡಿದಾಗ ಕುಂದಾಪುರ ಮತ್ತು ಉಡುಪಿ ತಾಲ್ಲೂಕಿನ ಸಾಧಾರಣ ೩೦ ಸಾವಿರ ಎಕರೆ ಜಮೀನಿಗೆ ಬೇಕಾದಷ್ಟು ನೀರು ಸಿಗುತ್ತದೆ, ಅದಕ್ಕೆ ಅರಣ್ಯ ಬಿಡುಗಡೆ ಮಾಡುವುದಿದೆ. ಮೂರು ವರ್ಷದಿಂದ ಅರಣ್ಯ ಬಿಡುಗಡೆ ಮಾಡುವ ಬಗ್ಗೆ ಒಂದು ಕಮಿಟಿ ಮೀಟಿಂಗ್ ಆಗಲಿಲ್ಲ. ಆ ಮೀಟಿಂಗ್ ಮಾಡಿಸಿ, ಕೇಂದ್ರ ಸರ್ಕಾರದಿಂದ ವರದಿಯನ್ನು ತರಿಸಿ, ಬೇಗ ಆ ಕೆಲಸವನ್ನು ಕೈಗೆತ್ತಿಕೊಳ್ಳಬೇಕು ಎಂದು ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಸಣ್ಣ ನೀರಾವರಿಯಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಖ್ಯವಾಗಿ ಉಪ್ಪು ನೀರಿನ ತಡೆಗಟ್ಟುಗಳು ಸಾಲ್ಟ್ ವಾಟರ್ ಎಕ್ಸ್‌ಪ್ಲೋಷನ್ ಡ್ಯಾಮ್ಸ್ ಮತ್ತು ವೆಂಟೆಡ್ ಡ್ಯಾಮ್‌ಗಳು ನೂರಾರು ಹಾಳಾಗಿ ಬಿದ್ದಿವೆ ಇವುಗಳ ದುರಸ್ತಿ ಆಗಬೇಕು ಇದಕ್ಕೆ ಒಂದು ಮಾಸ್ಟರ್ ಪ್ಲಾನ್ ಮಾಡಬೇಕು ಇಲ್ಲವಿದ್ದರೆ ಈ ಕೆಲಸ ಆಗುವುದಿಲ್ಲ. ಉಪ್ಪು ನೀರು ಒಳಗೆ ಬರುತ್ತಾ ಇರುತ್ತದೆ. ಸಿಹಿ ನೀರಿಗೆ ತಡೆ ಆಗುವುದಿಲ್ಲ, ನೀರಾವರಿಗೆ ಉಪಯೋಗ ಆಗುವುದಿಲ್ಲ. ಇದರ ಬಗ್ಗೆ ಲಕ್ಷಾಂತರ ರೂಪಾಯಿ ಖರ್ಚು ಆಗಿದೆ. ಇದರ ಕುರಿತು ಕೂಡ ಒಂದು ಯೋಜನೆಯನ್ನು ಮಾಡಬೇಕು. ಕಡಲ ಕೊರೆತದಿಂದ ಉಂಟಾಗುವ ಹಾನಿ ಬಗ್ಗೆ ಹೇಳುವುದಾದರೆ ಇತ್ತೀಚೆಗೆ ಮಂತ್ರಿಗಳು ಬಂದು ಪ್ರತ್ಯಕ್ಷ ದರ್ಶನ ಮಾಡಿದ್ದಾರೆ ಅಲ್ಲಿನ ಜನರಿಗೆ ಬಹಳ ತೊಂದರೆ ಆಗುತ್ತಿದೆ. ಸಮುದ್ರ ತೀರದಲ್ಲಿ ಇರತಕ್ಕ ಜನಗಳು ಕಟ್ಟಿಕೊಂಡ ಮನೆಗಳು ಕೊರೆದು ಹೋಗುತ್ತಿವೆ ಅವರು ಮಾಡಿದಂಥ ಕೃಷಿ ಆದರೆ ತೆಂಗಿನ ಸಸಿ ಇತ್ಯಾದಿ ಯಾವ ದಿವಸ ಹೋಗುತ್ತದೆ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ ಆ ಸ್ಟ್ರೆಚ್ ಆಫ್ ಲ್ಯಾಂಡ್ ಎಲ್ಲೆಲ್ಲಿ ಇದೆ, ಸಮುದ್ರ ತೀರದ ಪೀಸ್‌ಗಳು ವರ್ಷೇ ವರ್ಷೆ ಕೊರೆದು ಸಮುದ್ರದ ಪಾಲಾಗುತ್ತಿದೆ. ಸಮುದ್ರ ಮತ್ತು ನದಿ ಸೇರುವಂಥ ಅಳಿವೆ ಏನಿದೆ ಆ ಮುಖವೇ ಬದಲಾಗುತ್ತಾ ಇದೆ. ಇದೆಲ್ಲ ನೋಡಿ ಒಂದು ಮಾಸ್ಟರ್ ಪ್ಲಾನ್ ತಯಾರು ಆಗಬೇಕು. ಕಳೆದ ೫ ವರ್ಷಗಳಿಂದ ನಾನು ಸದಸ್ಯನಾಗಿದ್ದಾಗ, ಇದೇ ಸದನದಲ್ಲಿ ಮಂತ್ರಿಗಳು ಹೇಳುತ್ತಾ ಇದ್ದರು, ಕೇಂದ್ರಕೆ ರಿಪೋರ್ಟ್ ಕಳಿಸಿದ್ದೇವೆ. ಎಂದು ೫ ವರ್ಷಗಳಿಂದ ಆ ರಿಪೋರ್ಟ್ ಎಲ್ಲಿ ನೆನಗುದಿಗೆ ಬಿದ್ದಿದೆಯೊ. ಇದರ ಕುರಿತು ಏಕೆ ಒತ್ತಾಯ ಮಾಡಿ ತರಿಸಲಿಕ್ಕೆ ಆಗುವುದಿಲ್ಲವೊ ಗೊತ್ತಿಲ್ಲ ಕೇರಳದಲ್ಲಿ ಆಗುತ್ತದೆ. ಕೇರಳದಲ್ಲಿ ಕೋಟಿಗಟ್ಟಲೆ ರೂಪಾಯಿ ಸಮುದ್ರ ಕೊರೆತಕ್ಕೆ ಬಂದಿದೆ ಅಲ್ಲಿ ಕೆಲಸ ಆಗುವುದನ್ನು ನಾವು ಪ್ರತ್ಯಕ್ಷವಾಗಿ ನೋಡುತ್ತಾ ಇದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿ ವರ್ಷ ಕೆಲವು ಲಕ್ಷಾಂತರ ರೂಪಾಯಿಗಳ ಕಲ್ಲುಗಳನ್ನು ತೆಗೆದುಕೊಂಡು ಹಾಕುವಂಥಾದ್ದು ಬರುವ ವರ್ಷ ಆ ಕಲ್ಲು ವಾಪಸ್ ಸಮುದ್ರಕ್ಕೆ ಹೋಗುವಂತಹ ದೃಶ್ಯವನ್ನು ನಾವು ನೋಡುತ್ತಾ ಇದ್ದೇವೆ ಈ ಹಣ ವೇಸ್ಟ್ ಆಗುತ್ತಾ ಇದೆ, ಅದು ಆಗಬಾರದು ಶಾಶ್ವತವಾದ ಒಂದು ತಡೆಗೋಡೆ ಕಟ್ಟುವಂಥ ಕೆಲಸ ಇಲ್ಲಿ ಆಗಬೇಕು ಎಂದು ನನ್ನ ವಿನಂತಿ. ಆಮೇಲೆ ಒಬ್ಬರು ಸದಸ್ಯರು ಇಲ್ಲಿ ಮಾತನಾಡುತ್ತಾ ಹೇಳಿದರು ಅವರು ಈಗ ಸದನದಲ್ಲಿಲ್ಲ ಪಶ್ಚಿಮಕ್ಕೆ ಅನೇಕ ನದಿಗಳು ಹರಿದುಹೋಗುತ್ತಾ ಇವೆ, ನೀರು ವ್ಯರ್ಥವಾಗುತ್ತಾ ಇದೆ, ಅವನ್ನು ಪೂರ್ವಕ್ಕೆ ತಿರುಗಿಸಿ ಎಂದು ಹೇಳಿದರು ಅದು ಅವರ ದೃಷ್ಟಿಯಿಂದ ಸರಿ ಆದರೆ ಅದರಿಂದ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಬೆಂಗಾಡು ಮಾಡುವಂಥ ಪರಿಸ್ಥಿತಿ ಆಗಬಾರದು ಅದು ವಾಸ್ತವಿಕವಾಗಿ ಇವತ್ತು ಆಗುವುದಿಲ್ಲ. ಏಕೆಂದರೆ, ವಾರಾಹಿ ಪ್ರಾಜೆಕ್ಟ್ ಆದಮೇಲೆ ಶರಾವತಿ ಪ್ರಾಜೆಕ್ಟ್ ಆದಮೇಲೆ ಆ ನೀರನ್ನು ಪೂರ್ವಕ್ಕೆ ತಿರುಗಿಸಲಿಕ್ಕೆ ಆಗುವುದಿಲ್ಲ. ಅದಕ್ಕೆ ವಾಸ್ತವಿಕವಾಗಿ ತೊಂದರೆ ಇದೆ.

ಹಾಗೆಂದು ಉಳಿದ ನದಿಗಳನ್ನು ತಿರುಗಿಸಲಿಕ್ಕೆ ಹೋದರೆ ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಜನರು ಸಹಸ್ರ ಸಹಸ್ರ ಪಂಪ್ಸೆಟ್ಟುಗಳನ್ನು ಇಟ್ಟುಕೊಂಡು ಇರಿಗೇಷನ್ ಮಾಡುತ್ತಾ ಇದ್ದಾರೆ. ಆ ಭೂಮಿಗೆ ತೊಂದರೆಯಾಗುತ್ತದೆ, ಆ ಜನರಿಗೆ ತೊಂದರೆಯಾಗುತ್ತದೆ. ಅದನ್ನೂ ಕೂಡ ಆಲೋಚನೆ ಮಾಡಬೇಕು. ಅದರ ಬದಲಿಗೆ ನಾನು ಒಂದು ಸೂಚನೆಯನ್ನು ಕೊಡಲಿಕ್ಕೆ ಬಯಸುತ್ತೇನೆ. ವ್ಯರ್ಥವಾಗಿ ಸಮುದ್ರಕ್ಕೆ ಸೇರುವಂಥ ನೀರು ಸ್ವಲ್ಪ ಇರಬಹುದು, ಇಲ್ಲ ಎಂದು ನಾನು ಹೇಳುವುದಿಲ್ಲ. ಮಳೆಗಾಲದಲ್ಲಿ ತುಂಬಿ ಹರಿಯುವ ಹಾಗೆ ಕಾಣುತ್ತದೆ, ತುಂಬ ನೀರು ಇದೆಯೆಂದು ಕಾಣುತ್ತದೆ ಆದರೆ ಬೇಸಿಗೆಯಲ್ಲಿ ಬಂದು ನೋಡಿದರೆ ಡಿಸೆಂಬರ್ ತಿಂಗಳ ನಂತರ ಎಲ್ಲ ನದಿಗಳು ಬತ್ತಿ ಹೋಗುತ್ತವೆ, ನೇತ್ರಾವತಿ ನದಿಯಂಥ ಗುರುತರ ನದಿ ಕೂಡ ಬತ್ತಿಹೋಗುತ್ತದೆ ಬೇಕಾದಂಥ ನೀರು ಅಲ್ಲಿ ಇಲ್ಲ. ಆದ್ದರಿಂದ ನಾನು ಹೇಳುತ್ತೇನೆ. ಬೆಟ್ಟದ ಬುಡವೂ ಅಲ್ಲ, ಸಮುದ್ರದ ತೀರವೂ ಅಲ್ಲ, ಮಧ್ಯ ಭಾಗದಲ್ಲಿ ಅಣೆಕಟ್ಟುಗಳನ್ನು ಪ್ರತಿಯೊಂದು ಹೊಳೆಗೂ ಕಟ್ಟಿ ನೀರನ್ನು ಸಂಗ್ರಹಿಸಿ ಇಡಬಹುದು. ಆ ನದಿಗಳು ಹತ್ತಿರ ಹತ್ತಿರ ಇರುವುದರಿಂದ ನದಿಗಳಿಗೆ ಸಂಪರ್ಕವನ್ನು ಕಲ್ಪಿಸಿ ಜಲಸಾರಿಗೆ ವ್ಯವಸ್ಥೆಯನ್ನು ಮಾಡಬಹುದು ಇಡೀ ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಮಂಡಲ ಪಂಚಾಯಿತಿಗಳಿಗೆ ಮತ್ತು ಸಣ್ಣ ಟೌನ್ ಪಂಚಾಯಿತಿಗಳಿಗೆ, ಪುರಸಭೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬಹುದು. ಇವತ್ತು ಬೋರ್ವೆಲ್‌ಗಳನ್ನು ಹಾಕಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುತ್ತಿರುವುದರಿಂದ ಅಂತರ್ಜಲ ಎಲ್ಲಿ ಬತ್ತಿ ಹೋಗುತ್ತದೊ ಎಂದು ಅನೇಕ ನಮ್ಮ ಸ್ನೇಹಿತರು ಈಗಾಗಲೇ ಹೇಳಿದರು. ಆದ್ದರಿಂದ ಅಂತರ್ಜಲ ಬತ್ತಿಹೋಗುವಂಥ ಒಂದು ಸಂದರ್ಭ ಇದೆ. ನಿಸರ್ಗ ಸಹಜವಾದ ನೀರನ್ನು ಉಪಯೋಗಿಸಿಕೊಳ್ಳಬೇಕು. ಎಲ್ಲ ಕಡೆ ಬೋರ್‌ವೆಲ್‌ಗೆ ಉಪಯೋಗಿಸುವಂಥ ಹಣವನ್ನೇ ಉಪಯೋಗಿಸಿಕೊಂಡು ಅದನ್ನು ಮಾಡಲಿಕ್ಕೆ ಸಾಧ್ಯವಿದೆ. ಈ ಕುರಿತು ಒಂದು ಯೋಜನೆಯನ್ನು ಮಾಡುವುದು ಸೂಕ್ತ ಮತ್ತು ಅವಶ್ಯ ಇದು ಒಂದು ಹೊಸ ಯೋಜನೆಯಾಗಿ ಪರಿಗಣಿಸಲ್ಪಡಬಹುದು ಎಂದು ಇಷ್ಟು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ, ವಂದನೆಗಳು.

† ಶ್ರೀ ಸಿ. ಬೈರೇಗೌಡ (ವೇಮಗಲ್)ಸ.—ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಆದಾಯದಲ್ಲಿ ಬಹು ಹೆಚ್ಚಿನ ಪಾಲಿನ ಹಣವನ್ನು ಈ ಲೋಕೋಪಯೋಗಿ ಇಲಾಖೆಗೆ ನಾವು ಖರ್ಚು ಮಾಡುತ್ತಾ ಇದ್ದೇವೆ. ಕಾರಣವೇನೆಂದರೆ, ಅತಿಮುಖ್ಯವಾಗಿರತಕ್ಕಂಥಾದ್ದು, ಆದರಲ್ಲೂ ವ್ಯವಸಾಯಕ್ಕೆ ನೀರನ್ನು ಒದಗಿಸತಕ್ಕಂಥ ಕೆಲಸ ಈ ಇಲಾಖೆಯಿಂದ ಆಗುತ್ತಾ ಇದೆ, ಎರಡನೆಯದಾಗಿ, ಸಂಪರ್ಕವನ್ನು ಒದಗಿಸತಕ್ಕಂಥ ಕೆಲಸ ಈ ಇಲಾಖೆಯಿಂದ ಆಗುತ್ತಾ ಇದೆ. ಮತ್ತು ಸರ್ಕಾರಿ ಕಟ್ಟಡಗಳನ್ನು ಕಟ್ಟಿ ನಿರ್ವಹಿಸತಕ್ಕಂಥ ಕೆಲಸ ಕೂಡ ಈ ಇಲಾಖೆಯಿಂದ ಆಗುತ್ತಾ ಇದೆ. ಆ ಕಾರಣದಿಂದ ಹೆಚ್ಚು ಹಣವನ್ನು ಈ ಇಲಾಖೆಗೆ ಖರ್ಚು ಮಾಡುತ್ತಾ ಇದ್ದೇವೆ. ಪ್ರಥಮವಾಗಿ ನಾನು ರೈತನಾಗಿರುವುದರಿಂದ ನೀರಾವರಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕೆಂದು ಇಚ್ಛಿಸುತ್ತೇನೆ. ವ್ಯವಸಾಯಕ್ಕೆ ಅತಿ ಮುಖ್ಯವಾಗಿ ಬೇಕಾಗಿರತಕ್ಕಂಥಾದ್ದು ನೀರು. ನೀರು ಎಂದರೆ ರೈತನ ಉಸಿರು ಎನ್ನತಕ್ಕಂಥಾದ್ದನ್ನು ನಾನು ವಿಶೇಷವಾಗಿ ಹೇಳಬೇಕಾಗಿಲ್ಲ.

೩–೧೦ ಪಿ. ಎಂ.

ನಮ್ಮ ರಾಜ್ಯದಲ್ಲಿ ನೀರಾವರಿಗೆ ಹೆಚ್ಚಿನ ಪ್ರದೇಶವನ್ನು ಒಳಪಡಿಸಿ, ರೈತನ ಜಮೀನಿಗೆ ಹೆಚ್ಚಿಗೆ ನೀರು ಕೊಡತಕ್ಕ ಪ್ರಯತ್ನದಲ್ಲಿ ಬೇರೆ ರಾಜ್ಯಗಳಿಗೆ ಹೋಲಿಸಿದಾಗ, ಎಷ್ಟು ತೀವ್ರಗತಿಯಿಂದ, ಕೆಲಸ ಆಗಬೇಕಾಗಿತ್ತೋ, ಎಷ್ಟು ದೊಡ್ಡ ಪ್ರಮಾಣದಲ್ಲಿ ಆಗಬೇಕಾಗಿತ್ತೋ ಆ ಪ್ರಮಾಣದಲ್ಲಿ ಕೆಲಸಗಳನ್ನು ಮಾಡಿಸತಕ್ಕ ಪ್ರಯತ್ನ ನಮ್ಮ ರಾಜ್ಯದಲ್ಲಿ ಆಗಲಿಲ್ಲ. ನಾನು ಕೇವಲ ಈಗಿರತಕ್ಕ ಸರ್ಕಾರದ ಮೇಲೆ ಹೊರೆಯನ್ನು ಹೊರಿಸುತ್ತಿದ್ದೇನೆ ಅದು ಸತ್ಯಕ್ಕೆ ದೂರವಾಗಿರತಕ್ಕಂಥಾದ್ದು. ಅಂದರೆ ಹಿಂದೆ ಇದ್ದಂಥ ಸರ್ಕಾರಗಳು ಇರಬಹುದು ನಮ್ಮ ಸರ್ಕಾರ ಇರಬಹುದು; ಕಾಂಗ್ರೆಸ್ ಸರ್ಕಾರ ಇರಬಹುದು ಎಲ್ಲ ಸರ್ಕಾರಗಳು ಕೂಡ ನೀರಾವರಿಗೆ ಎಷ್ಟು ಆದ್ಯತೆಯನ್ನು ಕೊಡಬೇಕಾಗಿತ್ತೋ; ಅಷ್ಟು ಆದ್ಯತೆಯನ್ನು ಕೊಟ್ಟಿಲ್ಲ ಎನ್ನುವುದು ನನ್ನ ಖಚಿತವಾದ ಅಭಿಪ್ರಾಯ. ನಮ್ಮ ರಾಜ್ಯದ ವಿಸ್ತೀರ್ಣ ೧, ೯೧, ೭೭೩ ಚದರ ಕಿಲೋಮೀಟರ್ ಇದೆ. ಇದರಲ್ಲಿ ನೀರಾವರಿ ಆಗುತ್ತಿರುವಂಥಾದ್ದು ೨೯. ೩೧, ೪೩೭ ಹೆಕ್ಟೇರ್ ಮಾತ್ರ. ಇದರಲ್ಲಿ ೧೩.೦೮,೭೦೦ ಹೆಕ್ಟೇರ್ ಪ್ರದೇಶ ದೊಡ್ಡ ಪ್ರಮಾಣದ ನೀರಾವರಿಯಿಂದ ಆಗುತ್ತಿದೆ, ಸಣ್ಣ ಪ್ರಮಾಣದ ನೀರಾವರಿಯಿಂದ ಕೇವಲ ೮, ೯೮, ೨೭೯ ಹೆಕ್ಟೇರ್ ಪ್ರದೇಶ ನೀರಾವರಿಯಾಗುತ್ತದೆ. ಮತ್ತು ೭, ೨೪, ೪೨೭ ಹೆಕ್ಟೇರ್ ಭೂಮಿ ಅಂತರ್ ಜಲದಿಂದ ನೀರಾವರಿಯಾಗುತ್ತಿದೆ. ದುರದೃಷ್ಟವಶಾತ್, ನಮ್ಮ ರಾಜ್ಯದಲ್ಲಿ ಕಾವೇರಿ ಕಣಿವೆ ಪ್ರದೇಶ ಮತ್ತು ಕೃಷ್ಣ ಕಣಿವೆ ಪ್ರದೇಶ ಏನಿದೆ, ಈ ಎರಡೂ ಕಣಿವೆ ಪ್ರದೇಶಗಳಿಂದ ಹೊರತಾಗಿರತಕ್ಕ ಪ್ರದೇಶದಿಂದ ನಾನು ಬರತಕ್ಕ

ವನು. ನಾನು ಎಷ್ಟೇ ಮಾತನಾಡಿದರೂ ಸಹ ನನ್ನನ್ನು ನಾನು ಮರೆತು ಬೇರೆ ವಿಷಯವನ್ನು ಮಾತನಾಡಬೇಕಾದ ಪರಿಸ್ಥಿತಿ ಉಂಟಾಗಿದೆ. ಕಾರಣವೇನೆಂದರೆ, ಈ ಎರಡೂ ಕಣಿವೆ ಪ್ರದೇಶಗಳಿಂದ ನಮ್ಮ ಜಿಲ್ಲೆಗಾಗಲಿ ಅಥವಾ ನಾನು ಇರತಕ್ಕಂಥ ಪ್ರದೇಶಕ್ಕಾಗಲಿ ಯಾವತ್ತೂ ನೀರು ಬರುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕಂಥ ಪರಿಸ್ಥಿತಿ ಇದೆ. ಆದರೂ ನಾನು ಒಬ್ಬ ರೈತನಾಗಿರುವುದರಿಂದ ಕಾವೇರಿ ಮತ್ತು ಕೃಷ್ಣ ಕಣಿವೆ ಪ್ರದೇಶಗಳಿಂದ ನನ್ನ ಜಿಲ್ಲೆಗೆ ಅಥವಾ ನನ್ನ ಭೂಮಿಗೆ ನೀರು ಬಂದರೆ ನನಗೆ ಎಷ್ಟು ಸಂತೋಷ ಆಗುತ್ತದೋ ಅದೇರೀತಿಯಲ್ಲಿ ಬೇರೆ ಪ್ರದೇಶದಲ್ಲಿರತಕ್ಕಂಥ ರೈತರ ಜಮೀನಿಗೆ ನೀರು ಸಿಕ್ಕಿದರೆ ನನಗೆ ಅಷ್ಟೇ ಸಂತೋಷವಾಗುತ್ತದೆ.

(ಶ್ರೀ ಜಿ. ಎಸ್. **ಆಚಾರ್** ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಆ ದೃಷ್ಟಿಯಿಂದ ಯಾವ ಪ್ರಮಾಣದಲ್ಲಿ ಎಷ್ಟು ತೀವ್ರಗತಿಯಲ್ಲಿ ನೀರನ್ನು ಒದಗಿಸತಕ್ಕ ಕೆಲಸವಾಗ ಬೇಕಾಗಿತ್ತೋ; ಅಷ್ಟು ತೀವ್ರಗತಿಯಲ್ಲಿ ಕೆಲಸ ಆಗಲಿಲ್ಲವೆಂದು ಮತ್ತೊಮ್ಮೆ ನಾನು ವಿಷಾದದಿಂದ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕಾವೇರಿ ಜಲಾನಯನ ಪ್ರದೇಶಕ್ಕೆ ಬೇಕಾಗುವಂಥ ಹಣ ೭೦೦–೮೦೦ ಕೋಟಿ ರೂಪಾಯಿಗಳು ಮಾತ್ರ ಇದು ದೊಡ್ಡ ಮೊತ್ತವೇನೂ ಅಲ್ಲ. ನಾವು ಈಗಾಗಲೇ ಕಾವೇರಿ ನದಿಯಲ್ಲಿ ಮುಳುಗಿ ಕುಳಿತಿದ್ದೇವೆ. ಅಂಥ ಪರಿಸ್ಥಿತಿ ಉಂಟಾಗಿದೆ, ಉದ್ಭವವಾಗಿದೆ. ಇದಕ್ಕೆ ಕಾರಣಗಳೆಲ್ಲವನ್ನೂ ನಾನು ಹೇಳುವುದಕ್ಕೆ ಹೋಗುವುದಿಲ್ಲ ಕಾರಣವೇನೆಂದರೆ, ಅದರ ಬಗ್ಗೆ ಈಗಾಗಲೇ ಚರ್ಚೆಯಾಗಿದೆ, ಮುಂದೆ ಕೂಡ ಚರ್ಚೆ ಮಾಡತಕ್ಕ ಪರಿಸ್ಥಿತಿ ಬರಬಹುದು. ಆದ್ದರಿಂದ ಅದರ ಬಗ್ಗೆ ಈ ಸಂದರ್ಭದಲ್ಲಿ ಹೇಳುವಂಥಾದ್ದು ಅಪಕೃತ; ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈಗಾಗಲೆ ಅದರ ಅರಿವು, ಅದರ ತೀವ್ರತೆ ಅರ್ಥವಾಗಿದೆ. ಈ ಕೆಲಸಕಾರ್ಯಗಳನ್ನು ನಾವು ಮೊದಲೇ ಮಾಡಿ ಮುಗಿಸಿದ್ದರೆ, ಇವತ್ತು ನಮಗೆ ಎಂತಹ ಶೋಚನೀಯವಾದ ಪರಿಸ್ಥಿತಿ ಬಂದಿದೆ, ಆ ಪರಿಸ್ಥಿತಿಗೆ ನಾವು ಬರುತ್ತಿರಲಿಲ್ಲ. ಇದು ಆ ಭಾಗದ ರೈತರ ದುರಾದೃಷ್ಟ. ಕಾರಣವೇನೆಂದರೆ, ಈ ಭಾಗದಲ್ಲಿರತಕ್ಕಂಥ, ಕಾವೇರಿ ಜಲಾನಯನ ಪ್ರದೇಶದಲ್ಲಿರತಕ್ಕಂಥ ಸಾಕಷ್ಟು ಪ್ರದೇಶ ಸದಾ ಬರಗಾಲಕ್ಕೆ ಈಡಾಗತಕ್ಕ ಪ್ರದೇಶವಾಗಿದೆ. ಇನ್ನು ಮುಂದೆ ವರ್ಷೇ ವರ್ಷೇ ಮಳೆ ಕೂಡ ಕಡಿಮೆಯಾಗುವ ಸಂಭವ ಕಾಣುತ್ತದೆ. ಇಂಥ ಪರಿಸ್ಥಿತಿಯಲ್ಲಿ ಅಲ್ಲಿನ ರೈತರಿಗೆ ನದಿಯ ನೀರನ್ನು ಬಿಡದೇ ಇದ್ದರೆ ತೊಂದರೆಯಾಗುತ್ತದೆ. ಇವತ್ತಿನ ದಿವಸ ಖುಷ್ಕಿ ಪ್ರದೇಶದಲ್ಲಿ ರಾಗಿಯನ್ನು ಬೆಳೆಯುತ್ತಿದ್ದಾರೆ. ಇನ್ನು ಮುಂದೆ ರಾಗಿಯನ್ನೂ ಕೂಡಬೆಳೆಯುವುದಕ್ಕೆ ಸಾಧ್ಯವೇ ಇಲ್ಲ, ಇನ್ನೇನಾದರೂ ಅಂದರೆ ಬರೀ ಹುರುಳಿಯನ್ನು ಬೆಳೆದು ಹುರುಳಿ ಯನ್ನು ತಿನ್ನತಕ್ಕ ಪರಿಸ್ಥಿತಿಗೆ ಆ ಭಾಗದಲ್ಲಿರತಕ್ಕ ಜನರನ್ನು ದೂಡತಕ್ಕ ಪಾಪದ ಕೆಲಸ ಇವತ್ತಿನ ದಿವಸ ನಡೆದಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಆದ್ದರಿಂದ ಕಾವೇರಿ ಬಗ್ಗೆ ಚರ್ಚೆಯಾಗಿರುವ ಕಾರಣದಿಂದ ನಾನು ಅದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಅದೇ ರೀತಿಯಲ್ಲಿ ಕೃಷ್ಣಾ ನದಿ ಪಾತ್ರದಲ್ಲೂ ಸಹ ಎರಡು ಸಾವಿರದ ಇಸವಿಯವರೆಗೆ ನಮ್ಮ ತಲೆಯ ಮೇಲೆ ಕತ್ತಿ ತೂಗುತ್ತಿರುತ್ತದೆ. ಆ ನದಿ ನೀರನ್ನು ನಾವು ಉಪಯೋಗಿಸಿಕೊಳ್ಳದೆ ಇದ್ದರೆ ಇವೊತ್ತು ಯಾವರೀತಿಯಲ್ಲಿ ಕಾವೇರಿ ನದಿಯಲ್ಲಿ ಶಾಶ್ವತವಾಗಿ ನಮಗೆ ವಂಚನೆಯಾಗತಕ್ಕಂಥ ಪರಿಸ್ಥಿತಿ ಒದಗಿದೆಯೋ ಅದೇ ಪರಿಸ್ಥಿತಿ ಕೃಷ್ಣಾ ಜಲಾನಯನ ಪ್ರದೇಶದಲ್ಲೂ ಮತ್ತು ಕೃಷ್ಣಾ ನದಿ ಕಣಿವೆಯಲ್ಲಿಯೂ ಕೂಡ ಒದಗುತ್ತದೆ. ಆದ್ದರಿಂದ ಇವೊತ್ತಿನದಿವಸ ನಾನು ಒಬ್ಬ ರೈತನಾಗಿ ಸರ್ಕಾರಕ್ಕೆ ವಿನಂತಿ ಮಾಡುತ್ತಿದ್ದೇನೆ. ಆದ್ದರಿಂದ, ನೀರಾವರಿಯ ಬಗ್ಗೆ ನೀವು ಹೆಚ್ಚಿನ ಆಸ್ಥೆಯನ್ನು ಕೊಡದೇ ಇದ್ದರೆ, ನೀವು ಶಾಶ್ವತವಾಗಿ ಈ ರಾಜ್ಯದ ರೈತನ ತಲೆಯಮೇಲೆ ಬಂಡೆಯನ್ನು ಎಳೆಯತಕ್ಕಂಥ ಕೆಲಸ ಆಗುತ್ತದೆ, ಕಾವೇರಿ ನದಿಪಾತ್ರದಲ್ಲಿ ಈಗಾಗಲೇ ಆಗಿದೆ. ಕೃಷ್ಣಾ ನದಿ ಪಾತ್ರದಲ್ಲೂ ಕೂಡ ಅದೇ ಕೆಲಸ ನಮ್ಮ ರಾಜ್ಯದ ರೈತರಿಗೂ ಒದಗತಕ್ಕಂಥ ಪರಿಸ್ಥಿತಿ ಇದೆ. ಆದ್ದರಿಂದ, ಇದರ ತೀವ್ರತೆಯನ್ನು ಅರಿತು, ಸರ್ಕಾರ ಕೆಲಸಮಾಡ ಬೇಕೆಂದು ಇಡೀ ರಾಜ್ಯದ ರೈತರ ಎಲ್ಲಾ ಮಾತುಗಳನ್ನು ಕೇಂದ್ರೀಕರಿಸಿ, ಇವೊತ್ತಿನದಿವಸ ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಹೇಳಬೇಕಾಗಿರತಕ್ಕದ್ದು ಇನ್ನೂ ಸಾಕಷ್ಟು ಇದೆ, ಆದರೂ ಸಹ ಸೂಕ್ಷ್ಮವಾಗಿ ಹೇಳುತ್ತೇನೆ. ನಮ್ಮ ಪ್ರದೇಶಗಳಿಗೆ ಬೇಕಾಗಿರತಕ್ಕದ್ದು ಸಣ್ಣ ನೀರಾವರಿ, ಮೈನರ್ ಇರಿಗೇಷನ್. ನಮ್ಮಲ್ಲಿ ಎಲ್ಲಾ ಕೆರೆಗಳು ಕೂಡ ಹೂತುಹೋಗಿವೆ. ಅದು ಕೋಲಾರ ಜಿಲ್ಲೆ ಇರಬಹುದು, ಬೆಂಗಳೂರು ಜಿಲ್ಲೆ ಇರಬಹುದು, ತುಮಕೂರು ಜಿಲ್ಲೆ ಇರಬಹುದು, ಈ ಜಿಲ್ಲೆಗಳಲ್ಲಿ ಎಲ್ಲಾ ಕೆರೆಗಳು ಹೂತು ಹೋಗಿರತಕ್ಕಂಥಾದ್ದನ್ನು ನಾನೇನು ಹೇಳಬೇಕಾಗಿಲ್ಲ ಕೆರೆಗಳನ್ನು ಕಟ್ಟಿದ್ದಾಗ ಯಾವ ಪ್ರಮಾಣದಲ್ಲಿ ನೀರು ನಿಲ್ಲುತ್ತಿತ್ತು, ಇವೊತ್ತು ಆ ಪ್ರಮಾಣದಲ್ಲಿ ನೀರು ನಿಲ್ಲುತ್ತಿಲ್ಲ. ಅದಕ್ಕೆ ನಾನಾ ಕಾರಣಗಳು ಇವೆ. ಹೆಚ್ಚಿನ ಭೂಮಿಯನ್ನು ಉಳುಮೆ ಮಾಡಿದ್ದರಿಂದ ಆ ಭೂಮಿಯಿಂದ ಮಣ್ಣು ಬಂದು ಕೆರೆಗಳಲ್ಲಿ ತುಂಬಿ ಹೂತು ಹೋಗಿರತಕ್ಕದ್ದನ್ನು ನಾವು ನೋಡುತ್ತಾ ಇದ್ದೇವೆ. ಹೀಗಾಗಿ ಎಷ್ಟು ನೀರು ನಿಲ್ಲಬೇಕಾಗಿತ್ತೋ ಆ ಪ್ರಮಾಣದಲ್ಲಿ ನೀರು ನಿಲ್ಲುತ್ತಿಲ್ಲ ಎಂದು ನಾವು ಅನೇಕ-

ಸಂದರ್ಭದಲ್ಲಿ ಹೇಳಿದ್ದೇವೆ. ಕೆರೆಗಳಲ್ಲಿರತಕ್ಕ ಹೂಳು ತೆಗೆಯುತಕ್ಕ ಕೆಲಸವನ್ನು ಮಾಡಬೇಕೆಂದು ಹೇಳಿದ್ದೇವೆ. ತಜ್ಞರಾಗಿರತಕ್ಕವರು, ಹಿಂದಿನ ಸರ್ಕಾರದವರು ಹೇಳಿರುವಂಥಾದ್ದು ಏನೆಂದರೆ, ಹೂಳು ತೆಗೆಯತಕ್ಕ ಕೆಲಸಕಾರ್ಯ ಬಹಳ ದುಭಾರಿಯಾಗುತ್ತದೆ ; ದುಬಾರಿಯಾಗುತ್ತಿರುವ ಕಾರಣದಿಂದ ಈ ಕೆಲಸ ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳಿದ್ದರು, ಇದು ಮಾಡತಕ್ಕದ್ದು ದುಬಾರಿ ಆಗುತ್ತದೆ ನಿಜ ಅದನ್ನು ನಾನು ಒಪ್ಪುತ್ತೇನೆ. ಯಾವ ನೀರು ಇಲ್ಲದೇ ಇರತಕ್ಕಂಥ ಪ್ರದೇಶಗಳಲ್ಲಿ ರೈತರಿಗೆ ನೀರು ಕೊಡಬೇಕಾಗಿರುವುದು ಸರ್ಕಾರದ ಕರ್ತವ್ಯ ಅದು ಹೆಚ್ಚು ಆಗುತ್ತದೋ, ಅಥವಾ ಕಡಿಮೆಯಾಗುತ್ತದೋ ಅದನ್ನು ಗಣನೆಗೆ ತೆಗೆದುಕೊಳ್ಳದೆ ಆ ಕೆಲಸವನ್ನು ಮಾಡಬೇಕಾಗುತ್ತದೆ. ಇವೊತ್ತು ವಿಜ್ಞಾನ ಮುಂದುವರೆಯುತ್ತಿದೆ, ವಿಜ್ಞಾನ ಮುಂದುವರಿದು ಹೊಸ ಹೊಸ ತಂತ್ರಜ್ಞಾನ ಬರುತ್ತಿದೆ. ಈ ಪರಿಸ್ಥಿತಿಯಲ್ಲಿ ಹೊಸ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಕೆರೆಗಳಲ್ಲಿರತಕ್ಕ ಹೂಳು ತೆಗೆಸಿ, ಅಲ್ಲಿ ಹೆಚ್ಚಿನ ಕೆಪಾಸಿಟಿ ನೀರು ನಿಲ್ಲತಕ್ಕ ಕೆಲಸವನ್ನು ಸರ್ಕಾರ ಹಾಕಿಕೊಳ್ಳಬೇಕು ಎಂದು ನಾನು ಆ ಭಾಗದ ರೈತರ ಪರವಾಗಿ ವಿನಂತಿಮಾಡಿಕೊಳ್ಳುತ್ತೇನೆ. ಅದರಲ್ಲಿಯೂ ಪ್ರಮುಖವಾಗಿ ಅತೀ ಹೆಚ್ಚಿನ ಕೆರೆಗಳು ಇರತಕ್ಕಂಥಾದ್ದು, ನಮ್ಮ ಕೋಲಾರ ಜಿಲ್ಲೆಯಲ್ಲಿ ; ಆದ್ದರಿಂದ ನಮ್ಮ ಭಾಗದ ರೈತರ ಪರವಾಗಿ ಆ ಕೆಲಸ ಮಾಡಬೇಕೆಂದು ನಾನು ಸರ್ಕಾರಕ್ಕೆ ವಿನಂತಿಮಾಡುತ್ತೇನೆ, ಮತ್ತು ನಮ್ಮ ಭಾಗದ ರೈತರ ಪರವಾಗಿ ಒಂದು ಮಾತನ್ನು ಹೇಳುತ್ತೇನೆ. ತಾವು ಅಲ್ಲಿ ಕುಳಿತಿದ್ದಾಗ, ದಕ್ಷಿಣದ ಕಡೆ ಹರಿಯುತ್ತಿರತಕ್ಕ ನದಿಗಳನ್ನು ಪೂರ್ವದ ಕಡೆ ತಿರುಗಿಸಬೇಕು ಎನ್ನುವ ಮಾತನ್ನು ಒಬ್ಬ ಮಾನ್ಯ ಸದಸ್ಯರು ಹೇಳಿದರು ಎಂದು ಹೇಳಿದಿರಿ. ನಾನು ಸಹ ಆ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಕೆಲವು ಸಂದರ್ಭದಲ್ಲಿ ನೇತ್ರಾವತಿ ನದಿ ಪ್ರವಾಹವನ್ನು ನೋಡಿದ್ದೇನೆ. ಬಂಟ್ವಾಳದ ಹತ್ತಿರ ದೊಡ್ಡ ಸೇತುವೆ ಏನಿದೆ ಅದರ ಮೇಲೆ ನೀರು ಹರಿದು ಹೋಗಿ ಸಮುದ್ರಕ್ಕೆ ಸೇರುತ್ತದೆ. ನೇತ್ರಾವತಿ ನದಿ ಇರಬಹುದು. ಅಥವಾ ಉತ್ತರ ಕನ್ನಡದಲ್ಲಿರತಕ್ಕ ಅನೇಕ ನದಿಗಳು ಇರಬಹುದು. ಪ್ರವಾಹ ಬಂದ ಕಾಲದಲ್ಲಿ ಆ ನದಿಗಳ ನೀರನ್ನು ಪೂರ್ವಕ್ಕೆ ತಿರುಗಿಸಿದರೆ, ನಮ್ಮ ರಾಜ್ಯದಲ್ಲಿರತಕ್ಕಂಥ ಪ್ರತಿಯೊಂದು ಅಂಗುಲ ಭೂಮಿಗೂ ನೀರು ಕೊಡತಕ್ಕ ಸಾಧ್ಯತೆ ಇದೆ. ನಾನು ಇದರ ಬಗ್ಗೆ ತಜ್ಞ ಇಂಜಿನಿಯರುಗಳ ಹತ್ತಿರ ಕೂಡ ಮಾತನಾಡಿದ್ದೇನೆ.

ಅವರೂ ಕೂಡ ಒಪ್ಪುತ್ತಾರೆ. ಆದರೆ ಇದಕ್ಕೆ ಸಾವಿರಾರು ಕೋಟಿ ರೂಪಾಯಿ ಹಣ ಬೇಕಾಗುತ್ತದೆ ಎಂದು ಹೇಳುತ್ತಾರೆ. ಆದರೆ ಇವತ್ತು ಮನುಷ್ಯ ಬದುಕಬೇಕಾಗಿದೆ, ರೈತ ಬದುಕಬೇಕಾಗಿದೆ. ಅವರ ದೃಷ್ಟಿಯಿಂದ ಈ ಕೆಲಸ ಆಗಬೇಕಾಗಿದೆ ಈ ಹಣ ಖರ್ಚಾಗುತ್ತದೆಂದು ನೀವು ಹೇಳತಕ್ಕದ್ದು ಉಚಿತವಲ್ಲ. ಕೊನೆಯ ಪಕ್ಷ ಆ ರೀತಿಯಾದಂಥ ಪ್ರಯತ್ನವನ್ನು ಈಗಿನಿಂದಲೇ ತಾವು ಮಾಡಬೇಕು. ಮುಂದಿನ ಪೀಳಿಗೆ ಇದನ್ನು ಮಾಡುವಂಥ ರೀತಿಯಲ್ಲಿ, ಮಾರ್ಗದರ್ಶನ ಆಗುವಂತಹ ರೀತಿಯಲ್ಲಿ ಈ ಪ್ರಯತ್ನವನ್ನಾದರೂ ನೀವು ಮಾಡಬೇಕೆಂದು ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೆ, ನಾನು ಕೆಲವು ನೀರಾವರಿ ಪ್ರದೇಶಗಳಲ್ಲಿ ಓಡಾಡಿಕೊಂಡು ಬಂದಿದ್ದೇನೆ. ಅಲ್ಲಿ ನೀರು ಏನು ಪೋಲಾಗುತ್ತಿದೆ ಅದು ಒಂದು ದೊಡ್ಡ ಪ್ರವಾಹದ ರೀತಿಯಲ್ಲಿ ಹರಿಯುತ್ತಿದೆ. ನಮಗೆ ಇದುವರೆಗೂ ಗೊತ್ತಿರತಕ್ಕದ್ದು ಏನೆಂದರೆ, ನೀರಾವರಿ ಎಂದರೆ ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟುವುದು, ನೀರು ನಿಲ್ಲತಕ್ಕದ್ದು. ಅದಕ್ಕೆ ದೊಡ್ಡ ದೊಡ್ಡ ಕಾಲುವೆಗಳನ್ನು ನಿರ್ಮಿಸಿ ಆ ಕಾಲುವೆಗಳ ಮೂಲಕ ನೀರನ್ನು ಬಿಡುವುದು ಅಂತ. ಆದರೆ ಈ ರೀತಿ ಬಿಟ್ಟಂಥ ನೀರು ರೈತನ ಭೂಮಿಗೆ ಹೋಗಿ ಮುಟ್ಟುತ್ತಿದೆಯೇ, ರೈತನು ಯಾವ ಬೆಳೆಯನ್ನು ಇಟ್ಟಿದ್ದಾನೆ, ಅವನಿಗೆ ಎಷ್ಟು ಪ್ರಮಾಣದಲ್ಲಿ ನೀರನ್ನು ಬಿಡಬೇಕು, ಯಾವ ಯಾವ ಬೆಳೆಗೆ ಎಷ್ಟೆಷ್ಟು ನೀರನ್ನು ಬಿಡಬೇಕಾಗುತ್ತದೆ ಎಂಬುದನ್ನು ವೈಜ್ಞಾನಿಕವಾಗಿ ತಿಳಿದುಕೊಳ್ಳುವುದಕ್ಕೆ ಇದುವರೆಗೂ ನಮಗೆ ಸಾಧ್ಯವಾಗಿಲ್ಲ. ಇದರಿಂದಾಗಿ ಇವತ್ತು ನಾವು ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟಿದ್ದರೂ ಕೂಡ ಸಾಕಷ್ಟು ನೀರು ಪೋಲಾಗುತ್ತಿರುವುದನ್ನು ನೋಡುತ್ತಿದ್ದೇವೆ. ಈಗಿರತಕ್ಕ ಜಲಾನಯನ ಪ್ರದೇಶಗಳಿಂದ ಎಷ್ಟು ಪ್ರದೇಶವನ್ನು ನೀರಾವರಿಗೆ ಒಳಪಡಿಸಿದ್ದೇವೆ ಅದಕ್ಕಿಂತ ಎರಡು ಪಟ್ಟು ಪ್ರದೇಶವನ್ನು ನೀರಾವರಿಗೆ ಒಳಪಡಿಸುವುದಕ್ಕೆ ಮತ್ತು ಆಧುನಿಕ ರೀತಿಯಲ್ಲಿ ನೀರಾವರಿಯನ್ನು ಮಾಡಲಿಕ್ಕೆ ಸಾಧ್ಯತೆ ಇದೆ. ಅದರ ಬಗ್ಗೆ ನಾವು ಹೆಚ್ಚಿನ ಶ್ರದ್ಧೆಯನ್ನು ವಹಿಸುತ್ತಾ ಇಲ್ಲ. ಕಾಲುವೆಯಲ್ಲಿ ನೀರನ್ನು ಬಿಡುವುದೇ ನೀರಾವರಿ ಎಂದು ನಾವು ತಿಳಿದುಕೊಂಡಿದ್ದೇವೆ, ನಿಜವಾಗಿ ಅದಲ್ಲ ನಾನು ತಮಗೆ ಹೇಳುತ್ತೇನೆ, ವೈಜ್ಞಾನಿಕವಾಗಿ ಮುಂದುವರಿದಿರತಕ್ಕ ರಾಷ್ಟ್ರಗಳು ಇವತ್ತು ಮರಳುಗಾಡನ್ನೂ ಕೂಡ ಅಚ್ಚ ಹಸಿರಾಗಿ ಮಾರ್ಪಾಡು ಮಾಡಿರತಕ್ಕ ನಿದರ್ಶನಗಳು ನಮ್ಮ ಕಣ್ಣು ಮುಂದೆ ಇವೆ ಏನೇನೂ ಬೆಳೆಯದೇ ಇರತಕ್ಕ ಮರಳುಗಾಡಿನಲ್ಲಿ, ಕೇವಲ ಮರಳಿನಿಂದ ತುಂಬಿರತಕ್ಕ ಪ್ರದೇಶದಲ್ಲಿ ಇವತ್ತು ಅಚ್ಚ ಹಸಿರನ್ನು ಕಾಣತಕ್ಕ ನಿದರ್ಶನಗಳು

ಪ್ರಪಂಚದಲ್ಲಿದೆ ಅಂಥ ವೈಜ್ಞಾನಿಕ ವಿಧಾನಗಳನ್ನು ನೀರಾವರಿಯಲ್ಲಿ ಅನುಸರಿಸುವುದು ಅತ್ಯಂತ ಒಳ್ಳೆಯದೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ ಆದರೆ ಆ ದಿಕ್ಕಿನಲ್ಲಿ ಇವತ್ತಿನದಿವಸ ಪ್ರಯತ್ನ ನಡೆಯುತ್ತಿಲ್ಲ. ಹೊಸ ಹೊಸ ತಾಂತ್ರಿಕತೆ ನಮ್ಮ ನೀರಾವರಿಯಲ್ಲಿ ಅಳವಡಿಸಲ್ಪಟ್ಟಿಲ್ಲ. ಆದ್ದರಿಂದ ಈಗಿನಿಂದಲೇ ನೀರಾವರಿಯಲ್ಲಿ ತಾಂತ್ರಿಕತೆಯನ್ನು ಅಳವಡಿಸಿಕೊಳ್ಳುವ ಪ್ರಯತ್ನ ನಡೆಯಬೇಕು. ಕಾರಣವೇನೆಂದರೆ ಪೋಲಾಗುತ್ತಾ ನೀರನ್ನು ನಾವು ಸದುಪಯೋಗ ಮಾಡಿಕೊಳ್ಳಬೇಕು. ನೀರು ಪೋಲಾಗುತ್ತಾ ಇರುವುದರಿಂದ ಇವತ್ತು ಏನಾಗಿವೆ ಎಂದರೆ, ಅನೇಕ ಪ್ರಾಜೆಕ್ಟ್‌ಗಳಲ್ಲಿ ನೀರು ಇಲ್ಲದೆ ಭೂಮಿ ಬರಡಾಗುತ್ತಿದೆ. ಅಲ್ಲಿ ಉಪ್ಪಾಗುತ್ತದೆ ಚೌಳು ಆಗುತ್ತದೆ, ಇವತ್ತು ಸರ್ಕಾರ ಮನಸ್ಸು ಮಾಡಿದರೆ ಜಲಾನಯನ ಪ್ರದೇಶದಲ್ಲಿ ಸಾವಿರಾರು ಎಕರೆಯನ್ನು ನೀರಾವರಿಗೆ ಒಳಪಡಿಸಬಹುದು. ಆದ್ದರಿಂದ ಸರ್ಕಾರದವರು ನೀರಾವರಿಯಲ್ಲಿ ಅತ್ಯಂತ ಆಧುನಿಕ ವಿಧಾನಗಳನ್ನು ಅಳವಡಿಸಿಕೊಳ್ಳುವ ವಿಚಾರದಲ್ಲಿ ಗಮನಹರಿಸಬೇಕೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ

ಮಾನ್ಯ ಅಧ್ಯಕ್ಷರೆ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ನಮ್ಮಲ್ಲಿ ಯಥೇಚ್ಛವಾದ ನೀರು ಇದೆ. ಭತ್ತವನ್ನು ಬೆಳೆಯುವ ವಿಚಾರದಲ್ಲಿ ಹಳೆಯ ಪದ್ಧತಿಯನ್ನೇ ಅನುಸರಿಸಿ ಬೆಳೆಯುತ್ತೇವೆ ಎಂಬ ಪ್ರತೀತಿ ನಮ್ಮ ರೈತರಲ್ಲಿ ಬೆಳೆದು ಬಂದಿದೆ. ಇದನ್ನು ತಪ್ಪಿಸತಕ್ಕಂಥ ಪ್ರಯತ್ನ ನಡೆಯಬೇಕು ಕಾರಣವೇನೆಂದರೆ, ನಾವು ನೀರನ್ನು ಎಲ್ಲಿಂದಲಾದರೂ ತರಲಿಕ್ಕೆ ಆಗುವುದಿಲ್ಲ ಆಕಾಶದಿಂದಲೇ ನೀರು ಬರಬೇಕು ಭೂಮಿಯಲ್ಲಿರತಕ್ಕ ನೀರು ಆಕಾಶದಿಂದ ಬಂದಿರತಕ್ಕ ನೀರೇ ವಿನಃ ಮತ್ತೆಲ್ಲಿಂದಲೊ ಬರಲಿಕ್ಕೆ ಸಾಧ್ಯವಿಲ್ಲ ಈ ನೀರು ಅದರ ಪ್ರಮಾಣ ಇಷ್ಟೇ ಎಂದ ನಿಗದಿಯಾಗಿರುತ್ತದೆ. ಈ ರೀತಿ ನಿಗದಿಯಾಗಿರತಕ್ಕಂಥ ನೀರನ್ನು ನಾವು ವೈಜ್ಞಾನಿಕವಾಗಿ ಉಪಯೋಗಿಸಿಕೊಳ್ಳಬೇಕಾಗಿರುವುದು ನಮ್ಮ ಕರ್ತವ್ಯ ರೈತರು ಹಳೆಯ ಪದ್ಧತಿಯಲ್ಲಿ ನೀರನ್ನು ಉಪಯೋಗಿಸುವುದು ನಿಲ್ಲಬೇಕು. ಹೊಸ ಹೊಸ ವಿಧಾನಗಳನ್ನು ರೈತರಿಗೆ ಹೇಳಿ, ತಿಳುವಳಿಕೆಯನ್ನು ಕೊಟ್ಟರೆ ಅವರೂ ಕೂಡ ಒಪ್ಪಿಕೊಂಡು ಆ ವಿಧಾನಗಳನ್ನು ಅನುಸರಿಸುತ್ತಾರೆ. ಆ ಪ್ರಯತ್ನ ಇವತ್ತಿನದಿವಸ ನಡೆದಿಲ್ಲ. ಆದ್ದರಿಂದ ಸರ್ಕಾರದಲ್ಲಿ ನನ್ನ ಮನವಿ ಏನೆಂದರೆ, ಹೊಸ ಹೊಸ ವಿಧಾನದಲ್ಲಿ ನೀರನ್ನು ಉಪಯೋಗ ಮಾಡಿಕೊಂಡು ಬೆಳೆಯನ್ನು ಬೆಳೆಯುವಂತೆ ರೈತರಿಗೆ ತಿಳುವಳಿಕೆಯನ್ನು ಕೊಡುವ ಕೆಲಸ ನಿಮ್ಮ ನೀರಾವರಿ ಇಲಾಖೆಯಲ್ಲಿ ಆಗಬೇಕೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಛೇರ್ಮನ್.—ಸಮಯ ಹೋಗುತ್ತಿದೆ, ದಯವಿಟ್ಟು ಸಹಕರಿಸಬೇಕು.

ಶ್ರೀ ಸಿ. ಬೈರೇಗೌಡ.—ಸಮಯ ಇದೆ ಎಂದು ನಾನು ಸ್ವಲ್ಪ ವಿಸ್ತಾರವಾಗಿ ಹೇಳುವುದಕ್ಕೆ ಹೋದೆ ತಾವು ಬೆಲ್ ಹೊಡೆಯುತ್ತಿದ್ದೀರಿ, ಬೇಗನೆ ಮುಗಿಸುವ ಪ್ರಯತ್ನ ಮಾಡುತ್ತೇನೆ. ನಿನ್ನೆ ಇಲ್ಲಿ ಮಾನ್ಯ ಸದಸ್ಯರೊಬ್ಬರು ಮಾತನಾಡಿದ್ದಾರೆ. ಆ ಸದಸ್ಯರು ಈಗ ಇಲ್ಲಿ ಇಲ್ಲವೆಂದು ಅನಿಸುತ್ತದೆ. ಅವರು ಮಾತೆತ್ತಿದರೆ ಕ್ಯಾಂಡಲ್ಸ್ ಕ್ಯಾಂಡಲ್ಸ್ ಎಂದು ಹೇಳುತ್ತಾ ಇರುತ್ತಾರೆ. ಮಾನ್ಯ ಶಿವರಾಮೇಗೌಡರು ಏನೋ ಕ್ಯಾಂಡಲ್ಸ್ ಎಂದು ಆಗಾಗ ಹೇಳುತ್ತಾ ಇರುತ್ತಾರೆ. ಅವರ ಭಾಷೆಯಲ್ಲಿ ಕ್ಯಾಂಡಲ್ಸ್ ಎಂದು ಹೇಳುತ್ತಿರುತ್ತಾರೆ. ನಾನು ದೂರ ಕುಳಿತಿದ್ದೇನೆ ಅವರು ಸ್ಕ್ಯಾಂಡಲ್ ಎಂದು ಹೇಳಿದ್ದು ನನಗೆ ಕ್ಯಾಂಡಲ್ಸ್ ಎಂದು ಕೇಳಿಸಿರಬಹುದು. ಅದು ಏನೋ ನನಗೆ ಗೊತ್ತಿಲ್ಲ. ಅದಕ್ಕೇ ಅವರ ಹತ್ತಿರ ಏನೇನು ಕ್ಯಾಂಡಲ್ಸ್ ಇದೆಯೋ ಅದನ್ನೆಲ್ಲಾ ಒಂದು ಸಾರಿ ಬಿಚ್ಚಿ ಬಿಟ್ಟರೆ ವೈಯಕ್ತಿಕವಾಗಿ ನನಗಂತೂ ಸಂತೋಷವಾಗುತ್ತದೆ. ಅವರು ನಿನ್ನೆ ದಿವಸ ಮಾತನಾಡುತ್ತಾ ೧೯೮೩ ರಿಂದ ಈ ಇಲಾಖೆಯಲ್ಲಿ ದುರ್ವ್ಯವಹಾರಗಳು, ಕ್ಯಾಂಡಲ್ಸ್‌ಗಳು ಬೇಕಾದಷ್ಟು ಆಗಿವೆ ಎಂದು ಹೇಳಿದ್ದಾರೆ. ಹಿಂದೆ ಇದ್ದಂತಹ ದೇವೇಗೌಡರಾಗಲೀ ಅಥವಾ ಬೇರೆ ಯಾರೇ ಆಗಲೀ ಆ ತಪ್ಪನ್ನು ಯಾರೇ ಮಾಡಿದ್ದರೂ, ಪುಟ್ಟಸ್ವಾಮಿಗೌಡರು ಅಥವಾ ಇನ್ನಾರಾದರೂ ಮಾಡಿದ್ದರೂ ಕೂಡ ತಪ್ಪನ್ನು ತಪ್ಪೆಂದು ಹೇಳತಕ್ಕಂತಹವನು ನಾನು ನನಗೆ ಬೇಕಾಗಿರತಕ್ಕಂತಹವರು ತಪ್ಪು ಮಾಡಿದ್ದಾರೆಂದು ಅವರನ್ನು ಮುಚ್ಚಿ ಇಡೋಣ, ಬೇಡವೇ ಇರತಕ್ಕಂತಹವರು ತಪ್ಪು ಮಾಡಿದ್ದರೆ ಅದನ್ನು ತಪ್ಪು ಅನ್ನತಕ್ಕಂತಹ ಭಾವನೆಯಿಂದ ನಾನಂತೂ ಈ ಮಾತನ್ನು ಹೇಳುತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಈ ಸಭೆಯಲ್ಲಿ ಇದ್ದಾರೆ, ಈ ರೀತಿಯಾಗಿ ಆಧಾರ ಇಲ್ಲದೇ ಇರತಕ್ಕಂಥಾದ್ದನ್ನು ಹೇಳತಕ್ಕಂಥಾದ್ದು ಮತ್ತು ಹೇಳಿಸತಕ್ಕಂತ ಕೆಲಸ ಮಾಡುವುದನ್ನು ದಯವಿಟ್ಟು ತಾವು ಕೈ ಬಿಡಿ. ಒಂದುವೇಳೆ ಆ ರೀತಿಯಾಗಿ ಏನಾದರೂ ನಿರ್ದಿಷ್ಟವಾಗಿ ಇದ್ದರೆ ಅದನ್ನು ಈ ಸಭೆಯ ಮುಂದೆ ಇಡಬೇಕಾಗಿರತಕ್ಕಂಥದ್ದು ಮತ್ತು ರಾಜ್ಯದ ಜನತೆ ಅದನ್ನು ತಿಳಿಯಬೇಕಾದ್ದು ಅವಶ್ಯಕತೆ ಇದೆ. ಅವರು ಯಾರೇ ಇರಬಹುದು, ಅದು ನನಗೆ ಅಪ್ರಕೃತ. ದೇವೇಗೌಡರೇ ಇರಬಹುದು, ಇಲ್ಲವೇ ಇನ್ನೊಬ್ಬ ಗೌಡರೇ ಇರಬಹುದು ಅದು ನನಗೆ ಅಪ್ರಕೃತ ಆದರೆ ಸಾರ್ವಜನಿಕರ ಹಣ ಪೋಲಾಗಿದ್ದರೆ, ನನ್ನ ದೃಷ್ಟಿಯಲ್ಲಿ ಅವರು ಪೋಲು ಮಾಡಿರ

ತಕ್ಕಂಥಾದ್ದು ಒಂದನ್ನು ಮಾತ್ರ ಅದನ್ನು ಬಿಟ್ಟು ಅವರು ಮಾಡಿದ್ದಾರೆ, ಇವರು ಮಾಡಿದ್ದಾರೆಂದು ಅದಕ್ಕೆ ಎಕ್ಸೆಂಪ್ಷನ್ ಅನ್ನು ಯಾರಿಗೂ ಕೊಡಬೇಕಾಗಿಲ್ಲ. ಇವತ್ತು ತಾವು ಅದೇ ಕ್ಷೇತ್ರದಿಂದ ಅವರನ್ನೇ ಸೋಲಿಸಿ ಗೆದ್ದು ಬಂದಿದ್ದೀರಿ. ಅದು ಏನೇನು ಇದೆಯೋ ನಿಮ್ಮ ಕಥೆ ಅದನ್ನು ಒಂದುಸಾರಿ ಬಿಚ್ಚಿ ನೋಡೇಬಿಡೋಣ ಅವರು ಏನೋ ನನ್ನ ಹತ್ತಿರ ಎಲ್ಲಾ ಇದೆ ಎಂದು ಹೇಳುತ್ತಾರೆ. ಅವರ ಹತ್ತಿರ ಏನೇನು ಇದೆ ಎನ್ನುವುದು ನನಗೂ ಕೂಡ ಗೊತ್ತಿದೆ ನನಗಿಂತ ಹೆಚ್ಚಿಗೆ ನಿಮಗೂ ಕೂಡ ಗೊತ್ತಿದೆ. ಏಕೆಂದರೆ, ನೀವು ಒಂದೇ ಕ್ಷೇತ್ರದಿಂದ ಬಂದಿರತಕ್ಕಂತಹವರು ೧೯೮೫ ರಿಂದ ೧೯೮೯ರವರೆಗೆ ಅದು ಏನೇನು ಕ್ಯಾಂಡಲ್‌ಗಳು ಇವೆ ಅವನ್ನೆಲ್ಲಾ ಇಲ್ಲಿ ಇಡಿ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಬೈರೇಗೌಡರೆ, ತಾವು ಬಹಳ ಮುಂದುವರಿದು ಹೋಗುತ್ತಿದ್ದೀರಿ ನಾವೆಂದೂ ನಮ್ಮ ಹತ್ತಿರ ಇದೆ ಎಂದು ಹೇಳಲಿಲ್ಲ, ನಾವು ಯಾವುದೂ ಕೂಡ ಮಾಡಬೇಕು ಎನ್ನತಕ್ಕಂಥ ಇರಾದೆ ಇಟ್ಟುಕೊಂಡಿಲ್ಲ. ಯಾರನ್ನೋ ಹೇಳುವದಕ್ಕೋಸ್ಕರ ನನ್ನ ಹೆಸರನ್ನು ಬಳಸಿ ನನ್ನನ್ನೂ ಕೂಡ ಅದಕ್ಕೆ ಚಾಲನೆ ಕೊಡುವ ರೀತಿಯಲ್ಲಿ ತಾವು ಮಾತನಾಡುತ್ತಿದ್ದೀರಿ ಎಂದು ಅನಿಸುತ್ತದೆ ನಮ್ಮಲ್ಲಿ ಯಾವುದೂ ಅಂತಹ ಕ್ಯಾಂಡಲ್ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ಪುಟ್ಟಸ್ವಾಮಿಗೌಡರ ಹತ್ತಿರ ಕ್ಯಾಂಡಲ್ ಇಲ್ಲ, ಹತ್ತಿಸುವುದೂ ಬೇಡ.

ಶ್ರೀ ಸಿ. ಬೈರೇಗೌಡ —ನೀವು ಮಾಡಿದ್ದರೂ ಕೂಡ ಅದು ತಪ್ಪೇ ಅವರು ಮಾಡಿದ್ದರೂ ಕೂಡ ತಪ್ಪೇ ಎಂದು ಆ ಕಾಂಟೆಸ್ಟ್‌ನಲ್ಲಿ ನಾನು ನಿಮ್ಮ ಹೆಸರನ್ನು ಹೇಳಿದ್ದೇನೇ ವಿನಃ ನೀವೇನೋ ಇಟ್ಟುಕೊಂಡಿದ್ದೀರಿ, ಹೇಳುತ್ತಿದ್ದೀರಿ ಎನ್ನುವ ಮಾತನ್ನು ನಾನು ಹೇಳಲಿಲ್ಲ ಅದನ್ನು ತಾವು ದಯವಿಟ್ಟು ತಿದ್ದಿಕೊಳ್ಳಬೇಕು ಎಂದು ತಮ್ಮನ್ನು ವಿನಂತಿಸುತ್ತೇನೆ ಏಕೆಂದರೆ ಸಾರ್ವಜನಿಕರ ಹಣ ಇದರಲ್ಲಿ ಇರುವುದರಿಂದ ಅದೆಲ್ಲವೂ ಹೊರಗಡೆ ಬರಬೇಕು, ಬರತಕ್ಕಂಥಾದ್ದು ಅವಶ್ಯಕತೆ ಇದೆ. ಮತ್ತು ನಮ್ಮ ಸ್ನೇಹಿತರಾಗಿ ಮಾನ್ಯ ಕಾಗೋಡು ತಿಮ್ಮಪ್ಪನವರು ಮೊನ್ನೆ ಮಾತನಾಡುತ್ತಾ ಬಿಜಾಪುರದಲ್ಲಿ ಇಂಡಿ ನಾಲಾ ಬಗ್ಗೆ ಹೇಳಿದ್ದಾರೆ ಅದರ ಬಗ್ಗೆ ಸ್ವಲ್ಪ ಹೇಳಿ, ನಾನು ತಿಳಿದುಕೊಳ್ಳಬೇಕಾಗಿದೆ. ಏಕೆಂದರೆ ಈ ಭಾಗದ್ದಾದರೆ ಅದರ ಬಗ್ಗೆ ನಮಗೆ ಶ್ರದ್ಧೆ ಇರುತ್ತದೆ. ಅಲ್ಲಿ ಏನಾದರೂ ಹಣ ದುರ್ವಿನಿಯೋಗವಾಗಿದ್ದರೆ, ದುರುಪಯೋಗವಾಗಿದ್ದರೆ ಅದನ್ನು ತಂದು ಇಡಿ. ನಿಮಗೆ ಸಪೋರ್ಟ್ ಮಾಡುವುದರಲ್ಲಿ ನಾನು ಮೊದಲನೆಯವನು ಅಲ್ಲಿ ಏನಾದರೂ ದುರುಪಯೋಗ ಅಥವಾ ದುರ್ವಿನಿಯೋಗವಾಗಿದ್ದರೆ ನಿಮ್ಮ ಜೊತೆಯಲ್ಲಿ ಕೈ ಎತ್ತುವುದರಲ್ಲಿ ಮೊದಲನೆಯವರು ನಾನು ಇದನ್ನು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಕಾರಣವೇನೆಂದರೆ ಇಲ್ಲಿ ಹಣ ದುರುಪಯೋಗವಾದರೂ ಒಂದೇ, ಅಲ್ಲಿ ಹಣ ದುರುಪಯೋಗವಾದರೂ ಒಂದೇ ಅಲ್ಲಿ ದುರುಪಯೋಗ ಯಾವ ರೀತಿಯಾಗಿದೆ, ಅದಕ್ಕೆ ಯಾರ ಕಾರಣಕರ್ತರು ಎನ್ನತಕ್ಕಂಥಾದ್ದನು ದಯವಿಟ್ಟು ಹೇಳಬೇಕು ಎಂಬ ಮಾತನ್ನು ನಾನು ಹೇಳುತ್ತೇನೆ

ಮತ್ತೆ ಬಾಗಲೂರು ನವಿಲೆ ಟನಲ್ ಬಗ್ಗೆ ಹೇಳಿದ್ದಾರೆ. ಸ್ವಾಮಿ ಇದರ ಬಗ್ಗೆ ಇವತ್ತಿನ ದಿವಸ ವರದಿ ಇದೆ. ಯಾವಾಗ ಬಾಗಲೂರು ನವಿಲೆ ಟನಲ್ ಬಗ್ಗೆ ವಿಚಾರಣಾ ಆಯೋಗ ರಚನೆಯಾಯಿತು ಎನ್ನುವುದು ಗೊತ್ತಿದೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಅಧ್ಯಕ್ಷರ ಗಿದ್ದ, ಅಂದು ವಿರೋಧಪಕ್ಷದ ನಾಯಕರಾಗಿದ್ದ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಕೊಟ್ಟಂಥ ವರದಿ ಇದೆ. ಅದು ಬಂದ ತಕ್ಷಣ ಅವರು ಇವರನ್ನು ಕೇಳತಕ್ಕಂಥದ್ದು, ಮತ್ತೆ ಇವರು ಅವರನ್ನು ಅದಕ್ಕೆ ದೂರತಕ್ಕಂಥ ಪ್ರಯತ್ನ ಅಲ್ಲಂತೂ ನಡೆದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಕೇಳತಕ್ಕಥಾದ್ದು ಎಂದರೆ ಯಾರಿಗೆ ?

ಶ್ರೀ ಸಿ. ಬೈರೇಗೌಡ.—ಅಂಥ ಪ್ರಯತ್ನ ಏನೂ ನಡೆದಿಲ್ಲವೆನ್ನುವುದು ನನ್ನ ತಿಳುವಳಿಕೆ ಆದರಲ್ಲಿ ಯಾರು ಯಾರು ಭಾಗಿಗಳಾಗಿದ್ದಾರೆ ಯಾರು ಯಾರು ಶಾಮೀಲಾಗಿದ್ದಾರೆ ಅವರನ್ನು ಬಿಡಲಿಕ್ಕೆ ಸಾಧ್ಯವಿಲ್ಲ. ಅವರ ಮೇಲೆ ಖಂಡಿತವಾಗಿಯೂ ನೀವು ಕ್ರಮವನ್ನು ತೆಗೆದುಕೊಳ್ಳಬೇಕು. ಯಾವುದೋ ಮುಲಾಜಿಗೆ ಒಳಗಾಗಿ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳದಿದ್ದರೆ ವಂಚನೆ ಮಾಡಿದಂತಾಗುತ್ತದೆ. ಆದ್ದರಿಂದ ಇದರ ಬಗ್ಗೆ ಹೆದರತಕ್ಕಂಥದ್ದು ಅನಾವಶ್ಯಕ. ಯಾರೇ ಇರಲಿ ಎಂತಹ ಸ್ಥಾನದಲ್ಲಿಯೇ ಕುಳಿತಿರಲಿ, ಅಥವಾ ಯಾವುದೇ ಸ್ಥಾನದಲ್ಲಿ ಕುಳಿತಿಲ್ಲದಿರಲಿ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳತಕ್ಕಂಥದ್ದು ಸರ್ಕಾರದ ಮುಖ್ಯ ಕರ್ತವ್ಯ. ದಯವಿಟ್ಟು ತಾವು ಇದನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸದಸ್ಯರು ಅವರನ್ನು ಇವರನ್ನು ಯಾರನ್ನೂ ಕೇಳಲಿಲ್ಲವೆಂದು ಮೊಗಮ್ ಆಗಿ ಹೇಳಿದರು. ಅವರನ್ನು ಅಂದರೆ ಆ ಕಡೆ ಮಾನ್ಯ ಮುಖ್ಯಮಂತ್ರಿಗಳು

ಕುಳಿತಿದ್ದಾರೆ. ಇವರನ್ನು ಎಂದರೆ ಈ ಕಡೆ ವಿರೋಧಪಕ್ಷದವರು ಕುಳಿತಿದ್ದಾರೆ, ಅವರನ್ನು ಇವರನ್ನು ಅಂದರೆ ಯಾರನ್ನು ಕೇಳಬೇಕಾಗಿತ್ತು. ಬಾಗಲೂರು ನವಿಲೆ ಎಂದ ತಕ್ಷಣ ಹೆಗಲು ಮುಟ್ಟಿ ನೋಡಿಕೊಳ್ಳುವವರು ನೀವು.

ಶ್ರೀ ಸಿ. ಬೈರೇಗೌಡ.—ನಾನೇ ಹೇಳುತ್ತಿದ್ದೇನೆ ವಿಚಾರಣೆಯಾಗಿದೆ. ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಿಮಗಿಂತ ದೊಡ್ಡ ಧ್ವನಿಯಲ್ಲಿ ಹೇಳುತ್ತಿದ್ದೇನೆ. ಈ ವಿಚಾರದಲ್ಲಿ ನಾನು ಯಾರಿಗೂ ಕೂಡ ಹಿಂದೆ ಬೀಳತಕ್ಕಂಥವನಲ್ಲ, ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಆಗ್ರಹಪಡಿಸುವುದರಲ್ಲಿ ನಾನು ಯಾರಿಗೂ ಕೂಡ ಹಿಂದೆ ಬಿದ್ದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು ರಸ್ತೆಗಳ ಬಗ್ಗೆ ಎರಡು ಮಾತುಗಳನ್ನು ಹೇಳಲು ಇಚ್ಛೆಪಡುತ್ತೇನೆ. ನಮ್ಮ ರಸ್ತೆಗಳು ಯಾವ ಪರಿಸ್ಥಿತಿಯಲ್ಲಿವೆ ಎಂದು ಹೇಳಿದರೆ, ಅವು ಊರಿಂದ ಊರಿಗೆ ಹೋಗತಕ್ಕಂಥ ರಸ್ತೆಗಳಲ್ಲ. ಬೆಂಗಳೂರಿನಿಂದ ನೇರವಾಗಿ ಯಮಲೋಕಕ್ಕೆ ಹೋಗತಕ್ಕಂಥ ರಸ್ತೆಗಳಾಗಿವೆ.

ಶ್ರೀ ಹೆಚ್. ಏಕಾಂತಯ್ಯ.—ಯಮಲೋಕಕ್ಕಲ್ಲ, ನೇರವಾಗಿ ನರಕಕ್ಕೆ ಹೋಗತಕ್ಕಂಥ ರಸ್ತೆಗಳೆಂದು ಹೇಳಬೇಕು.

ಶ್ರೀ ಸಿ. ಬೈರೇಗೌಡ.—ನೇರವಾಗಿ ನರಕಕ್ಕೆ ಹೋಗತಕ್ಕಂಥ ಪರಿಸ್ಥಿತಿಯಲ್ಲಿ ಇವತ್ತಿನ ದಿವಸ ನಮ್ಮ ರಸ್ತೆಗಳು ಇವೆ. ಇವತ್ತು ತಮಗೆ ಎಕ್ಸೈಜಾಬಿನಲ್ಲಿ ಮುನ್ನೂರು ಕೋಟಿ ರೂಪಾಯಿಗಳ ಮೇಲೆ ಬಂದಿದೆ ಎಂದು ಹೇಳುತ್ತಿದ್ದೀರಿ ಸಂತೋಷ. ಅದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ಸಾಕಷ್ಟು ಹಣವನ್ನು ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಉಪಯೋಗಿಸಲು ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದರಲ್ಲೂ ಮುಖ್ಯವಾಗಿ, ರೈತರ ಹಿತದೃಷ್ಟಿಯಿಂದ ಈ ಮಾತನ್ನು ಹೇಳಬೇಕಾಗಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ವಿಚಾರ ಹೇಳುವುದೇನೆಂದರೆ ನಮ್ಮ ಜಿಲ್ಲೆ ಕೋಲಾರ ಜಿಲ್ಲೆ ಅದು ಪರ್ ಕ್ಯಾಪಿಟ್ ಇನ್ ಕಮ್‌ನಲ್ಲಿ ಕನಿಷ್ಟ ಕೊನೆಯ ಸ್ಥಾನದಲ್ಲಿದೆ. ತಾವು ಮುಖ್ಯಮಂತ್ರಿಗಳಾಗಿ ಬಂದ ಮೇಲೆ ಗುಲ್ಬರ್ಗಾ ಜಿಲ್ಲೆಗೆ ಸುಮಾರು ೩೦ ಕೋಟಿ ರೂಪಾಯಿ ಹೆಚ್ಚು ಹಣವನ್ನು ಕೊಡುವುದಕ್ಕೆ ಪ್ರಯತ್ನ ಪಟ್ಟಿದ್ದೀರಿ. ಅದನ್ನು ನಾನು ಬೇಡವೆಂದು ಹೇಳುವುದಿಲ್ಲ. ಆದರೆ ಅದಕ್ಕಿಂಥ ಕೊನೆಯ ಸ್ಥಾನದಲ್ಲಿರತಕ್ಕಂಥದ್ದು ಕೋಲಾರ ಜಿಲ್ಲೆ ಅದನ್ನು ಅಂಕಿಅಂಶಗಳೇ ಹೇಳುತ್ತಿದೆ. ನಾನು ಅದನ್ನು ಬಿಚ್ಚಿ ಹೇಳುವುದಿಲ್ಲ. ಕೊನೆಯ ಸ್ಥಾನದಲ್ಲಿರುವ ಈ ಜಿಲ್ಲೆಗೆ ಕನಿಷ್ಟ ಅವಶ್ಯಕತೆಗಳನ್ನಾದರೂ ಒದಗಿಸತಕ್ಕಂಥ ಪ್ರಯತ್ನವನ್ನು ತಾವು ಮಾಡಬೇಕು. ಅದರಲ್ಲೂ ನೀರಾವರಿಗಾಗಲಿ, ರಸ್ತೆಗಳ ವಿಚಾರದಲ್ಲಿಯಾಗಲಿ ಅದನ್ನು ಮಾಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಮಾನ್ಯ ಅಧ್ಯಕ್ಷರೇ ನನಗೆ ಇಷ್ಟು ವೇಳೆ ಮಾತನಾಡಲು ಅವಕಾಶವನ್ನು ಕೊಟ್ಟು ಸಹಕರಿಸಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹಲಗೇಗೌಡ (ಪಾಂಡವಪುರ).—ಸನ್ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ, ನೀರಾವರಿ ಹಾಗೂ ಕಾಡಾ ಇಲಾಖೆಗಳ ಬೇಡಿಕೆಗಳಿಗೆ ಸಂಪೂರ್ಣ ಬೆಂಬಲ ಸೂಚಿಸುತ್ತಾ ಇದರ ಬಗ್ಗೆ ಕೆಲವು ಸಲಹೆಗಳನ್ನು ಮತ್ತು ನನ್ನ ಅನಿಸಿಕೆಗಳನ್ನು ತಮ್ಮ ಮೂಲಕ ಈ ಸದನದಲ್ಲಿ ಹೇಳಲಿಚ್ಛಿಸುತ್ತೇನೆ. ಕರ್ನಾಟಕ ರಾಜ್ಯ ಅದರಲ್ಲೂ ಕೂಡ ಹಳೆಯ ಮೈಸೂರು ಭಾಗ ಹಿಂದಿನ ಕಾಲದಿಂದಲೂ ಕೂಡ ಇಂಜಿನಿಯರಿಂಗ್ ತಜ್ಞತೆಯಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ಇಡೀ ರಾಷ್ಟ್ರದಲ್ಲಿ ಹೆಸರು ಪಡೆದಂತಹ ರಾಜ್ಯವಾಗಿತ್ತು. ಇದಕ್ಕೆ ಕಾರಣೀಭೂತರಾದ ದಿವಂಗತ ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯನವರ ಒಂದು ಶ್ರಮ ಅವರ ದುಡಿಮೆ ಅವರ ಮುಂದಾಲೋಚನೆ, ಇವೆಲ್ಲ ಕಾರಣಗಳಿಂದ ಉಳಿದೆಲ್ಲ ರಾಜ್ಯಗಳಿಗಿಂತಲೂ ಕೂಡ ಮುಂದಾಗಿದ್ದಂತಹ ಈ ರಾಜ್ಯ ಇವತ್ತಿನ ದಿವಸ ಇಷ್ಟು ಅಧೋಗತಿಗೆ ಇಳಿದಿದೆ. ರಸ್ತೆಗಳ ನಿರ್ವಹಣೆಯಲ್ಲಾಗಲಿ, ನೀರಾವರಿ ಕಾಮಗಾರಿಗಳಲ್ಲಾಗಲಿ ಅಥವಾ ವಿದ್ಯುಚ್ಛಕ್ತಿಯ ಉತ್ಪಾದನೆಯಲ್ಲಾಗಲಿ ಯಾವುದರಲ್ಲೂ ಕೂಡ ಬೇರೆ ರಾಜ್ಯಗಳಿಂತ ಹಿಂದುಳಿದಿದೆಯೇ ಹೊರತು ಮುಂದುವರಿದಿಲ್ಲ. ಅವನ್ನು ನಮಗೆ ಬೇಕಾಗುವಷ್ಟಾದರೂ ಕೂಡ ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ಇದಕ್ಕೆ ಹಿಂದಿದ್ದ ಅಧಿಕಾರಿಗಳ, ಇಂಜಿನಿಯರಿಂಗ್ ತಜ್ಞರ ಜ್ಞಾನ ಮತ್ತು ಈಗಿರತಕ್ಕವರ ಉದಾಸೀನತೆ ಅಸಡ್ಡೆ ಕಾರಣವಾಗಿರಬಹುದೆಂದು ಒಂದೊಂದು ಸಾರಿ ನನಗೂ ಕೂಡ ಅನಿಸಿಸುತ್ತದೆ. ಈ ಹಿಂದೆ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ದೇವರಾಜ ಅರಸುರವರು ಒಂದು ಮಾತನ್ನು ಹೇಳಿದ್ದರು ಇನ್ನು ೧೮೦೦ ಕೋಟಿ ರೂಪಾಯಿಗಳಾದರೆ ನಮ್ಮ ರಾಜ್ಯದ ಎಲ್ಲಾ ನೀರಾವರಿ ಕೆಲಸಗಳನ್ನು ಮುಗಿಸಬಹುದೆಂದು ಹೇಳಿದ್ದರು. ಈಗ ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು

ಮಾಡಿದರೂ ಕೂಡ ಆ ಕೆಲಸಗಳು ಆಗುವುದಿಲ್ಲ ಎನ್ನುವ ಮಟ್ಟಕ್ಕೆ ಬಂದು ನಿಂತಿದೆ. ಇಷ್ಟು ಹಣ ಖರ್ಚಾದರೂ ಆಗಿರುವ ಕೆಲಸಗಳಾದರೂ ಏನು, ಯಾವ ಮಟ್ಟದ ಕೆಲಸಗಳು ಆಗಿವೆ. ಯಾವ ರೀತಿಯ ಕೆಲಸಗಳು ಆಗಿವೆ ಎಂದು ನೋಡಿದರೆ ಈಗ ಮಾಡಿರತಕ್ಕ ಕೆಲಸಗಳಿಂದ ಯಾವ ಫಲವೂ ದೊರೆಯುತ್ತಿಲ್ಲ. ಈಗ ಕಟ್ಟಿರತಕ್ಕ ಅಣೆಕಟ್ಟುಗಳು. ತೋಡಿರತಕ್ಕ ನಾಲೆಗಳಿಂದ ಫಲಾನು ಭವಿಗಳಿಗೆ ಅನುಕೂಲ ಸೌಕರ್ಯ ದೊರೆಯುತ್ತಿದೆಯೇ ಎಂಬುದನ್ನು ನಾವು ಯೋಚಿಸಬೇಕಾಗಿದೆ. ಜೊತೆಗೆ ಯೋಜನೆಗಳಿಗೆ ವರ್ಷಂಪ್ರತಿ ಇಷ್ಟು ಹೆಚ್ಚು ಹಣ ಬೇಕಾಗಿರುವಾಗ ಕಡಿಮೆ ಹಣ ನೀಡಿರುವುದ ರಿಂದ ಈ ಯೋಜನೆಗಳನ್ನು ಮುಗಿಸುವ ಕಾಲವಾದರೂ ಯಾವುದು? ಕೊನೆಯ ಪಕ್ಷ ೨೦–೨೫ ವರ್ಷ ಗಳಾದರೂ ಆಗಬಹುದು. ನಮಗೆ ೨೦೦೦ ಇಸವಿಯ ವೇಳೆಗೆ ಕೃಷ್ಣಾನದಿ ಜಲಾನಯನದ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವಂತಾಗಬೇಕು. ಕಾವೇರಿ ಜಲಾನಯನದ ನೀರನ್ನು ಉಪಯೋಗಿಸಿಕೊಳ್ಳಬೇಕಾದರೆ ಈ ವೇಳೆಗಾಗಲೆ ನಾವು ಕೆಲಸವನ್ನು ಮಾಡಬೇಕಾಗಿತ್ತು. ಆ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕಾಗಿತ್ತು. ಇದನ್ನು ಇನ್ನು ಮುಂದುವರಿಸುತ್ತಾ ಹೋದರೆ ಇಷ್ಟೊಂದು ಕಡಿಮೇ ಹಣವನ್ನು ಕೊಡುತ್ತಾ ಹೋದರೆ ಈ ಯೋಜನೆಗಳು ಮುಗಿಯುವ ಕಾಲ ವಾದರೂ ಯಾವುದು ? ನಾವು ನಮ್ಮ ನೀರಿನ ಹಕ್ಕನ್ನು ದೊರಕಿಸಿಕೊಳ್ಳುವ ಬಗೆಯಾದರೂ ಹೇಗೆ ಎಂಬ ಸಂಶಯ ನಮಗೆ ಬರುತ್ತದೆ ಅದಕ್ಕೆ ಲೋಕೋಪಯೋಗಿ ಇಲಾಖಾ ಸಚಿವರನ್ನು ಕೇಳಿ ಕೊಳ್ಳುತ್ತೇನೆ, ಉಳಿದ ಯಾವ ಕಾರ್ಯಕ್ರಮಗಳು ಇದ್ದರೂ ಕೂಡ ಅದನ್ನು ಸ್ಥಗಿತಗೊಳಿಸಿ ನೀರಾವರಿಗೆ ಹೆಚ್ಚಿನ ಹಣವನ್ನು ಕೊಡಬೇಕು ಆಗ ದೇಶದ ರಾಜ್ಯದ ಅಭಿವೃದ್ಧಿಯಾಗುತ್ತದೆ ರೈತರ ಕ್ಷೇಮ ವಾಗುತ್ತದೆ ಎಂದು ಹೇಳುವವರಲ್ಲಿ ನಾನೂ ಒಬ್ಬ. ಕಾವೇರಿ ಜಲಾನಯನ ಪ್ರದೇಶದಲ್ಲಿತತಕ್ಕ ಕಾಮಗಾರಿಗಳು ಎಷ್ಟು ಜಾಗ್ರತೆ ಮುಗಿಯಬೇಕಾಗಿತ್ತು ಅಷ್ಟು ಜಾಗ್ರತೆ ಆಗುತ್ತಿಲ್ಲ. ಉದಾಹರಣೆಗೆ ಹೇಮಾವತಿ ಯೋಜನೆಯನ್ನು ತೆಗೆದುಕೊಳ್ಳಿ. ೧೯೮೬ನೇ ಇಸವಿಯೊಳಗೆ ಎಲ್ಲಾ ಕಡೆಗೂ ನೀರನ್ನು ಕೊಡಬೇಕಾಗಿತ್ತು. ಆದರೆ ಕೊಡಲಿಕ್ಕೆ ಇನ್ನೂ ಸಾಧ್ಯವಾಗಿಲ್ಲ, ಆ ಕೆಲಸಕ್ಕೆ ಹಿಂದಿನಿಂದಲೂ ಕನಿಷ್ಠ ಹಣವನ್ನು ಕೊಟ್ಟು ಆ ಕೆಲಸವನ್ನು ಮುಂದೂಡುತ್ತಾ ಬಂದಿದ್ದಾರೆ. ಕೆಲವು ಕಡೆ ಕೊಟ್ಟ ಹಣವು ಕೂಡ ಕೇವಲ ಅಲ್ಲಿನ ಸಿಬ್ಬಂದಿಯ ಸಂಬಳ ಸಾರಿಗೆಗೋಸ್ಕರ ಖರ್ಚಾಗಿ ಕಾಮಗಾರಿ ಕೆಲಸಕ್ಕೆ ಅಲ್ಪ ಹಣ ಉಳಿಯತಕ್ಕ ಸಂದರ್ಭ ಉಂಟು. ಅಲ್ಲಿ ಅಂತಹ ಅನೇಕ ವಿಭಾಗಗಳನ್ನು ಮತ್ತು ಉಪ ವಿಭಾಗಗಳನ್ನು ತೆರೆದಿದ್ದಾರೆ,

೩–೪೦ ಪಿ. ಎಂ.

ಕೇವಲ ಸ್ವಲ್ಪ ಹಣವನ್ನು ಕೊಟ್ಟು ಒಂದು ವಿಭಾಗವನ್ನಾಗಲಿ, ಒಂದು ಉಪವಿಭಾಗವನ್ನಾಗಲೀ ಒಂದು ವೃತ್ತವನ್ನಾಗಲೀ ತೆಗೆಯುವುದರ ಔಚಿತ್ಯ ಏನು? ಇವುಗಳನ್ನು ಕಡಿಮೆ ಮಾಡಿ ಕೆಲಸ ಜಾಸ್ತಿ ಮಾಡಿಸಿದರೆ ಮಾತ್ರ ರಾಜ್ಯ ಅಭಿವೃದ್ಧಿಯಾಗುತ್ತದೆಯೇ ಹೊರತು ಹೆಚ್ಚು ಹೆಚ್ಚು ಅಧಿಕಾರಿಗಳನ್ನು ನೌಕರವರ್ಗದವರನ್ನು ನೇಮಿಸಿಕೊಂಡು ಆಫೀಸುಗಳನ್ನು ತೆರೆದರೆ ಇದರಿಂದ ಅಭಿವೃದ್ಧಿಯಾಗುವುದಿಲ್ಲ. ಕೃಷ್ಣರಾಜ ಸಾಗರ ನಾಲೆಯನ್ನು ಆಧುನೀಕರಣ ಮಾಡುವುದಕ್ಕೆ ಎಷ್ಟು ಹಣ ಕೊಟ್ಟಿದ್ದಾರೆ? ಈ ವೇಳೆಗಾಗಲೇ ವರುಣಾ ನಾಲೆ ಅರ್ಥಾತ್ ದೇವರಾಜ ಅರಸು ನಾಲೆ ಮುಗಿಯಬೇಕಾಗಿತ್ತು. ಹಾಗೆಯೇ ಕೃಷ್ಣರಾಜ ಸಾಗರದ ಆಧುನೀಕರಣದ ಕೆಲಸ ನಡೆದು ಮಂಡ್ಯ, ಮಳವಳ್ಳಿ ಮತ್ತು ಮದ್ದೂರು ಪ್ರದೇಶದ ರೈತರಿಗೆ ನೀರಿನ ಸೌಕರ್ಯ ಒದಗಬೇಕಾಗಿತ್ತು. ಈಗ ಕೊಡುತ್ತಿರುವ ಹಣ ನೋಡಿದರೆ ಇನ್ನು ೧೦–೧೫ ವರ್ಷಗಳಾದರೂ ಮುಗಿಯುತ್ತದೊ ಇಲ್ಲವೋ ಎಂಬ ಶಂಕೆ ಉಂಟಾಗುತ್ತದೆ. ಕಾವೇರಿ ಜಲಾನಯನ ಪ್ರದೇಶದಲ್ಲಿರತಕ್ಕ ಕಾಲುವೆಗಳು ೨೫೦–೩೦೦ ವರ್ಷಗಳ ಹಿಂದೆ ಆಗಿರತಕ್ಕ ನಾಲೆಗಳು. ಅಲ್ಲಿ ನೀರು ಕೊಟ್ಟರೆ ಕೊನೇ ಹಂತದಲ್ಲಿರುವ ರೈತರಿಗೆ ನೀರು ತಲುಪುವುದೇ ಇಲ್ಲ. ಕೊನೆಯಲ್ಲಿರುವ ರೈತ ನೀರಿಲ್ಲದೆ ಕಂಗಾಲಾಗಿ, ಇದಕ್ಕೆ ನೀರು ಕಂದಾಯವನ್ನು ಕೊಟ್ಟು ತರಿ ಭೂಮಿ ಎಂಬ ಹೆಸರನ್ನು ಮಾತ್ರ ಪಡೆದು ಬೆಳೆಯನ್ನು ಬೆಳೆಯದೆ ತೊಂದರೆಗೆ ಮತ್ತು ನಷ್ಟಕ್ಕೆ ಒಳಗಾಗುವ ಪರಿಸ್ಥಿತಿ ಇದೆ. ಅದರಲ್ಲೂ ಕೂಡ ಹೇಮಾವತಿ ನದಿ ಪ್ರದೇಶದಲ್ಲಿರತಕ್ಕ ಶ್ರೀ ರಾಮದೇವರ ನಾಲೆ ಕಾವೇರಿ ಜಲಾನಯನ ಪ್ರದೇಶದ ಚಿಕ್ಕದೇವರಾಯರ ನಾಲೆ, ಬಂಗಾರದೊಡ್ಡಿ ನಾಲೆ ಇಂತಹ ಅನೇಕ ನಾಲೆಗಳು ಎಷ್ಟು ವ್ಯರ್ಥವಾಗಿವೆಯೆಂದರೆ, ನದಿ ಎಷ್ಟು ಪ್ರದೇಶ ಇದೆಯೋ ನಾಲೆಗಳೂ ಕೂಡ ಅಷ್ಟೇ ಅಗಲವಾಗಿವೆ. ಈ ನಾಲೆಗಳ ಮೂಲಕ ನೀರು ಉಪಯೋಗಿಸಿಕೊಳ್ಳುವುದಕ್ಕೆ ಬಹಳ ಕಷ್ಟವಾಗಿದೆ. ಆದ್ದರಿಂದ ಹೆಸರಿಗೆ ಮಾತ್ರ ತರಿಭೂಮಿಯಾಗಿ ಕೊನೆಯಲ್ಲಿರತಕ್ಕ ಈ ಪ್ರದೇಶಕ್ಕೆ ಹೆಚ್ಚಿನ ನೀರು ಹೋಗದೆ ಅಲ್ಲಿನ ರೈತರು ಬಹಳ ತೊಂದರೆಗೆ ಒಳಗಾಗಿದ್ದಾರೆ. ಈಗ ನಾವು ಏನು ಮಾಡಬೇಕು? ಮೊನ್ನೆ ಕಾವೇರಿ ನೀರಿನ ಬಗ್ಗೆ ಚರ್ಚೆಗಳು ಪ್ರಾರಂಭವಾಗಿವೆ. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಇ. ಎಸ್. ವೆಂಕಟರಾಮಯ್ಯನವರ ಹೆಸರನ್ನು ಹೇಳುವುದಾದರೆ ಮೊನ್ನೆ ಒಂದು ಸಮಾರಂಭದಲ್ಲಿ ಅವರು ತಮ್ಮದೇ

ಆದ ಅಭಿಪ್ರಾಯವನ್ನು ಕೊಟ್ಟರು. ಅಂದರೆ, ಸರ್ವೋಚ್ಚ ನ್ಯಾಯಾಲಯ ಒಂದು ತೀರ್ಪನ್ನು ಕೊಟ್ಟಿದ್ದರೂ ಕೂಡ ಆ ತೀರ್ಪಿಗೆ ವಿರುದ್ಧವಾಗದ ರೀತಿಯಲ್ಲಿ ಸಂಬಂಧಪಟ್ಟ ರಾಜ್ಯಗಳಿಂದ ಅಂದರೆ, ತಮಿಳುನಾಡಿನಿಂದ ಐದು ಮಂದಿ, ಕರ್ನಾಟಕದಿಂದ ಐದು ಮಂದಿ, ಕೇಂದ್ರದಿಂದ ಐದು ಮಂದಿ ಸದಸ್ಯರನ್ನು ನೇಮಿಸಿ ಕಾವೇರಿ ಪ್ರಾಧಿಕಾರವನ್ನು ಮಾಡಿ ಅವರ ವಿವೇಚನೆಗೆ ಆಡಳಿತದ ವ್ಯಾಪ್ತಿಗೆ ಇದನ್ನು ಒಳಪಡಿಸಿ ಯಾವ ರಾಜ್ಯಕ್ಕೂ ಅನ್ಯಾಯವಾಗದ ರೀತಿಯಲ್ಲಿ ಅದನ್ನು ನಿರ್ವಹಣೆ ಮಾಡಬಹುದೆಂದು ಹೇಳಿದ್ದಾರೆ. ಇದರಿಂದ ನ್ಯಾಯಾಲಯದ ತೀರ್ಪನ್ನೂ ಗೌರವಿಸಿದಂತಾಗುತ್ತದೆ ಎಂಬ ಮಾತನ್ನು ಹೇಳಿದ್ದಾರೆ. ಬಹುಶಃ ಅದರ ಬಗ್ಗೆ ಇಲ್ಲಿಗಿಂತ ಕೇಂದ್ರಸರ್ಕಾರದವರು ಹೆಚ್ಚಿಗೆ ಗಮನ ಕೊಟ್ಟರೆ ಬಹಳ ಒಳ್ಳೆಯದು. ನನ್ನ ಎದುರುಗಡೆ ಕುಳಿತಿರತಕ್ಕ ಮಾನ್ಯ ಸದಸ್ಯರುಗಳಲ್ಲಿ ನನ್ನ ಕೋರಿಕೆ ಏನೆಂದರೆ, ಹೇಗಿದ್ದರೂ ಕೇಂದ್ರದಲ್ಲಿ ಅವರ ಸರ್ಕಾರ ಇದೆ. ಅಲ್ಲಿ ಪ್ರಧಾನ ಮಂತ್ರಿಯವರನ್ನು ಮತ್ತು ನೀರಾವರಿ ಮಂತ್ರಿಯವರನ್ನು ಒಪ್ಪಿಸಿ ಈ ಒಂದು ಯೋಜನೆ ಜಾರಿಗೆ ಬರುವಹಾಗೆ ಮಾಡಿದರೆ ಬಹುಶಃ ಎರಡೂ ರಾಜ್ಯಗಳು ಸ್ನೇಹದಿಂದ ಉಳಿಯಬಲ್ಲವು, ಮತ್ತು ಇಬ್ಬರಿಗೂ ತೊಂದರೆಯಾಗದ ರೀತಿಯಲ್ಲಿ ಇರತಕ್ಕ ನೀರನ್ನು ನಾವು ಸರಿಯಾಗಿ ಬಳಸಿಕೊಳ್ಳಬಹುದು ಎಂಬ ಆಶಾ ಭಾವನೆಯನ್ನು ನಾನು ಹೊಂದಿದ್ದೇನೆ, ಮತ್ತೆ ತಲಕಾವೇರಿಯಿಂದ ಇಳಿಜಾರು ಪ್ರದೇಶದಲ್ಲಿ ನೀರು ವ್ಯರ್ಥವಾಗಿ ಅರಬ್ಬಿ ಸಮುದ್ರವನ್ನು ಸೇರುತ್ತಿದೆ. ಆದ್ದರಿಂದ ಹೆಚ್ಚು ಖರ್ಚಿಲ್ಲದೆ ಕಾಂಟೂರ್ ಕಾಲುವೆಗಳನ್ನು ಅಲ್ಲಲ್ಲೇ ತೆಗೆದು ಕಾವೇರಿ ಜಲಾನಯನ ಪ್ರದೇಶಕ್ಕೆ ತಿರುಗಿಸಿದರೆ ಕೊನೇಪಕ್ಷ ಏಳೆಂಟು ಟಿ.ಎಂ.ಸಿ. ನೀರನ್ನು ನಾವು ತೆಗೆದುಕೊಳ್ಳಬಹುದು. ಆದರಿಂದ ಹೆಚ್ಚು ಖರ್ಚಾಗುವುದಿಲ್ಲ. ಜೊತೆಗೆ ಇನ್ನೊಬ್ಬರಿಗೆ ಅನ್ಯಾಯವೂ ಆಗುವುದಿಲ್ಲ.

ಛೇರ್ಮನ್.—೧೦ ನಿಮಿಷ ಆಯಿತು. ಬೇಗ ಮುಗಿಸಿ.

ಶ್ರೀ ಹಲಗೇಗೌಡ.—ಮುಗಿಸುತ್ತೇನೆ. ಅದನ್ನು ಮಾಡಿದರೆ ನೀರು ಬರುತ್ತದೆ. ನಾವು ಹೆಚ್ಚು ನೀರನ್ನು ಪಡೆದುಕೊಳ್ಳಲು ಅವಕಾಶವಾಗುತ್ತದೆ. ಆಮೇಲೆ 'ಕಾಡಾ' ಅಚ್ಚುಕಟ್ಟು ಪ್ರಾಧಿಕಾರಗಳನ್ನು ಮೊದಲು ರದ್ದು ಮಾಡಬೇಕು. ಇದರಿಂದ ಯಾವ ಪ್ರಯೋಜನವು ಇಲ್ಲ. ಇಂಜಿನಿಯರಿಂಗ್ ಇಲಾಖೆ ಯಾವ ಕೆಲಸ ಮಾಡುತ್ತದೆ ಅದೇ ಕೆಲಸವನ್ನು ದ್ವಿಪ್ರತಿಯಲ್ಲಿ ಅವರೂ ಮಾಡುತ್ತಾರೆ, ಹಾಗಾದರೆ ಅವರು ಮಾಡತಕ್ಕ ಕೆಲಸ ಏನು? ಕೇವಲ ೫ ಜನ ಐ.ಎ.ಎಸ್. ಅಧಿಕಾರಿಗಳಿಗೆ ಅಥವಾ ೫ ಜನ ಮುಖ್ಯ ಇಂಜಿನಿಯರ್‌ಗಳಿಗೆ ಸ್ಥಾನವನ್ನು ಕಲ್ಪಿಸಿಕೊಡುವುದಕೋಸ್ಕರ ಈ ಕೆಲಸ ಮಾಡಬೇಕಾಗಿದೆಯೇ ಹೊರತು ಇಲ್ಲದಿದ್ದರೆ ಆ ಪ್ರಾಧಿಕಾರಗಳಿಂದ ಹೊಸದಾದ ಕೆಲಸಗಳು ಹೊಸದಾದ ಯೋಜನೆಗಳು ಯಾವುವು ನಡೆಯುವುದಿಲ್ಲ. ಏತಕ್ಕೆಂದರೆ ಅಲ್ಲಿ ಬರತಕ್ಕ ಇಲಾಖೆಗಳೆಲ್ಲವೂ ಕೂಡ ರೆಗ್ಯುಲರ್ ಇಲಾಖೆಯಲ್ಲೇ ಇರುವುದರಿಂದ, ಅದೇ ಕೆಲಸ ದ್ವಿಪ್ರತಿಯಲ್ಲಿ ಮಾಡುವಂತಹ ಕೆಲಸವಾಗಿರುವುದರಿಂದ, ಅದನ್ನು ತೆಗೆಯಬೇಕು, ಅದೇ ಹಣವನ್ನು ಉಳಿದ ಅಚ್ಚುಕಟ್ಟು ಪ್ರದೇಶದ ಅಭಿವೃದ್ಧಿಗಾಗಿ ಉಪಯೋಗಿಸಿದರೆ ಒಳ್ಳೆಯದಾಗುತ್ತದೆಂಬ ಸಲಹೆಯನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೊಡಲಿಚ್ಛಿಸುತ್ತೇನೆ.

ಇನ್ನು ರಸ್ತೆ ಕೆಲಸಗಳನ್ನು ಮಾಡುತ್ತಿದ್ದಾರಲ್ಲಾ, ಅದರಲ್ಲಿ ಬಹುಶಃ ರಸ್ತೆಗಳಿಗೆ ಕೊಡತಕ್ಕ ಹಣ ಅಂದರೆ ಅದರ ನಿರ್ವಹಣೆಗೆ ಕೊಡತಕ್ಕ ಹಣದಿಂದ ಅಲ್ಲಿ ಇರತಕ್ಕ ಕೂಲಿ ಆಳುಗಳನ್ನು ನೇಮಿಸಿಕೊಳ್ಳುವುದಕ್ಕೂ ಸಾಕಾಗುವುದಿಲ್ಲ. ಅಂದಮೇಲೆ ಇನ್ನು ರಸ್ತೆ ನಿರ್ವಹಣೆಯ ಕೆಲಸ ಎಲ್ಲಿ ಆಗುತ್ತದೆ, ಇನ್ನು ಅದರ ರಿಪೇರಿ ಕೆಲಸ ಎಲ್ಲಿ ಆಗುತ್ತದೆ. ಹೀಗಾಗಿ ದುರಸ್ತಿ ಮಾಡುವ ಕೆಲಸ ಕನಸಿನ ಮಾತಾಗಿಯೇ ಉಳಿದಿದೆ. ಮತ್ತು ಈ ಇಲಾಖೆಯಲ್ಲಿ ಭ್ರಷ್ಟಾಚಾರ ಇದೆ ಅಂತ ಎಲ್ಲರೂ ಕೂಡ ಹೇಳಿದ್ದಾರೆ. ನಾನೂ ಕೂಡ ಅವರ ಮಾತಿಗೆ ನನ್ನ ಧ್ವನಿಯನ್ನೂ ಸೇರಿಸುತ್ತಾ, ಅದಕ್ಕೆ ಒಂದು ಉದಾಹರಣೆಯನ್ನು ಕೊಡ ಬಯಸುತ್ತೇನೆ. ಮೊನ್ನೆ ನಮ್ಮ ಸ್ನೇಹಿತರೊಬ್ಬರು ಚಟ್ಟಂಗೆರೆ, ಬಾಗೂರು ನವಿಲೆ ಸುರಂಗಗಳ ಬಗ್ಗೆ ಹೇಳಿದರು. ಚಟ್ಟಂಗೆರೆ ಸುರಂಗ ನನ್ನ ಕ್ಷೇತ್ರದಲ್ಲಿ ಬರತಕ್ಕಂತಹದ್ದು. ಅದರಲ್ಲಿ ಏನು ನಡೆದಿದೆ ಎಂದರೆ ಸುಮಾರು ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿದೆ, ಅದಕ್ಕೆ ನಾನು ಸಾಕ್ಷಿಭೂತವಾಗಿ, ರೆಕಾರ್ಡೆಡ್ ಎವಿಡೆನ್ಸ್ ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ಕೊಡುತ್ತಿದ್ದೇನೆ. ದಿನಾಂಕ ೧೪-೧೨-೮೮ರ ಕನ್ನಡಪ್ರಭದಲ್ಲಿ ಪತ್ರಿಕೆಯಲ್ಲಿ ಚಟ್ಟಂಗೆರೆ ಸುರಂಗ ಕಾಮಗಾರಿಯಲ್ಲಿ ಒಂದು ಕೋಟಿ ರೂಪಾಯಿಗಳ ದುರುಪಯೋಗವಾಗಿದೆ ಎಂಬ ದೀರ್ಘವಾದ ಲೇಖನವೇ ಬಂದಿದೆ. ಅದು ಆದ ಮೇಲೆ ಅಲ್ಲಿನ ಅಧಿಕಾರಿಗಳ ಮೇಲೆ ವಿಚಾರಣೆ ನಡೆದು ಸುಮಾರು ೫ ಜನ ಅಧಿಕಾರಿಗಳನ್ನು ಅಮಾನತ್ತುಗೊಳಿಸಿದರು. ಅದು ಭಾನುವಾರ, ಮಾರ್ಚಿ ೫, ೧೯೮೯ರ ಪ್ರಜಾವಾಣಿ ಪತ್ರಿಕೆಯಲ್ಲಿ ಬಂತು. ಅದರಲ್ಲಿ ಹೇಳಿದ್ದಾರೆ, ಹೇಮಾವತಿ ಯೋಜನೆಯ ಚಟ್ಟಂಗೆರೆ ಸುರಂಗ ಮಾರ್ಗದ ನಿರ್ಮಾಣದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ನೀರಾವರಿ ಇಲಾಖೆಯ ಒಬ್ಬ ಎಗ್ಸಿಕ್ಯೂಟೀವ್ ಇಂಜಿನಿಯರ್ ಸೇರಿದಂತೆ ೫ ಜನ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡಿರು

ಮಂಥದ್ದು, ಸಸ್‌ಪೆಂಡ್ ಆಗಿರತಕ್ಕವರು ಇಂತಿಂತಹವರು ಎಂದೆಲ್ಲಾ ಇದೆ. ಅದು ಒಂದು. ತದ ನಂತರ ಅಲ್ಲಿ ಆಗಿರತಕ್ಕ ಅವ್ಯವಹಾರವಾದರೂ ಇಷ್ಟೆ. ನಾನು ಒಂದು ಅಧಿಕೃತ ಪ್ರತಿಯನ್ನು ತೆಗೆದು ಕೊಂಡಿದ್ದೇನೆ. ಅಸಿಸ್ಟೆಂಟ್ ಎಗ್ಸಿಕ್ಯೂಟೀವ್ ಇಂಜಿನಿಯರ್, ನಂ. ೯ ಹೇಮಾವತಿ ಲೆಫ್ಟ್ ಬ್ಯಾಂಕ್ ಕೆನಾಲ್ ಸಬ್ ಡಿವಿಜನ್ ತೆಂಡೇಕೆರೆ, ಮಂಡ್ಯ ಡಿಸ್ಟ್ರಿಕ್ಟ್ ಇವರಿಗೆ ಮಂಡ್ಯ ಜಿಲ್ಲೆಯ ಜಿಲ್ಲಾ ಪರಿಷತ್ತಿನ ಸದಸ್ಯರಾದ ಸನ್ಮಾನ್ಯ ಎಸ್. ಎಸ್. ಗುಂಡಯ್ಯನವರು ಒಂದು ಕಾಗದವನ್ನು ಬರೆದರು, ಅವರು ಜಿಲ್ಲೆಯಲ್ಲಿ ಅಗ್ರಿಕಲ್ಚರಲ್ ಹಾಗೂ ಅನಿಮಲ್ ಹಸ್‌ಬೆಂಡ್ರಿ ಇಲಾಖೆಯ ಸ್ಟ್ಯಾಂಡಿಂಗ್ ಕಮಿಟಿಯ ಛೇರ್ಮನ್ನಾಗಿದ್ದರು. ಅವರು ಇವರಿಗೆ ಪತ್ರ ಬರೆದು ಆ ವಿವರವನ್ನು ಪಡೆದರು. ಅದರಲ್ಲಿ ಹೀಗಿದೆ. With reference to your letter dated 6-12-1988. The details are furnished as below ಅದು ಹೇಗೆಂದರೆ. ಚಟ್ಟಂಗೆರೆ ಸುರಂಗ ಮಾರ್ಗದ ಕೆಲಸದಲ್ಲಿ ಸರ್ಕಾರ ಹಾಗೂ ಕಂಟ್ರಾಕ್ಟ್‌ದಾರರ ನಡುವೆ ಒಪ್ಪಂದವಾಗಿದ್ದುದು ಏಪ್ರಿಲ್ ೧೯೮೫ರಲ್ಲಿ ಹಾಗೆ ಕೆಲಸ ಪ್ರಾರಂಭ ವಾದದ್ದು ೨೫-೪-೮೫ರಲ್ಲಿ ಅದರ ಎಸ್ಟಿಮೇಟ್ ಅಮೌಂಟ್ ೧೨೧.೨೮ ಲಕ್ಷ ರೂಪಾಯಿಗಳು. ಆ ಒಪ್ಪಂದದ ಪ್ರಕಾರ ಟೆಂಡರ್ ಆದದ್ದು ೧೧೪ ಲಕ್ಷ ರೂಪಾಯಿಗಳಿಗೆ. ೧೨೧ ಲಕ್ಷ ರೂಪಾಯಿಗಳ ಕೆಲಸಕ್ಕೆ ೧೧೪ ಲಕ್ಷ ರೂಪಾಯಿಗಳಿಗೆ ಟೆಂಡರ್ ಆಯಿತು. ಟೆಂಡರ್ ಪ್ರಕಾರ ರಾಕ್ ಬೋಲ್ಟ್‌ಗಳನ್ನು ಹಾಕಿಸಲು ಅವಕಾಶ ಇದ್ದುದು ೪೦ ಸಾವಿರ ರೂಪಾಯಿಗಳು. ಆದರೆ ೬-೧೨-೮೮ರವರೆಗೆ ರಾಕ್ ಬೋಲ್ಟ್‌ಗಳನ್ನು ಹಾಕಲಿಕ್ಕಾಗಿ ಕೊಟ್ಟಿರುವ ಹಣ ೫೮ ಲಕ್ಷ ರೂಪಾಯಿಗಳು ೪೦ ಸಾವಿರ ರೂಪಾಯಿ ಗಳಿಗೆ ತಯಾರಾದ ಅಂದಾಜು ಮೆಚ್ಚದ ರಾಕ್ ಬೋಲ್ಟ್‌ಗಳ ಕೆಲಸಕ್ಕೆ ೫೮ ಲಕ್ಷ ರೂಪಾಯಿಗಳ ಹಣ ಸಂದಾಯವಾಗಿದೆ, ಬಿಲ್ಲು ಪಾವತಿಯಾಗಿದೆ. ಅದು ಎಲ್ಲಿಯವರೆಗೆ ಎಂದರೆ ೬-೧೨-೮೮ರವರೆಗೆ ಕೊಟ್ಟಿರು ವುದು ಮಾತ್ರ ೫೮ ಲಕ್ಷ ರೂಪಾಯಿಗಳು. ಅಲ್ಲಿಂದ ಈಚೆಗೆ ಪಾವತಿಯಾಗಿರುವ ಹಣ ೨ ಕೋಟಿ ೨೦ ಲಕ್ಷ ರೂಪಾಯಿಗಳು. ಆ ವೇಳೆಗಾಗಲೆ ೨ ಕೋಟಿ ೨೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಒಂದು ಕೋಟಿ ಹದಿನಾಲ್ಕು ಲಕ್ಷ ರೂಪಾಯಿಗಳ ಕೆಲಸಕ್ಕೆ ೨ ಕೋಟಿ ೨೦ ಲಕ್ಷ ರೂಪಾಯಿಗಳನ್ನು ಕೊಟ್ಟರೂ ಕೂಡ ಇನ್ನು ಉಳಿದ ಕೆಲಸಗಳಿಗೆ ೭೫ ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆ. ಅಂದಿನ ಕೆಲಸಗಳಿಗೆ ಬಿಲ್ ಪಾವತಿ ಮಾಡಿದಂತಹವರು ಎಗ್ಸಿಕ್ಯೂಟಿವ್ ಇಂಜಿನಿಯರ್ ವೆಂಕಟದಾಸಪ್ಪ ಅಂತ ಇದ್ದರು. ಅವರು ಮೊದಲು ಅಲ್ಲಿಯೇ ಅಸಿಸ್ಟೆಂಟ್ ಎಗ್ಸಿಕ್ಯೂಟೀವ್ ಇಂಜಿನಿಯರ್ ಆಗಿದ್ದಂತಹವರು. ಅವರಿಗೆ ಬಡ್ತಿಯನ್ನು ಕೊಟ್ಟು ಎಗ್ಸಿಕ್ಯೂಟಿವ್ ಇಂಜಿನಿಯರಾಗಿ ಅವರನ್ನು ಅಲ್ಲಿಯೇ ಇಟ್ಟು ಅವರಿಂದ ಈ ಎಲ್ಲ ಕೆಲಸಗಳನ್ನು ಮಾಡಿಸಿದ್ದಾರೆ. ಇಷ್ಟೊಂದು ಹಣವನ್ನು ಅಲ್ಲಿ ಕಂಟ್ರಾಕ್ಟರು ಏನು ಇದ್ದಾರೆ, ಅವರು ಬಹಳ ಪ್ರಭಾವಿಯುತವಾದ ಕಂಟ್ರಾಕ್ಟ್‌ದಾರರು, ಅವರು ಇವರಿಂದ ಪಡೆದರು.

ಇದರ ಬಗ್ಗೆ ಗಲಾಟೆ ಆದಮೇಲೆ ಅವರನ್ನು ಸಂಸ್ಪೆಂಡ್ ಮಾಡಿ ಬೇರೆ ಇಂಜಿನಿಯರ್‌ರವರನ್ನು ಅಲ್ಲಿ ಇಟ್ಟರು. ಆದರೆ ಅಲ್ಲಿಗೆ ಬಂದ ಬೇರೆ ಎಂಜಿನಿಯರ್ ಬಹಳ ದಕ್ಷರಾಗಿದ್ದು ಯಾವುದೇ ಅವ್ಯವಹಾರಗಳಿಗೆ ಎಡೆಮಾಡಿಕೊಡದಿದ್ದರಿಂದ ಅಲ್ಲಿನ ಪ್ರಭಾವೀ ಕಂಟ್ರಾಕ್ಟರ್ ಆ ಎಗ್ಸಿಕ್ಯೂಟೀವ್ ಎಂಜಿನಿಯರ್‌ರವರನ್ನೆಲ್ಲ ಬೇರೆ ಕಡೆಗೆ ವರ್ಗ ಮಾಡಿಸಿ ತಮಗೆ ಬೇಕಾದ ಒಬ್ಬ ಎಗ್ಸಿಕ್ಯೂಟೀವ್ ಇಂಜನಿಯರನ್ನು ಅಲ್ಲಿಗೆ ಹಾಕಿಕೊಂಡಿದ್ದಾರೆ, ಕೆಲಸ ನಡೆಯುತ್ತಿದೆ. ಈ ರೀತಿ ಅಲ್ಲಿ ವ್ಯವಹಾರ ನಡೆಯುತ್ತಿದೆ. ಈ ಬಗ್ಗೆ ನನ್ನಲ್ಲಿ ಇರುವ ಸರ್ಟಿಫೈಡ್ ಕಾಪೀಸನ್ನು ಕೊಡುತ್ತೇನೆ, ಇವನ್ನು ಮಾನ್ಯ ಮಂತ್ರಿಗಳು ಸ್ವೀಕರಿಸಬೇಕು. ಇಂತಹ ಕೆಲಸಗಳು ಅಲ್ಲಿ ನಡೆಯುತ್ತಿವೆ. ಇದು ಅವ್ಯವಹಾರ ಅಲ್ಲವೆ. ೧೧೪ ಲಕ್ಷ ರೂಪಾಯಿಗಳ ಕೆಲಸಕ್ಕೆ ೨೨೦ ಲಕ್ಷ ರೂಪಾಯಿಗಳನ್ನು ಕೊಟ್ಟರೂ ಇನ್ನೂ ಕೂಡಾ ೭೫ ಲಕ್ಷ ರೂಪಾಯಿ ಬಾಕಿ ಕೊಡಬೇಕಾಗಿದೆ. ಇನ್ನೊಂದು ಕಡೆ ೪೦ ಸಾವಿರ ರೂಪಾಯಿಗಳ ಅಂದಾಜಿನ ಕೆಲಸಕ್ಕೆ ೫೮ ಲಕ್ಷ ರೂಪಾಯಿಗಳು ಪಾವತಿಯಾಗಿದೆ. ಇದು ಅವ್ಯವಹಾರ ಅಲ್ಲವೇ ? ಇದನ್ನು ಹೇಳಿದರೆ ನಮ್ಮ ಕೆಲವು ಸ್ನೇಹಿತರಿಗೆ ಕೋಪ ಬರಬಹುದು. ಇದಕ್ಕೆ ಕಾರಣರು ಯಾರು ಎಂದು ವಿಮರ್ಶೆ ಮಾಡಿ ನೋಡಿ, ತಪ್ಪಿತಸ್ಥರು ಯಾರೇ ಇರಲಿ, ಯಾರೇ ಅಧಿಕಾರಿ ಇರಲಿ, ಆ ಬಗ್ಗೆ ಕ್ರಮ ಕೈಗೊಳ್ಳಿ. ಮತ್ತೆ ಇದರ ಹಿಂದೆ ಕಾಣದ ಕೈ ಯಾವುದೇ ಇದ್ದರೂ ಅದನ್ನು ಗುರ್ತಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಚಟ್ಟಂಗೆರೆ ಟನಲ್ ಬಗ್ಗೆ ಈಗಾಗಲೇ ಲೋಕಾಯುಕ್ತದಲ್ಲಿ ತನಿಖೆ ತೀವ್ರಗತಿಯಲ್ಲಿ ನಡೆಯುತ್ತಿದೆ. ಈ ಬಗ್ಗೆ ಅಲ್ಲಿಂದ ವರದಿ ಬಂದಮೇಲೆ ಏನಾಗಿದೆ ಎನ್ನುವುದು ಗೊತ್ತಾಗುತ್ತದೆ. ಬಹುಶಃ ನಾವು ಅಲ್ಲಿಯವರೆಗೆ ಕಾಯಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಶ್ರೀ ಹಲಗೇಗೌಡ.—ಸಂಬಂಧಪಟ್ಟ ಆಫೀಸಿನಿಂದ ನಾನು ವಿವರಗಳನ್ನು ಪಡೆದುಕೊಂಡಿದ್ದೇನೆ. ಅದನ್ನು ಬೇಕಾದರೆ ಕಳುಹಿಸಿಕೊಡುತ್ತೇನೆ, ಅವರು ನೋಡಿಕೊಳ್ಳಲಿ. ನಾನು ಇಲ್ಲಿ ಸುಳ್ಳು

ಹೇಳುವುದಿಲ್ಲ. ಈ ಪವಿತ್ರ ಸದನದಲ್ಲಿ ನಾನು ಆ ಮಾತು ಈ ಮಾತು ಹೇಳಿ ಕಾಲವ್ಯಯ ಮಾಡುವುದಕ್ಕೆ ಇಷ್ಟಪಡುವುದಿಲ್ಲ.

ಛೇರ್ಮನ್.—ವಿಷಯ ತನಿಖಾ ಹಂತದಲ್ಲಿದೆ ಎಂದು ಮಂತ್ರಿಗಳು ಹೇಳಿದರು. ತಾವು ಅಸತ್ಯ ಹೇಳಿದಿರೆಂದು ಅವರು ಹೇಳಲಿಲ್ಲ. ಈಗ ತಾವು ತಮ್ಮ ಭಾಷಣವನ್ನು ಮುಗಿಸಿ. ತಾವು ಹೆಚ್ಚು ಸಮಯ ತೆಗೆದುಕೊಂಡಿದ್ದೀರಿ.

ಶ್ರೀ ಹಲಗೇಗೌಡ.—ಇಂತಹ ಅ ದಕ್ಷ ಅಧಿಕಾರಿಗಳನ್ನು, ಭ್ರಷ್ಟ ಅಧಿಕಾರಿಗಳನ್ನು ಗುರ್ತಿಸಿ ಅವರಿಗೆ ತಕ್ಕ ಶಿಕ್ಷೆ ವಿಧಿಸುವುದಲ್ಲದೇ, ಪ್ರಾಮಾಣಿಕ, ದಕ್ಷ ಅಧಿಕಾರಿಗಳನ್ನು ಗುರುತಿಸಿ ಅವರಿಗೆ ತಕ್ಕ ರಕ್ಷಣೆಯನ್ನೂ ಸಹಾ ಕೊಡಬೇಕೆಂದು ಮಾನ್ಯ ಸಚಿವರನ್ನು ಈ ಮೂಲಕ ಕೇಳಿಕೊಳ್ಳುತ್ತೇನೆ. ಇನ್ನು ಈ ಸಾರಿ ಯಾವ ಹೊಸ ಕೆಲಸವನ್ನು ಕೂಡಾ ಈ ಅಂದಾಜು ಪತ್ರದಲ್ಲಿ ಸೇರಿಸಿಲ್ಲ. ಹೋಗಲಿ ಹಳೆಯ ಕೆಲಸಗಳನ್ನಾದರೂ ಸೇರಿಸಿದ್ದಾರೆಯೆ ಎಂದರೆ ಅವನ್ನೂ ಸೇರಿಸಿಲ್ಲ. ಮಾನ್ಯ ಅಧ್ಯಕ್ಷರೇ, ೧೯೭೪ರಲ್ಲಿ ಚೆನ್ನಬಸಪ್ಪನವರು ಲೋಕೋಪಯೋಗಿ ಮಂತ್ರಿಗಳಾಗಿದ್ದಾಗ ನನ್ನ ತಾಲ್ಲೂಕಿನಲ್ಲಿ ಒಂದು ಎರಡು ಕೆರೆಗಳಿಗೆ ಅಸ್ತಿಭಾರ ಶಿಲೆಯನ್ನು ಹಾಕಿದ್ದರು. ಇದುವರೆವಿಗೂ ಕೂಡ ಅವಕ್ಕೆ ೫ಲಕ್ಷರೂಪಾಯಿ ಖರ್ಚು ಮಾಡಿಲ್ಲ. ಅವನ್ನು ಆಗಿನ ಅಂದಾಜು ಪತ್ರಕ್ಕೂ ಕೂಡಾ ಸೇರಿಸಿದ್ದರು, ಅಸ್ತಿ ಭಾರ ಶಿಲೆಯನ್ನೂ ಹಾಕಿದ್ದರು. ಅಲ್ಲಿ ಶಿಲೆಗಳು ಮಾತ್ರ ಇವೆ, ಕೆರೆ ಕೆಲಸ ಮಾತ್ರ ಆಗಿಲ್ಲ. ಮಲ್ಲೇನಹಳ್ಳಿ ಕೆರೆ ಲೋಕಪಾವನಿಗೆ ಅಡ್ಡಲಾಗಿ ಮಂಡ್ಯ ಮತ್ತು ಪಾಂಡವಪುರ ತಾಲ್ಲೂಕಿನ ಮಧ್ಯ ಕಟ್ಟಬೇಕಾದ ಕೆರೆ. ಅದು ಇನ್ನೂ ಕೂಡ ಪ್ರಾರಂಭವಾಗಿಲ್ಲ. ಹೀಗಾದರೆ ಕೆಲಸ ಹೇಗೆ ಮುಗಿಯುತ್ತದೆ ರೈತರಿಗೆ ಎಂದು ಅನುಕೂಲವಾಗುತ್ತದೆ ? ಹಾಗೆಯೇ ಸಂಗಾಪುರ ಕೆರೆ ನನ್ನ ತಾಲ್ಲೂಕಿನಲ್ಲಿ ೨೦ ವರ್ಷಗಳ ಹಿಂದೆ ಪ್ರಾರಂಭ ಆಗಿದ್ದು. ಇನ್ನೂ ಮುಗಿದಿಲ್ಲ. ಅಲ್ಲಿ ರಸ್ತೆಗಳಂತೂ ಅತೀ ಕೆಟ್ಟ ಸ್ಥಿತಿಯಲ್ಲಿವೆ. ಅಲ್ಲಿ ಅನೇಕ ಅಪಘಾತಗಳು, ದುರಂತಗಳು ಆಗುತ್ತಿವೆ. ಅಲ್ಲಿ ರಸ್ತೆ ಅರ್ಧ, ಮುಕ್ಕಾಲು ಅಡಿ ಮೇಲೆ ಇದ್ದು ಆ ರಸ್ತೆಯಲ್ಲಿ ಸ್ಕೂಟರ್ ಹೋಗುತ್ತಿದ್ದಾಗ ಎದುರುಗಡೆ ಲಾರಿ ಬಂದರೆ, ಪಕ್ಕಕ್ಕೆ ಇಳಿದಾಗ ಕೆಳಕ್ಕೆ ಬಿದ್ದು ಅಪಘಾತಗಳಾಗಿ ಸಾವುನೋವುಗಳು ಆಗಿದ್ದು ಈ ಬಗ್ಗೆ ನಮ್ಮ ಅಧಿಕಾರಿಗಳನ್ನು ಕೋರ್ಟಿಗೆ ಕರೆಸಿ ಅವರನ್ನು ಛಾದೋಬದ್ಧವಾಗಿ ಪ್ರಶ್ನಿಸಿದಂಥ ಅನೇಕ ಉದಾಹರಣೆಗಳುಂಟು. ಹೀಗಾಗಿ ಅಪಘಾತದಲ್ಲಿ ಸಾವುನೋವುಗಳನ್ನು ಅನುಭವಿಸಿದವರಿಗೆ ಇನ್‌ಷೂರೆನ್ಸ್ ಕೂಡ ಕೊಡಬೇಕಾಗಿ ಬಂದಿದೆ. ಮಾನ್ಯ ಅಧ್ಯಕ್ಷರೇ, ಮೈಸೂರಿನಲ್ಲಿ ಒಂದು ಕಟ್ಟಡ ಇದೆ. ಅದು ಕೃಷ್ಣರಾಜೇಂದ್ರ ಆಸ್ಪತ್ರೆಯ ಹೊರರೋಗಿಗಳ ಕಟ್ಟಡ. ಅದು ಕೇವಲ ಅಸ್ತಿಪಂಜರದ ಹಾಗೆ ನಿಂತಿದೆ. ಇದನ್ನು ಯಾವ ಇಂಜಿನಿಯರ್ ಕೂಡಾ ಬಂದು ಸರಿ ಮಾಡುವುದಕ್ಕೆ ಶಕ್ತಿ ಇಲ್ಲವೇ ? ಇವತ್ತು ನೀವು ಯಾರಿಗಾದರೂ ಬಡ್ತಿ ಕೊಡುವಾಗ ಸೇವಾ ಹಿರಿತನದ ಮೇಲೆಯೇ ಬಡ್ತಿ ಕೊಟ್ಟರೆ ನಿಜವಾಗಿ ಕೆಲಸ ಮಾಡುವವರಿಗೆ ಅನ್ಯಾಯ ಆಗುವುದಿಲ್ಲವೇ ? ಈ ಕಟ್ಟಡ ಇಷ್ಟು ವರ್ಷಗಳಿಂದ ಹಾಗೆಯೇ ಇದೆಯಲ್ಲಾ ಇವರು ಏಕೆ ಸೂಕ್ತ ಕ್ರಮ ತೆಗೆದುಕೊಂಡಿಲ್ಲ? ಇವತ್ತು ಉನ್ನತ ಅಧಿಕಾರಿಗಳು ಇದ್ದಾರೆ. ಕಾರ್ಯದರ್ಶಿ–೧ ಇದ್ದಾರೆ. ಅವರನ್ನು ಕಾರ್ಯದರ್ಶಿ–೧ ಮಾಡಿದ್ದೀರಿ. ನನ್ನ ಅಭ್ಯಂತರವಿಲ್ಲ. ಅವರಿಗೆ ತಕ್ಕ ಹುದ್ದೆ ಕೊಡಬೇಕು, ಬಡ್ತಿಯನ್ನೂ ಕೂಡ ಕೊಡಬೇಕು. ಆದರೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಎಂಜಿನಿಯರ್ ಹುದ್ದೆಯಿಂದ ಎಕ್ಸಿಕ್ಯೂಟಿವ್ ಇಂಜಿನಿಯರ್ ಆದಮೇಲೆ ಅವರು ಒಂದು ಕಾಲೇಜಿನ ಪ್ರಾಧ್ಯಾಪಕರಾಗಿ ಸೇರಿಕೊಂಡಂಥವರು. ಈ ರೀತಿ ಕಾಲೇಜಿನಲ್ಲಿ ಪಾಠ ಹೇಳಿ ಬಂದಂತಹವರು ಸೆಕ್ರೆಟರಿ–೧ ಆದರೆ ಅವರು ಉಳಿದ ಇಂಜಿನಿಯರ್‌ಗಳಿಗೆ ಹೇಗೆ ಮಾರ್ಗದರ್ಶನ ಮಾಡಬಲ್ಲರು ? ಅವರು ಇಂತಹ ಯಾವುದಾದರೂ ಸಮಸ್ಯೆಗಳನ್ನು ಬಿಡಿಸಲು ಶಕ್ತಿಯುಳ್ಳವರೆ ? ತಾಂತ್ರಿಕ ಸಮಸ್ಯೆಗಳನ್ನು ಬಿಡಿಸಬೇಕಾದರೆ, ತಾಂತ್ರಿಕ ತಜ್ಞರಾಗಿರತಕ್ಕ, ಇದೇ ವಿಭಾಗದಲ್ಲಿ ಅನುಭವ ಪಡೆದಿರತಕ್ಕ ಇಂಜಿನಿಯರ್‌ಗಳಿದ್ದಾರೆ. ಅವರನ್ನು ಗುರುತಿಸಿ, ಅವರ ಸೇವೆಯನ್ನು ಅವರ ದಕ್ಷತೆಯನ್ನು ಗುರುತಿಸಿ ಅವರಿಗೆ ನೀವು ಬಡ್ತಿಯನ್ನು ಕೊಡಬೇಕೇ ಹೊರತು ಕೇವಲ ಸೇವಾ ಹಿರಿತನವನ್ನು ಕಡೆಗಣಿಸಿ ಈ ರೀತಿ ಮಾಡಿದರೆ ಈ ಇಲಾಖೆಯಲ್ಲಿ ಆಗತಕ್ಕಂಥ ಪರಿಸ್ಥಿತಿ ಏನು ? ವಿಶ್ವೇಶ್ವರಯ್ಯನವರ ಕಾಲಕೂ ನಮ್ಮ ಕಾಲಕ್ಕೂ ಆಗಿರತಕ್ಕಂಥ ಪರಿಸ್ಥಿತಿ. ಇದು ಲೋಕೋಪಯೋಗಿ ಇಲಾಖೆ ಆಗಬೇಕೇ ಹೊರತು ಲೋಕಅಪಾಯದ ಇಲಾಖೆಯಾಗಬಾರದು. ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಆಗಲಿ, ಆದರೆ ಪಬ್ಲಿಕ್ ವೇಸ್ಟ್ ಡಿಪಾರ್ಟ್‌ಮೆಂಟ್ ಆಗಬಾರದು. ಈಗ ಆಗುತ್ತಿರುವುದು ಕೇವಲ ಪಬ್ಲಿಕ್ ವೇಸ್ಟ್. ಮಾನ್ಯ ಸಚಿವರ ಕಾಲದಲ್ಲಿ ಇದು ಲೋಕೋಪಯೋಗಿ ಇಲಾಖೆಯಾಗಿ ಒಳ್ಳೆಯ ಹೆಸರನ್ನು ಗಳಿಸಲಿ. ಕಳೆದುಹೋಗಿರತಕ್ಕ ಸ್ಥಾನವನ್ನು ಮತ್ತೆ ಪಡೆಯಲಿ ಎಂದು ಹೇಳಿ ನನಗೆ ಮಾತನಾಡಲು ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ಜೈಹಿಂದ್.

† ಶ್ರೀ ಪಿ.ಜಿ ಆರ್. ಸಿಂಧ್ಯ (ಕನಕಪುರ).—ಸನ್ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳು ಬಹಳ ಮುಖ್ಯವಾಗಿರತಕ್ಕ ಇಲಾಖೆಗಳು ಈ ಇಲಾಖೆಗಳ ಜವಾಬ್ದಾರಿಯನ್ನು ಮಾನ್ಯ ಪುಟ್ಟಸ್ವಾಮಿಗೌಡರು ವಹಿಸಿಕೊಂಡಿರುವುದು ನನಗಂತೂ ತುಂಬಾ ಸಂತೋಷವಾಗಿದೆ ನಾನು ಮತ್ತು ಪುಟ್ಟಸ್ವಾಮಿಗೌಡರು ಒಂದೇ ಕಡೆ ಇದ್ದು ಕೆಲಸ ಮಾಡಿದಂತಹವರು. ಮಾನ್ಯ ಪುಟ್ಟಸ್ವಾಮಿ ಗೌಡರು ರೈತರ ಬಗ್ಗೆ, ರೈತರ ಸಮಸ್ಯೆಗಳ ಬಗ್ಗೆ ಭಾಷಣಗಳನ್ನು ಕಡಿಮೆ ಮಾಡಿದರೂ ಅವರು ಕೆಲಸ ಮಾಡತಕ್ಕವರು. ಅವರಿಗೆ ರೈತರ ಬಗ್ಗೆ ಒಳ್ಳೆಯ ಕಳಕಳಿಯಿದೆ. ಅವರು ಈ ಇಲಾಖೆಯಲ್ಲಿ ಒಳ್ಳೆಯ ಕೆಲಸವನ್ನು ಮಾಡಿ ಒಳ್ಳೆಯ ನೇತೃತ್ವವನ್ನು ಕೊಡುತ್ತಾರೆಂದು ನಾನಾದರೂ ತಿಳಿದುಕೊಂಡಿದ್ದೇನೆ. ನನಗೆ ಅದರಲ್ಲಿ ವಿಶ್ವಾಸವಿದೆ. ಬರತಕ್ಕ ಒಂದೆರಡು ವರ್ಷಗಳ ಕಾಲದಲ್ಲಿ ಮಾನ್ಯ ಪುಟ್ಟಸ್ವಾಮಿಗೌಡರು ನಮ್ಮ ರಾಜ್ಯದ ರೈತರಿಗೆ ಅನುಕೂಲವಾಗತಕ್ಕ ಕೆಲಸ ಮಾಡುತ್ತಾರೆ. ಮತ್ತು ಅವರಿಗೂ ಸಹ ದೊಡ್ಡ ಮತ್ತು ಒಳ್ಳೆಯ ಅವಕಾಶ ಸಿಕ್ಕಿದೆಯೆಂದು ನಾನಾದರೂ ತಿಳಿದಿದ್ದೇನೆ. ಏಕೆಂದರೆ, ನಮ್ಮ ರಾಜ್ಯದಲ್ಲಿ ಬಹಳ ದೊಡ್ಡ ಇಲಾಖೆ ಇದು. ನಮ್ಮ ರಾಜ್ಯದ ಮುಂದಿನ ಭವಿಷ್ಯವನ್ನು ನಿರ್ಧಾರ ಮಾಡತಕ್ಕಂಥ ಒಂದು ಸಂದಿಗ್ಧ ಕಾಲದಲ್ಲಿ ನಾವಿದ್ದೇವೆ. ಐದು ವರ್ಷಗಳ ಕಾಲದಲ್ಲಿ ಕಟು ನಿರ್ಧಾರವನ್ನು ನಾವೆಲ್ಲರೂ, ಇಡೀ ಸದನದಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ನಾವು ಯಾವ ರೀತಿ ನಮ್ಮ ಸರ್ಕಾರದ ಬೊಕ್ಕಸದ ಹಣವನ್ನು ಖರ್ಚು ಮಾಡುತ್ತೇವೆ ಎನ್ನುವುದರ ಬಗ್ಗೆ ಆ ಕಡೆಯ ಮತ್ತು ಈ ಕಡೆಯ ಸದಸ್ಯರು ಕುಳಿತುಕೊಂಡು ನಿರ್ಧಾರ ಮಾಡಿ ಕೆಲವು ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳತಕ್ಕಂಥ ಒಂದು ಸಂದಿಗ್ಧದ ಕಾಲ ಇದು. ಇದರಲ್ಲಿ ತಾವು ರಾಜಕೀಯ ಬೆರಸುವುದಿಲ್ಲವೆಂದು ನಾನಾದರೂ ತಿಳಿದಿದ್ದೇನೆ. ಏಕೆಂದರೆ, ಹಿಂದೆ ನೀರಾವರಿ ಇಲಾಖೆಯ ಮಂತ್ರಿಗಳಾಗಿದ್ದವರು ಬಹಳ ರಾಜಕೀಯವನ್ನು ಬೆರೆಸಿದ್ದಾರೆ ಇದನ್ನೇ ಒಂದು ದೊಡ್ಡ ಇಷ್ಯುವನ್ನಾಗಿ ಮಾಡಿ ಸರ್ಕಾರಗಳು ಹೋಗಿರತಕ್ಕದ್ದು ತಮಗೆ ಗೊತ್ತಿದೆ. ನನಗೆ ತಮ್ಮ ಮೇಲೆ ವಿಶ್ವಾಸ ಇದೆ ನೀವು ರಾಜಕೀಯ ಬೆರಸದೆ ಕೆಲಸವನ್ನು ಮಾಡುತ್ತೀರಿ ಎಂದು ನಾನಾದರೂ ನಂಬಿದ್ದೇನೆ. ಮೊದಲನೆಯದಾಗಿ, ಈ ಸದನದಲ್ಲಿ ನಾವು ಕಾವೇರಿ ನೀರಿನ ಬಗ್ಗೆ ಮಾತನಾಡಿದೆವು. ತಾವು ಸದನದ ಸಮಿತಿಯನ್ನೂ ಸಹಿತ ಮಾಡಿದ್ದೀರಿ. ಆದರೆ ಏಕೆ ಎಂದು ನನಗೆ ಅರ್ಥವಾಗುತ್ತಿಲ್ಲ, ಒಂದು ತಿಂಗಳಾಯಿತು, ನೀವು ಸದನದ ಸಮಿತಿ ಸಭೆಯನ್ನು ಕರೆದಿಲ್ಲ. ಸದನದ ಸಮಿತಿಯನ್ನು ನೇಮಕ ಮಾಡಿ ೧ ತಿಂಗಳು ನಾವು ಕಾಲಹರಣ ಮಾಡಿದ್ದೇವೆ. ನೀವು ಹೇಳಿದ್ದೀರಿ ಮತ್ತು ಮಾನ್ಯ ರಾಜಶೇಖರಮೂರ್ತಿಯವರೂ ಹೇಳಿದ್ದಾರೆ. ಈ ವರ್ಷ ಕಾವೇರಿ ಜಲಾನಯನ ಪ್ರದೇಶಗಳ ಕೆಲಸಗಳಿಗೆ ಬಹಳ ಹೆಚ್ಚಿನ ಹಣವನ್ನು ಕೊಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದೀರಿ. ಮಾನ್ಯಮುಖ್ಯಮಂತ್ರಿಗಳು ಸಹ ಹೇಳಿದ್ದಾರೆ. ಅದನ್ನು ನಾವು ಸ್ವಾಗತ ಮಾಡಿದ್ದೇವೆ. ಆದರೆ ಈ ಹಣ ವನ್ನು ಖರ್ಚುಮಾಡಬೇಕಾದರೆ ತಮ್ಮ ಹತ್ತಿರ ಇನ್‌ಫ್ರಾಸ್ಟ್ರಕ್ಚರ್ ಇದೆಯೆ ? ಇದರ ಬಗ್ಗೆ ತಾವು ಯೋಚನೆ ಮಾಡಬೇಕು ಈ ಹಣವನ್ನು ಉಪಯೋಗಿಸುವ ಬಗ್ಗೆ ತಮ್ಮ ಹತ್ತಿರ ಇನ್‌ಫ್ರಾಸ್ಟ್ರಕ್ಚರ್ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇದು ಆಗಬೇಕಾದರೆ ತಾವು ತಕ್ಷಣ ಸದನದ ಸಮಿತಿಯ ಸಭೆಯನ್ನು ಕರೆಯಬೇಕು.

ಯಾವ ರೀತಿ ಹಣ ಖರ್ಚು ಮಾಡಬೇಕು, ಯಾವುದರಲ್ಲಿ ಹಣ ಉಳಿಸಬೇಕು ಎನ್ನುವುದರ ಬಗ್ಗೆ ಸಲಹೆ ಕೊಡುತ್ತೇವೆ ಎಂದು ನಾವೆಲ್ಲಾ ನಿಮಗೆ ಹೇಳಿದ್ದೇವೆ. ತಮಗೆ ಏನಾದರೂ ನಿರ್ಲಕ್ಷ್ಯ ಮನೋಭಾವ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ತಮಿಳುನಾಡಿನವರು ಇದಕ್ಕೆ ಬೇಕಾಗಿರತಕ್ಕಂಥ ಲೀಗಲ್ ಸೆಲ್ ಅನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದಾರೆ. ಮತ್ತೆ ಟೆಕ್ನಿಕಲ್ ಸೆಲ್ಲನ್ನೂ ಕಾನ್‌ಸ್ಟಿಟ್ಯೂಟ್ ಮಾಡಿದ್ದಾರೆ. ಇವತ್ತು ಪತ್ರಿಕೆಗಳಲ್ಲಿ ಬಂದಿದೆ, ಮತ್ತೆ ಇದು ಟ್ರಿಬ್ಯೂನಲ್‌ಗೆ ಹೋಗಬೇಕೆಂದು ಕೇಳಿದವರೂ ಅವರೇ ಇವತ್ತು ನಾವು ಡಿಫೆಂಡ್ ಮಾಡಿಕೊಳ್ಳತಕ್ಕಂಥ ಸ್ಥಿತಿಯಲ್ಲಿದ್ದೇವೆ. ನೀವು ಟೆಕ್ನಿಕಲ್ ಕಮಿಟಿ ಮತ್ತು ಲೀಗಲ್ ಕಮಿಟಿ ಮಾಡಿದ್ದರೆ ಯಾರನ್ನು ಮಾಡಿದ್ದೀರಿ ಎಂದು ದಯವಿಟ್ಟು ಹೇಳಿ. ನೀವು ಇನ್ನೂ ಮಾಡಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಇದನ್ನು ತತ್‌ಕ್ಷಣ ಮಾಡಬೇಕು. ಇನ್ನು ಒಂದೆರಡು ದಿವಸಗಳಲ್ಲಿ ಇದು ಆಗಬೇಕು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಟೆಕ್ನಿಕಲ್ ಸಮಿತಿ ಆಗಿದೆ, ಹೆಸರುಗಳನ್ನು ಹೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಬಹಳ ಸಂತೋಷ. ಲೀಗಲ್ ಕಮಿಟಿ ಕೂಡ ಆಗಬೇಕು. ಕಾವೇರಿ ವಿವಾದದ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿ ೧೧ನೇ ತಾರೀಖಿಗೆ ಬರಲಿಲ್ಲ. ಸುಪ್ರೀಂ ಕೋರ್ಟಿನ ರಜೆ ಮುಗಿಯುತ್ತದೆ. ಏನು ಮಾಡಬೇಕು ಎನ್ನುವುದರ ಬಗ್ಗೆ ನಾವು ಖಾಸಗಿಯಾಗಿ ಈ ಸದನದ ಹೊರಗಡೆ ಚರ್ಚೆ ಮಾಡಿದ್ದೇವೆ. ತಾವೇ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕರೆದಿರತಕ್ಕಂಥ

ಸಭೆಯಲ್ಲಿ ಚರ್ಚೆಯಾಗಿದೆ. ಆದ್ದರಿಂದ ಇದರ ಬಗ್ಗೆ ತಕ್ಷಣ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಕೃಷ್ಣಾ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ನಮಗೆ ಇನ್ನೂ ಏಳೆಂಟು ವರ್ಷಗಳ ಸಮಯ ಇದೆ. ಆದರೆ ಈ ನೀರನ್ನು ಉಪಯೋಗಿಸಿಕೊಳ್ಳದೇ ಹೋದರೆ ಏನಾಗುತ್ತದೆ ಎಂಬುದರ ಬಗ್ಗೆ ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ. ಮತ್ತೆ ಒಂದು ಮಾತನ್ನು ಕಳೆದ ಸಾರಿ ಕಾವೇರಿ ಜಲಾಶಯನದ ವಿಷಯದ ಬಗ್ಗೆ ಮಾತನಾಡುತ್ತಾ ಹೇಳಿದ್ದೇನೆ, ಈ ಲಿಫ್ಟ್ ಇರಿಗೇಶನ್ ಸ್ಕೀಂಗಳು ಏನೇನು ಬರುತ್ತವೆ ಅಥವಾ ರೈತರು ಯಾರು ಪಂಪ್‌ಸೆಟ್‌ಗಳಲ್ಲಿ ನೀರು ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಇದರ ಬಗ್ಗೆ ಯಾರ ಪರವಾನಗಿಯೂ ಬೇಡ. ನೀವು ಟೋಟಲ್ ಆಗಿ ಅವರಿಗೆ ಪರ್ಮಿಶನ್ ಕೊಡಬೇಕು. ಕೆ.ಇ.ಬಿ.ಯವರನ್ನು ಕರೆಸಿ ನೀವು ಇನ್‌ಸ್ಟ್ರಕ್ಷನ್ ಕೊಡಿಸಿ ಎಷ್ಟು ಬೇಕಾದರೂ ನೀರು ಉಪಯೋಗಿಸಿಕೊಳ್ಳುವುದಕ್ಕೆ ನೀವು ಅಚ್ಚುಕಟ್ಟು ಮಾಡಲಿಕ್ಕೆ ಪ್ರಯತ್ನ ಮಾಡಬೇಕು ಎನ್ನತಕ್ಕಂಥ ಸಲಹೆ ಸಹಿತ ನಾನು ಇಟ್ಟಿದ್ದೆ. ಆದ್ದರಿಂದಲೇ ನಾನು ತಮಗೆ ಹೇಳಿದ್ದು, ಕಾವೇರಿ ಜಲಾಶಯನದ ಎಲ್ಲಾ ಶಾಸಕರುಗಳನ್ನು ಸಹಿತ ಕರೆದು ಅವರ ಮೂಲಕ ಆ ರೈತರನ್ನು ಬಡಿದೆಬ್ಬಿಸಬೇಕು. ಅವರಿಗೆ ವಿಶೇಷವಾಗಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಕೊಡಲಿಕ್ಕೆ ತಾವು ಪ್ರಯತ್ನ ಮಾಡಿದರೆ ಬಹುಶಃ ಒಂದು ವರ್ಷದಲ್ಲಿ ಕೊನೆಪಕ್ಷ ಒಂದು ಲಕ್ಷ ಎಕರೆಯಲ್ಲಿ ಅಚ್ಚುಕಟ್ಟು ಮಾಡಬಹುದೆಂದು ನಾನಾದರೂ ತಿಳಿದುಕೊಂಡಿದ್ದೇನೆ, ನಾನು ಕಾವೇರಿ ಬೇಸಿನ್‌ನ ಶಾಸಕ ಎಂಬುದು ತಮಗೆ ಗೊತ್ತಿದೆ. ಹಾರೋಬೆಲೆ ಯೋಜನೆ ಒಂದರಲ್ಲೇ ಬರತಕ್ಕಂಥ ಅರ್ಕಾವತಿಗೆ, ಶಿಂಷಾಗೆ ತಾವು ಲಿಫ್ಟ್ ಇರಿಗೇಷನ್ ಕೊಟ್ಟರೆ ಒಂದು ವರ್ಷದಲ್ಲೇ ಸುಮಾರು ೨೫ ಸಾವಿರ ಎಕರೆ ಜಮೀನಿನಲ್ಲಿ ನಾವು ನೀರಾವರಿ ಮಾಡಬಹುದು, ಆದ್ದರಿಂದ ದಯವಿಟ್ಟು ಇದನ್ನು ತತ್‌ಕ್ಷಣ ತಾವು ಮಾಡಬೇಕಾಗುತ್ತದೆ. ಇದರಲ್ಲಿ ನಾನು ರಾಜಕೀಯವನ್ನು ಬೆರೆಸಲಿಕ್ಕೆ ಪ್ರಯತ್ನ ಮಾಡುತ್ತಿಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾವೇರಿ ಮತ್ತು ಕೃಷ್ಣಾ ಬಗ್ಗೆ ನಾನು ಒಂದೇ ಬಗೆಯ ಆಸಕ್ತಿ ಇರತಕ್ಕಂಥವನು ಎಂಬುದು ತಮಗೆ ಗೊತ್ತಿದೆ. ಆದಷ್ಟು ಬೇಗ ಇದನ್ನು ಮಾಡಬೇಕೆಂದು ನಾನಾದರೂ ಬಯಸುತ್ತೇನೆ, ಇನ್ನು ಈ ಇಲಾಖೆಯಲ್ಲಿರತಕ್ಕಂಥ ಇಂಜನಿಯರುಗಳ ಟ್ರಾನ್ಸ್‌ಫರ್ ಬಗ್ಗೆ ನಿನ್ನೆ ಈ ಸದನದಲ್ಲಿ ನಾವು ಇಲ್ಲದೆ ಇರತಕ್ಕಂಥ ಸಂದರ್ಭದಲ್ಲಿ ಬಹಳ ಬಿಸಿ ಚರ್ಚೆಯಾಗಿದೆ ಎಂಬುದನ್ನು ನಾನು ಕೇಳಿದ್ದೇನೆ. ನಾನು ತಮ್ಮ ಮೇಲೆ ಆಪಾದನೆ ಹೊರಿಸುವುದಕ್ಕೆ ತಯಾರಿಲ್ಲ. ಏನು ವಿಚಾರ ಎಂಬುದು ನನಗೆ ಗೊತ್ತಿದೆ. ಮತ್ತು ಎಲ್ಲಿಯವರೆಗೆ ಈ ಪಕ್ಷಗಳ ಸರ್ಕಾರ ಇರುತ್ತದೆ, ಅಲ್ಲಿಯವರೆಗೆ ಒತ್ತಡಗಳು ಇರುತ್ತವೆ. ನಾವೂ ಆ ಕಡೆ ಕುಳಿತುಕೊಂಡು ಕೆಲಸ ಮಾಡಿದ್ದೇವೆ. ಎಲ್ಲಿಯವರೆಗೆ ಪೊಲಿಟಿಕಲ್ ಪ್ಯಾಟ್ರನೇಜ್‌ನಿಂದ ಇಂಜನಿಯರುಗಳ ವರ್ಗಾವಣೆ ಮಾಡಿಸುವುದನ್ನು ನಿಲ್ಲಿಸುವುದಿಲ್ಲ, ಅಲ್ಲಿಯವರೆಗೆ ಈ ಭ್ರಷ್ಟಾಚಾರವನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ.

ಇವತ್ತು ಏನಾಗಿದೆ ಎಂದರೆ, ಒಂದು ನಾಲ್ಕು ನೂರು ಜನ ಇಂಜನಿಯರುಗಳಿಗೆ ಎಕ್ಸಿಕ್ಯೂಟಿವ್ ಪೋಸ್ಟ್ ಕೊಡಬೇಕೆಂದು ನಾವೆಲ್ಲರೂ ಒತ್ತಡ ತರುತ್ತೇವೆ. ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಬಹಳ ಚೆನ್ನಾಗಿ ಹೇಳಿದರು. ಅದು ಅವರು ತಮ್ಮ ಅನುಭವದಿಂದ ಹೇಳಿರುವಂಥ ಮಾತು. ಲಿಂಗಾಯಿತ ಮಂತ್ರಿಗಳಾಗಿದ್ದರೆ ಲಿಂಗಾಯಿತರು ಬಂದು ನಮ್ಮ ಜಾತಿಯವರಿಗೆ ಅನ್ಯಾಯವಾಗಿದೆ ಎಂದು ಹೇಳುತ್ತಾರೆ. ಒಕ್ಕಲಿಗರು ಒಕ್ಕಲಿಗ ಮಂತ್ರಿಗಳ ಹತ್ತಿರ ಹೋಗಿ ನಮಗೆ ಬಹಳ ಅನ್ಯಾಯವಾಗಿದೆ ಅಂತ ಹೇಳಿ ಶಾಸಕರನ್ನು ಎತ್ತಿ ಕಟ್ಟಲಿಕ್ಕೆ ಪ್ರಯತ್ನ ಮಾಡುತ್ತಾರೆ. ಹಿಂದುಳಿದ ಜಾತಿಯವರು ಅಂತ ಹೇಳಿ ಇನ್ನು ಕೆಲವರು ಹೋಗುತ್ತಾರೆ. ಇವರೆಲ್ಲರ ಜ್ಞಾಪಕ ಬರುವುದು ಈ ಟ್ರಾನ್ಸ್‌ಫರ್‌ಗಳ ಸಮಯದಲ್ಲೇ. ಹಿಂದೆ ನಾವು ಅಧಿಕಾರ ಸ್ಥಾನದಲ್ಲಿ ಕುಳಿತುಕೊಂಡಿದ್ದಾಗ ನಿಮ್ಮಷ್ಟು ಟ್ರಾನ್ಸ್‌ಫರ್ಸ್ ಮಾಡಿರಬಹುದು. ಸ್ವಲ್ಪ ಜಾಸ್ತಿಯೇ ಮಾಡಿರಬಹುದೇನೋ, ಆ ಅಂಕಿಅಂಶಗಳು ನನಗೆ ಗೊತ್ತಿಲ್ಲ. ನಾವು ಅಧಿಕಾರ ಕಳೆದುಕೊಂಡ ತಕ್ಷಣವೇ ಇವರೆಲ್ಲ ನಮ್ಮನ್ನು ಮರೆತೇ ಬಿಟ್ಟಿದ್ದಾರೆ, ನಮ್ಮ ಹತ್ತಿರ ಬರಬೇಕು ಅಂತ ನಾವು ಬಯಸುವುದಿಲ್ಲ. ಆದರೆ ನಿಮಗೂ ಈ ಅನುಭವ ಆಗುತ್ತದೆ. ಶ್ರೀ ಧರ್ಮಸಿಂಗ್ ಅವರಿಗೆ, ಶ್ರೀ ಕಾಗೋಡು ತಿಮ್ಮಪ್ಪನವರಿಗೆ ಈ ಅನುಭವ ಆಗಿದೆ. ನಮಗೂ ಆಗಿದೆ. ನಿಮಗೆ ಇದು ಆಗುವುದು ಬೇಡ. ಏಕೆಂದರೆ, ನಾನು ವೃತ್ತಿಯಲ್ಲಿ ಒಬ್ಬ ಇಂಜನಿಯರ್. ನಾನು ನೊಂದ ಮನಸ್ಸಿನಿಂದ ಹೇಳುತ್ತೇನೆ, ನಮ್ಮ ರಾಜ್ಯದಲ್ಲಿ ಬಹಳ ಒಳ್ಳೆಯ ಇಂಜನಿಯರುಗಳು ಇದ್ದಾರೆ, ಶ್ರೀ ಬಾಳೇಕುಂದ್ರಿಯವರಿಗಿಂತ ಒಳ್ಳೆಯ ಇಂಜನಿಯರ್ ಯಾರು ಬೇಕು ? ಈಗ ನಿಮ್ಮ ಇಲಾಖೆಯಲ್ಲಿ ಇರಿಗೇಷನ್ ಸೆಕ್ರೆಟರಿ ಅಶ್ವತ್ಥ ನಾರಾಯಣರಾವ್ ಎಂದು ಇದ್ದಾರೆ. ನನಗೆ ಗೊತ್ತಿರುವ ಹಾಗೆ ಇವರು ಬಿಲ್ಡಿಂಗ್‌ನಲ್ಲಿ ಎಕ್ಸ್‌ಪರ್ಟ್. ನಮ್ಮ ದೇಶದಲ್ಲಿಯೇ ಇವರು ಎಕ್ಸ್‌ಪರ್ಟ್ಸ್. ಶ್ರೀಹರಿಕೋಟಾದಲ್ಲಿ ಸುಂಟರಗಾಳಿ, ಸೈಕ್ಲೋನ್ ಬಂದಾಗ, ಬೇರೆಯವರು ಡಿಸೈನ್ ಮಾಡಿದಂಥ ಬಿಲ್ಡಿಂಗ್‌ಗಳು ಬಿದ್ದು ಹೋದರೂ, ಇವರು ಡಿಸೈನ್ ಮಾಡಿರತಕ್ಕ ಬಿಲ್ಡಿಂಗ್ ಬಿದ್ದಿಲ್ಲ.

ಆದ್ದರಿಂದ, ನಮ್ಮ ಹತ್ತಿರ ಎಕ್ಸ್‌ಪರ್ಟೈಸ್ ಇದೆ. ನಮ್ಮ ಹತ್ತಿರ ಕಾಂಪಿಟೆಂಟ್ ಇಂಜಿನಿಯರ್ಸ್ ಇದ್ದಾರೆ. ಆದರೆ ನಾವು ಅವರಿಗೆ ಫ್ರೀಡಮ್ ಕೊಡುವುದಕ್ಕಾಗುತ್ತಾ ಇಲ್ಲ. ನನಗೆ ಇವತ್ತು ತಿಳಿದುಬಂದಿದೆ. ಒಬ್ಬ ಶಾಸಕರಿಗೆ ೩೦ಳ ಜನ ಇಂಜಿನಿಯರ್ಸ್ ಟ್ರಾನ್ಸ್‌ಫರ್ಸ್‌ನ್ನು ಮಾಡಿಷ್ಟೆ ಮಾಡಿಸುವುದಕ್ಕೆ ನಾಳೆಯಿಂದಲೋ ಅಥವಾ ಅಧಿವೇಶನ ಮುಗಿದ ಮೇಲೋ ಅವಕಾಶ ಸಿಗುತ್ತದೆಂದು ನಾನು ಕೇಳಿದ್ದೇನೆ. ಇದು ಸರಿಯಾಗಿ ನನಗೆ ಗೊತ್ತಿಲ್ಲ. ಇದು ತಪ್ಪಾಗಿದ್ದರೆ ಬಹಳ ಸಂತೋಷ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ತಾವು ವರ್ಷವೆಲ್ಲಾ ಮಾಡಿದ್ದೀರಿ. ನಾವು ಒಂದೆರಡು ದಿವಸ ಮಾಡಿದರೆ ಏಕೆ ಇಷ್ಟೊಂದು ಆಕ್ಷೇಪಣೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ನಾನು ಇದರಲ್ಲಿ ಕೈಹಾಕತಕ್ಕಂಥವನಲ್ಲ. ನೀವು ಏನು ಬೇಕಾದರೂ ಮಾಡಿಕೊಳ್ಳಿ, ಗೋಡಾ ಹೈ, ಮೈದಾನ್ ಹೈ. ನೀವು ಎಷ್ಟು ಬೇಕಾದರೂ ಟ್ರಾನ್ಸ್‌ಫರ್ಸ್ ಮಾಡಿ. ಆದರೆ, ನಾನು ಹೇಳುವುದು ಏನೆಂದರೆ, ನೀವು ಇದರಲ್ಲಿ ಏನಾದರೊಂದು ಪಾಲಿಸಿಯನ್ನು ಮಾಡಬೇಕಾಗುತ್ತದೆ. ಎಗ್ಸಿಕ್ಯೂಟಿವ್ ಪೋಸ್ಟ್‌ಗೆ ಒಬ್ಬರನ್ನು ಹಾಕಬೇಕಾದರೆ, ಒಬ್ಬರೇ ಏಕೆ ಎಗ್ಸಿಕ್ಯೂಟಿವ್ ಪೋಸ್ಟ್‌ನಲ್ಲಿ ಇರಬೇಕು ? ರೆಗ್ಯೂಲರ್ ಪಿಡಬ್ಲ್ಯುಡಿಗೆ ಬಿಲ್ಡಿಂಗ್ ಡಿವಿಜನ್ ಬೇಕು. ನ್ಯಾಷನಲ್ ಹೈವೇ ಬೇಕು ಎಲ್ಲಿ ಆನ್ ಗೋಯಿಂಗ್ ವರ್ಕ್ ಇರುತ್ತದೆ, ಅಲ್ಲೇ ಬೇಕೆಂದು ಕೇಳುತ್ತಾರೆ ಎನ್ನುವುದು ನಮಗೆಲ್ಲಾ ಗೊತ್ತಿರತಕ್ಕಂಥಾದ್ದು. ಇದನ್ನು ತಾವು ಯಾವ ರೀತಿ ಮಾಡುತ್ತೀರಿ ಎನ್ನುವ ಬಗ್ಗೆ ಒಂದು ಪಾಲಿಸಿಯನ್ನು ಫ್ರೇಮ್ ಮಾಡಿ. ನೀವು ಅದನ್ನು ಇಲ್ಲಿಯೇ ಅನೌನ್ಸ್ ಮಾಡುವುದಕ್ಕಾಗುವುದಿಲ್ಲವೆಂದು ನನಗೆ ಗೊತ್ತಿದೆ. ಮೊದಲು ಇದರ ಬಗ್ಗೆ ನೀವು ನಿಮ್ಮ ಪಾರ್ಟಿಯಲ್ಲೇ ಚರ್ಚೆ ಮಾಡಿ, ಇಲ್ಲದಿದ್ದರೆ ನಿಮ್ಮ ಕಾಲೇ ಎಳೆದುಬಿಡುತ್ತಾರೆ. ಮೊದಲು ನಿಮ್ಮ ಪಾರ್ಟಿಯಲ್ಲಿ ಚರ್ಚೆ ಮಾಡಿ ಇದರ ಬಗ್ಗೆ ಒಂದು ತೀರ್ಮಾನ ಮಾಡಬೇಕಾಗುತ್ತದೆ. ಎಲ್ಲಿಯವರೆಗೆ ಪೊಲಿಟಿಕಲ್ ಪ್ಯಾಟ್ರನೈಜನ್ನು ನಾವು ಇಂಜಿನಿಯರ್ಸ್‌ಗೆ ನಿಲ್ಲಿಸುವುದಿಲ್ಲ, ಅಲ್ಲಿಯವರೆಗೆ ಕರಪ್ಷನ್ ಕಡಿಮೆ ಮಾಡುತ್ತೇವೆ. ಕ್ವಾಲಿಟಿ ವರ್ಕ್ ಮಾಡಿಸುತ್ತೇವೆ ಎನ್ನುವುದು ಸುಳ್ಳಿನ ಮಾತಾಗುತ್ತದೆ. ಇದನ್ನು ನಿಲ್ಲಿಸುವುದಕ್ಕೆ ನಾವೆಲ್ಲರೂ ಪ್ರಯತ್ನ ಮಾಡಬೇಕಾಗುತ್ತದೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇನ್ನು ಒಂದೆರಡು ವಿಚಾರಗಳನ್ನು ಇಲಾಖೆಯ ಬಗ್ಗೆ ಮಾತನಾಡುತ್ತೇನೆ. ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ. ನಮ್ಮ ರಾಜ್ಯದಲ್ಲಿ ಹೊಸದಾಗಿ ರಾಷ್ಟ್ರೀಯ ಹೆದ್ದಾರಿಗಳು ಎಷ್ಟಾಗಿವೆ, ಕೇಂದ್ರ ಸರ್ಕಾರದಲ್ಲಿ ನಮ್ಮ ಪ್ರಪೋಸಲ್ಸ್ ಎಷ್ಟು ವರ್ಷಗಳಿಂದ ಬಾಕಿ ಇವೆ ಎಂದು ಕೇಳಿದ್ದೆ. ಅದಕ್ಕೆ ೧೭ ವರ್ಷದಿಂದ ಒಂದೂ ಹೊಸದಾಗಿ ನ್ಯಾಷನಲ್ ಹೈವೇ ಆಗುವುದಕ್ಕೆ ನಮಗೆ ಅವಕಾಶ ಸಿಕ್ಕಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಮಾನ್ಯ ಕಾನೂನು ಮಂತ್ರಿಗಳು ಈ ಸಂದರ್ಭದಲ್ಲಿ ಇದ್ದಿದ್ದರೆ ಬಹಳ ಚೆನ್ನಾಗಿತ್ತು. ಅದಕ್ಕೆ ಅವರು ಏನು ಕಾನೂನು ಬೆರೆಸಿ ಉತ್ತರ ಕೊಡುತ್ತಿದ್ದರೋ ನನಗೆ ಅರ್ಥವಾಗುವುದಿಲ್ಲ. ೧೭ ವರ್ಷಗಳಿಂದ ಯಾರು ಯಾರು ಅಧಿಕಾರದಲ್ಲಿದ್ದರು. ಏಕೆ ನಮ್ಮ ರಾಜ್ಯಕ್ಕೆ ಅನ್ಯಾಯವಾಗಿದೆ, ಉತ್ತರ ಪ್ರದೇಶಕ್ಕೆ ಇದೇ ರೀತಿ ಆಗಿದೆಯೇ, ಬಿಹಾರಕ್ಕೆ ಇದೇ ರೀತಿ ಆಗಿದೆಯೇ, ಮಹಾರಾಷ್ಟ್ರಕ್ಕೆ ಇದೇ ರೀತಿ ಆಗಿದೆಯೇ, ನಮ್ಮ ರಾಜ್ಯಕ್ಕೆ ಮಾತ್ರ ಏಕೆ ಈ ಅನ್ಯಾಯ ಆಗಿರುವುದು. ನಮ್ಮ ಪ್ರಪೋಸಲ್ಸ್ ಏಕೆ ಪೆಂಡಿಂಗ್ ಇವೆ. ಹಾಗಾದರೆ ನಮ್ಮಲ್ಲಿ ಹೊಸದಾಗಿ ಏಕೆ ನ್ಯಾಷನಲ್ ಹೈವೇ ಮಾಡಿಲ್ಲ ಎನ್ನುವ ಪ್ರಶ್ನೆಗಳಿಲ್ಲವೇ ? ಏಕೆ ನಮ್ಮ ಪ್ರಪೋಸಲ್ಸ್‌ಗೆ ಅಪ್ರೂವಲ್ ಸಿಗಲಿಲ್ಲ ? ಇದರ ಬಗ್ಗೆ ನಾವು ಬಹಳ ದೀರ್ಘವಾಗಿ ಯೋಚನೆ ಮಾಡಬೇಕಾಗುತ್ತದೆ. ನಾನು ಸಾರಿಗೆ ಇಲಾಖೆಯ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಕೇಂದ್ರದಲ್ಲಿ ಸರ್ಫೇಸ್ ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಹತ್ತಿರ ಮಾತನಾಡಿದ್ದೇನೆ. ಅವರಿಗೆ ರೋಡ್ಸ್, ನ್ಯಾಷನಲ್ ಹೈವೇ ಬರುತ್ತವೆ. ಮತ್ತೆ ಮೋಟಾರ್ ವೆಹಿಕಲ್ ಡಿಪಾರ್ಟ್‌ಮೆಂಟ್ ಕೂಡ ಬರುತ್ತದೆ, ಇದಕ್ಕೆಲ್ಲಾ ಒಬ್ಬರೇ ಮಂತ್ರಿಗಳು. ನಾನು ಸರ್ಫೇಸ್ ಟ್ರಾನ್ಸ್‌ಪೋರ್ಟ್ ಮಂತ್ರಿಗಳ ಹತ್ತಿರ ಚರ್ಚೆ ಮಾಡಿದ್ದೇನೆ. ನಮ್ಮ ಪ್ರಪೋಸಲ್ಸ್‌ನ್ನು ನೀವು ಲೆಕ್ಕಕ್ಕೇ ಇಟ್ಟಿಲ್ಲವಲ್ಲ ಎಂದು ಕೇಳಿದ್ದೇನೆ, ಅಲ್ಲಿ ಏನಾಗಿದೆಯೆಂದರೆ, ಕೇಂದ್ರದಲ್ಲಿ ಬೇರೆ ಬೇರೆ ಇಲಾಖೆಗಳಲ್ಲಿ ಅಧಿಕಾರಿಗಳು ಯಾರಿದ್ದಾರೆ, ಅವರೆಲ್ಲರೂ ಆ ರಾಜ್ಯಗಳವರೇ. ನಮ್ಮ ರಾಜ್ಯಕ್ಕೆ ಬಂಧಾನಕ್ಕೆ ಆ ಕಡೆಯಿಂದ ಬಂದವರು, ಈ ಕಡೆ ಹೋಗುತ್ತಾರೆ. ಅವರು ವರ್ಗ ಮಾಡಿಸಿಕೊಂಡು, ಡೆಲ್ಲಿಯಲ್ಲೋ, ಕರ್ನಾಟಕ ಭವನದಲ್ಲೋ ಇರುವುದಕ್ಕೆ ಹೋಗುತ್ತಾರೆ. ಅವರಿಗೆ ನಮ್ಮ ರಾಜ್ಯದ ಬಗ್ಗೆ ಏನು ಆಸಕ್ತಿ ಇದೆ ? ೧೭ ವರ್ಷಗಳಿಂದ ನಮ್ಮ ಪ್ರಪೋಸಲ್ಸ್ ಅಪ್ರೂವಲ್ ಆಗಿ ಏಕೆ ಬರಲಿಲ್ಲ ? ಇದು ನಮ್ಮ ರಾಜ್ಯಕ್ಕೆ ಆಗಿರತಕ್ಕ ಒಂದು ದೊಡ್ಡ ಅನ್ಯಾಯವೆಂದು ನಾನು ತಿಳಿದಿದ್ದೇನೆ. ಯಾವುದೇ ಪಕ್ಷದ ಸರ್ಕಾರ ಇರಲಿ, ನಮ್ಮ ಸರ್ಕಾರ ಇದೆ. ನಿಮ್ಮ ಸರ್ಕಾರ ಇದೆ ಎಂದು ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ನಮಗೆ ನ್ಯಾಯಬದ್ಧವಾಗಿ ಬರಬೇಕಾಗಿರತಕ್ಕ ಹಣ

ಏನಿದೆ ಅದನ್ನು ತರುವುದಕ್ಕೆ ತಾವು ಹೋರಾಟ ಮಾಡಬೇಕು. ಇದಕ್ಕೆ ನಿಮ್ಮ ಜೊತೆಯಲ್ಲಿ ನಾವೂ ಇದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ನಮ್ಮ ಕಾಡಾಗಳು. ಪ್ರೊ. ಎಂ. ಡಿ. ನಂಜುಂಡಸ್ವಾಮಿಯವರು ಇದರ ಬಗ್ಗೆ ಮಾತನಾಡಿದ್ದಾರೆ, ಆ ಸಂದರ್ಭದಲ್ಲಿ ನಾನು ಇರಲಿಲ್ಲ. ಈ ವಾಟರ್ ಮ್ಯಾನೇಜ್‌ಮೆಂಟ್ ಬಗ್ಗೆ ನಾವು ಬಹಳ ಎಡವಿದ್ದೇವೆಂದು ನನಗಾದರೂ ಅನಿಸುತ್ತದೆ. ಈ ಕಾಡಾಗಳ ಫಂಕ್ಷನ್ ಏನಿದೆ. ಇದನ್ನು ತಾವು ದಯುವಿಟ್ಟು ರಿವ್ಯೂ ಮಾಡಿ. ಕೆಲಸ ಬಾರದೇ ಇರತಕ್ಕವರನ್ನು ಯಾರಿಗಾದರೂ ಏನಾದರೂ ಖಾಯಿಲೆ ಇದ್ದರೆ ಅಂತಹವನ್ನು ಅಥವಾ ಯಾರದೋ ಕಾಲದಲ್ಲಿ ಇವರು ಹಾಗೆಯೇ ಪ್ರಮೋಷನ್ ಮಾಡಿಕೊಂಡು ಬಂದು ಬಿಟ್ಟಿದ್ದಾರೆ ಎಂದಿದ್ದರೆ ಅವರನ್ನು ಕಾಡಾ ಅಡ್ಮಿನಿಸ್ಟ್ರೇಟರಾಗಿ ಅಪಾಯಿಂಟ್ ಕೊಡುತ್ತೇವೆ.

೪.೧೦ ಪಿ.ಎಂ.

ಅಂದರೆ ನಮಗೆ ಬೇಡದೆ ಇದ್ದವರನ್ನು ಕಾಡಾ ಅಡ್ಮಿನಿಸ್ಟ್ರೇಟರ್ ಆಗಿ ಅಪಾಯಿಂಟ್ ಮಾಡುತ್ತೇವೆ. ತಾವು ಯೋಚನೆ ಮಾಡಿ. ಅದರಲ್ಲಿ ಕ್ರಾಪಿಂಗ್ ಪೇಟ್ರನೇಜ್ ಇರಬಹುದು, ವಾಟರ್ ಮ್ಯಾನೇಜ್‌ಮೆಂಟ್ ಇರಬಹುದು. ತುಂಗಭದ್ರಾ ಕೆನಾಲ್ಸ್‌ನ್ನು ಲೈನಿಂಗ್ ಮಾಡಲಿಕ್ಕೆ ನೆದರ್ ಲ್ಯಾಂಡ್‌ನಿಂದ ಎಕ್ಸ್‌ಪರ್ಟ್‌ಗಳನ್ನು ಕರೆಸಿದ್ದೀರೆಂದು ನನಗೆ ತಿಳಿಯಿತು. ನಮ್ಮ ರಾಜ್ಯದ ಇಂಜಿನಿಯರ್‌ಗಳು ಅಷ್ಟೊಂದು ದಡ್ಡರಲ್ಲ, ಅವರು ಸ್ಲ್ಯಾಬ್ಸ್ ಇಡುತ್ತಾ ಇರಬಹುದು. ನಮ್ಮ ಶಾಹಬಾದ್ ಕಡಪ ಕಲ್ಲುಗಳು ಅದಕ್ಕಿಂತ ಸಾವಿರ ಪಾಲು ಚೆನ್ನಾಗಿವೆ. ಇದನ್ನು ಹಾಕಿದರೆ ದುಡ್ಡು ಸಿಗುವುದಿಲ್ಲ ಎನ್ನುವ ಕಾರಣ ಇರಬಹುದು. ಅವರನ್ನು ಏಕೆ ಕರೆಸಿದ್ದೀರಿ ಎಂದು ಹೇಳಿ. ಇದರ ಬಗ್ಗೆ ತಾವು ದಯುವಿಟ್ಟು ಯೋಚನೆ ಮಾಡಿ. ಈ ಕಾಡಾ ಮೇನೇಜ್‌ಮೆಂಟಿನ ಫಂಕ್ಷನ್ ಏನಿದೆ ಇದು ಬಹಳ ಹದಗೆಟ್ಟಿದೆ. ಮಾನ್ಯ ಅಧ್ಯಕ್ಷರೆ. ಇವತ್ತು ನೀರನ್ನು ಒದಗಿಸುವ ಬಗ್ಗೆ ನಾವು ಇಷ್ಟೊಂದು ಮಾತನಾಡುತ್ತಿದ್ದೇವೆ. ಆದರೆ, ಇವತ್ತು ಇರತಕ್ಕಂಥ ಆನ್‌ಗೋಯಿಂಗ್ ಪ್ರಾಜೆಕ್ಟ್ಸ್ ಎಲ್ಲ ಕಂಪ್ಲೀಟ್ ಮಾಡಿದರೂ ಕೂಡಾ ರಾಜ್ಯದಲ್ಲಿರತಕ್ಕ ಕಲ್ಟಿವಬಲ್ ಲ್ಯಾಂಡ್‌ಗೆ ನಾವು ನೀರನ್ನು ಕೊಡುವುದಕ್ಕೆ ಆಗುವುದು ೨೦ ಪರ್ಸೆಂಟ್‌ಗೆ ಮಾತ್ರ. ಇದು ತಮಗೂ ಗೊತ್ತಿದೆ, ಇನ್ನೂ ೮೦ ಪರ್ಸೆಂಟ್ ಹಾಗೆ ಉಳಿಯುತ್ತದೆ. ನಾನು ನೀರಾವರಿ ಮಂತ್ರಿಯಾಗಿದ್ದಾಗ ತುಂಗಭದ್ರಾ ಅಚ್ಚುಕಟ್ಟು ಪ್ರದೇಶಕ್ಕೆ ಭೇಟಿ ಮಾಡಿದ್ದೆ. ರಾಯಚೂರು, ಸಿಂಧನೂರುಗಳಲ್ಲೆಲ್ಲಾ ಭೂಮಿಯಲ್ಲಿ ನೀರು ಜಾಸ್ತಿಯಾಗಿ ಸುಮಾರು ಒಂದು, ಒಂದೂವರೆ ಲಕ್ಷ ಎಕರೆಯಷ್ಟು ಜಮೀನಿನಲ್ಲಿ ಏನೂ ಬೆಳೆಯಲಿಕ್ಕಾಗದ ಇರತಕ್ಕ ಚೌಳು ಪ್ರದೇಶವಾಗಿರುವುದು ತಮ್ಮ ಗಮನಕ್ಕೂ ಬಂದಿರಲಿಕ್ಕೆ ಸಾಕು. ಏಕೆ ಹೀಗಾಯಿತು ? ಏಕೆಂದರೆ, ನಮ್ಮ ರೈತರುಗಳಿಗೆ ತಿಳುವಳಿಕೆ ಕೊಡಲಿಕ್ಕಾಗಲಿಲ್ಲ; ನಮ್ಮ ರೈತರುಗಳಿಗೆ ಸಹಾಯ ಮಾಡಲಿಕ್ಕಾಗಲಿಲ್ಲ. ಇದು ಒಂದು ಕಡೆಯಾದರೆ, ಕಾಡಾ ಮ್ಯಾನೇಜ್‌ಮೆಂಟ್ ಅಷ್ಟೇ ಮುಖ್ಯವಾಗಿರತಕ್ಕಂಥಾದ್ದು, ನಮ್ಮ ಕಾಲುವೆಗಳ ರಿಪೇರಿ. ಇವತ್ತು ನಾವು ಏನು ನೀರನ್ನು ಇಂಪೌಂಡ್ ಮಾಡುತ್ತೇವೆ, ಆ ನೀರನ್ನು ನೂರಕ್ಕೆ ನೂರರಷ್ಟು ನಾವು ಉಪಯೋಗಿಸಿಕೊಳ್ಳಲಿಕ್ಕಾಗುತ್ತಿಲ್ಲ, ಅಣೆಕಟ್ಟು ಕಟ್ಟಲಿಕ್ಕೆ ಎಷ್ಟು ಆಸಕ್ತಿ ನಾವು ತೋರಿಸುತ್ತೇವೆ, ಹೆಚ್ಚು ನೀರನ್ನು ನಿಲ್ಲಿಸಲಿಕ್ಕೆ ಎಷ್ಟು ಆಸಕ್ತಿಯನ್ನು ತೋರಿಸುತ್ತೇವೆ, ಅಷ್ಟೇ ಆಸಕ್ತಿಯನ್ನು ನೀರಿನ ಕಾಲುವೆಗಳನ್ನು ದುರಸ್ತಿ ಮಾಡಿ ನೀರನ್ನು ಉಪಯೋಗಿಸಿಕೊಳ್ಳಲಿಕ್ಕೆ ತೋರಿಸುತ್ತಿಲ್ಲ. ತಾವು ಬಹಳ ದೂರ ಹೋಗುವುದು ಬೇಡ, ಈ ಬೆಂಗಳೂರಿನ ಕೊಳಚೆ ನೀರೆಲ್ಲ ನಮ್ಮ ತಾಲ್ಲೂಕಿನ ಬೈರಮಂಗಲ ಕೆರೆಗೆ ಬರುತ್ತದೆ. ಸನ್ಮಾನ್ಯ ಸದಸ್ಯರಾದ ಸಿ. ಎಂ. ಲಿಂಗಪ್ಪನವರು ಸದನದಲ್ಲಿ ಇಲ್ಲ. ಸುಮಾರು ೬ ಸಾವಿರ ಎಕರೆ ಅಚ್ಚುಕಟ್ಟು ಪ್ರದೇಶಗಳಿಗೆ ಬೇಕಾಗಿರುವಷ್ಟು ನೀರು ಅಲ್ಲಿ ಸಿಗುತ್ತದೆ, ಇನ್ನೂ ೨-೩ ಸಾವಿರ ಎಕರೆಗಳಿಗೆ ನೀರನ್ನು ಕೊಡಬಹುದು. ಆದರೆ, ಚಾನಲ್‌ಗಳು ಸುಮಾರು ೨೦-೨೫ ವರ್ಷಗಳಿಂದ ರಿಪೇರಿಯಾಗಿಲ್ಲ. ಇದು ಎಲ್ಲಾ ಕಡೆ ಇರತಕ್ಕಂಥ ಒಂದು ಸಮಸ್ಯೆ. ಇವರು ಚಾನಲ್‌ಗಳನ್ನು ಮೇನ್‌ಟೇನ್ ಮಾಡುವುದಕ್ಕೆ ಹೋಗುವುದಿಲ್ಲ. ಈ ಖರ್ಚನ್ನು ತಾವು ಬೇಕಾದರೆ ಲೆಕ್ಕ ಹಾಕಿ. ನಮ್ಮ ಕಾಲದಲ್ಲೂ ಅಷ್ಟೇ, ಅದರ ಹಿಂದಿನವರ ಕಾಲದಲ್ಲೂ ಅಷ್ಟೆ, ನಿಮ್ಮ ಕಾಲದಲ್ಲೂ ಅಷ್ಟೇ. ಈ ಇಲಾಖೆಯಲ್ಲಿ ಮಾರ್ಚ್‌ನಲ್ಲಿ ಎಲ್ಲಾ ದುಡ್ಡನ್ನು ಖರ್ಚು ಮಾಡುತ್ತಾರೆ. ಬೇರೆ ತಿಂಗಳಿನಲ್ಲಿ ಇವರು ಖರ್ಚು ಮಾಡುವುದೇ ಇಲ್ಲ. ಮಾರ್ಚ್ ತಿಂಗಳಿನ ೧೦-೧೫ ದಿವಸಗಳಲ್ಲಿ ಎಲ್ಲಾ ಹಣವನ್ನು ಖರ್ಚು ಮಾಡುತ್ತಾರೆ. ಇದರ ಬಗ್ಗೆ ಅನೇಕ ಉದಾಹರಣೆಗಳು ಇವೆ. ನಾನು ಮಂತ್ರಿಯಾಗಿದ್ದಾಗ ಇದರ ಬಗ್ಗೆ ಸಿ. ಓ. ಡಿ., ಎನ್‌ಕ್ವೈಯರಿಗೆ ಹಾಕಿಸಿದ್ದೆ. ಅನೇಕ ಜೂನಿಯರ್

ಇಂಜಿನಿಯರ್‌ಗಳು ಬೇನಾಮಿ ಹೆಸರಿನಲ್ಲಿ ಕಂಟ್ರಾಕ್ಟ್ ಮಾಡುತ್ತಾರೆ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ಒಂದು ದೊಡ್ಡ ವ್ಯವಹಾರವೇ ಆಗಿದೆ. ಏಕೆಂದರೆ, ನಮಗೆ ಬೇಡದವರನ್ನೆಲ್ಲಾ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಕಡೆ ಎಸೆಯುತ್ತೇವೆ. ಆ ಕೆಲಸವನ್ನು ನಾವೂ ಮಾಡಿದ್ದೇವೆ. ನೀವೇ ಮಾಡಿದ್ದೀರೆಂದು ನಾನು ಹೇಳುವುದಿಲ್ಲ. ಅವರನ್ನು ಆ ಕಡೆಗೆ ಎಸೆಯುತ್ತೇವೆ. ಅವರು ಬೇನಾಮಿ ಹೆಸರಿನಲ್ಲಿ ಕಂಟ್ರಾಕ್ಟ್‌ಗಳನ್ನು ಮಾಡಿಕೊಳ್ಳುತ್ತಾರೆ, ಮತ್ತೆ ಇಲ್ಲಿ ಶಿಲ್ಟ್ ಎತ್ತಿ ಹಾಕತಕ್ಕಂಥಾದ್ದರಲ್ಲಿ ಒಂದು ದೊಡ್ಡ ವ್ಯವಹಾರವೇ ನಡೆಯುತ್ತದೆ. ಇವರು ಮಾರ್ಚಿ ತಿಂಗಳಿನಲ್ಲೇ ಏಕೆ ಹಣವನ್ನು ಖರ್ಚು ಮಾಡುವುದು ? ನಾನು ಹೇಳುತ್ತೇನೆ, ಪರ್ಟಿಕ್ಯುಲರ್ ಆಗಿ ಪ್ರತಿಯೊಂದು ಮೇಡಿಯಂ ಇರಿಗೇಷನ್ ಪ್ರಾಜೆಕ್ಟ್ ಏನಿದೆ ಅಲ್ಲಿ ಡಿಸ್ಸಿಲಿಂಗ್ ಮಾಡತಕ್ಕಂಥಾದ್ದು ಎಷ್ಟು ಮುಖ್ಯವೋ ಅದಕ್ಕಿಂತ ಹೆಚ್ಚಿನ ಮುಖ್ಯವಾದ ಕೆಲಸ ಎಂದರೆ ಕಾಲುವೆಗಳ ರಿಪೇರಿ ಎಂದು ನಾನು ತಿಳಿದಿದ್ದೇನೆ. ಇವತ್ತು ಬಹಳಷ್ಟು ನೀರು ವ್ಯರ್ಥವಾಗಿ ಹೋಗುತ್ತಿದೆ. ಇದನ್ನು ತಡೆಗಟ್ಟಲಿಕ್ಕೆ ತಾವು ಏನಾದರೂ ಒಂದು ಯೋಚನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಮತ್ತೆ ನಮ್ಮ ಟೆಂಡರ್ ಸಿಸ್ಟಮ್. ನಾವು ಟೆಂಡರನ್ನು ೨ ತಿಂಗಳಿಗೆ, ೩ ತಿಂಗಳಿಗೆ ಕರೆಯುತ್ತೇವೆ. ಲೋಯೆಸ್ಟ್ ಕ್ವೊಟೇಷನ್‌ನವರಿಗೆ ಆರ್ಡರ್ ಕೊಡಬೇಕೆಂದು ನಾವು ನಿಗದಿ ಮಾಡುತ್ತೇವೆ. ಇವತ್ತು ಕ್ವಾಲಿಟಿ ಏನಾಗಿದೆ ? ಕ್ವಾಲಿಟಿ ವರ್ಕ್‌ನ್ನು ಬಯಸಬೇಕಾದರೆ ಲೋಯೆಸ್ಟ್ ಕ್ವೊಟೇಶನ್‌ನವರಿಗೆ ಕೊಟ್ಟರೆ ಆಗುವುದಿಲ್ಲ. ಇದರ ಬಗ್ಗೆ ಬೇರೆಯವರು ಬೇರೇ ತರಹ ಮಾತನಾಡಬಹುದು. ನಾನು ಹೇಳುತ್ತೇನೆ, ತಾವು ಇದಕ್ಕೆ ಎಲ್ಲಾದರೂ ಒಂದು ಕಡೆ ಬ್ಯಾಲೆನ್ಸ್‌ನ್ನು ಸ್ಟ್ರೈಟ್ ಮಾಡಬೇಕಾಗುತ್ತದೆ. ಎಕ್ಸ್‌ಪರ್ಟ್ ಇಂಜಿನಿಯರ್‌ಗಳು ಇದ್ದಾರೆ, ಅವರು ದಡ್ಡರೇನಲ್ಲ, ಸ್ವಲ್ಪ ಫ್ರೀಡಂ ಕೊಟ್ಟರೆ ಅದರ ಬಗ್ಗೆ ಯೋಚನೆ ಮಾಡತಕ್ಕಂತಹ ಶಕ್ತಿ ನಮ್ಮ ಇಂಜಿನಿಯರ್‌ಗಳಲ್ಲಿ ಇದೆ ಎಂಬ ನಂಬಿಕೆ ನನಗಂತೂ ಇದೆ. ಟೆಂಡರ್‌ಸಿಸ್ಟಂ ಏನು ಇದೆ ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ. ಅಸಿಸ್ಟೆಂಟ್ ಇಂಜಿನಿಯರ್, ಎಕ್ಸಿಕ್ಯೂಟೀವ್ ಇಂಜಿನಿಯರ್, ಜೂನಿಯರ್ ಇಂಜಿನಿಯರ್‌ಗಳು ಎಲ್ಲರೂ ಇರುತ್ತಾರೆ. ಇವರು ಬೇರೆ ಸಂದರ್ಭದಲ್ಲಿ ೧೦ ಗಂಟೆಗೆ ಬಂದರೆ ೫ ಗಂಟೆಗೆ ಹೋಗುತ್ತಾರೆ. ಮಧ್ಯಾಹ್ನ ೨ ಗಂಟೆಗೆ ತಿಂಡಿ-ಕಾಫಿಗೆ ಬ್ರೇಕ್ ಇರುತ್ತದೆ. ಆದರೆ ಮಾರ್ಚ್ ೨೬ ರಿಂದ ೩೧ ರವರೆಗೆ ಒಂದು ವೇಳೆ ದಿನಕ್ಕೆ ೨೪ ಗಂಟೆಗಳ ಕೆಲಸ ಇದ್ದರೆ ೨೪ ಗಂಟೆಗಳೂ ಕೆಲಸ ಮಾಡುತ್ತಾರೆ. ಏಪ್ರಿಲ್‌ನಲ್ಲಿ ಅದನ್ನೆಲ್ಲ ತೋರಿಸುತ್ತಾರೆ. ಆದ್ದರಿಂದ ಈ ಸಿಸ್ಟಂ ಅನ್ನು ಪೂರ್ತಿ ರಿವೈಸ್ ಮಾಡಬೇಕಾಗುತ್ತದೆ. ಟೆಂಡರ್ ಕರೆಯುವುದು, ಕ್ವಾಲಿಟಿ ವರ್ಕ್ ಇನ್‌ಸಿಸ್ಟ್ ಮಾಡುವ ದೃಷ್ಟಿಯಿಂದ ಲೋಯರ್ ಟೆಂಡರ್‌ದಾರನಿಗೆ ಕೊಡದೆ ಇರತಕ್ಕಂಥಾದ್ದು ಇದೆ. ಮಾರ್ಚ್ ತಿಂಗಳಲ್ಲೇ ಏಕೆ ಖರ್ಚು ಆಗಬೇಕು. ಇದಕ್ಕೆ ಬೇರೆ ವ್ಯವಸ್ಥೆ ಮಾಡಿ. ಹಣ ಉಳಿದರೆ ಎಲ್ಲೂ ಹೋಗುವುದಿಲ್ಲ, ಅದು ಎಲ್ಲಿ ಹೋಗುತ್ತದೆ, ಇಲಾಖೆಯಲ್ಲೇ ಇರುತ್ತದೆ, ಬೇರೆ ಕಡೆಗೆ ಹೋಗುವುದಿಲ್ಲ. ಯಾರೋ ದುಡ್ಡನ್ನು ಹೊಡೆಯುವುದಕ್ಕೋಸ್ಕರ ನಾವು ಏಕೆ ಅವಕಾಶ ಮಾಡಿಕೊಡಬೇಕು. ಇದರ ಬಗ್ಗೆ ತಾವು ಸೀರಿಯಸ್ ಆಗಿ ಆಲೋಚನೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಕಟ್ಟಡಗಳ ಮೈನ್‌ಟೆನೆನ್ಸ್ ಬಗ್ಗೆ ಕೂಡ ಅಷ್ಟೆ, ಮಳೆಗಾಲ ನವೆಂಬರ್‌ವರೆಗೆ ಇರುತ್ತದೆ, ಡಿಸೆಂಬರ್ ಮತ್ತು ಜನವರಿಯಲ್ಲಿ ಕಟ್ಟಡಗಳ ಮೈನ್‌ಟೆನೆನ್ಸ್ ಎಲ್ಲಾ ಏಕೆ ಆಗಬಾರದು. ಆದರೆ ಅವರು ಎಲ್ಲಾ ಮಾರ್ಚ್‌ನಲ್ಲೇ ಮಾಡತಕ್ಕಂಥಾದ್ದು. ತಾವು ಇದರ ಬಗ್ಗೆ ಅವರಿಗೆ ಹೇಳಿದ ತಕ್ಷಣ ಅದಕ್ಕೆ ೧೦-೧೫ ಜನರ ಒಂದು ಸರ್ಕಲ್ ಇರುತ್ತದೆ. ಅದು ಹಾಗಲ್ಲ, ಹೀಗೆ ಅದು ಆಗುವುದೇ ಮಾರ್ಚ್‌ನಲ್ಲಿ ಎಂದು ಹೇಳಿಕೊಂಡು ಮಾರ್ಚಿವರೆಗೆ ಹೇಗೋ ತಳ್ಳಿಕೊಂಡು ಹೋಗುತ್ತಾರೆ. ನೀವು ಎರಡು ವರ್ಷ, ೩ ಮಾರ್ಚ್ ತಳ್ಳುತ್ತೀರೋ ನನಗಂತೂ ಗೊತ್ತಿಲ್ಲ. ೪ ಮಾರ್ಚ್ ತಳ್ಳಬೇಕೆಂದು ನನ್ನ ಆಸೆ. ಆದರೆ ಎಷ್ಟು ದಿನ ತಳ್ಳುತ್ತೀರೋ ನನಗೆ ಗೊತ್ತಿಲ್ಲ. ಆದರೆ ಮಾರ್ಚ್‌ನಲ್ಲಿಯೇ ಕಟ್ಟಡಗಳ ಮೈನ್‌ಟೆನೆನ್ಸ್‌ಗೆಂದು ಲೋಕೋಪಯೋಗಿ ಇಲಾಖೆಯಲ್ಲಿ ಖರ್ಚಾಗುವುದನ್ನು ನೀವು ನಿಲ್ಲಿಸಬೇಕು ಜನವರಿ, ಫೆಬ್ರುವರಿಯಲ್ಲಿ ಕೆಲಸ ಆಗಬೇಕಾದರೆ ಇವತ್ತಿನಿಂದ ನೀವು ಪ್ರಾರಂಭ ಮಾಡಬೇಕಾಗುತ್ತದೆ. ಇನ್ನು ಟೈಮ್ ಬಾಂಡ್ ಪ್ರಕಾರ ಕೆಲಸ ಆಗಬೇಕು. ಇದಕ್ಕೆ ಒಂದು ವರ್ಕ್ ಚಾರ್ಟ್ ಇಟ್ಟುಕೊಂಡಿದ್ದಾರೆ. ಎಫಿಷಿಯೆಂಟ್ ಆದ ಕಮಿಟೆಡ್ ಇರತಕ್ಕಂತಕ್ಕ ಇಂಜಿನಿಯರ್ಸ್ ಇದ್ದರೆ ಅವರು ಸಮಯದ ಪ್ರಕಾರ, ಇಂತಹ ದಿವಸ ಕಾಂಕ್ರೀಟ್ ಹಾಕಬೇಕು, ಇಂತಹ ದಿವಸ ಕ್ಯೂರಿಂಗ್ ಮಾಡಬೇಕು ಎಂದು ಟೈಂ ಪ್ರಕಾರ ಕೆಲಸ ಮಾಡಿಕೊಂಡು ಹೋಗುತ್ತಾರೆ. ಆದರೆ ಬಹಳಷ್ಟು ಕಡೆಗಳಲ್ಲಿ ಈ ರೀತಿ ಆಗುವುದಿಲ್ಲ. ಹಣಕಾಸಿನ ಇತಿಮಿತಿಯನ್ನು ನಾವೂ ಕೂಡ ಅರ್ಥ ಮಾಡಿಕೊಳ್ಳುತ್ತೇವೆ. ನಾವೂ ಸ್ವಲ್ಪ ದಿವಸಗಳ ಸರಕಾರ ನಡೆಸಿದ್ದೇವೆ. ಎಲ್ಲಕ್ಕೂ ಕೂಡ ಹಣವನ್ನು ಕೊಡಲಿಕ್ಕೆ ಆಗುವುದಿಲ್ಲ. ದಯ

ಮಾಡಿ ಆದಷ್ಟೂ ಭಾಷಣ ಮಾಡುವುದನ್ನು ಕಡಿಮೆ ಮಾಡಿ. ಭಾಷಣ ಮಾಡುವುದನ್ನು ಹೆಚ್ಚು ಮಾಡಿದಷ್ಟೂ ನೀರಾವರಿ ಇಲಾಖೆಗೆ, ಲೋಕೋಪಯೋಗಿ ಇಲಾಖೆಗೆ ಅಪಾಯವಾಗುತ್ತದೆ. ಮತ್ತೆ ಇದಕ್ಕೆ ಚಾಲನೆ ತೆಗೆದುಕೊಳ್ಳುವುದನ್ನು ಕಡಿಮೆ ಮಾಡಿ. ಆ ಬಗ್ಗೆ ನನಗಂತೂ ವಿಶ್ವಾಸ ಇದೆ. ನೀವು ಮೊದಲನೇ ಸ್ಥಾನಕ್ಕೆ ಬರಬೇಕೆಂಬ ವಿಶ್ವಾಸ ನನಗೆ ಇದೆ. ಅದಕ್ಕೆ ಬೇಕಾಗಿರತಕ್ಕಂತಹ ಪಿತೂರಿಯನ್ನು ಮಾಡುವುದಕ್ಕೂ ತಾವು ಹೋಗುವುದಿಲ್ಲವೆಂದು ನಾನು ತಿಳಿದಿದ್ದೇನೆ. ಈ ಸದನದಲ್ಲಿ ನೀರಿನ ಬಗ್ಗೆ ಇಷ್ಟೊಂದು ರಾಜಕೀಯವನ್ನು ಕೇಳಿ ಕೇಳಿ ಕಣ್ಣೀರನ್ನು ಹರಿಸಿ, ಹರಿಸಿ ಈ ನೀರೆಲ್ಲಾ ಅಲ್ಲಿಗೆ ಹೋಗಿದ್ದರೆ ಕಾವೇರಿ ಬತ್ತಿ ಹೋಗುತ್ತಿರಲಿಲ್ಲ. ಕೆಲವರೆಲ್ಲ ಅಷ್ಟೊಂದು ನೀರನ್ನು ಹರಿಸಿದ್ದಾರೆ. ನಾನು ವೈಯಕ್ತಿಕವಾಗಿ ಯಾರ ಮೇಲೂ ದ್ವೇಷ ಮಾಡತಕ್ಕಂತಹವನಲ್ಲ, ನೀವೂ ಕೂಡ ದ್ವೇಷ ಮಾಡತಕ್ಕಂತಹವರು ಅಲ್ಲ ಎನ್ನುವುದು ನನಗೆ ಗೊತ್ತಿದೆ. ಆದರೆ ದಯವಿಟ್ಟು ಮಾತಿನಲ್ಲಿ ಸಿಕ್ಕಿಹಾಕಿಕೊಳ್ಳತಕ್ಕಂಥಾದ್ದು ಬೇಡ, ಕೆಲಸ ಮಾಡಬೇಕಾಗುತ್ತದೆ. ಮಾನ್ಯ ಹಣಕಾಸಿನ ಮಂತ್ರಿಗಳು ಇಂತಹ ಪ್ರಾಜೆಕ್ಟ್‌ಗೆ ಇಷ್ಟು ಹಣ ಕೊಡುತ್ತಾರೆಂಬುದು ನಿರ್ದಿಷ್ಟವಾಗಿ ತಮಗೆ ಗೊತ್ತಿರುತ್ತದೆ. ಈ ಸದನವನ್ನು ತಾವು ವಿಶ್ವಾಸಕ್ಕೆ ತೆಗೆದುಕೊಂಡಿದ್ದೀರ. ಕಾವೇರಿ ಜಲಾಶಯಕ್ಕೆ ಸಂಬಂಧಪಟ್ಟ ಹಾಗೆ ಒಂದು ಸದನದ ಸಮಿತಿಯನ್ನು ಮಾಡಿದ್ದೀರ, ಬೇರೆಯವರನ್ನು ಕರೆಸಿ, ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು, ನಾವು ಇಷ್ಟೇ ಹಣವನ್ನು ಖರ್ಚು ಮಾಡುವುದು. ಇಷ್ಟು ತಿಂಗಳಲ್ಲಿ ಕೆಲಸ ಆಗಲೇಬೇಕೆಂದು ಮಾಡಿದರೆ ಬಹುಶಃ ಈ ರಾಜ್ಯಕ್ಕೆ ತಾವು ದೊಡ್ಡ ಸಹಾಯವನ್ನು ಮಾಡಿದ ಹಾಗಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಒಳ್ಳೆಯ ಸಲಹೆ.

ಚೇರ್ಮನ್.—೨೫ ನಿಮಿಷವಾಯಿತು, ಬೇಗ ಮುಗಿಸಿ.

ಶ್ರೀ ಎಂ. ಪಿ. ವೆಂಕಟೇಶ್.—ಈ ಕಡೆ ಜನತಾ ದಳದ ೩–೪ ಜನ ಸದಸ್ಯರು ಇಲ್ಲ, ಆ ಸಮಯವನ್ನೂ ಸೇರಿಸಿ ಅವರಿಗೇ ಕೊಡಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾನು ಬೇಗನೆ ಮುಗಿಸುತ್ತೇನೆ. ನಿನ್ನೆ ಎಲ್ಲಾ ನಾವು ಇದರ ಬಗ್ಗೆ ಚರ್ಚೆ ಮಾಡಿಕೊಂಡು ಬಂದೆವು. ತಾವು ಬೆಲ್ ಹೊಡೆಯಬೇಡಿ. ಮಾನ್ಯ ಬೈರೇಗೌಡರು ಈಗ ಸಭೆಯಲ್ಲಿದ್ದರೆ ಚೆನ್ನಾಗಿತ್ತು. ನಾನು ಯಾರನ್ನೂ ರಕ್ಷಣೆ ಮಾಡುವುದಕ್ಕೆ ಇಲ್ಲ, ಸತ್ಯ ಹೊರಗೆ ಬರಬೇಕೆಂದು ಅವರು ಹೇಳಿದರು. ನಮ್ಮ ಬಯಕೆಯು ಕೂಡ ಅದೇ ಆಗಿದೆ. ಸತ್ಯ ಹೊರಕ್ಕೆ ಬರಲಿ, ನಾವು ನಿಮ್ಮ ಮುಖದ ಮೇಲೆ ಮಣ್ಣು ಎರಚುವುದು, ನೀವು ನಮ್ಮ ಮುಖದ ಮೇಲೆ ಮಣ್ಣು ಎರಚುವುದನ್ನು ಮಾಡುವುದು ಬೇಡ.

ಯಾವುದರಲ್ಲಿ ಏನಾಗಿದೆ ಎಂದು ನಮ್ಮ ಆತ್ಮಕ್ಕೆ ಗೊತ್ತಾಗುತ್ತದೆ. ಆದ್ದರಿಂದ ತಾವು ಅದನ್ನು ತಂದು ಈ ಸದನಕ್ಕೆ ಈ ವರ್ಷದಲ್ಲಿ ಒಪ್ಪಿಸುತ್ತೀರೆಂದು ನಾನು ತಿಳಿದಿದ್ದೇನೆ. ಇನ್ನು ಬಹಳ ಮುಖ್ಯವಾಗಿ ನಾನು ಹೇಳತಕ್ಕಂಥಾದ್ದು ' ಈ ವರ್ಗಾವಣೆ ವಿಚಾರ. ಈ ವಿಚಾರದಲ್ಲಿ ತಾವು ಎಡವಿದ್ದೀರೆಂದು ನಾನು ತಿಳಿದಿದ್ದೇನೆ. ದಯವಿಟ್ಟು ಈ ಪೊಲಿಟಿಕಲ್ ಪೇಟ್ರನೇಜನ್ನು ಕಡಿಮೆ ಮಾಡುವ ನಿರ್ಧಾರವನ್ನು ನೀವೊಬ್ಬರೇ ತಗೆದುಕೊಳುವುದಕ್ಕಾಗುವುದಿಲ್ಲ ಎನ್ನುವುದು ನನಗೆ ಗೊತ್ತಿದೆ. ಅದಕ್ಕೆ ಲೆಜಿಸ್ಲೇಚರ್ ಪಾರ್ಟಿಯಲ್ಲಿ ತೀರ್ಮಾನ ಆಗಬೇಕಾಗುತ್ತದೆ. ಆದ್ದರಿಂದ ನಿಮ್ಮ ಸರ್ಕಾರಕ್ಕೆ ನಿಮ್ಮ ಪಕ್ಷಕ್ಕೆ ರಾಜ್ಯದ ಜನತೆಗೆ ಉಪಯೋಗವಾಗುವುದರಲ್ಲಿ ಯಾವುದೇ ರೀತಿಯ ಸಂಶಯವಿಲ್ಲ. ನಾವು ಇಷ್ಟು ಕಡಿಮೆ ಸಂಖ್ಯೆಯಲ್ಲಿ ಈ ಕಡೆ ಬಂದು ಕುಳಿತುಕೊಂಡಿರಬೇಕಾದರೆ ನಮಗೆ ಅದೇ ಕಾರಣವಾಯಿತು. ದಯವಿಟ್ಟು ಆ ತಪ್ಪನ್ನು ನೀವೂ ಮಾಡುವುದಕ್ಕೆ ಹೋಗಬೇಡಿ. ಜನ ಬಹಳ ಲಘುವಾಗಿ ಮಾತನಾಡುತ್ತಾರೆ. ಇವತ್ತು ನಮ್ಮ ಸುತ್ತಮುತ್ತ ೪೦–೫೦ ಜನರು ಇರುತ್ತಾರೆ. ವಿಧಾನ ಸೌಧದ ಹತ್ತಿರ ಕಾರಿನಿಂದ ಇಳಿದಾಗ ನಮ್ಮ ಹಿಂದೆ ಬರುವ ಜನರನ್ನು ಕಂಡಾಗ ಇಷ್ಟು ದೊಡ್ಡ ಮಾಸ್ ಲೀಡರ್ ಆಗಿದ್ದೇನೆಲ್ಲಾ ಎಂದು ನಮಗೆ ಅನಿಸುತ್ತದೆ. ನಾನು ಆರೋಗ್ಯ ಮಂತ್ರಿಯಾಗಿದ್ದಾಗ ಒಂದು ಸಾರಿ ಒಬ್ಬರು ನಮ್ಮ ಊರಿನವರೇ ಬಂದಿದ್ದರು. ಅವರ ಹೆಸರನ್ನು ಮರೆತಿದ್ದೇನೆ, ಅವರು ಯಾವಾಗಲೂ ನನ್ನ ಜೊತೆಯಲ್ಲೇ ಇರುತ್ತಿದ್ದರು, ಅವನು ಪ್ರಾಮಾಣಿಕ ಒಬ್ಬ ಸಣ್ಣ ರೈತ. ಅವನು ಒಂದು ಸಾರಿ ಮೆಡಿಕಲ್ ಕಾಲೇಜಿನಲ್ಲಿದ್ದ ಪ್ರೊಫೆಸರ್‌ರವರ ಟ್ರಾನ್ಸ್‌ಫರ್ ಕೇಸ್ ತಗೆದುಕೊಂಡು ಬಂದಿದ್ದರು. ನಮ್ಮ ಸುತ್ತಮುತ್ತ ಯಾವಾಗಲೂ ಜನ ಇರುತ್ತಾರೆ. ಅಧಿಕಾರ ಹೋದ ಮೇಲೆ ಇವರ್ಯಾರು ನಮ್ಮ ಹತ್ತಿರಕ್ಕೆ ಬರುವುದೇ ಇಲ್ಲ; ಬರುವುದೂ ಬೇಕಾಗಿಲ್ಲ. ಇದನ್ನೆಲ್ಲಾ ದಯಮಾಡಿ ತಾವು ಗಮನದಲ್ಲಿಟ್ಟುಕೊಳ್ಳಬೇಕು. ಈ ಇಲಾಖೆಯಲ್ಲಿ ಇದೊಂದು ದಂಧೆಯಾಗಬಾರದು. ಅದಕ್ಕೆ ತಾವು ಅವಕಾಶ ಮಾಡಿಕೊಡುವುದಿಲ್ಲವೆಂದು ನಾನು ನಂಬಿದ್ದೇನೆ. ಆಮೇಲೆ ಒಂದು ಮಾತು ಇದೆ.

ಈ ಲೋಕೋಪಯೋಗಿ ಇಲಾಖೆ ಮತ್ತು ನೀರಾವರಿ ಇಲಾಖೆ ಯಾವಾಗಲೂ ಹಾಸನ ಜಿಲ್ಲೆಯವರಿಗೆ ಒಂದು ತರಹ ರಿಸರ್ವ್ ಆಗಿಬಿಟ್ಟಿದೆ ಎಂಬ ಮಾತಿದೆ. ನೀವು ೭–೮ ಜನ ಬಂದಿದ್ದೀರಿ. ನಿಮ್ಮ ಕಣ್ಣು ಸ್ವಲ್ಪ ಹಾಸನದಿಂದ ಹೊರಗೆ ಹೋಗಬೇಕು. ಈಗ ನಮಗೂ ಅನಿಸುತ್ತದೆ. ನಾನು ಮಂಗಳೂರಿಗೆ ಹೋಗುವಾಗ ನೋಡಿದ್ದೇನೆ. ಇಲ್ಲಿಂದ ಹಾಸನದವರೆಗೆ ರೋಡ್ ಬಹಳ ಚೆನ್ನಾಗಿದೆ. ಹಾಸನದಿಂದ ಆ ಕಡೆಗೆ ಅಷ್ಟೇನೂ ರೋಡ್ ಚೆನ್ನಾಗಿಲ್ಲ. ಈಗ ಮಾನ್ಯ ಮುಖ್ಯ ಮಂತ್ರಿಗಳು ಗುಲ್ಬರ್ಗಾ ಕಡೆಯವರಾಗಿರುವುದರಿಂದ ಈ ವರ್ಷ ನಿಮ್ಮ ಕಣ್ಣಿನ ದೃಷ್ಟಿ ಗುಲ್ಬರ್ಗಾ ಕಡೆ ಬೀಳಬಹುದು. ಆ ಗುಲ್ಬರ್ಗಾದಿಂದ ಆಚೆಗೆ ಬೀದರ್ ಇದೆ. ಅದೂ ತಮಗೆ ಜ್ಞಾಪಕ ಇರಲಿ. ಮಲೆನಾಡು ಪ್ರದೇಶಗಳನ್ನು ಮತ್ತು ಬಯಲು ಸೀಮೆ ಪ್ರದೇಶಗಳನ್ನು ತಾವು ಏಕದೃಷ್ಟಿಯಿಂದ ನೋಡಬೇಕಾಗುತ್ತದೆ, ನಾನು ಈ ಮಾತನ್ನು ಹೊಟ್ಟೆಕಿಚ್ಚಿನಿಂದ ಹೇಳುತ್ತಿಲ್ಲ. ಹಾಸನ ಜಿಲ್ಲೆಯ ಒಂದು ಸಣ್ಣ ಹಳ್ಳಿಗೆ ಹೋಗಬೇಕಾದರೂ ನೂರು ಅಡಿ ರೋಡ್‌ನ್ನು ಮಾಡಿಸಿದ್ದಾರೆ; ಇದರ ಅವಶ್ಯಕತೆ ಏನಿತ್ತು. ಎಷ್ಟೊಂದು ಲಿಫ್ಟ್ ಇರಿಗೇಷನ್ ಆಗಿಲ್ಲ. ದಯವಿಟ್ಟು ಯೋಚನೆ ಮಾಡಿ. ಇಷ್ಟೆಲ್ಲಾ ಮಾಡಿದರೂ ಕೂಡ ಆ ಜನ ಓಟು ಕೊಡಲಿಲ್ಲ. ಜನ ಯಾರಿಗೆ ಓಟು ಕೊಡಬೇಕೋ ಅವರಿಗೇ ಕೊಟ್ಟರು. ದಯಮಾಡಿ ಇದನ್ನೆಲ್ಲಾ ತಾವು ಯೋಚನೆ ಮಾಡಿ ಕೆಲಸಗಳನ್ನು ಮಾಡಿಸಬೇಕು. ತಾವು ಅನುಭವಸ್ಥರು.

ಶ್ರೀ ವಾಟಾಳ್ ನಾಗರಾಜ್.—ಓಟಿಗೂ–ರಸ್ತೆಗೂ ಬಹಳ ವ್ಯತ್ಯಾಸ ಇದೆ. ಓಟೇ ಬೇರೆ, ರಸ್ತೆಯೇ ಬೇರೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಆದ್ದರಿಂದ ಇದನ್ನೆಲ್ಲಾ ತಾವು ಗಮನದಲ್ಲಿಟ್ಟುಕೊಳ್ಳಬೇಕು. ನಮ್ಮ ರಾಜ್ಯದ ನೀರಾವರಿ ದೃಷ್ಟಿಯಿಂದ ನೋಡುವುದಾದರೆ ಇದು ಒಂದು ಸಂದಿಗ್ಧದ ಕಾಲ. ಈ ಕಾಲದಲ್ಲಿ ನೀರಾವರಿ ಇಲಾಖೆಯ ಜವಾಬ್ದಾರಿ ತಮಗೆ ಸಿಕ್ಕಿದೆ. ತಾವು ನಮ್ಮ ರಾಜ್ಯದ ನೀರನ್ನು ಬಳಸಿಕೊಳ್ಳುವ ದೃಷ್ಟಿಯಿಂದ ರೈತರುಗಳಿಗೆ ಸಹಾಯ ಮಾಡುತ್ತೀರೆಂದು ನಂಬಿ, ನಿಮಗೆ ಯಶಸ್ಸನ್ನು ಬಯಸಿ, ಈ ಬೇಡಿಕೆಯನ್ನು ವಿರೋಧ ಮಾಡಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಖಾತೆಯ ಸಚಿವರು ಸದನದ ಮುಂದೆ ಮಂಡಿಸಿರತಕ್ಕ ಬೇಡಿಕೆಯನ್ನು ನಾನು ಸ್ವಾಗತ ಮಾಡುತ್ತೇನೆ. ಈ ನೀರಾವರಿ ವಿಚಾರದಲ್ಲಿ ನಮ್ಮ ಸರ್ಕಾರವು ಈ ವರ್ಷ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಿಕ್ಕೆ ಪ್ರಯತ್ನಪಟ್ಟಿದೆ ಎನ್ನುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಚಾರ. ಕಳೆದ ೪–೫ ವರ್ಷಗಳಿಂದ ನಾನು ಸದಸ್ಯನಾಗಿ ಇಲ್ಲಿ ಬಂದು ಆ ಕಡೆ ಕುಳಿತಿದ್ದೆ. ಮಾನ್ಯ ಮಾಜಿ ಸಚಿವರು ಹೇಳಿದ ರೀತಿಯಲ್ಲಿ ಒಂದು ರೀತಿಯಲ್ಲಿ ರಾಜಕೀಯವಾದ ಒಂದು ಭಾಷಣವಾಗುತ್ತಿತ್ತೇ ಹೊರತು ಅದರಲ್ಲಿ ಪ್ರಾಮಾಣಿಕ ಪ್ರಯತ್ನ ಕಾಣಲಿಲ್ಲ. ಇದು ನಮ್ಮ ರಾಜ್ಯಕ್ಕೆ ಆದಂತಹ ಅನ್ಯಾಯ. ಇದರಲ್ಲಿ ರಾಜಕೀಯ ಬೆರೆತು ಜನಸಾಮಾನ್ಯರಿಗೆ, ರೈತರಿಗೆ ಸಿಗುವಂತಹ ಒಂದು ನೀರಾವರಿ ಸವಲತ್ತು ಸಿಗದಂತಹ ಪರಿಸ್ಥಿತಿ ಒದಗಿದೆ. ಇದನ್ನು ಸ್ವಂತ ರಾಜಕೀಯಕ್ಕೋಸ್ಕರ ಬಳಕೆ ಮಾಡಿಕೊಂಡು, ಬೆಣ್ಣೆ ...ಕ ಮಾಡಿದಂತಹ ರೀತಿಯಲ್ಲಿ ಆಗಿ ಇವತ್ತು ಅದರಿಂದ ದೊಡ್ಡ ಅನ್ಯಾಯವಾಗಿದೆಯೆಂದರೆ ತಪ್ಪಾಗಲಾರದು. ಸನ್ಮಾನ್ಯ ಮುಖ್ಯ ಮಂತ್ರಿಗಳು ಈ ವರ್ಷ ಆಕರ್ಷಕ ಕಾರ್ಯಕ್ರಮಕ್ಕೆ ಬಲಿ ಹೋಗದೇ ಜನರನ್ನು ಆಕರ್ಷಣೆ ಮಾಡಿಕೊಂಡು ಓಟು ಗಿಟ್ಟಿಸಿಕೊಳ್ಳುವಂತಹ ಕಾರ್ಯಕ್ರಮಕ್ಕೆ ಬಲಿಯಾಗದೆ, ರಾಜ್ಯದಲ್ಲಿ ಪ್ರಾಮುಖ್ಯವಾಗಿ ನೀರಾವರಿ ಹಾಗೂ ಸಂಪರ್ಕ ಕಲ್ಪಿಸುವಂತಹ ಕೆಲಸಗಳ ಬಗ್ಗೆ ದೊಡ್ಡ ದೊಡ್ಡ ವಿದ್ಯುತ್ ಯೋಜನೆಗಳ ಬಗ್ಗೆ ಹೆಚ್ಚಿನ ಲಕ್ಷ್ಯವನ್ನು ಕೊಟ್ಟು ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ಸರಿಪಡಿಸಬೇಕು. ಕಳೆದ ಆರು ತಿಂಗಳಿನಿಂದ ಯಾವುದೇ ರೀತಿಯ ಪ್ರಚಾರಕ್ಕೆ ಒಳಗಾಗದೆ ಪ್ರಮಾಣಿಕ ರೀತಿಯಿಂದ ಈ ಇಲಾಖೆಯಲ್ಲಿ ಕೆಲಸಗಳು ನಡೆಯುತ್ತಿವೆ. ಈ ಇಲಾಖೆಗೆ ಇನ್ನೂ ಹೆಚ್ಚಿನ ಹಣವನ್ನು ಪಡೆದುಕೊಂಡು ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತರಬೇಕಾಗಿದೆ. ನಮ್ಮ ರಾಜ್ಯವನ್ನು ಒಳ್ಳೆಯ ಹಾದಿಯಲ್ಲಿ ಕೊಂಡೊಯ್ಯುವ ದಿಸೆಯಲ್ಲಿ ಈಗಾಗಲೇ ಹಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಇದು ನಮ್ಮೆಲ್ಲರಿಗೂ ಹಾಗೂ ಕರ್ನಾಟಕ ಜನತೆಗೆ ಹೆಮ್ಮೆ ತರತಕ್ಕ ವಿಚಾರವಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಾನು ಈ ಸಂದರ್ಭದಲ್ಲಿ ನೀರಾವರಿ ಯೋಜನೆಗಳ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡದೆ ಬೇರೆ ಕೆಲವು ವಿಚಾರಗಳನ್ನು ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಕೆಲವು ವಿಷಯಗಳು ಲೋಕೋಪಯೋಗಿ ಮಂತ್ರಿಗಳ ಗಮನಕ್ಕೆ ಬರದೇ ಇರಬಹುದು ಅಥವಾ ಅಧಿಕಾರಿಗಳು ಅವರ ಗಮನಕ್ಕೆ ತರದೇ ಇರಬಹುದು. ನೀರಾವರಿ ಬಗ್ಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಹೆಚ್ಚು ಅಭಿವೃದ್ಧಿ ಹೊಂದಿದ ಜಿಲ್ಲೆ ಎಂದು ಇದ್ದರೂ ಕೂಡ ಈ ಒಂದು ಯೋಜನೆಯಿಂದ ಅಲ್ಲಿನ

ರೈತರಿಗೆ ಸಿಗುವಂತಹ ಸೌಲಭ್ಯಗಳು ಕಡಿಮೆಯಾಗಿವೆ. ಏತಕ್ಕೆಂದರೆ, ನಮ್ಮ ಜಿಲ್ಲೆಯಲ್ಲಿ ನದಿಗಳು ಹರಿದುಹೋಗಿ ಸಮುದ್ರವನ್ನು ಸೇರುತ್ತಿವೆ. ಆದ್ದರಿಂದ ನೀರಾವರಿ ಯೋಜನೆಗಳನ್ನು ರೂಪಿಸತಕ್ಕ ಕೆಲಸಕಾರ್ಯಗಳು ಆಗಿರುವುದಿಲ್ಲ. ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟಿ ನೀರನ್ನು ಒದಗಿಸಲು ಸಾಧ್ಯವಾಗದಿದ್ದರೆ ಇವತ್ತು ಲಿಫ್ಟ್ ಇರಿಗೇಷನ್ ಮುಖಾಂತರ ಕಾಲುವೆಗಳ ಮುಖಾಂತರ ಸಣ್ಣ ಸಣ್ಣ ವೆನ್‌ಟೆಡ್ ಡ್ಯಾಮ್‌ಗಳ ಮುಖಾಂತರ ಅಥವಾ ಹರಿಜನ ಗಿರಿಜನರಿಗೆ ಇರುವ ಗಂಗಾ ಕಲ್ಯಾಣ ಯೋಜನೆಯ ಮುಖಾಂತರ ಇವತ್ತು ಸಣ್ಣ ಸಣ್ಣ ಹಿಡುವಳಿದಾರರಿಗೆ ಆ ಸೌಲಭ್ಯಗಳನ್ನು ಕೊಡುವ ಕೆಲಸ ಕಾರ್ಯಗಳನ್ನು ಮಾಡಲು ಕ್ರಮ ಕೈಗೊಳ್ಳಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ಸರ್ಕಾರವು ಲಿಫ್ಟ್ ಇರಿಗೇಷನ್‌ಗೆ ಹೆಚ್ಚಿನ ಮಹತ್ವ ಕೊಟ್ಟಿದೆ. ರಾಜ್ಯದಲ್ಲಿ ಈ ಯೋಜನೆಗೆ ೨೫ ಕೋಟಿಗಿಂತಲೂ ಜಾಸ್ತಿ ಒದಗಿಸಿ ಇದರ ಪ್ರಯೋಜನ ರೈತರಿಗೆ ಸಿಗುವಂತಹ ಕಾರ್ಯಕ್ರಮವನ್ನು ಹಾಕಿಕೊಂಡಿರುವುದು ನಮಗೆಲ್ಲರಿಗೂ ಸಂತೋಷದ ವಿಚಾರ. ನನ್ನ ಕ್ಷೇತ್ರದ ಬಗ್ಗೆ ಮಾತನಾಡಬೇಕಾದರೆ ನನ್ನ ಕ್ಷೇತ್ರದಲ್ಲಿ ನೇತ್ರಾವತಿ ಮತ್ತು ಕುಮಾರಧಾರ ನದಿಗಳು ಹರಿಯುತ್ತಿದ್ದು ಅಲ್ಲಿ ಲಿಫ್ಟ್ ಇರಿಗೇಷನ್‌ಗಾಗಿ ರೈತರದ್ದೇ ಆದಂಥ ಒಂದು ಸೊಸೈಟಿಯನ್ನು ನಿರ್ಮಾಣ ಮಾಡಿ ನೀರು ಕೊಡುವಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡರೆ ಅದರಿಂದ ಹೆಚ್ಚು ಉಪಯೋಗವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. ಇನ್ನು ನ್ಯಾಷನಲ್ ಹೈವೆ ಬಗ್ಗೆ ಮಾತನಾಡಬೇಕಾದರೆ ಕೇಂದ್ರ ಸರ್ಕಾರದಿಂದ ಹೆಚ್ಚಿನ ಹಣವನ್ನು ಪಡೆಯಲು ಸಾಧ್ಯವಾಗಲಿಲ್ಲ, ಕಳೆದ ೧೭ ವರ್ಷಗಳಿಂದ ಈ ನ್ಯಾಷನಲ್ ಹೈವೆಯಲ್ಲಿ ನಮಗೆ ಹೊಸದಾಗಿ ಯಾವುದೇ ರೀತಿಯ ಸೌಲಭ್ಯಗಳು ಸಿಕ್ಕಿಲ್ಲ. ಇದನ್ನು ಅರಿತುಕೊಂಡು ವಿರೋಧಪಕ್ಷದವರು ಇರಬಹುದು ಅಥವಾ ಆಡಳಿತ ಪಕ್ಷದವರು ಇರಬಹುದು, ಎಲ್ಲರೂ ಇದರ ಬಗ್ಗೆ ಆಸಕ್ತಿ ವಹಿಸಿ ಹೆಚ್ಚಿನ ಅನುಕೂಲ ಪಡೆಯಲು ಪ್ರಯತ್ನಿಸಬೇಕು. ಇವತ್ತು ವಿರೋಧಪಕ್ಷದವರ ಸಹಕಾರವನ್ನು ತೆಗೆದುಕೊಳ್ಳಬೇಕಾಗಿದೆ. ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳ ನೇತೃತ್ವದಲ್ಲಿ ವಿರೋಧಪಕ್ಷದ ನಾಯಕರು ಹಾಗೂ ವಿರೋಧಪಕ್ಷದ ಸದಸ್ಯರು ಎಲ್ಲರೂ ಕೂಡಿ ಒಂದು ನಿಯೋಗದಲ್ಲಿ ದೆಹಲಿಗೆ ಹೋಗಿ ಕಳೆದ ೧೭ ವರ್ಷಗಳಿಂದ ಆದಂತಹ ಅನ್ಯಾಯವನ್ನು ಸಮತೋಲನ ಮಾಡುವಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡರೆ ಅದರಿಂದ ರಾಜ್ಯಕ್ಕೆ ತುಂಬ ನ್ಯಾಯ ದೊರಕಿದಂತಾಗುತ್ತದೆ. ಈ ದಿಸೆಯಲ್ಲಿ ವಿರೋಧಪಕ್ಷದವರ ಜವಾಬ್ದಾರಿಯೂ ಕೂಡ ಇದೆ. ಅವರು ಕೂಡ ನಮ್ಮ ಸರ್ಕಾರದೊಡನೆ ಸಹಕರಿಸಿ ಈ ರಾಜ್ಯದ ಅಭಿವೃದ್ಧಿಗಾಗಿ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ನಮ್ಮಲ್ಲಿ ಹಾಸನ ಜಿಲ್ಲೆಯವರೇ ಹೆಚ್ಚಾಗಿ ಲೋಕೋಪಯೋಗಿ ಖಾತೆಯ ಸಚಿವರಾಗುತ್ತಿದ್ದಾರೆ. ಅಭಿವೃದ್ಧಿ ಕಾರ್ಯಗಳ ಬಗ್ಗೆ ಹೆಚ್ಚಿನ ಗಮನ ಆ ಕಡೆಗೇ ಹೋಯಿತೆಂಬ ಭಾವನೆ ಬೇರೆ ಬೇರೆ ಸದಸ್ಯರಲ್ಲಿ ಮೂಡಿದೆ. ಆದರೆ ಮೈಸೂರು, ಮಡಿಕೇರಿ ಮಂಗಳೂರು ನ್ಯಾಷನಲ್ ಹೈವೇ ಬಗ್ಗೆ ಹಿಂದಿನಿಂದಲೂ ಪ್ರಸ್ತಾಪ ಇದೆ. ಅದನ್ನು ಗಮನದಲ್ಲಿಟ್ಟುಕೊಂಡು ಸಚಿವರು ಕಾರ್ಯಕ್ರಮ ಹಾಕಿಕೊಂಡರೆ ಮೈಸೂರು, ಮಡಕೇರಿ, ಮಂಗಳೂರಿನ ಪರಿಸರದ ಜನರಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಕೇಂದ್ರಕ್ಕೆ ಒತ್ತಾಯ ತರುವಂತಹ ಕಾರ್ಯ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಜೊತೆಗೆ ಹೊಸ ರಾಷ್ಟ್ರೀಯ ಹೆದ್ದಾರಿಗಳನ್ನು ಘೋಷಣೆ ಮಾಡಬೇಕೆಂದು ಪ್ರಸ್ತಾಪಿಸಿದ್ದಾರೆ ಅದು ಕೇಂದ್ರಕ್ಕೆ ಆಗಲೇ ಹೋಗಿದೆ. ಅವುಗಳೆಂದರೆ ಊಟಿ–ಗುಂತಕಲ್. ಬಳ್ಳಾರಿ–ಹೊಸಪೇಟೆ, ಕೊಪ್ಪಳ, ಗದಗ, ಹುಬ್ಬಳ್ಳಿ, ಎಲ್ಲಾಪುರ–ಬಾಳೆಕೊಳಿ ಕಾರವಾರ–ಈ ಮಾರ್ಗಗಳ ಬಗ್ಗೆ ಪ್ರಸ್ತಾಪ ಹೋಗಿದೆ. ಆಮೇಲೆ ಬೆಂಗಳೂರು, ಮೈಸೂರು ನಂಜನಗೂಡು ಗುಂಡ್ಲುಪೇಟೆ ಊಟಿ ಕೊಯಂಬತ್ತೂರು ಈ ಮಾರ್ಗಗಳ ಪ್ರಸ್ತಾಪ ಕೂಡ ಹೋಗಿದೆ, ಮೈಸೂರು–ಶ್ರೀರಂಗಪಟ್ಟಣ, ನಾಗಮಂಗಲ ಚಿಕ್ಕನಾಯಕನಹಳ್ಳಿ ಬಳ್ಳಾರಿ. ಹಿರಿಯೂರು ಸಿರುಗುಪ್ಪ ಗುಲ್ಬರ್ಗ ಶಹಾಪುರ ಹುಮನಾಬಾದ್ ಮಾರ್ಗಗಳ ಬಗ್ಗೆ ಪ್ರಸ್ತಾಪ ಕೂಡ ಹೋಗಿದೆ. ಹಾಗೆಯೇ ತುಮಕೂರು ಅರಸಿಕೇರೆ, ಶಿವಮೊಗ್ಗ, ಸಾಗರ, ಹೊನ್ನಾವರ ಮಾರ್ಗಗಳ ಪ್ರಪೋಸಲ್ ಕೂಡ ಹೋಗಿದೆ. ಹಾಗೆಯೇ ಬೆಂಗಳೂರು, ಮೈಸೂರು ಮಡಿಕೇರಿ ಮಂಗಳೂರಿನ ಮಾರ್ಗಗಳ ಬಗ್ಗೆ ಕೂಡ ಹೋಗಿದೆ. ಹಾಗೆಯೇ ಬೆಳಗಾಂ ಬಿಜಾಪುರ, ಗುಲ್ಬರ್ಗ ಹುಮನಾಬಾದ್ ಮಾರ್ಗಗಳ ಬಗ್ಗೆ ಕೂಡ ಹೋಗಿದೆ. ಈ ಪ್ರಪೋಸಲ್‌ಗಳಿಗೆ ವಿರೋಧ ಪಕ್ಷದ ನಾಯಕರು ಸದಸ್ಯರೊಡನೆ ಲೋಕೋಪಯೋಗಿ ಸಚಿವರ ನೇತೃತ್ವದಲ್ಲಿ ಕೇಂದ್ರ ಸರ್ಕಾರಕ್ಕೆ ನಿಯೋಗ ತೆಗೆದುಕೊಂಡು ಹೋಗಿ ನಮ್ಮ ರಾಜ್ಯಕ್ಕೆ ೧೭ ವರ್ಷಗಳಿಂದ ಆದಂತಹ ಅನ್ಯಾಯವನ್ನು ಸರಿಯಾದ ರೀತಿಯಲ್ಲಿ ಸಮತೋಲನ ಮಾಡಬೇಕಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ನನ್ನ ಗಮನಕ್ಕೆ ಬಂದ ಹಾಗೆ, ನ್ಯಾಷನಲ್ ಹೈವೇ ಬದಿಯಲ್ಲಿ ನ್ಯಾಷನಲ್ ಹೈವೇಗೆ

ತೊಂದರೆಯಾಗದ ರೀತಿಯಲ್ಲಿ ಅದಕ್ಕೆ ಮಾರ್ಜಿನ್ ಜಾಗ ಬಿಟ್ಟು ಸಣ್ಣಪುಟ್ಟ ಅಂಗಡಿಗಳನ್ನಿಟ್ಟುಕೊಂಡು ವ್ಯಾಪಾರ ಮಾಡುವಂಥ ಕೆಲವು ಹಳ್ಳಿಯ ಜನರಿದ್ದಾರೆ. ಅವರನ್ನೆಲ್ಲಾ ಅಲ್ಲಿಂದ ಎತ್ತಿ ಹಾಕಿ ಆ ಪರಿಸರದಲ್ಲಿ ಯಾವುದೇ ರೀತಿಯ ವ್ಯಾಪಾರಸ್ಥರು ಇರಲಿಕ್ಕೆ ಕೂಡದು ಎನ್ನುವ ನಿರ್ದೇಶನ. ಒತ್ತಾಯ ಪದೇ ಪದೇ ಅಧಿಕಾರಿ ವರ್ಗದಿಂದ ಬರುತ್ತಿದೆ. ಈ ಸಣ್ಣಪುಟ್ಟ ವ್ಯಾಪಾರ ಮಾಡುವಂತಹ ಜನರು ಅತೀ ಬಡವರಾಗಿದ್ದು, ಅದೇ ಅವರ ಜೀವನಾಧಾರವಾಗಿರುವುದರಿಂದ ಅಂತಹ ಜನರಿಗೆ ತೊಂದರೆಯಾಗದಂತೆ ನಿರ್ದೇಶನ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಈ ಸಲ ಸರ್ಕಾರ ಗಡಿ ಪ್ರದೇಶದ ಅಭಿವೃದ್ಧಿಗೋಸ್ಕರ ಕೆಲವು ಕಾರ್ಯಕ್ರಮಗಳನ್ನು ರೂಪಿಸಿವೆ. ಇವು ಯಾವ ಹಂತದಲ್ಲಿವೆ? ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿರುವ ನನ್ನ ಕ್ಷೇತ್ರ ಪುತ್ತೂರು ಸಹ ಕೇರಳದ ಕಾಸರಗೋಡಿನ ಪರಿಸರದಲ್ಲೇ ಬರುತ್ತದೆ. ಕೇರಳ ರಾಜ್ಯದಲ್ಲಿ ಪರಿಸ್ಥಿತಿ ಎಷ್ಟು ಚೆನ್ನಾಗಿದೆ ಎಂದರೆ, ಪ್ರತಿಯೊಂದು ಮಾರ್ಗಕ್ಕೂ ಕೂಡ ಡಾಮರು ಹಾಕಿದ್ದಾರೆ, ಒಂದೊಂದು ರೂಟ್‌ನಲ್ಲೂ ಏಳೆಂಟು ಬಸ್‌ಗಳು ಓಡಾಡುವ ವ್ಯವಸ್ಥೆ ಇದೆ. ಆದರೆ ನಮ್ಮ ಕರ್ನಾಟಕದ ಗಡಿ ಭಾಗದಲ್ಲಿ ಯಾವುದೇ ರೀತಿಯ ಸಂಪರ್ಕಗಳಿಲ್ಲದೆ ಸೌಲಭ್ಯಗಳಿಂದ ವಂಚಿತವಾಗಿದ್ದೇವೆ. ಆದ್ದರಿಂದ ಇದರ ಬಗ್ಗೆ ತಾವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಗ್ರಾಮೀಣ ಪ್ರದೇಶದಲ್ಲಿರುವ ಆ ಭಾಗದ ಜನರಿಗೆ ಲಿಂಕ್ ರಸ್ತೆಗಳನ್ನು ಹಾಕಿಸಿಕೊಡಬೇಕು. ಮೊನ್ನೆ ಸುಳ್ಯದ ಶಾಸಕರಾದ ಶ್ರೀ ಕುಶಾಲರು ಪ್ರಶ್ನೆ ಮಾಡಿ ಪಡೆದ ಉತ್ತರದಲ್ಲಿ ಅಂತರರಾಜ್ಯ ಮಾರ್ಗಗಳ ಪಟ್ಟಿಯಲ್ಲಿ ಪುತ್ತೂರು ತಾಲ್ಲೂಕಿನ ಒಂದು ಮಾರ್ಗವನ್ನು ಅಂದರೆ ಪುತ್ತೂರು ಕೊಳೇರಿಕಟ್ಟೆ ಪರಿಹಾರತನಕ, ಉಕುಂಡ ಎಂಬ ರಸ್ತೆಯನ್ನು ಪ್ರಸ್ತಾಪ ಮಾಡಿದ್ದೀರಿ. ದಯಮಾಡಿ ತಾವು ಆ ಮಾರ್ಗವನ್ನು ಪುತ್ತೂರು ಕುಳೇರಿಕಟ್ಟೆ ಪರಿಹಾರತನಕ, ಸಾರಾರ್ಕ ಎಂದು ಸೇರ್ಪಡೆ ಮಾಡಿದರೆ ಹೆಚ್ಚಿನ ಗಿರಿಜನರು ವಾಸ ಮಾಡುವ ಜಾಗಕ್ಕೆ ಅನುಕೂಲವಾಗುತ್ತದೆ. ಅಲ್ಲಿಂದ ಹೋದರೆ ನೇರವಾದ ಸಂಪರ್ಕವೂ ಇದೆ, ಕಿ.ಮೀ. ಜಾಸ್ತಿಯಾಗುವುದಿಲ್ಲ. ನಮ್ಮ ಪುತ್ತೂರು ಸಬ್-ಡಿವಿಜನ್ ಸೆಂಟರ್ ಜಾಗ ಇಲ್ಲಿಗೆ ಒಂದು ಬೈಪಾಸ್ ರಸ್ತೆ ಮಾಡಿಸಿಕೊಡಿ ಎಂದು ನಾನು ಪ್ರಥಮವಾಗಿ ಶಾಸಕನಾಗಿ ಬಂದ ನಂತರದಿಂದಲೂ ಕಳೆದ ೫ ವರ್ಷಗಳಲ್ಲಿ ಪ್ರತಿ ಅಧಿವೇಶನದಲ್ಲೂ ಏನೆಲ್ಲ ಒತ್ತಾಯ ತಂದರೂ ಸಹ ಬರೀ ನಿರಾಶದಾಯಕ ಉತ್ತರ. ಭರವಸೆಗಳು ಮಾತ್ರ ಸಿಕ್ಕಿತೇ ಹೊರತು ಇಲ್ಲಿಯವರೆಗೆ ಯಾವುದೇ ರೀತಿಯ ಕೆಲಸ ಪ್ರಾರಂಭ ಮಾಡುವಂತಹ ಒಂದು ಅವಕಾಶವಾಗಲಿಲ್ಲ. ತಾವು ಲೋಕೋಪಯೋಗಿ ಸಚಿವರಾದ ಮೇಲೆ ತಮ್ಮಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿದಾಗ ಅದನ್ನು ಕೈಗೂಡಿಸಿ ಕೊಡುತ್ತೇನೆ ಎನ್ನುವಂತಹ ಭರವಸೆಯನ್ನು ತಾವು ಕೊಟ್ಟಿದ್ದೀರಿ ಮತ್ತು ಈಗಾಗಲೇ ಜಮೀನು ಸ್ವಾಧೀನ ಮಾಡುವಂತಹ ಕಾರ್ಯ ನಡೆದಿದೆ. ಅದೇ ರೀತಿ ತಾವು ಎಸ್ಟಿಮೇಟ್ ಮಾಡಿಸಿ ಈ ವರ್ಷವೇ ಆ ಕೆಲಸವನ್ನು ಪ್ರಾರಂಭ ಮಾಡುತ್ತೇನೆ ಎನ್ನುವ ಭರವಸೆ ಕೊಟ್ಟಿದ್ದೀರಿ. ಅದನ್ನು ಅತಿ ಶೀಘ್ರವಾಗಿ ಕಲ್ಪಿಸಿ ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಲೋಕೋಪಯೋಗಿ ಇಲಾಖೆಯಲ್ಲಿ ೨-೩ ವರ್ಷಗಳ ಹಿಂದೆ ಕೆಲವೊಂದು ಮಾರ್ಗಗಳನ್ನು ಎಂಡಿಆರ್ ರಾಜ್ಯ ರಸ್ತೆಗಳೆಂದು ರೂಪಿಸಿದರು. ಅನಂತರ ಅವನ್ನು ಜಿಲ್ಲಾಪರಿಷತ್ತಿನ ವ್ಯಾಪ್ತಿಯಿಂದಲೂ ಕೈಬಿಡಲಾಯಿತು. ಲೋಕೋಪಯೋಗಿ ಇಲಾಖೆಯಿಂದಲೂ ಅದಕ್ಕೆ ಐದು ಪೈಸೆ ಖರ್ಚಾಗುವಂತಹ ಕೆಲಸ ಕಾರ್ಯಗಳು ಆಗುತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಸುಬ್ರಹ್ಮಣ್ಯ, ಕೈಕಂಬ, ಧರ್ಮಸ್ಥಳ, ಉಡುಪಿ ರಸ್ತೆಗಳನ್ನು ಎಂ.ಡಿ.ಆರ್. ರಸ್ತೆಗಳೆಂದು ಸೇರ್ಪಡೆ ಮಾಡಲಾಯಿತು. ಮೊದಲು ಆ ರಸ್ತೆಗಳು ವಾಹನ ಸಂಚಾರ ಮಾಡುವ ವ್ಯವಸ್ಥೆಯಲ್ಲಿದ್ದವು. ಇವತ್ತು ಅವನ್ನು ರಾಜ್ಯದ ರಸ್ತೆಯನ್ನಾಗಿ ತೆಗೆದುಕೊಂಡ ನಂತರ ಇಲ್ಲಿಯವರೆಗೆ ಯಾವುದೇ ರೀತಿಯಲ್ಲಿ ಹಣ ವಿನಿಯೋಗ ಮಾಡಲಿಲ್ಲ. ಅದನ್ನು ರಿಪೇರಿ ಮಾಡುವಂತಹ ಕೆಲಸ ಕೂಡ ಆಗುತ್ತಿಲ್ಲ. ಅದನ್ನು ತಾವು ಗಮನದಲ್ಲಿಟ್ಟುಕೊಂಡು ಕೆಲಸ ಕಾರ್ಯಗಳನ್ನು ಮಾಡಬೇಕು. ಆಮೇಲೆ ಹರಿಜನವಾಡಾ ರಸ್ತೆಗಳ ಯೋಜನೆ ಇದೆ. ಈ ಹರಿಜನವಾಡ ರಸ್ತೆಗಳು ಯಾವ ರೀತಿ ಬಳಕೆ ಆಗುತ್ತಿದೆಯೆಂದರೆ ಪ್ರಭಾವೀ ವ್ಯಕ್ತಿಗಳೇ ಬಳಸಿಕೊಂಡು ನಿಜವಾಗಿ ಹರಿಜನ-ಗಿರಿಜನರಿಗೆ ಪ್ರಯೋಜನ ಸಿಗದಂತಾಗಿದೆ. ಇದಕ್ಕೆ ಅವಕಾಶ ಕೊಡಕೂಡದು, ಅಂತಹ ಕಾರ್ಯಕ್ರಮಗಳು ಹರಿಜನ-ಗಿರಿಜನರಿಗೆ ತಲುಪುವಂತೆ ನೋಡಿಕೊಳ್ಳಬೇಕು. ಅದೇ ರೀತಿಯಾಗಿ ಸೇತುಬಂಧನ ಗಂಗಾಕಲ್ಯಾಣದಂಥ ಹಲವಾರು ಕಾರ್ಯಕ್ರಮಗಳು ದಕ್ಷಿಣಕನ್ನಡ ಜಿಲ್ಲೆಗೆ ಬರಲೇ ಇಲ್ಲ. ಇವತ್ತು ಗಂಗಾಕಲ್ಯಾಣವೆಂಬ ಯೋಜನೆಗೆ ನಮ್ಮ ಜಿಲ್ಲೆಯಲ್ಲಿ ಹೆಚ್ಚಿನ ಹಣ ವಿನಿಯೋಗಿಸುವ ಕೆಲಸ ಕಾರ್ಯ ತಾವು ಮಾಡಬೇಕು. ಇದರಿಂದ ಹರಿಜನ ಗಿರಿಜನರಿಗೆ ಅನುಕೂಲವಾಗುತ್ತದೆ. ಹರಿಜನರು ತಮ್ಮ ಜಾಗದಲ್ಲಿ ನೀರಾವರಿ ಕೆಲಸಕಾರ್ಯಗಳನ್ನು ಮಾಡಲಿಕ್ಕಾಗುತ್ತದೆ, ಅದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು. ಶ್ರೀನಿವಾಸ ಮಲ್ಯರು ನಮ್ಮ ಜಿಲ್ಲೆಯನ್ನು ಕಟ್ಟಿ ಬೆಳೆಸಿ ರೂಪಿಸಿದಂತಹ ಒಬ್ಬ ಶಿಲ್ಪಿ,

೪.೪೦ ಪಿ.ಎಂ.

ಅವರ ಒಂದು ಕನಸು ಇತ್ತು. ನಮ್ಮ ಜಿಲ್ಲೆಯಲ್ಲಿ ಕರಾವಳಿ ರಸ್ತೆ, ಸಮುದ್ರದ ಬದಿಯಿಂದ ಹೋಗುವಂಥ ರಸ್ತೆ ಯಾವ ರೀತಿ ಇದೆಯೋ, ನ್ಯಾಷನಲ್ ಹೈವೇ ಯಾವ ರೀತಿ ಇದೆಯೋ ಅದೇ ರೀತಿಯಾಗಿ ಮಲೆನಾಡು ಹೈವೇ ಎನ್ನುವ ರೀತಿಯಲ್ಲಿ ಒಂದು ವ್ಯವಸ್ಥೆ ಮಾಡಬೇಕು, ಪ್ರತಿಯೊಂದು ತಾಲ್ಲೂಕಿಗೂ ಕೂಡಾ ಪರಸ್ಪರ ಲಿಂಕ್ ಕೊಡುವ ಒಂದು ರಸ್ತೆಯಾಗಬೇಕು, ಜಿಲ್ಲೆಯ ಅಗಲಕ್ಕೂ ಉದ್ದಕ್ಕೂ ಕೂಡಾ ಈ ರಸ್ತೆಯನ್ನು ರೂಪಿಸಬೇಕು ಎಂಬ ಒಂದು ಕನಸು ಅವರ ಹತ್ತಿರ ಇತ್ತು. ಜಿಲ್ಲಾ ಪರಿಷತ್ತುಗಳ ಒಂದು ವ್ಯವಸ್ಥೆ ಬಂದ ನಂತರ ನಾವು ಜಿಲ್ಲೆಯಲ್ಲಿ ಎಲ್ಲಾ ರಾಷ್ಟ್ರೀಕೃತ ಬ್ಯಾಂಕ್‌ನವರನ್ನು ಕೂಡಾ ಕರೆಸಿ ಅವರ ಮುಖಾಂತರ ಲೋನ್ ತೆಗೆದುಕೊಂಡು ಜಿಲ್ಲಾ ಪರಿಷತ್ತಿನ ವತಿಯಿಂದ ಲೋನ್ ತೆಗೆದುಕೊಂಡು, ಸರ್ಕಾರ ಅದರ ಮಟ್ಟಿಗೆ ಗ್ಯಾರಂಟಿ ನಿಲ್ಲುವ ರೀತಿಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಈ ರಸ್ತೆಯನ್ನು ಮಾಡಲು ಆ ಹಣವನ್ನು ವಿನಿಯೋಗ ಮಾಡಬೇಕು ಎನ್ನುವ ಒಂದು ರೀತಿಯ ಕಾರ್ಯಕ್ರಮವನ್ನು ಹಮ್ಮಿ ನಾವು ಸರ್ಕಾರಕ್ಕೆ ಒಂದು ಪ್ರಪೋಸಲ್‌ನ್ನು ಕಳುಹಿಸಿಕೊಟ್ಟಿದ್ದೆವು. ಆದರೆ ಇದುವರೆಗೆ ಇದರ ಮಟ್ಟಿಗೆ ಯಾವುದೇ ರೀತಿಯ ಉತ್ತರವೂ ಸಿಗಲಿಲ್ಲ. ಆದ್ದರಿಂದ ಅದರ ಮಟ್ಟಿಗೆ ತಾವು ಗಮನ ಕೊಡಬೇಕು ಎಂದು ಹೇಳುತ್ತೇನೆ. ಕಳೆದ ಒಂದೆರಡು ವರ್ಷಗಳ ಹಿಂದೆ ನಮ್ಮ ಕೇಂದ್ರ ಸರ್ಕಾರದಲ್ಲಿ ರೂರಲ್ ಡೆವಲಪ್‌ಮೆಂಟ್ ಮಂತ್ರಿಗಳಾಗಿದ್ದಂಥ ಸನ್ಮಾನ್ಯ ಜನಾರ್ಧನ ಪೂಜಾರಿಯವರು ಎರಡು ಕೋಟಿ ರೂಪಾಯಿಗಳನ್ನು ಪ್ರತ್ಯೇಕವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ವಿನಿಯೋಗಿಸುವಂಥಹ ಕೆಲಸ ಕಾರ್ಯಗಳನ್ನು ಆರ್.ಎಲ್.ಇ.ಜಿ.ಪಿ. ಯೋಜನೆಯ ಮುಖಾಂತರ ಮಾಡಿಸಿದ್ದರು ಇವತ್ತು ಒಂದು ಹಂತದಲ್ಲಿ ಆ ಕೆಲಸ ಕಾರ್ಯಗಳು ಪೂರ್ತಿಯಾಗಿವೆ. ಆದರೆ ಎರಡನೇ ಹಂತದ ಯಾವ ರಸ್ತೆ ಕೆಲಸ ಕಾರ್ಯಗಳನ್ನು ಆರ್.ಎಲ್.ಇ.ಜಿ.ಪಿ. ಯೋಜನೆಯ ಮುಖಾಂತರ ಇವತ್ತು ಪ್ರಾರಂಭ ಮಾಡಿದ್ದಾರೆ, ಆದಕ್ಕೆ ಪುನಃ ಕೇಂದ್ರ ಸರ್ಕಾರದಿಂದ ಸವಲತ್ತು ಸಿಗುವಂಥಹ ಒಂದು ಕೆಲಸಕಾರ್ಯ ಆಗಲ್ಲಿಲ್ಲ ಪುನಃ ಎರಡನೇ ಕಂತಿನ ಹಣ ಇವತ್ತು ಕೇಂದ್ರ ಸರ್ಕಾರದಿಂದ ಬರತಕ್ಕಂಥ ವ್ಯವಸ್ಥೆಯಾಗಿಲ್ಲ. ಅದರ ಮಟ್ಟಿಗೂ ತಾವು ಕೇಂದ್ರ ಸರ್ಕಾರಕ್ಕೆ ಒತ್ತಾಯ ತರಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಅದೇ ರೀತಿ ವೆಂಟೆಡ್ ಡ್ಯಾಮ್ ವ್ಯವಸ್ಥೆಯ ಬಗ್ಗೆ ಅದರ ರಿಪೇರಿಯ ಮಟ್ಟಿಗೆ ಸರ್ಕಾರಕ್ಕೆ ನಾವು ಪ್ರಪೋಸಲ್ಲನ್ನು ಕಳುಹಿಸಿ ಕೊಟ್ಟಿದ್ದೇವೆ. ಸಾಕಷ್ಟು ಹೊಸ ವೆಂಟೆಡ್ ಡ್ಯಾಮ್‌ಗಳನ್ನು ಮಾಡುವಂಥ ವ್ಯವಸ್ಥೆ ಇಲ್ಲದಿದ್ದರೂ ಕೂಡಾ ಇದ್ದಂಥ ವೆಂಟೆಡ್ ಡ್ಯಾಮ್‌ಗಳನ್ನು ಉಳಿಸಿಕೊಳ್ಳತಕ್ಕಂಥ ಮತ್ತು ಅದನ್ನು ರಿಪೇರಿ ಮಾಡಿ ಅದರ ಪ್ರಯೋಜನ ರೈತರಿಗೆ ಸಿಗಬೇಕು ಎನ್ನುವ ರೀತಿಯಲ್ಲಿ ನಾವು ಕಾರ್ಯಕ್ರಮವನ್ನು ಹಮ್ಮಿಕೊಂಡು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಆ ಪ್ರಸ್ತಾವವನ್ನೂ ಕೂಡ ತಾವು ಗಮನದಲ್ಲಿಟ್ಟುಕೊಂಡು ಅವನ್ನು ಪೂರ್ತಿ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಮುಂದಿನ ವರ್ಷಗಳಲ್ಲಿ ತಾವು ಜನತೆಯ ಆಶೋತ್ತರಗಳನ್ನು ನೆರವೇರಿಸುವಂಥ ಒಂದು ಪುಣ್ಯದ ಕೆಲಸಕಾರ್ಯವನ್ನು ನೆರವೇರಿಸಿ ಈ ಕರ್ನಾಟಕದ ಸಚಿವರಾಗಿ ಕೊಡಬೇಕು, ಅದಕ್ಕಾಗಿ ತಮಗೆ ಶಕ್ತಿ ಕೊಡುವಂಥ ಕೆಲಸಕಾರ್ಯಗಳು ನಡೆಯಲಿ ಎಂದು ಆಶಿಸಿ, ಈ ಸಂದರ್ಭದಲ್ಲಿ ತಮ್ಮನ್ನು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ, ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಈ ಲೋಕೋಪಯೋಗಿ ಇಲಾಖೆಯ ಬಗ್ಗೆ ಮಾತನಾಡುವಾಗ ಈ ಇಲಾಖೆಗೆ ಹಾಸನದ ಜಿಲ್ಲೆಯವರೆ ಐದು ಜನ ಮಂತ್ರಿಗಳು ಆಗಿದ್ದಾರೆ. ೧೯೫೬ ರಿಂದ ಇಲ್ಲಿಯವರೆಗೆ ಲೆಕ್ಕ ಹಾಕಿದಾಗ ಹಾಸನ ಜಿಲ್ಲೆಯವರೆ ಐದು ಜನ ಬಹಳ ಹೆಚ್ಚಿನ ವರ್ಷಗಳ ಕಾಲ ಈ ರಾಜ್ಯದಲ್ಲಿ ಈ ಇಲಾಖೆಯನ್ನು ವಹಿಸಿಕೊಂಡಿದ್ದಾರೆ. ಶ್ರೀಮಾನ್ ಲಕ್ಕಪ್ಪನವರು, ಶ್ರೀಕಂಠಯ್ಯನವರು ಶ್ರೀ ದೇವೇಗೌಡರು ಶ್ರೀ ನಂಜೇಗೌಡರು ಮತ್ತು ಶ್ರೀ ಪುಟ್ಟಸ್ವಾಮಿಗೌಡರು. ಒಟ್ಟು ಐದು ಜನ. ಈ ರಾಜ್ಯಕ್ಕೆ ಯಾವುದೇ ಅನ್ಯಾಯವಾಗಿದ್ದರೂ ಅದು ಅವರಿಗೇ ಸೇರಬೇಕು. ನಾವು ಅದರಲ್ಲೇನು ಪಾಲುದಾರರಲ್ಲ.

ಶ್ರೀ ಹೆಚ್. ಏಕಾಂತಯ್ಯ.—ಅವರ ಜಿಲ್ಲೆಗೆ ಅನ್ಯಾಯ ಆಗಿದೆ ಎಂತಲೋ?

ಶ್ರೀ ವಾಟಾಳ್ ನಾಗರಾಜ್.—ಸಮಗ್ರವಾಗಿ ಇಡೀ ರಾಜ್ಯಕ್ಕೆ ಈ ಒಂದು ಇಲಾಖೆಯಿಂದ ಏನಾದರೂ ಅನ್ಯಾಯ ನಡೆದಿದೆ ಎಂದು ತೀರ್ಮಾನ ವಾಗುವುದಾದರೆ ಅದರ ಹೊಣೆಯನ್ನು ಅದರ ಜವಾಬ್ದಾರಿಯನ್ನು ಇವರುಗಳೇ ಹೊರಬೇಕು. ಕೊನೆಯ ಜವಾಬ್ದಾರಿಯನ್ನು ಹೇರುವುದಕ್ಕೆ ಪುಟ್ಟಸ್ವಾಮಿಗೌಡರು ಈಗ ಬಂದಿದ್ದಾರೆ. ಈಗ ಅವರು ಬಂದು ಆರು ತಿಂಗಳಾಗಿವೆ. ಆದರೆ ತಕ್ಷಣ ಈ ಪಾಪದ ಹೊರೆಯನ್ನು ಅವರ ಮೇಲೆ ಹೊರಿಸುವುದಕ್ಕೆ ನನ್ನ ಮನಸ್ಸು ಹಿಂದೇಟು ಹೊಡೆಯುತ್ತಿದೆ. ತಕ್ಷಣ ಈ ನಾಲ್ಕು ಜನರನ್ನು ಬಿಟ್ಟು, ಐದನೆಯವರಾದ ನಿಮ್ಮ ಮೇಲೆ ಆ ಹೊರೆಯನ್ನು ಹೊರಿಸಬೇಕ

ಎಂದು ಹೇಳಿದರೆ ಅದು ರಾಜಕೀಯವಾಗುತ್ತದೆ. ಆ ಬಗ್ಗೆ ನಾನು ಮಾತನಾಡುವುದಕ್ಕೂ ಹೋಗುವುದಿಲ್ಲ. ರಾಜ್ಯದಲ್ಲಿ ಇತ್ತೀಚೆಗೆ ನೌಕರರ ವರ್ಗಾವರ್ಗಿ ಆಗಿರುವುದು ನಿಜ. ನಮ್ಮ ಸಿಂಧ್ಯಾ ರವರು ಈ ವರ್ಗಾವರ್ಗಿಯಲ್ಲಿ ಬಹಳ ಅನ್ಯಾಯ ನಡೆದಿದೆ ಎಂದು ಹೇಳುತ್ತಾರೆ. ಅದು ನಿಜ. ವರ್ಗಾವರ್ಗಿ ಇಲ್ಲದೇ ಇರತಕ್ಕಂಥ ಸರ್ಕಾರ ಯಾವುದು ಇದೆ. ಆದ್ದರಿಂದ ನಾನು ಇದನ್ನು ಒತ್ತಾಯ ಮಾಡುತ್ತಿಲ್ಲ, ವರ್ಗಾವಗಿ ಮಾಡುವುದು ಸರಿ ಎಂದು ನಾನು ಹೇಳುತ್ತಿಲ್ಲ. ಆದರೆ ಅದಕ್ಕೆ ಒಂದು ಕಷ್ಟ ಇದೆ. ಹೆಂಡತಿ ಮಾತು ಕೇಳಬೇಕು ಯಾರಾದರೂ ಹೆಂಡತಿ ಪರವಾಗಿ ವರ್ಗ ಮಾಡಿಸಿಕೊಡಿ ಎಂದು ಬರುತ್ತಾರೆ, ನನ್ನದು ಏನಾದರೂ ವರ್ಗ ಮಾಡಿಸಿಕೊಡಿ ಎಂದು ಕೇಳುತ್ತಾರೆ. ಮಗನ ಪರವಾಗಿ ಬರುತ್ತಾರೆ, ಅಳಿಯನ ಪರವಾಗಿ, ತಮ್ಮನ ಪರವಾಗಿ, ಹೆಂಡತಿ ತಂಗಿಯ ಪರವಾಗಿ, ಬರುತ್ತಾರೆ, ಭಾವಮೈದುನನ ಪರವಾಗಿ ಬರುತ್ತಾರೆ: ಅಂದರೆ ಒಬ್ಬ ಮಂತ್ರಿಯ ಹಿಂದೆ ವರ್ಗಾವರ್ಗಿಯ ಎಷ್ಟೊಂದು ಶಕ್ತಿಗಳು ಸುಳಿಯುತ್ತವೆ ಎನ್ನುವುದು ತಿಳಿಯುತ್ತದೆ. ಹೆಂಡತಿ, ಮಗ, ಭಾವಮೈದ, ತಮ್ಮ ತಮ್ಮನ ಹೆಂಡತಿ, ಬೀಗ ಇಷ್ಟೆಲ್ಲಾ ಸೇರುತ್ತಾರೆ. ಆದ್ದರಿಂದ ಈ ಭೂತಗಳಿಂದ ತಪ್ಪಿಸಿಕೊಂಡು ಹೋಗುವುದಕ್ಕೆ ಸಾಧ್ಯ ಇಲ್ಲ. ನೀವು ಎಷ್ಟೇ ಪ್ರಾಮಾಣಿಕವಾಗಿ ನಾನು ಈ ವರ್ಗಾವರ್ಗಿಯನ್ನು ವರ್ಜಿಸಿದ್ದೇನೆ ಎಂದು ಹೇಳಿದರೂ ಸಹ ಈ ಶಕ್ತಿಗಳು ನಿಮ್ಮನ್ನು ಬಿಡುವುದಿಲ್ಲ. ಆದ್ದರಿಂದ ಎಷ್ಟೇ ಪ್ರಾಮಾಣಿಕವಾಗಿ...

ಶ್ರೀಮತಿ ಮೋಟಮ್ಮ.—ವರ್ಗಾವರ್ಗಿಯಲ್ಲಿ ಹೆಂಡತಿಯರ ಪಾತ್ರ ಬಹಳ ಕಡಿಮೆ ಇರುತ್ತದೆ. ಅಂದರೆ ಇಲ್ಲವೇ ಇಲ್ಲವೆಂದು ಹೇಳಬಹುದು. ಗಂಡ ಎಲ್ಲಿ ಕೆಲಸ ಮಾಡಿದರೂ ಹೆಂಡತಿ ಅವರ ಜೊತೆಯಲ್ಲಿ ಇರಲಿಕ್ಕೆ ತಯಾರು ಇರುತ್ತಾಳೆ. ಇದರಲ್ಲಿ ಹೆಂಡತಿ ಯಾವ ಲಾಭವನ್ನೂ ಇಟ್ಟುಕೊಂಡು ವರ್ಗಾವರ್ಗಿಯಲ್ಲಿ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಇತ್ತೀಚೆಗೆ ಹೆಂಗಸರದೇ ಬಹು ಪಾಲು ಬಂದಿದೆ. ಗಂಡಸರ ಮಾತೆ. ಇಲ್ಲ. ಹೆಂಗಸರೇ ಗಂಡಸರು ಇದ್ದ ಹಾಗೆ. ಹೆಂಡತಿ ಎನ್ನುವವಳು ಮನೆಯಲ್ಲಿ ಮಂತ್ರಿ ಇದ್ದ ಹಾಗೇ

ಶ್ರೀ ವಾಟಾಳ್ ನಾಗರಾಜ್.—ಯಾಕೆಂದರೆ ನಾನು ಮಂತ್ರಿಯೂ ಆಗಿಲ್ಲಿ. ನನ್ನ ಹೆಂಡತಿಗೆ ಹೇಳುವುದಕ್ಕೂ ಸಾಧ್ಯವಿಲ್ಲ.

ಶ್ರೀಮತಿ ಮೋಟಮ್ಮ.—ನಿಮ್ಮ ಮನೆಯಲ್ಲಿ ಹಾಗೇ ಏನು ?

ಶ್ರೀಮತಿ ಮೋಟಮ್ಮ.—ಸೋ ಸಾರಿ...

ಶ್ರೀ ವಾಟಾಳ್ ನಾಗರಾಜ್.—ಯಾಕೆಂದರೆ ನಾನು ಮಂತ್ರಿಯೂ ಆಗಿಲ್ಲ, ನನ್ನ ಹೆಂಡತಿಗೆ ಹೇಳುವುದಕ್ಕೂ ಸಾಧ್ಯವಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನನಗೆ ಒಂದು ಸಾರಿ ಮಂತ್ರಿಸ್ಥಾನ ಕೊಟ್ಟು ನೋಡಿ. ಆ ಮೇಲೆ ನನ್ನ ಹೆಂಡತಿ ಏನು ಹೇಳುತ್ತಾಳೊ ನಾನು ಕೇಳಿ ಹೇಳುತ್ತೇನೆ. ನಾನು ಇನ್ನೂ ಮಂತ್ರಿ ಆಗಿಲ್ಲ. ನನ್ನ ಹೆಂಡತಿ ಮಾತು ನಾನು ಕೇಳಲಿಕ್ಕೆ ಇಲ್ಲ. ಎಲ್ಲೋ ಪಾಪ ಆಕೆ ಮನೆಯಲ್ಲಿ ಅಡಿಗೆ ಮಾಡಿಕೊಂಡು, ನನ್ನನ್ನು ಮದುವೆಯಾದ ಕೇಡಿಗೆ ನನ್ನಗೋಂದಿಷ್ಟು ಅನ್ನ ಹಾಕಿಕೊಂಡಿದ್ದಾಳೆ. ನಾವು ಅವರಿಗೆ ಸುಖ ಕೊಟ್ಟು ಮಾಡತಕ್ಕ ಜನ ಏನಲ್ಲ. ಹಗಲೂ ರಾತ್ರಿ ಜೈಲು. ಲಾಕಪ್, ಬೀದಿ, ರಸ್ತೆ ಇದರಲ್ಲಿಯೇ ಇರುವಾಗ ಯಾವ ಟೈಮ್‌ನಲ್ಲಿ ನಾವು ಹೆಂಡತಿ ಮಕ್ಕಳನ್ನು ನೋಡುತ್ತೇವೆ: ನಾನು ಮಂತ್ರಿಯಾದರೂ ಆಗಿದ್ದರೆ ಸುಖ ಸುಪ್ಪತ್ತಿಗೆ ಮನೆ, ವೈಭವ ಕಾರು ಬಾರು ಎಲ್ಲಾ ಚೆನ್ನಾಗಿ ಇರುತ್ತಿತ್ತು: ನಮಗೆ ಇವು ಯಾವುವು ಇಲ್ಲವಲ್ಲ. ಕಾರ್‌ಬಾರ್ ಇವೆಲ್ಲ ಇದ್ದರೆ ನನ್ನ ಹೆಂಡತಿಯೂ ಸುಖವಾಗಿ ನನ್ನ ಪಕ್ಕದಲ್ಲಿ ಕುಳಿತು ಕಾರ್‌ನಲ್ಲಿ ಓಡಾಡಿಕೊಂಡು ಇರುತ್ತಿದ್ದಳು. ಪಾಪ ಒಡಪಾಯಿ, ಮನೆಯಲ್ಲಿಯೇ ಕುಳಿತಿದೆ. ಅದರ ವಿಚಾರ ನಾವು ಯಾಕೆ ಇಲ್ಲಿ ಮಾತನಾಡೋಣ.

ಶ್ರೀಮತಿ ಮೋಟಮ್ಮ.—ಆಕೆ ನಿಮ್ಮಷ್ಟೇ ನತದೃಷ್ಟ ಹೆಂಡತಿ ಎಂದು ಅನಿಸುತ್ತದೆ ಏಕೆಂದರೆ ನಿಮಗೆ ಮಂತ್ರಿ ಅವಕಾಶ ಸಿಗಲಿಲ್ಲ. ನಿಮಗೆ ಮಂತ್ರಿ ಸ್ಥಾನ ಸಿಗದ ಕಾರಣ ಆ ಹೆಣ್ಣು ಮಗಳಿಗೂ ಆ ಯೋಗ ಸಿಗಲಿಲ್ಲ ಎಂದು ಅನಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಒಂದು ದೃಷ್ಟಿಯಿಂದ ಹೇಳುವುದಾದರೆ, ನನ್ನಂಥ ಗಂಡನನ್ನು ಪಡೆದಂಥ ನನ್ನ ಹೆಂಡತಿ ಬಹಳ ಅದೃಷ್ಟವಂತೆ ಏಕೆಂದರೆ ನನ್ನ ಗಂಡ ಲಂಚ ತೆಗೆದುಕೊಳ್ಳಬಾರದು, ವರ್ಗಾವರ್ಗಿಗೆ ಹೋಗಬಾರದು, ಭ್ರಷ್ಟಾಚಾರ ಮಾಡಬಾರದು ಎನ್ನುವ ತತ್ವ ಅವಳಲ್ಲಿ ಇರುವುದರಿಂದ ನನಗೂ ಅಧಿಕಾರ ಸಿಕ್ಕಲಿಲ್ಲ, ನನ್ನ ಹೆಂಡತಿಯೂ ಹೇಳುವುದಕ್ಕಾಗಿಲ್ಲ. ಆದ್ದರಿಂದ ಅವಳು ಪುಣ್ಯವಂತೆ ಅದರ ಬಗ್ಗೆ ನಾನು ಎರಡನೇ ಮಾತನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈ ವಿಚಾರದಲ್ಲಿ ನಾನು ನನ್ನ ಹೆಂಡತಿ ನಾವು ಇಬ್ಬರೇ ನಮಗೆ ಇಬ್ಬರೇ ಮಕ್ಕಳು ಅದರಲ್ಲೇನೂ ಅನುಮಾನವಿಲ್ಲ. ಬೇರೆಯವರ ಹಾಗೆ ೫.೧೦.೧೫ ಮಕ್ಕಳು ಇಲ್ಲ ಈ ಒಂದು ಸಿದ್ಧಾಂತಕ್ಕೆ ನಾವು ಬಂದಿದ್ದೇವೆ. ಏಕೆಂದರೆ ಸರ್ಕಾರವೇ ಹೇಳಿದೆ ಮೂರು ಮಕ್ಕಳ ಮೇಲೆ ಬೇಡ ಎಂದು ಹೇಳಿದೆ ನಾವು ಎರಡೇ ಸಾಕು ಎಂದು ಅಷ್ಟಕ್ಕೆ ನಿಲ್ಲಿಸಿದ್ದೇವೆ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ.—ತಾವು ಭೂತಗಳು ಎಂದು ಹೇಳಿದಿರಿ ಗಂಡ, ಹೆಂಡತಿ, ಬೀಗ, ಸೊಸೆ, ಅಳಿಯ ಎಂದು ಹೇಳಿದ್ದೀರಿ ಇಂತಹವರು ನಿಮಗೆ ಯಾರಾದರೂ ಇರಬೇಕಲ್ಲ......

ಶ್ರೀ ವಾಟಾಳ್ ನಾಗರಾಜ್.—ತಾವು ನನ್ನ ಮಾತನ್ನು ಸರಿಯಾಗಿ ಕೇಳಿಸಿಕೊಳ್ಳಲಿಲ್ಲ ಎಂದು ಕಾಣುತ್ತದೆ. ನಾನು ಮಂತ್ರಿ ಆಗಿದ್ದರೆ ನನಗೂ ಈ ಪರಿಸ್ಥಿತಿ ಬರುತ್ತಿತ್ತು. ನಾನಿನ್ನು ಮಂತ್ರಿಯಾಗಿಲ್ಲ ಈಗ ಅವರಿಗೆ ಬಂದಿದೆ ಎಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ನಾನು ಮಾನ್ಯ ಪುಟ್ಟಸ್ವಾಮಿಗೌಡರ ಮೇಲೆ ಆ ಒಂದು ಆರೋಪಣೆಯನ್ನು ಮಾಡುತ್ತಿಲ್ಲ. ಕಾರಣ ಇಷ್ಟೆ ನನಗೆ ಹಾಸನದ ಮಂತ್ರಿಗಳ ಕತೆ ಗೊತ್ತಿದೆ ಆ ಕಡೆಯವರು ಯಾರೇ ಮಂತ್ರಿಗಳಾಗಲೀ, ಒಂದೇ ಟೈಪ್ ಮುಖಗಳು ಇರುತ್ತವೆ. ಇವರ ಆಫೀಸ್‌ನಲ್ಲಿರುವವರು ಹಾಸನದ ಇನ್ನೊಬ್ಬರು ಮಂತ್ರಿ ಬಂದರೆ, ಇವರನ್ನು ಬಿಟ್ಟು ಆ ಕಡೆ ಹೊರಟು ಹೋಗುತ್ತಾರೆ. ನಾನು ಶ್ರೀಕಂಠಯ್ಯನವರನ್ನು ನೋಡಿದ್ದೇನೆ, ಶ್ರೀಮಾನ್ ದೇವೇಗೌಡರನ್ನು ನೋಡಿದ್ದೇನೆ, ಶ್ರೀ ನಂಜೇಗೌಡರನ್ನು ನೋಡಿದ್ದೇನೆ ಶ್ರೀಮಾನ್ ಲಕ್ಕಪ್ಪನವರನ್ನು ನೋಡಿದ್ದೇನೆ. ಇವರ ಕಾರ್ಯಾಲಯದಲ್ಲಿ ತುಂಬಿರತಕ್ಕ ಜನ ಇದ್ದಾರಲ್ಲ ಅವರೆಲ್ಲಾ ಸಾರೋದ್ಧಾರವಾಗಿ ಇವರಂಗಳೇ......

ಚೇರ್ಮನ್.—ದಯವಿಟ್ಟು ಬೇಡಿಕೆ ಮೇಲೆ ಮಾತನಾಡಿ......

ಶ್ರೀ ವಾಟಾಳ್ ನಾಗರಾಜ್.—ಇದೂ ಬೇಕು. ನಾನು ಮುಂದಕ್ಕೆ ಹೋಗುತ್ತೇನೆ. ಮಧ್ಯೆ ಇವೆಲ್ಲಾ ಸ್ವಲ್ಪ ಇರಬೇಕಲ್ಲ......

ಶ್ರೀ ಗೋಪಿನಾಥ ಆರ್. ಸಂಡ್ರಾ.—ವಾಟಾಳ್‌ನಾಗರಾಜ್‌ರವರೆ ನನಗೆ ಯಾರೂ ಸಂಬಂಧಿಗಳು ಇಲ್ಲ ಎಂದು ಹೇಳಿದ್ದಿರಿ. ಮಾನ್ಯ ಪುಟ್ಟಸ್ವಾಮಿ ಗೌಡರ ಮನೆಗೆ ಹತ್ತಾರು ಬಾರಿ ಹೋಗಿದ್ದೀರಲ್ಲ, ಯಾರ ಸಲುವಾಗಿ ಹೋಗಿದ್ದಿರಿ?

ಶ್ರೀ ವಾಟಾಳ್‌ನಾಗರಾಜ್.—ಯಾರ ಸಲುವಾಗಿ ಹೋಗಿದ್ದೇನೆ ಎನ್ನುವುದನ್ನು ಹೇಳುತ್ತೇನೆ. ನಾನು ಮಾನ್ಯ ಪುಟ್ಟಸ್ವಾಮಿಗೌಡರ ಮನೆಗೆ ಹತ್ತಾರು ಬಾರಿ ಅಲ್ಲ, ೨೫ ಸಾರಿ ಹೋಗಿದ್ದೇನೆ. ನಾನು ಬೇರೆಯವರ ವರ್ಗಾವಣೆಗೆ ಹೋಗಿದ್ದೇನೆಯೋ ಹೊರತು ನನ್ನ ಯಾವುದಾದರೂ ವರ್ಗದ ಬಗ್ಗೆ ಕೇಳಿದ್ದರೆ ನಾನು ಈ ಸಭೆಯಲ್ಲಿ ರಾಜೀನಾಮೆ ಕೊಡುತ್ತೇನೆ. ಅವರನ್ನೇ ಕೇಳಿಬಿಡಿ ಈಗ ಕಾವೇರಿ ಪಂಚಾಯಿತಿಯ ವಿಷಯ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ನಿಮ್ಮ ವರ್ಗ ಹೇಗೆ ಮಾಡುವುದು. ನೀವು ಅಲ್ಲಿಂದ ಇಲ್ಲಿಗೆ ಬಂದಿದ್ದೀರಿ.

ಶ್ರೀ ವಾಟಾಳ್‌ನಾಗರಾಜ್.—ನನ್ನ ವರ್ಗವನ್ನು ನೀವು ಮಾಡಿಸಿದ್ದೀರಿ ನನ್ನ ವರ್ಗವನ್ನು ಅಲ್ಲಿಂದ ಇಲ್ಲಿಗೆ ಮಾಡಿಸಿದ್ದೀರಿ. ಇದನ್ನು ನೀವೇ ವಿಶ್ವಾಸದಿಂದ ಮಾಡಿಸಿದ್ದು, ಅದಕ್ಕೆ ಧನ್ಯವಾದಗಳು.

ಛೇರ್ಮನ್.—ದಯವಿಟ್ಟು ಮುಂದುವರೆಸಿ ಇಂಟರ್‌ಫಿಯರೆನ್ಸ್ ಬೇಡ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಕಾವೇರಿ ವಿವಾದದ ಬಗ್ಗೆ ನಮ್ಮ ನಿಲುವು ಸ್ಪಷ್ಟವಾಗಿರಬೇಕು. ಈಗಾಗಲೇ ಕರ್ನಾಟಕದ ಜನತೆಯ ಮೇಲೆ ಒಂದು ಭಾರಿ ಪ್ರಮಾಣದ ಬೆಂಕಿ ಬಿದ್ದಿದೆ. ಕಾವೇರಿ ನೀರಿನ ಹಂಚಿಕೆ ಬಗ್ಗೆ ಪಂಚಾಯಿತಿ ಮಂಡಲಿಯನ್ನು ನಾನು ನಿರೀಕ್ಷಣೆ ಮಾಡಿರಲಿಲ್ಲ. ನಾನು ನಿರೀಕ್ಷಣೆ ಮಾಡದೆ ಇರತಕ್ಕಂಥ ಭಾರಿ ದೊಡ್ಡ ಬಂಡೆ ನಮ್ಮ ತಲೆ ಮೇಲೆ ಇವತ್ತು ಬಂದೊದಗಿದೆ. ಇದಕ್ಕೆ ಕಾರಣ ಯಾರು ಏನು ಎಂದು ಹುಡುಕುವುದಕ್ಕಿಂತ ಹೆಚ್ಚಾಗಿ ಈ ಪಂಚಾಯಿತಿ ಮಂಡಲಿ ಏನು ರಚನೆಯಾಗಿದೆ ಈ ಪಂಚಾಯಿತಿ ಮಂಡಲಿಗೆ ನಮ್ಮ ಸಿದ್ಧತೆಗಳೇನು ಎನ್ನುವುದು ಬಹಳ ಪ್ರಮುಖವಾದಂಥಾದ್ದು. ಮಾನ್ಯ ಸಂಸದೀಯ ಸಚಿವರಿದ್ದಾರೆ. ಈ ಬಗ್ಗೆ ಇದುವರೆಗೆ ನಾವು ಏನು ಸಿದ್ಧತೆಗಳನ್ನು ಮಾಡಿ ಕೊಂಡಿದ್ದೇವೆ ಎನ್ನುವುದು ಒಂದು ಪ್ರಶ್ನೆ. ತಾವು ಏನು ಸದನದ ಸಮಿತಿಯನ್ನು ರಚನೆ ಮಾಡಿದಿರಿ, ಒಂದು ದಿನ ಕೂಡ ಆ ಸದನದ ಸಮಿತಿಯ ಸಭೆಯನ್ನು ಕರೆಯಲಿಲ್ಲ. ನಾನು ತಮಗೆ ಹೇಳುತ್ತಾ ಇದ್ದೇನೆ. ಎರಡು ಸಾರಿ ವಿರೋಧಪಕ್ಷದ ಮುಖಂಡರುಗಳ ಸಭೆ ಸೇರಿಸಿ ಮೇಲ್ಮನವಿಯನ್ನು ಹಾಕಿದ್ದೇವೆಂದು ಹೇಳಿದಿರಿ. ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಹಾಕಿರತಕ್ಕಂಥ ವಿಚಾರ ಗೊತ್ತು. ಆದರೆ ಆ ಮೇಲ್ಮನವಿ ಏನಾಯಿತು ಎನ್ನುವುದು ಬಹಳ ಗೌಣವಾಗಿ ಉಳಿದಿದೆ, ಬಹಳ ಕತ್ತಲಲ್ಲಿ ಉಳಿದಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಸ್ವಲ್ಪ ಬೆಳಕು ಚೆಲ್ಲಿದರೆ ಬಹುಶಃ ಇನ್ನು ಈ ವಿಚಾರವನ್ನು ಮುಂದುವರಿಸಬೇಕಾದ ಅವಶ್ಯಕತೆ ಬರುವುದಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ಈ ಕಾವೇರಿ ಪಂಚಾಯಿತಿ ಬಗ್ಗೆ ನಮ್ಮ ಪರವಾಗಿರತಕ್ಕಂಥ ವಾದದ ಬಗ್ಗೆ ನಾವು ಬಹುಶ: ಭಯಭೀತರಾಗ ಬೇಕಾದಂಥ ಅವಶ್ಯಕತೆಯಿಲ್ಲ. ಬಹುಶ: ನಮ್ಮ ಹಕ್ಕನ್ನು ಸಾಧನೆ ಮಾಡತಕ್ಕಂಥ ಗಳಿಸತಕ್ಕಂಥ ಎಲ್ಲ ಸಾಮರ್ಥ್ಯವಿದೆ, ಕಾನೂನಿನ ಸಾಮರ್ಥ್ಯವಿದೆ ಅಥವಾ ನೈತಿಕ ಸಾಮರ್ಥ್ಯ ಕೂಡ ನಮಗೆ ಇದೆ.

(ಸನ್ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ನಾನು ಏಕೆ ಹೇಳುತ್ತಿದ್ದೇನೆಂದರೆ, ಈಗಾಗಲೇ ಟ್ರಿಬ್ಯುನಲ್ ರಚನೆಯಾದುದರಿಂದ ಇಲ್ಲಿ ನಾವು ಏನು ಮಾತನಾಡುತ್ತೇವೆ ಅದು ಹೊರಗೆ ಬರುತ್ತದೆ. ತಮಗೆ ಗೊತ್ತಿದೆ, ಆ ಪಂಚಾಯಿತಿ ಅಧ್ಯಕ್ಷ ರಾಗಲಿ, ಪಂಚಾಯಿತಿಯ ಸದಸ್ಯರಾಗಲಿ ಅವರೂ ನಮ್ಮ ಹಾಗೆ ಮನುಷ್ಯರೆ. ಈ ಪಂಚಾಯಿತಿ ರಚನೆ ಯಿಂದ ಏನೂ ಕರ್ನಾಟಕದಲ್ಲಿ ಭಯಭೀತರಾಗಿದ್ದಾರೆ, ದುರ್ಬಲವಾದಂಥ ಕೇಸ್ ಇರಬಹುದು ಎನ್ನುವಂಥ ಭಾವನೆ ಪಂಚಾಯಿತಿದಾರರ ಮನಸ್ಸಿಗೆ ಹೋಗುವುದು ಬೇಡ. ಇದು ಒಂದು ಸೂಕ್ಷ್ಮದ ವಿಚಾರ. ಎರಡನೆಯದಾಗಿ, ನೀವು ಮೇಲ್ಮನವಿ ವಿಚಾರ ಏನಾಯಿತು ಎಂದು ಕೇಳಿದಿರಿ. ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ತೆಗೆದುಕೊಂಡು ಹೇಳುತ್ತಾ ಇದ್ದೇನೆ. ನಾವು ಸುಪ್ರೀಂಕೋರ್ಟಿನಲ್ಲಿ ರಿವ್ಯೂ ಪಿಟಿಷನ್ ಹಾಕಿದ್ದೇವೆ. ರಿಟ್ ಪಿಟಿಷನ್‌ನಲ್ಲಿ ಯಾರು ತೀರ್ಪು ಕೊಟ್ಟಿದ್ದಾರೆ ಅದೇ ಸನ್ಮಾನ್ಯ ನ್ಯಾಯಾಧೀಶರ ಮುಂದೆ ಇದು ಬರುತ್ತದೆ. ನಾಳೆ ೮ನೇ ತಾರೀಖಿನವರೆಗೆ ಸುಪ್ರೀಂಕೋರ್ಟ್ ರಜೆ ಇದೆ. ೯ನೇ ತಾರೀಖು ಸುಪ್ರೀಂಕೋರ್ಟ್ ರಿಓಪನ್ ಆಗುತ್ತದೆ. ಮೂವರು ಜಡ್ಜ್‌ಸ್ ಒಂದು ಕಡೆ ಸೇರದೆ ಇದು ಆಗುವುದಿಲ್ಲ. ರಿವ್ಯೂ ಪಿಟಿಷನ್ ಸ್ವೀಕರಿಸಬೇಕೇ ಬೇಡವೆ, ಸ್ವೀಕಾರ ಮಾಡಿದಮೇಲೆ ಯಾವ ರೀತಿ ಚರ್ಚೆ ಮಾಡಬೇಕು ಅಥವಾ ವಾದಕ್ಕೆ ಪುರಸ್ಕಾರ ಕೊಡಬೇಕು ಎಂಬ ವಿಚಾರ ಅವರು ಮೂರು ಜನ ಸೇರಿದ ಮೇಲೆ ಮಾತ್ರ ಬರಲಿಕ್ಕೆ ಸಾಧ್ಯವಾಗುತ್ತದೆ, ಸೋಮವಾರದ ಮೇಲೆಯೇ ಅದರ ಫಲಿತಾಂಶ ಗೊತ್ತಾಗುತ್ತದೆ ಅದನ್ನು ಸ್ವೀಕಾರ ಮಾಡುತ್ತಾರೋ ಅಥವಾ ತಿರಸ್ಕಾರ ಮಾಡುತ್ತಾರೊ ಅಥವಾ ನಮ್ಮ ಸ್ಟೇಟ್ ಹುಕುಂ ಏನು ಎನ್ನುವ ಸಮಾಚಾರ ನಮಗೆ ಗೊತ್ತಾಗುತ್ತದೆ. ಏತನ್ಮಧ್ಯೆ ರೈತರು ಕೂಡ ಒಂದು ರಿಟ್ ಪಿಟಿಷನ್ ಹಾಕಿದ್ದಾರೆ. ಸುಪ್ರೀಂಕೋರ್ಟ್ ವೆಕೇಷನ್ ಮುಗಿದ ಮೇಲೆ ೯ನೇ ತಾರೀಖು ಆದಮೇಲೆ ರೈತರ ರಿಟ್ ಪಿಟಿಷನ್ ಕೂಡ ಹಿಯರಿಂಗ್‌ಗೆ ಬರುತ್ತದೆ. ಇದು ಇರತಕ್ಕಂಥ ವಿಚಾರ ಸನ್ಮಾನ್ಯ ಸದಸ್ಯರು ಸಮಿತಿಯ ಬಗ್ಗೆ ಹೇಳಿದರು ಒಂದು ಉನ್ನತಮಟ್ಟದ ಶಾಸಕರ ಸಮಿತಿಯನ್ನು ಮಾಡಿದ್ದೇವೆ. ಬಹುಶ: ಈ ಸದನ ಏಳುವ ಮೊದಲು ಅಂದರೆ ೧೭ ಅಥವಾ ೧೮ನೇ ತಾರೀಖಿಗೆ ಉನ್ನತಮಟ್ಟದ ಶಾಸಕರ ಸಭೆಯನ್ನು ಸೇರಿಸತಕ್ಕಂಥ ಏರ್ಪಾಟಾಗಿದೆ ಆಗಲೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಇದಕ್ಕೆ ಸಮಯ ನಿಗದಿ ಮಾಡಿದ್ದಾರೆ ಅಲ್ಲಿ ಚರ್ಚೆ ಆಗುತ್ತದೆ. ಲೀಗಲ್ ಸೆಲ್ ಅಥವಾ ಟೆಕ್ನಿಕಲ್ ಸೆಲ್ ಏನು ಕಾನ್ಸ್ಟಿಟ್ಯೂಟ್ ಆಗಿದೆ ಅದು ಬೆಳವಣಿಗೆಯಾಗಿದೆ ಕಾರ್ಯಕ್ರಮ ಮಾಡಿದೆ. ಈ ಬಗ್ಗೆ ರಾತ್ರಿ ಹಗಲು ಚಿಂತನೆ ನಡೆದಿದೆ, ತಯಾರಿ ನಡೆದಿದೆ. ಈ ತಯಾರಿ ಸಿದ್ಧತೆ ಬಗ್ಗೆ ನಾವು ಯಾವುದೇ ರೀತಿಯಲ್ಲಿ ಒಂದು ಇಂಚೂ ಕೂಡ ಹಿಂದೆ ನೋಡಿಲ್ಲ, ಅದಕ್ಕೆ ಬೇಕಾದಂಥ ಎಲ್ಲ ಸಿದ್ಧತೆಯನ್ನು ತಾಂತ್ರಿಕ ದೃಷ್ಟಿಯಿಂದ ಕಾನೂನು ದೃಷ್ಟಿಯಿಂದ ಈ ಎರಡೂ ದೃಷ್ಟಿಯಿಂದ ನಾವು ಮಾಡಿದ್ದೇವೆ ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತರಲಿಕ್ಕೆ ನಾನು ಇಚ್ಛೆಪಡುತ್ತೇನೆ.

ಶ್ರೀ ಸಿ. ಭೈರೇಗೌಡ.—ಟರ್ಮ್ಸ್ ಆಫ್ ರೆಫರೆನ್ಸ್ ಇಸ್ಯೂ ಆಯಿತು ಎಂದು ಹೇಳಿದಿರಿ. ಅದು ಯಾವ ಮಟ್ಟದಲ್ಲಿದೆ ಎಂದು ಹೇಳುತ್ತೀರಾ ?

ಶ್ರೀ ಎಂ. ವೀರಪ್ಪಮೊಯಿಲಿ.—ಟರ್ಮ್, ಆಫ್ ರೆಫರೆನ್ಸ್ ಸಾಮಾನ್ಯವಾಗಿ ಎಲ್ಲಾ ಟ್ರಿಬ್ಯೂನಲ್‌ಗಳಲ್ಲೂ ಒಂದೇ ರೀತಿ ಇರುತ್ತದೆ. ಟ್ರಿಬ್ಯೂನಲ್ ಅಧ್ಯಕ್ಷರು, ಮುಂಬಯಿ ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶರು. ಅವರು ಈಗಾಗಲೇ ನಮಗೆ ಪತ್ರ ಬರೆದು ನಿಮ್ಮ ನಾಮಿನೀಸ್ ಯಾರು ಎಂದು ಕೇಳಿದ್ದಾರೆ. ನಾವು ಶ್ರೇಷ್ಠನ್ಯಾಯಾಧೀಶರಿಗೆ ಪತ್ರ ಒರೆದು ಅಡ್ವೋಕೇಟ್ ಜನರಲ್ ಮತ್ತು ನೀರಾವರಿ ಕಾರ್ಯದರ್ಶಿಗಳು ನಮ್ಮ ನಾಮಿನೀಸ್ ಎಂದು ತಿಳಿಸಿದ್ದೇವೆ. ಇದರ ಬಗ್ಗೆ ಸಂಪರ್ಕ ಬೆಳೆಸಿದ ಮೇಲೆ. ಟ್ರಿಬ್ಯೂನಲ್ ಸೇರಿದ ಮೇಲೆ ಟರ್ಮ್ಸ್ ಆಫ್ ರೆಫರೆನ್ಸ್ ಯಾವುದು ಇಸ್ಯೂ ಮಾಡಬೇಕೆಂಬುದನ್ನು ಚರ್ಚೆ ಮಾಡುತ್ತದೆ. ರವಿಬಿಯಾಸ್ ಟ್ರಿಬ್ಯೂನಲೂ ಕೂಡ ಇದೇ ರೀತಿ ಮಾಡಲಾಗಿದೆ ; ನರ್ಮದಾದಲ್ಲೂ ಇದೇ ಪರಂಪರೆಯನ್ನು ಬೆಳೆಸಿಕೊಂಡು ಬಂದಿದೆ ಆದ್ದರಿಂದ ಟರ್ಮ್ಸ್ ಆಫ್ ರೆಫರೆನ್ಸ್ ಇನ್ನೂ ಆಗಿಲ್ಲ. ಸೆಕ್ಷನ್ 3(1)ರ ಪ್ರಕಾರ ತಮಿಳು ನಾಡಿನವರು ಕೇಂದ್ರಸರ್ಕಾರಕ್ಕೆ ಈ ಟ್ರಿಬ್ಯೂನಲ್‌ಗೆ ಈ ಕೇಸನ್ನು ಕೊಡಬೇಕೆಂದು ಅರ್ಜಿ ಹಾಕಿದ್ದಾರೆ. ಆ ಅರ್ಜಿಯನ್ನು ಅಳವಡಿಸಿಕೊಂಡು ಕೇಂದ್ರ ಸರ್ಕಾರದವರು ಟ್ರಿಬ್ಯೂನಲ್‌ಗೆ ಬರೆದಿದ್ದಾರೆ. That connot be construed as terms of reference. The Terms of Reference will be decided by the Tribunal itself. The Tribunal has not met yet. After the Tribnnal meets, the decision with regard to the Terms of Reference will be taken by the Tribunal.

MR. SPEAKER.—The Tribunal in consultation with the aggrieved parties' who are the parties before the Tribunal, will draw the terms of Reference. There is going to be elaborate discussion on the Terms of Reference itself. Each Government will be asked to nominate two Nominees and they interact with their Nominees and decide.

ಶ್ರೀ ವಾಟಾಳ್ ನಾಗರಾಜ್—ಮಾನ್ಯ ಅಧ್ಯಕ್ಷರೆ, ಅವರು ಎಲ್ಲಾ ವ್ಯವಸ್ಥೆ ಮಾಡುತ್ತಿದ್ದೇವೆಂದು ಹೇಳಿದರು. ಹಿಂದಿನ ಸಭೆಯಲ್ಲಿ ಸಂಪನ್ಮೂಲದ ಬಗ್ಗೆ ಸಮಿತಿ ಮಾಡುತ್ತೇವೆಂದು ಹೇಳಿದ್ದರು. ಇದರ ಬಗ್ಗೆ ಸಮಿತಿ ಮಾಡಿದ್ದಾರಾ ಎಂಬುದು ಗೊತ್ತಾಗಲಿಲ್ಲ. ಹಿಂದೆ ನ್ಯಾಯಾಂಗದ ಬಗ್ಗೆ ಸಲಹಾ ಸಮಿತಿ ಮಾಡುತ್ತೇವೆಂದು ಹೇಳಿದ್ದರು, ಆ ಸಮಿತಿಯ ಹಣೇ ಬರಹ ಏನಾಯಿತು ?

ಶ್ರೀ ಎಂ. ವೀರಪ್ಪಮೊಯಿಲಿ.—ದಯವಿಟ್ಟು ಕ್ಷಮಿಸಿ, ನಾನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ನಾವು ತಾಂತ್ರಿಕ ಘಟಕ ಮಾಡಿದ್ದೇವೆ. ಈಗಾಗಲೆ ಕಾವೇರಿ ಬಗ್ಗೆ ಟೆಕ್ನಿಕಲ್ ಸೆಲ್ ಕಾನ್ಸ್‌ಟಿಟ್ಯೂಟ್ ಮಾಡಿದ್ದೇವೆ ; ಲೀಗಲ್ ಸೆಲ್ ಕೂಡ ಮಾಡಿದ್ದೇವೆ. ಲೀಗಲ್ ಸೆಲ್ ಮತ್ತು ಟೆಕ್ನಿಕಲ್ ಸೆಲ್ ಸಭೆ ಕೂಡ ಬರುವ ವಾರ ಸೇರುವುದರಲ್ಲಿದೆ. ಈ ಎರಡು ಸೆಲ್‌ಗಳು ಸಭೆ ಸೇರಿ ಚರ್ಚಿಸಿದ ವಿಚಾರಗಳನ್ನು ಶಾಸಕರುಗಳ ಉನ್ನತಮಟ್ಟದ ಸಮಿತಿಯ ಮುಂದೆ ಇಡುತ್ತೇವೆ. ಆದ್ದರಿಂದ ಈ ಬಗ್ಗೆ ತಯಾರಿ ಮಟ್ಟಿಗೆ ನಾವು ಹಿಂದೆ ನೋಡಿಲ್ಲ, ಎಲ್ಲರೀತಿಯ ತಯಾರಿಯನ್ನು ಕೂಡ ನಡೆಸುತ್ತಿದ್ದೇವೆ. ಮಾನ್ಯ ಸಚಿವರು ಉತ್ತರ ಕೊಡುವಾಗ ಲೀಗಲ್ ಸೆಲ್ ಮತ್ತು ಟೆಕ್ನಿಕಲ್ ಸೆಲ್‌ನಲ್ಲಿ ಯಾರು ಯಾರಿದ್ದಾರೆ ಎನ್ನುವುದನ್ನು ತಿಳಿಸುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಇದುವರೆಗೆ ನಮಗೆ ಗೊತ್ತಾಗಿರಲಿಲ್ಲ. ಕಾವೇರಿ ವಿಚಾರ ಬಗ್ಗೆ ಇಲ್ಲಿ ಚರ್ಚೆ ನಡೆದಾಗ ಸರ್ಕಾರದವರು ಒಪ್ಪಿಕೊಂಡಿದ್ದರು. ಅಗೋಚರವಾಗಿ ಏನು ನಡೆದಿದೆ ಎನ್ನುವುದು ನಮಗೆ ಗೊತ್ತಿಲ್ಲ. ಈಗ ಹೇಳುತ್ತೇವೆಂದು ಹೇಳಿದ್ದಾರೆ. ಮತ್ತೆ ನಮ್ಮಲ್ಲಿ ನೀರಾವರಿ ಸಲಹಾ ಮಂಡಲಿ ಇತ್ತು. ಅದರಲ್ಲಿ ಹಿಂದೆ ಬಹಳ ಒಳ್ಳೆಯ ತಜ್ಞರು ಇದ್ದರು. ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಇದ್ದರು. ಅವರು ಒಳ್ಳೆಯ ಸಲಹೆಗಳನ್ನು ಕೊಟ್ಟರು, ರಾಜ್ಯಕ್ಕೆ ಅಮೂಲ್ಯವಾದ ಸೇವೆಯನ್ನು ಮಾಡಿದರು. ಉತ್ತಮವಾದಂಥ ಆದರ್ಶವಾದಂಥ ಲೋಕೋಪಯೋಗಿ ಸಚಿವರಾಗಿ ಕೆಲಸ ಮಾಡಿದರು ಅದು ತಮಗೂ ಗೊತ್ತಿದೆ, ನಾಡಿಗೂ ಗೊತ್ತಿದೆ ನಂತರ ಬೇರೆಯವರು ಬಂದರು. ಇತ್ತೀಚೆಗೆ ಮಂಡಲಿ ರಚನೆಯಾಗಿಲ್ಲ. ನೀವು ಯಾರನ್ನಾದರೂ ಮಾಡಿ. ಸಲಹೆ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ, ಇವತ್ತಿನ ಪರಿಸ್ಥಿತಿಯಲ್ಲಿ ಬಹಳ ಜಾಗ್ರತೆಯಿಂದ ನೀರಾವರಿ ಸಲಹಾ ಮಂಡಲಿಯನ್ನು ಮಾಡಬೇಕಾಗಿದೆ. ಮಾನ್ಯ ಲೋಕೋಪಯೋಗಿ ಸಚಿವರು ತಡಮಾಡದೇ ಇದರ ಬಗ್ಗೆ ನಿರ್ಧಾರ

ಕೈಗೊಳ್ಳಬೇಕು. ಒಳ್ಳೆಯ ತಜ್ಞರನ್ನು ಹಾಕಿ, ಜವಾಬ್ದಾರಿಯಿಂದ ದಕ್ಷತೆಯಿಂದ ಕೆಲಸ ಮಾಡತಕ್ಕವರನ್ನು ಆ ಮಂಡಲಿಯಲ್ಲಿ ಕೂಡಲೇ ಹಾಕತಕ್ಕ ಕ್ರಮ ಕೈಗೊಳ್ಳಬೇಕು.

ಸ್ವಾಮಿ, ರಾಜ್ಯದ ರಸ್ತೆಗಳ ಬಗ್ಗೆ ಹೇಳುವುದಾದರೆ. ಬಹುಶಃ ಬೇರೆ ಯಾವ ರಾಜ್ಯದಲ್ಲೂ ಕೂಡ ಕರ್ನಾಟಕ ರಾಜ್ಯದಲ್ಲಿರುವಂಥ ಅವಹೇಳನಕರವಾದಂಥ ರಸ್ತೆಗಳು ಇಲ್ಲ. ನಾನು ಗಡಿ ಪ್ರದೇಶದಿಂದ ಬಂದಿರತಕ್ಕವನು. ಪಕ್ಕದಲ್ಲಿ ತಾಳವಾಡಿ ಇದೆ. ಅದು ಕರ್ನಾಟಕಕ್ಕೆ ಸೇರಬೇಕು. ಈಗ ತಮಿಳು ನಾಡಿಗೆ ಸೇರಿರತಕ್ಕಂಥಾದ್ದು. ಅದು ಕರ್ನಾಟಕ ಗಡಿಯಲ್ಲಿದೆ. ನಮಗೂ ಅದಕ್ಕೂ ಬಹಳ ಹತ್ತಿರ. ಅದು ನಮಗೆ ಒಂದೇ ಒಂದು ಕಿಲೋಮೀಟರ್ ದೂರದಲ್ಲಿದೆ. ಅನೇಕ ಸಾರಿ ಆ ಪ್ರದೇಶಕ್ಕೆ ಹೋಗ ಬೇಕಾದ ಸಂದರ್ಭ ಬಂದಾಗ ಹೋಗಿದ್ದೇನೆ. ನಾನು ಮಾನ್ಯ ಲೋಕೋಪಯೋಗಿ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಅಲ್ಲಿ ಪ್ರತಿ ಹಳ್ಳಿಗಳಿಗೂ ಟಾರ್ ರಸ್ತೆ ಮಾಡಿಸಿದ್ದಾರೆ. ನಮ್ಮ ಸೌಭಾಗ್ಯ ಏನೆಂದರೆ, ನಮ್ಮ ರಸ್ತೆಗಳೆಲ್ಲಾ ಒಂದು ತರಹ ಸಂಚಾರಿ ಹೆರಿಗೆ ಆಸ್ಪತ್ರೆಗಳಾಗಿವೆ. ಬಸ್ಸಿನಲ್ಲಿ ಗರ್ಭವತಿಯರಾಗಿರ ತಕ್ಕ ಹೆಣ್ಣು ಮಕ್ಕಳು ಪ್ರಯಾಣ ಹೊರಟರೆ, ಹೆರಿಗೆಗೆ ಆಸ್ಪತ್ರೆಗೆ ಹೋಗಬೇಕಾಗಿಲ್ಲ. ನಿಮ್ಮ ರಸ್ತೆಗಳೇ ಸಾಕು. ಈ ರಾಜ್ಯದ ಮೂಲೆ ಮೂಲೆಯಲ್ಲಿರತಕ್ಕಂಥ ರಸ್ತೆಗಳೆಲ್ಲ ಸಂಚಾರಿ ಹೆರಿಗೆ ಆಸ್ಪತ್ರೆಗಳಾಗಿವೆ.

ಇದರ ಬಗ್ಗೆ ನಿಜವಾಗಿಯೂ ತಮಗೆ ಹೇಳುತ್ತೇನೆ, ತಾವು ಟಿ.ನರಸೀಪುರದಿಂದ ಚಾಮರಾಜ ನಗರಕ್ಕೆ ಹೋಗತಕ್ಕ ರಸ್ತೆಯನ್ನು ನೋಡಬೇಕು. ಟಿ.ನರಸೀಪುರದಿಂದ ಕೊಳ್ಳೇಗಾಲಕ್ಕೆ ಹೋಗತಕ್ಕ ರಸ್ತೆಯನ್ನು ನೋಡಬೇಕು. ಈ ಎರಡೂ ರಸ್ತೆಗಳನ್ನು ನೋಡಿದರೆ ಈ ರಾಜ್ಯದ ಪರಿಸ್ಥಿತಿ ತಮಗೆ ಗೊತ್ತಾಗುತ್ತದೆ. ಅತ್ಯಂತ ಹೀನಾಯವಾದ ಪರಿಸ್ಥಿತಿ ಇದೆ, ಇನ್ನು ವರುಣ ನಾಲೆ ಬೇಕು ಎಂದು. ಒಂದು ದೊಡ್ಡ ತಪಸ್ಸು ಈ ರಾಜ್ಯದಲ್ಲಿ ನಡೆದು ಹೋಯಿತು. ಮಾನ್ಯ ದೇವರಾಜ್ ಅರಸರ ಒಂದು ತಪಸ್ಸಿನ ಫಲದಿಂದ ವರುಣ ನಾಲೆ ಆಯಿತು. ಅದರ ಬಗ್ಗೆ ಪರ ವಿರೋಧ ಆಯಿತು. ಕೊನೆಗೆ ಎಲ್ಲರೂ ಹೊಂದಾಣಿಕೆಯಾಗಿ, ಪಕ್ಕದ ರಾಜ್ಯದವರು ಸ್ನೇಹಿತರಾಗಿ ಒಂದು ಹೊಸ ರೂಪವನ್ನು ಕೊಟ್ಟರು. ಈ ವರುಣ ನಾಲೆಯ ಕೆಲಸ ಸಮಗ್ರವಾಗಿ ಇದೇ ಪರಿಸ್ಥಿತಿಯಲ್ಲಿ, ನಿಧಾನವಾಗಿ ಇದೇ ಗತಿಯಲ್ಲಿ ಹೋದರೆ, ಇನ್ನು ೫೦ ವರ್ಷ ಆದರೂ ವರುಣ ನಾಲೆ ಬರುವ ಪರಿಸ್ಥಿತಿ ಇಲ್ಲ. ಆದ್ದರಿಂದ, ಸರ್ಕಾರ ಇವೊತ್ತು ಪರಿಣಾಮಕಾರಿಯಾಗಿ ಕ್ರಮವನ್ನು ಕೈಗೊಂಡು ವರುಣ ನಾಲೆಯ ಬಗ್ಗೆ ತೀವ್ರ ಗಮನವನ್ನು ಹರಿಸಬೇಕು. ಇನ್ನು ಕಾವೇರಿ, ಕೃಷ್ಣ ನಿಜವಾಗಿಯೂ ಕನ್ನಡಿಗರಿಗೆ ಎರಡು ಕಣ್ಣುಗಳು ಇದ್ದ ಹಾಗೆ, ಈ ಬಗ್ಗೆ ಇನ್ನು ಎರಡು ವರ್ಷ ಆಗುತ್ತದೆ. ಬಚಾವತ್ ಅವಾರ್ಡ್ ಇದೆ, ಎರಡು ವರ್ಷಗಳ ವರೆಗೆ ನಾವು ಕಾಯೋಣ ಆಂಧ್ರಪ್ರದೇಶದವರು ತೆಲುಗುಗಂಗಾ ಯೋಜನೆ ಮಾತಿ ಎಚ್ಚರಿಕೆ ಕೊಟ್ಟಿದ್ದಾರೆ. ಅವರು ಕುಡಿಯುವ ನೀರೆ ಅಲ್ಲ, ಇವೊತ್ತು ವ್ಯವಸಾಯಕ್ಕೆ ನೀರನ್ನು ಉಪಯೋಗಿಸ ಬೇಕೆಂದು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆ, ಆ ಅಪಾಯ ಮುಂದೆ ಒದಗುತ್ತದೆ. ಈ ರೀತಿ ಮುಂದೆ ಅಪಾಯ ಆಗದಂತೆ ಕಾವೇರಿ ಮತ್ತು ಕೃಷ್ಣಾ ಯೋಜನೆಗಳ ಬಗ್ಗೆ ಸಮಗ್ರವಾದ ಚಿಂತನೆ ಯನ್ನು ಕೈಗೊಳ್ಳಬೇಕು. ಇದಕ್ಕೆ ನಮ್ಮ ಸರ್ಕಾರದ ಈಗಿರುವ ಸಂಪನ್ಮೂಲ ಸಾಕಾಗುತ್ತದೆಂದು ನಾನು ತಿಳಿದುಕೊಂಡಿಲ್ಲ. ಇವೊತ್ತು ನಮ್ಮ ಹಣಕಾಸು ಸಚಿವರು ಹೇಳುತ್ತಿದ್ದಾರೆ, ಈ ಹಣಕಾಸು ಆಯೋಗ ತಾರತಮ್ಯ ಮಾಡುತ್ತಿದೆ, ಇವೊತ್ತು ಕೇಂದ್ರದ ಆರ್ಥಿಕ ನೆರವು ಇಲ್ಲದೆ ನಮ್ಮ ರಾಜ್ಯಕ್ಕೆ ಅನ್ಯಾಯವಾಗಿದೆ. ಎಂದು ಹೇಳುತ್ತಿದ್ದಾರೆ. ಇದನ್ನು ನೋಡಿದ್ದರೆ ಇವತ್ತಿನ ದಿವಸ ನಮ್ಮ ಅನೇಕ ಯೋಜನೆಗಳಿಗೆ ಕೇಂದ್ರದಿಂದ ಅನೇಕ ವಿಧವಾದ ಸಹಾಯ, ಹಣ ಬೇಕಾಗಿದೆ. ಇವತ್ತಿನ ಪರಿಸ್ಥಿತಿಯನ್ನು ನೋಡಿದರೆ, ನಮ್ಮಲ್ಲಿ ಕೇಂದ್ರದ ಮೇಲೆ ಒತ್ತಾಯ ತಂದು, ನಮ್ಮ ರಾಜ್ಯಕ್ಕೆ ಅನುಕೂಲ ಪಡೆಯತಕ್ಕಂಥ ಶಕ್ತಿ ಕಡಿಮೆಯಾಗಿದೆ. ನನಗನ್ನಿಸುತ್ತದೆ, ಸರಿಯೋ, ತಪ್ಪೋ, ಯಾವುದೋ ದೃಷ್ಟಿಯಲ್ಲಿ ಕೇಂದ್ರದಲ್ಲಿ ಸಮಗ್ರವಾಗಿ ನಮ್ಮ ಶಕ್ತಿ ಕುಂದುತ್ತಾ ಬರುತ್ತಿದೆ. ಕೇಂದ್ರ ಸರ್ಕಾರವೂ ಕೂಡ ನಮ್ಮನ್ನು ಮಲತಾಯಿ ಧೋರಣೆಯಿಂದ ನೋಡುತ್ತಿದೆ, ಇವೊತ್ತು ರಾಮಕೃಷ್ಣ ಹೆಗಡೆಯವರು, ರಾಜೀನಾಮೆ ಕೊಟ್ಟರೋ ಬಿಟ್ಟರೋ ಆ ಪ್ರಶ್ನೆಗೆ ನಾನು ಹೋಗುವುದಿಲ್ಲ. ಅವರು ಕರ್ನಾಟಕದಿಂದ ಹೋಗಿ ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದರು. ಅವರು ರಾಜೀನಾಮೆ ಏತಕ್ಕೆ ಕೊಟ್ಟರು ಎನ್ನುವುದರ ಬಗ್ಗೆ ನಾನು ಮಾತನಾಡಲಿಕ್ಕೆ ಹೋಗುವುದಿಲ್ಲ. ಇದೇ ರೀತಿ ಕೇಂದ್ರ ದಲ್ಲಿ ಕರ್ನಾಟಕದವರ ಒಂದು ಶಕ್ತಿ ಕುಂದುತ್ತಾ ಇದೆ. ಈ ಒಂದು ಶಕ್ತಿಯನ್ನು ಸರಿಪಡಿಸಿ, ನಮ್ಮ ಹಣವನ್ನು ಕೊಡಿಸತಕ್ಕವರು ಯಾರು, ಇವತ್ತು ಲೋಕೋಪಯೋಗಿ ಇಲಾಖೆ ಇದೆ. ನಮಗೆ ಕೇಂದ್ರ ಸಂಬಂಧವಿಲ್ಲದೇ ಇದ್ದರೂ. ಇವೊತ್ತು ನಮ್ಮ ರಾಜ್ಯದ ರೈಲ್ವೆ ಮಾರ್ಗಗಳ ಪರಿಸ್ಥಿತಿ ಏನಾಗಿದೆ ಬೆಂಗಳೂರು ಮೈಸೂರು ನಡುವಿನ ರೈಲು ಮಾರ್ಗವನ್ನು ಬ್ರಾಡ್‌ಗೇಜ್ ಮಾಡಬೇಕೆಂದು ಹೇಳಿ ಸುಮಾರು ೧೫-೧೬ ವರ್ಷ ಆಯಿತು. ಇದುವರೆಗೆ ಇದಕ್ಕಾಗಿ ಬಂದಿರತಕ್ಕ ಹಣ ಎಷ್ಟು ? ನನಗನಿಸುತ್ತದೆ ಇದಕ್ಕಾಗಿ ಬಂದಿರುವ ಹಣ ೫ ಕೋಟಿ ರೂಪಾಯಿ ದಾಟಿಲ್ಲ. ನಮ್ಮ ರಾಜ್ಯಕ್ಕೆ ಕೇಂದ್ರ,

ಸರ್ಕಾರದಿಂದ ಬರತಕ್ಕ ಸಹಾಯದ ಬಗ್ಗೆ ಹೇಳುವುದಾದರೆ, ಸಮಗ್ರವಾಗಿ ಎಲ್ಲ ದೃಷ್ಟಿಯಿಂದಲೂ ಅವಲೋಕಿಸಿದರೆ ಕೇಂದ್ರ ಸರ್ಕಾರ ಕರ್ನಾಟಕವನ್ನು ಮಲತಾಯಿ ಧೋರಣೆಯಿಂದ ನೋಡುತ್ತಿದೆ ಎನ್ನುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದ್ದರಿಂದ ತಾವು ಕೇಂದ್ರಕ್ಕೆ ಒಂದು ನಿಯೋಗವನ್ನು ಕರೆದುಕೊಂಡು ಹೋಗಿ, ನಾವೆಲ್ಲಾ ಬರುವುದಕ್ಕೆ ತಯಾರಿದ್ದೇವೆ. ಕೇಂದ್ರದಲ್ಲಿ ರಾಷ್ಟ್ರೀಯರಂಗ ಸರ್ಕಾರ ಇದೆ. ಜನತಾದಳದವರ ಮೇಲೆ ಬಹಳ ಪ್ರಭಾವ ಇದೆ. ಕರ್ನಾಟಕ ಜನತಾದಳದವರು ಪಾಪ ಮಾಡಿದ್ದಾರೆ ಅಂದರೆ, ಪುಣ್ಯ ಮಾಡಲಿಕ್ಕೆ ನಿಮಗೆ ಒಂದು ಅವಕಾಶ ಇದೆ. ತಾವು ಹೋಗಿ ಕೇಂದ್ರದಲ್ಲಿ ಕುಳಿತು, ಒತ್ತಾಯಮಾಡಿ ಹೆಚ್ಚಿನ ಹಣವನ್ನು ನಮ್ಮ ರಾಜ್ಯಕ್ಕೆ ನಮ್ಮ ನಾಡಿಗೆ ಪಡೆಯಲಿಕ್ಕೆ ಹೆಚ್ಚಿನ ಸೌಲಭ್ಯ, ಸೌಕರ್ಯ ಇದೆ. ಆದರಿಂದ ತಾವು ವಂಚಿತರಾಗಬಾರದು. ಎಂದು ತಮ್ಮ ಮುಖಾಂತರವಾಗಿ, ನಾನು ಅವರಿಗೆ ಪ್ರಾರ್ಥನೆ ಮಾಡುತ್ತೇನೆ ನಾನು ಯಾವುದೇ ಪಕ್ಷದ ಹಿತವಾಗಿ ಮಾತನಾಡುತ್ತಿಲ್ಲ. ನಾನು ಈ ರಾಜ್ಯದ ಹಿತವನ್ನು ಬಯಸಿ ಮಾತನಾಡುತ್ತಿದ್ದೇನೆ. ಕೇಂದ್ರದಿಂದ ರಾಜ್ಯಕ್ಕೆ ಹೆಚ್ಚಿನ ಹಣ ಬೇಕಾಗುತ್ತದೆ. ತಾವು ಎಷ್ಟೇ ಉತ್ಸಾಹದಿಂದ ನೀರಾವರಿ ಯೋಜನೆಗಳಿಗೆ ೧೩೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದರೆ, ಅಷ್ಟು ಹಣ ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಹಾಕಿದ ಹಾಗೆ ಆಗುತ್ತದೆ, ಇದು ವೇದಿಕೆಯ ಮೇಲೆ ಮಾತನಾಡಲಿಕ್ಕೆ ಚೆನ್ನಾಗಿರಬಹುದು. ಈ ೧೩೦ ಕೋಟಿ ರೂಪಾಯಿಗಳಲ್ಲಿ ನೀರಾವರಿ ಯೋಜನೆಗಳನ್ನು ಮಾಡಲಿಕ್ಕೆ ಖಂಡಿತ ಸಾಧ್ಯವಿಲ್ಲ. ಆದ್ದರಿಂದ, ತಾವು ಪ್ರಾಮಾಣಿಕವಾಗಿ ಕೇಂದ್ರದಿಂದ ಬರತಕ್ಕ ಎಲ್ಲಾ ಸಂಪನ್ಮೂಲಗಳನ್ನು ಬಳಸಿಕೊಂಡು ಸೂಕ್ತ ವ್ಯವಸ್ಥೆ ಮಾಡಬೇಕಾದ್ದು ತಮ್ಮ ಕರ್ತವ್ಯ, ತಮ್ಮಲ್ಲಿ ನಾನು ಇದರ ಬಗ್ಗೆ ಕಳಕಳಿಯಿಂದ ಮನವಿ ಮಾಡುತ್ತೇನೆ. ಇನ್ನು ಕಬಿನಿ ಎರಡನೆಯ ಹಂತ...

ಶ್ರೀ ಎಂ. ಪಿ. ವೆಂಕಟೇಶ್.—ಅಧ್ಯಕ್ಷರೆ, ನಾನು ವಾಟಾಳ್ ನಾಗರಾಜ್ ಅವರಿಗೆ ಹೇಳುತ್ತೇನೆ. ಚಾಮರಾಜನಗರ ಬಹಳ ದೂರ ಇದೆ. ಮೊದಲು ತಾರಕ ಏತನೀರಾವರಿ ಯೋಜನೆ ಆಗಲಿ ಎನ್ನುವ ಮಾತನ್ನು ಅವರು ಹೇಳುವುದಿಲ್ಲ. ನಾನು ಇಷ್ಟು ಹೊತ್ತು ಬಹಳ ವಿಶ್ವಾಸದಿಂದ ಹೇಳಿದೆ. ಮೊದಲು ತಾರಕ ಏತನೀರಾವರಿ ಯೋಜನೆಯನ್ನು ಮಾಡಿಬಿಟ್ಟು ಆಮೇಲೆ ಕಬಿನಿ ಎರಡನೆಯ ಹಂತ ಮಾಡಿ ಎಂದು ನಾನು ಹೇಳಿದೆ, ಅದನ್ನು ಅವರು ಹೇಳುವುದಕ್ಕೆ ತಯಾರಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾನು ತಾರಕ ಏತನೀರಾವರಿ ಯೋಜನೆಗೆ ಎಂದೂ ವಿರೋಧ ಮಾಡಲಿಲ್ಲ. ಅದರಲ್ಲೂ ಮಾನ್ಯ ವೆಂಕಟೇಶ್ ಅವರ ಬಗ್ಗೆ ನಾನು ವಿರೋಧ ಮಾಡುವುದಿಲ್ಲ. ಅಧ್ಯಕ್ಷರೆ, ಅದು ತಮಗೆ ಗೊತ್ತಿದೆ. ತಾರಕ ಯೋಜನೆಯನ್ನು ಮಾಡಲಿ, ಮಾನ್ಯ ಸಚಿವರು ತಾರಕ ಯೋಜನೆ ಬಗ್ಗೆ ಪ್ರಥಮ ಪ್ರಾಶಸ್ತ್ಯ ಕೊಟ್ಟು ಮಾಡಲಿ. ಈಗ ಎರಡೂ ಯೋಜನೆಗಳು ಆಗಲಿ ಇದು ಏನಾಗಿದೆ ಅಂದರೆ, ಗಂಗಾನದಿಯನ್ನು ತಂದು ಕಾವೇರಿಗೆ ಕೂಡಿಸಿದಂತೆ ಆಗುತ್ತದೆ. ಆದರೂ ಚಿಂತೆ ಇಲ್ಲ, ತಾವು ಮಾಡುವುದಾದರೆ, ನಾನು ಬಹಳ ಸಂತೋಷಪಡುತ್ತೇನೆ. ತಾರಕ ಯೋಜನೆಯನ್ನು ಮಾಡಬೇಕೆಂಬ ಬೇಡಿಕೆ ಸಹ ಬಹಳ ದಿವಸದಿಂದ ಇದೆ. ಅದು ಜನಗಳಿಗೆ ಅತ್ಯಂತ ಪ್ರಾಮುಖ್ಯವಾಗಿ ಬೇಕಾಗಿದೆ. ಅದು ಬರಡು ಆಗತಕ್ಕ ಭೂಮಿ ಆಗಬಾರದು ಅಲ್ಲಿ ಹುಟ್ಟಿ ಕಬಿನಿ ನಮಗೆ ಬರುತ್ತದೆ. ಆದರೆ ಅವರಿಗೆ ಕಬಿನಿ ನೀರು ಇಲ್ಲವೆ ತಾರಕ ಆಗಬಾರದು ಎಂದು ಹೇಳಿದರೆ ಅದನ್ನು ನಾನು ಒಪ್ಪುವುದಿಲ್ಲ. ತಾರಕ ಬಗ್ಗೆ ತಾವು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದರೆ, ಕಬಿನಿ ಎರಡನೆಯ ಹಂತ ಏನಿದೆ ಇದು ಪ್ರಾಮಾಣಿಕವಾಗಿ ಆಗಲೇಬೇಕು, ಏಕೆಂದರೆ, ಈ ಯೋಜನೆ ರೆಡಿಯಾಗಿದೆ. ನೀವೆಲ್ಲಾ ವ್ಯವಸ್ಥೆ ಮಾಡಿದ್ದೀರಿ. ಇದರ ಬಗ್ಗೆ ಒಂದು ಶಿಲಾಶಾಸನ ಆಯಿತು. ಹಿಂದಿನ ಮುಖ್ಯಮಂತ್ರಿಗಳು ಶಿಲಾಶಾಸನ ಮಾಡಿ ಇದನ್ನು ಪ್ರಾರಂಭ ಮಾಡಿ ಬಂದರು, ಆದರೆ ಯೋಜನೆ ಹಾಗೇ ಕುಳಿತಿದೆ. ಆದ್ದರಿಂದ ದಯಮಾಡಿ ಕಬಿನಿ ಎರಡನೆಯ ಹಂತದ ಯೋಜನೆಯನ್ನು ತೆಗೆದುಕೊಂಡು ಆದಷ್ಟು ಕೂಡಲೇ ತಾವು ಮಾಡಬೇಕು. ಮೊದಲು ಕಬಿನಿ ಎರಡನೆಯ ಹಂತ, ಎರಡನೆಯದು ತಾರಕ ಯೋಜನೆ ಇದು ಬಹಳ ಪ್ರಾಮುಖ್ಯವಾದುದು. ಅತ್ಯಂತ ಜಾಗರೂಕತೆಯಿಂದ ಈ ಕೆಲಸ ಆಗಬೇಕಾಗಿದೆ. ಆದ್ದರಿಂದ, ಮಾನ್ಯ ಸಚಿವರಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ.

ಇನ್ನು ಕೊನೆಯದಾಗಿ ಹೇಳುವುದಾದರೆ, ಗಡಿ ಪ್ರದೇಶಗಳ ಅಭಿವೃದ್ಧಿಯ ಬಗ್ಗೆ ನಿಮ್ಮ ಸರ್ಕಾರ ಒಂದು ವಿಶೇಷ ಗಮನವನ್ನು ಹರಿಸಿದೆ. ಅದಕ್ಕಾಗಿ ನಾನು ಸರ್ಕಾರಕ್ಕೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಗಡಿ ಪ್ರದೇಶಗಳ ಅಭಿವೃದ್ಧಿಗೋಸ್ಕರ ೫ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ನನ್ನ ಲೆಕ್ಕದಲ್ಲಿ ಹೇಳುವುದಾದರೆ ಸುಮಾರು ೪೫ ಗಡಿ ಪ್ರದೇಶಗಳು ಬರುತ್ತವೆ. ಈ ೪೫ ಗಡಿ ಪ್ರದೇಶಗಳ ಒಟ್ಟು ಅಭಿವೃದ್ಧಿ ಕಾರ್ಯಕ್ಕಾಗಿ ೫ ಕೋಟಿ ರೂಪಾಯಿಗಳನ್ನು ಏನು ಇಟ್ಟಿದೆ ಇದು ಏನೇನೂ ಸಾಲುವುದಿಲ್ಲ. ಕನಿಷ್ಟ ೫೦ ಕೋಟಿ ರೂಪಾಯಿಗಳನ್ನಾದರೂ ಗಡಿ ಪ್ರದೇಶಗಳ ಬೆಳವಣಿಗೆಗಾಗಿ ಇಡಬೇಕು. ಇವತ್ತು ತಮಗೆ ಹೇಳುತ್ತೇನೆ, ಎಲ್ಲಕ್ಕಿಂತ ಅತ್ಯಂತ ತೀವ್ರತರವಾಗಿ, ಕಟ್ಟಕಡೆಯದಾಗಿ,

ಬೇಜವಾಬ್ದಾರಿಯಿಂದ ನೋಡಿಕೊಂಡಿರತಕ್ಕ ನಮ್ಮ ಚಾಮರಾಜನಗರ ತಾಲ್ಲೂಕು ಏನಿದೆ ಇದು ಬಹಳ ಹಿಂದುಳಿದಿರತಕ್ಕ ತಾಲ್ಲೂಕು. ಈ ತಾಲ್ಲೂಕು ಪ್ರತ್ಯೇಕ ಜಿಲ್ಲೆಯ ಪ್ರಾತಿನಿಧ್ಯವನ್ನು ಪಡೆಯತಕ್ಕಂಥ ಸಂದರ್ಭ ಇದೆ. ಏಕೆಂದರೆ ಜಿಲ್ಲಾ ಪುನರ್ ವಿಂಗಡಣಾ ಸಮಿತಿಯವರೂ ಕೂಡ ಈ ಚಾಮರಾಜ ನಗರವನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕೆಂದು ಶಿಫಾರಸು ಮಾಡಿದ್ದಾರೆ. ಚಾಮರಾಜ ನಗರ ಮೀಸಲು ಕ್ಷೇತ್ರವಾದ ಸಂತೆ ಮರಳ್ಳಿಗೆ ಹೋಗುವ ರಸ್ತೆಯನ್ನು ತಾವು ನೋಡಬೇಕು. ತಾವು ಯಾವಾಗಲಾದರೂ ಒಮ್ಮೆ ಮಹದೇಶ್ವರ ಬೆಟ್ಟಕ್ಕೆ ಹೋಗುವಾಗ ಬಿಳಿಗಿರಿ ರಂಗನ ಬೆಟ್ಟಕ್ಕೆ ತಿರುಗಿದರೆ...

ಶ್ರೀ ಮಲ್ಲನಗೌಡ ಎಸ್. ಪಾಟೀಲ್.— ನೀವು ಬೆಳಗಾಂ ವಿಚಾರವನ್ನು ಹೇಳುತ್ತೀರೆಂದು ನಾನು ತಿಳಿದಿದ್ದೆ...

ಶ್ರೀ ವಾಟಾಳ್ ನಾಗರಾಜ್.— ನಾನು ಬೆಳಗಾಂ ವಿಚಾರಕ್ಕೂ ಬರುತ್ತೇನೆ. ನನ್ನ ಉಸಿರು ಇರುವವರೆಗೂ ಬೆಳಗಾಂ ವಿಚಾರವನ್ನು ಬಿಡುವುದಿಲ್ಲ. ಅದು ಕೊನೇ ಗಡಿ, ಇದು ಮೊದಲನೇ ಗಡಿ. ಇವುಗಳ ಅಭಿವೃದ್ಧಿಗೆ ಹಣವನ್ನು ಕೊಡುವುದಕ್ಕೆ ನನ್ನ ಭಿನ್ನಾಭಿಪ್ರಾಯವಿಲ್ಲ, ಇದಕ್ಕಾಗಿ ಎಷ್ಟು ಹೆಚ್ಚು ಹಣವನ್ನು ಬೇಕಾದರೂ ನೀವು ಕೊಡಿ. ಬೆಳಗಾಂನ ಅಭಿವೃದ್ಧಿ ಮಾಡಲಿಕ್ಕೋಸ್ಕರ ಅಂದರೆ ಬೆಳಗಾಂ ಗಡಿ ಪ್ರದೇಶವನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ೨೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ, ಇದನ್ನು ಇನ್ನೂ ಹೆಚ್ಚು ಮಾಡಿ, ಅದಕ್ಕೆ ನನ್ನ ಸಂತೋಷ ಇದೆ. ನಮ್ಮ ಚಾಮರಾಜನಗರ ತಾಲ್ಲೂಕು ಬಹಳ ಹಿಂದುಳಿದಿರತಕ್ಕ ಪ್ರದೇಶ. ಅಲ್ಲಿ ೨ ಜನಾಂಗದವರು ಏನಿದ್ದಾರೆ, ಅವರನ್ನು ನೀವು ಹೋಗಿ ನೋಡಬೇಕು. ಆ ಎರಡು ಜನಾಂಗಗಳು ಯಾವುವು ಎಂದರೆ, ಒಂದು ಮೋಲು ಸಕ್ಕರೆ ಸೆಟ್ಟಿ ಜನಾಂಗ. ಇನ್ನೊಂದು ನಾಯಕ ಜನಾಂಗ. ಇವರು ಯಾವ ರೀತಿ ಇದ್ದಾರೆ ಎಂದರೆ, ನಿಜವಾಗಿಯೂ ನರಕದಲ್ಲಿ ಬದುಕುತ್ತಿದ್ದಾರೆ. ಅವರು ನತದೃಷ್ಟ ಜನ. ನಾನು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ನಿಮ್ಮ ಅಧಿಕಾರಿಗಳನ್ನು ಯಾರನ್ನಾದರೂ ಒಂದು ಸಾರಿ ಆ ಭಾಗಕ್ಕೆ ಕಳುಹಿಸಿ ಅಲ್ಲಿಯ ರಸ್ತೆಗಳ ಪರಿಸ್ಥಿತಿಯನ್ನು ತಿಳಿದುಕೊಳ್ಳಿ. ಆ ರಸ್ತೆಗಳನ್ನು ರಿಪೇರಿ ಮಾಡಿಸುವ ಸಲುವಾಗಿ ಜಿಲ್ಲಾ ಪರಿಷತ್ತಿನಿಂದ ಬರತಕ್ಕ ಹಣ ಎಷ್ಟು ಎಂದರೆ ವರ್ಷಕ್ಕೆ ೧೦ ಲಕ್ಷ ರೂಪಾಯಿಗಳು. ಈ ಹಣ ಕೇವಲ ಸಣ್ಣ ಪುಟ್ಟ ರಿಪೇರಿಗೇ ಮುಗಿದುಹೋಗುತ್ತದೆ ಆದ್ದರಿಂದ ನಾನು ತಮ್ಮಲ್ಲಿ ಕೇಳಿ ಕೊಳ್ಳುತ್ತೇನೆ. ಇದಕ್ಕಾಗಿ ತಾವು ಒಂದು ವಿಶೇಷ ಅನುದಾನವನ್ನು ಕೊಡುವುದರ ಮೂಲಕ ಹಿಂದುಳಿದಿರತಕ್ಕ ಈ ಗಡಿ ಪ್ರದೇಶದ ಬೆಳವಣಿಗೆಗಾಗಿ ಹೆಚ್ಚಿನ ಗಮನ ಕೊಡಬೇಕು. ಈ ಕೆಲಸವನ್ನು ತಾವು ತೀವ್ರವಾಗಿ ಪರಿಗಣಿಸಿ ಆ ಪ್ರದೇಶದ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಒತ್ತಾಯ ಮಾಡಿ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ (ಕಿತ್ತೂರು) — ಸನ್ಮಾನ್ಯ ಸಭಾಧ್ಯಕ್ಷರೆ ಬಹುತೇಕ ಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ, ಬರೆಯಬಹುದಾದಂಥ ವಿಚಾರಗಳನ್ನೆಲ್ಲಾ ಮಾನ್ಯ ಸದಸ್ಯರು ಇದುವರೆಗೆ ಮಾತನಾಡಿದ್ದಾರೆ. ಸಣ್ಣ ಸಣ್ಣ ವಿಚಾರಗಳ ಬಗ್ಗೆ ಬಹುತೇಕ ಯಾರೂ ಮಾತನಾಡಿದಂತೆ ಕಾಣಲಿಲ್ಲ. ಅಂದರೆ ದಿನ ನಿತ್ಯ ನಾವು ಏನು ಯಾತನೆಯನ್ನು ಅನುಭವಿಸುತ್ತಿದ್ದೇವೆ ಅದರ ಬಗ್ಗೆ ಯಾರೂ ಮಾತನಾಡಿಲ್ಲ. ಆದ್ದರಿಂದ ನಾನು ಈ ಚಿಕ್ಕಪುಟ್ಟ ವಿಷಯಗಳ ಬಗ್ಗೆ ಮಾತನಾಡ ಬೇಕೆಂದಿದ್ದೇನೆ.

೫-೧೦ ಪಿ. ಎಂ.

ಮೊದಲನೆಯದಾಗಿ, ಮಳೆ ಆಧಾರಿತ ಪ್ರದೇಶದಲ್ಲಿ ಕೆರೆ ನೀರಿನ, ನೀರಾವರಿ ಕರದ ವಿಚಾರದಲ್ಲಿ ಹೇಳುತ್ತಿದ್ದೇನೆ. ಬಹುಶಃ ಈ ಮಾನವೀಯತೆ ಎಂಬುದು ಬ್ರಿಟಿಷರ ಕಾಲದಲ್ಲಿ ಈಗ ಇರುವುದಕ್ಕಿಂತಲೂ ಹೆಚ್ಚಿಗೆ ಇತ್ತು ಎಂದು ಅನಿಸುತ್ತದೆ. ಹಿಂದೆ ಅಂಡರ್‌ಸನ್ ಎನ್ನುವ ಬ್ರಿಟಿಷ್ ಅಧಿಕಾರಿ ಒಬ್ಬರು ಇದ್ದರು. ಅವರು ಮಳೆ ಆಧಾರಿತ ಕೆರೆಗಳ ಕೆಳಗೆ ಬರುವಂತಹ ಜಮೀನುಗಳಿಗೆ ಭೂ ಕಂದಾಯವನ್ನು ಮಾತ್ರ ಸ್ವಲ್ಪ ಹೆಚ್ಚು ಮಾಡಿದ್ದರೇ ಹೊರತು ನೀರಾವರಿ ಕರ ಮಾತ್ರ ಹಾಕಿರಲಿಲ್ಲ. ಬೆಳಗಾಂ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕಳೆದ ೫ ವರ್ಷಗಳಿಂದ ಒಂದು ಹನಿ ನೀರು ಸಹ ಬಂದಿಲ್ಲ. ಅಲ್ಲಿ ಕೆರೆಗಳ ಕೆಳಗೆ ಬರುವಂತಹ ಜಮೀನುಗಳವರಿಗೆ ನೀರಿನ ಟ್ಯಾಕ್ಸ್ ಕೊಡಿ ಎಂದು ಅಲ್ಲಿನ ಕಂದಾಯ ಇಲಾಖಾಧಿಕಾರಿಗಳು ಒತ್ತಾಯ ಮಾಡುತ್ತಿದ್ದಾರೆ. ಈ ಕಾರಣದಿಂದ ಮಾನ್ಯ ಮಂತ್ರಿಗಳು ಮಳೆ ಆಧಾರಿತ ಕೆರೆಗಳ ಕೆಳಗೆ ಬರತಕ್ಕಂಥ ಭೂಮಿಯ ನೀರಾವರಿ ಕರವನ್ನು ರದ್ದು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸಣ್ಣ ಸಣ್ಣ ಕೆರೆಗಳಲ್ಲಿ ಹೂಳು ತೆಗೆಯುತಕ್ಕಂಥ ಕೆಲಸವನ್ನು ಬಹಳ ತೀವ್ರ

ಗತಿಯಲ್ಲಿ ಮಾಡಬೇಕು. ನಮ್ಮಲ್ಲಿ ಬೋರ್‌ವೆಲ್‌ಗಳು ಇವೆ. ಬೆಳಗಾಂ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಈ ಬೋರ್‌ವೆಲ್‌ಗಳು ಬಹುತೇಕ ಎಲ್ಲಾ ಒಣಗಿ ಹೋಗುವಂತಹ ಪ್ರಸಂಗ ಬಂದಿದೆ. ಕೆರೆಗಳಲ್ಲಿ ಹೂಳು ಇದ್ದರೆ ನೀರು ತುಂಬಿಕೊಳ್ಳದೆ ಇರುವುದರಿಂದ ಬೋರ್‌ವೆಲ್‌ಗಳು ಒಣಗಿ ಹೋಗುತ್ತವೆ. ಅದೇ ಕೆರೆಗಳಲ್ಲಿ ಹೂಳು ಎತ್ತಿ ನೀರು ತುಂಬಿಕೊಂಡರೆ ಆಗ ಈ ಬೋರ್‌ವೆಲ್‌ಗಳಿಗೆ ಜೀವ ತುಂಬಬಹುದು ಎನ್ನುವ ವಿಚಾರ ತಮಗೂ ಗೊತ್ತಿದೆ. ಈಗ ಎರಡು ಸಾವಿರ ಮಂಡಲ ಪಂಚಾಯಿತಿಗಳಿಗೆ ಎರಡು ಸಾವಿರ ಟ್ರಾಕ್ಟರ್‌ಗಳನ್ನು ಸರ್ಕಾರದಿಂದ ಒದಗಿಸಿದರೆ ಅಲ್ಲಿನ ರೈತರು ಈ ಕೆರೆಗಳಲ್ಲಿ ಇರುವಂತಹ ಹೂಳನ್ನು ತೆಗೆದು ಅವರ ಜಮೀನುಗಳಿಗೆ ಹಾಕಿಕೊಳ್ಳುತ್ತಾರೆ, ಇದರಿಂದ ರೈತರ ಜಮೀನುಗಳು ಫಲವತ್ತಾಗುತ್ತವೆ ಮತ್ತು ಕೆರೆಗಳಲ್ಲಿ ಹೂಳು ಎತ್ತುವುದರಿಂದ ನೀರು ಸಹ ತುಂಬಿಕೊಳ್ಳುತ್ತದೆ. ಇದಕ್ಕೆ ಸುಮಾರು ೪೦ ಕೋಟಿ ರೂಪಾಯಿಗಳು ಬೇಕಾಗಬಹುದು ಇವನ್ನು ಜಾಯಿಂಟ್ ಪ್ರೋಗ್ರಾಂ ಎಂದು ಜಿಲ್ಲಾ ಪರಿಷತ್ತಿನವರು ಮತ್ತು ನೀರಾವರಿ ಇಲಾಖೆಯವರು ಕೈಗೊಂಡರೆ ಕೇವಲ ೪೦ ಕೋಟಿ ರೂಪಾಯಿಗಳಲ್ಲಿ ಕೆರೆಗಳಲ್ಲಿ ಇರುವಂತಹ ಹೂಳನ್ನು ಎತ್ತಬಹುದು ಮತ್ತು ರೈತರ ಹೊಲಗಳಿಗೆ ಫಲವತ್ತಾದ ಮಣ್ಣು ಸಹ ಸಿಗುತ್ತದೆ. ಈ ಕೆಲಸವನ್ನು ಮಾನ್ಯ ಮಂತ್ರಿಗಳು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಇನ್ನೂ ಹೆಚ್ಚಿನ ಲಿಫ್ಟ್ ಇರಿಗೇಷನ್‌ಗಳನ್ನು ಮಾಡಬೇಕೆಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಈಗಾಗಲೇ ಎಷ್ಟೋ ಲಿಫ್ಟ್ ಇರಿಗೇಷನ್‌ಗಳು ಬಂದ್ ಆಗಿವೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿದುಕೊಳ್ಳಬೇಕು. ಬಂದ್ ಆಗಿರುವಂತಹ ಲಿಫ್ಟ್ ಇರಿಗೇಷನ್‌ಗಳನ್ನು ಪುನಃ ಪ್ರಾರಂಭ ಮಾಡಿ ಅವುಗಳಿಗೆ ಜೀವ ತುಂಬಿ ನಂತರ ಬೇಕಾದರೆ ತಾವು ಹೊಸ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಇನ್ನು ನಮ್ಮ ರೈತರು ಬಹುತೇಕವಾಗಿ ದಂಡ ಕೊಡಲಿಕ್ಕೆ ಹುಟ್ಟಿದ್ದಾರೋ ಏನೋ ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ನಾವು ಕಬ್ಬು ಬೆಳೆದಿದ್ದಕ್ಕೆ ಕರ ಕೊಡಬೇಕಾಗಿದೆ ಒಂದು ಎಕರೆ ಕಬ್ಬಿಗೆ ಸುಮಾರು ೧೫೦೦ ರೂಪಾಯಿಗಳ ಕರ ಕೊಡಬೇಕು. ಬೆಳಗಾಂನ ಹುಕ್ಕೇರಿ ಮತ್ತು ಸಂಕೇಶ್ವರದಲ್ಲಿ ಕಬ್ಬು ಬೆಳೆದಂತಹ ರೈತರಿಂದ ಒಂದು ಎಕರೆಗೆ ೧೪೦೦ ರೂಪಾಯಿಗಳ ದಂಡವನ್ನು ಅಧಿಕಾರಿಗಳು ವಸೂಲಿ ಮಾಡುತ್ತಿದ್ದಾರೆ. ಇದು ಏಕೋ ನಮಗೆ ಗೊತ್ತಾಗಲಿಲ್ಲ. ಒಂದು ಎಕರೆಯಲ್ಲಿ ಕಬ್ಬು ಬೆಳೆದರೆ ರಾಜ್ಯ ಸರ್ಕಾರಕ್ಕೆ ೪೩೦೦ ರೂಪಾಯಿ, ಕೇಂದ್ರ ಸರ್ಕಾರಕ್ಕೆ ೧೮ ನೂರು ರೂಪಾಯಿಗಳ ಕರ ಬರುವಾಗ ನೀವು ಕಬ್ಬು ಬೆಳೆದಿರಿ, ಆ ಕಾರಣಕ್ಕೆ ೧೪೦೦ ರೂಪಾಯಿಗಳ ದಂಡ ಕೊಡಿ ಎಂದರೆ ಇದು ಯಾವ ನೀತಿಯೋ ನಮಗಂತೂ ಗೊತ್ತಾಗುತ್ತಿಲ್ಲ. ಕಬ್ಬು ಬೆಳೆಯುವುದಕ್ಕೆಂದು ನಮಗ ವರ್ಷದಲ್ಲಿ ೧೨ ತಿಂಗಳು ನೀರು ಕೊಟ್ಟಿಲ್ಲ. ಇವರು ಇಷ್ಟನೇ ತಾರೀಖಿನಿಂದ ಇಷ್ಟನೇ ತಾರೀಖಿನವರೆಗೆ ಮಾತ್ರ ನೀರು ಬಿಡುತ್ತೇವೆಂದು ಹೇಳುವಾಗ ಈಗ ಕಬ್ಬು ಏಕೆ ಬೆಳೆದಿರಿ, ಅದಕ್ಕೆ ದಂಡ ಕೊಡಿರಿ ಎನ್ನುವಂತಹ ವಿಚಾರ ತಪ್ಪು ವಿಚಾರ ಎನ್ನುವುದು ನನ್ನ ಭಾವನೆ. ಇನ್ನು ಬೆಳಗಾಂ ಜಿಲ್ಲೆಯಲ್ಲಿ ಒಂದು ಹರಿನಾಳ ಯೋಜನೆ ಇದೆ. ಇದು ಸುಮಾರು ೪೦ ವರ್ಷಗಳಿಂದ ಮಾಡುತ್ತಿರುವಂತಹ ಒಂದು ಯೋಜನೆ. ಆ ಯೋಜನೆ ಬಹಳ ದೊಡ್ಡ ಯೋಜನೆಯಲ್ಲ. ಆದರೂ ಅದನ್ನು ಏಕೆ ಮರೆತರೊ ನನಗೆ ಗೊತ್ತಾಗಲಿಲ್ಲ ಅಥವಾ ರಾಜಕೀಯ ಪ್ರಭಾವಕ್ಕೆ ಒಳಗಾಗಿ ಆ ಒಂದು ಯೋಜನೆಯನ್ನು ಕೈಬಿಟ್ಟರೊ ಗೊತ್ತಾಗಲಿಲ್ಲ.

೪-೫ ಕೋಟಿ ರೂಪಾಯಿಗಳ ೩ ಸಣ್ಣ ಸಣ್ಣ ಯೋಜನೆಗಳನ್ನು ಇವತ್ತು ಮಾನ್ಯ ಮಂತ್ರಿಗಳು ಕೈಗೆತ್ತಿಕೊಂಡರೆ ಬಹುತೇಕ ಆ ಎರಡು ತಾಲ್ಲೂಕುಗಳಲ್ಲಿ ೨೦ ಸಾವಿರ ಎಕರೆ ನೀರಾವರಿಯಾಗುತ್ತದೆ. ಆದ್ದರಿಂದ ಈ ಯೋಜನೆಯನ್ನು ಮರೆಯಬಾರದು ಅದನ್ನು ಇದೇ ವರ್ಷ ಕೈಗೆತ್ತಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ತುಂಗಾ ಏತ ನೀರಾವರಿ ಯೋಜನೆ ಇದೆ. ಶರಾವತಿ ಪ್ರಾಜೆಕ್ಟಿನಲ್ಲಿ ಭೂಮಿ ಕಳೆದುಕೊಂಡಂತಹ ರೈತರು ಅಲ್ಲಿಗೆ ಬಂದು ನೆಲೆಸಿದ್ದಾರೆ. ಪಾಪ ಅವರಿಗೆ ಏನೂ ಗತಿ ಇಲ್ಲ. ತುಂಗಾ ಏತ ನೀರಾವರಿ ಮಾಡಿದರೆ ಅವರು ಬದುಕಬಹುದು. ಆದರೆ ಅದಕ್ಕೆ ಎಲೆಕ್ಟ್ರಿಸಿಟಿ ಬೇಕು, ಅದಕ್ಕೆ ಖರ್ಚು ಬಹಳ ಆಗುತ್ತದೆ. ಫೀಜಿಬಲಿಟಿ ರಿಪೋರ್ಟ್ ಇಲ್ಲ ಎನ್ನುವ ಕಾರಣದಿಂದ ಮಾನ್ಯ ಮಂತ್ರಿಗಳು ಅದನ್ನು ಕೈ ಬಿಡಬಾರದು. ದೇಶಕ್ಕಾಗಿ ಸ್ವಲ್ಪ ತ್ಯಾಗ ಮಾಡಿದಂತಹ ರೈತರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ತುಂಗಾ ಏತ ನೀರಾವರಿ ಯೋಜನೆಯನ್ನು ಕೈಗೊಳ್ಳಬೇಕೆಂದು ನಾನು ತಿಳಿಸುತ್ತೇನೆ. ಇದರ ಜೊತೆಗೆ ಕೃಷ್ಣ ಮತ್ತು ಕಾವೇರಿ ಯೋಜನೆಗಳನ್ನು ಮಾಡುವ ಭರದಲ್ಲಿ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳನ್ನು ಮರೆತಂತಿದೆ. ಈ ಮಲಪ್ರಭ, ಘಟಪ್ರಭ ಯೋಜನೆಗಳಿಗೆ ಬಹುತೇಕವಾಗಿ ಹಣವನ್ನು ಒದಗಿಸಿಲ್ಲ. ಇವುಗಳ ಮೈನ್‌ಟೆನೆನ್ಸ್‌ಗೆ ಹಣ ಕೊಟ್ಟಿಲ್ಲ ಕಾವೇರಿ ಮತ್ತು ಕೃಷ್ಣ ಯೋಜನೆಗಳಿಗೆ ಯಾವರೀತಿ ಮೇನ್‌ಟೆನೆನ್ಸ್ ಹಣ ಕೊಡುತ್ತೀರೋ ಅದೇ ರೀತಿಯಲ್ಲಿ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳಿಗೂ ಮೇನ್‌ಟೆನೆನ್ಸ್ ಹಣವನ್ನು ಒದಗಿಸಿಕೊಡಬೇಕೆಂದು ನಾನು ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಗಳ ರೈತರ ಪರವಾಗಿ

ಕೇಳಿಕೊಳ್ಳುತ್ತೇನೆ. ನಾವು ಕಾಡ ಮೀಟಿಂಗ್‌ನಲ್ಲಿ ಕಾಲುವೆ ಭಾಗಕ್ಕೆ ಏಕೆ ರಸ್ತೆ ಇಲ್ಲವೆಂದು ಕೇಳಿದರೆ ಮತ್ತು ಘಟಪ್ರಭ ಮಲಪ್ರಭ ಯೋಜನೆಗೆ ಪುನರ್ವಸತಿ ಕಾರ್ಯಕ್ರಮ ಏಕೆ ಇಲ್ಲವೆಂದು ಕೇಳಿದರೆ ನೀವು ಅಲ್ಲಿ ಹೋಗಿ ಬಡಿದಾಡಿಕೊಂಡು ತೆಗೆದುಕೊಂಡು ಬನ್ನಿ ಎಂದು ಚೀಫ್ ಇಂಜನಿಯರು ಹೇಳಿದ ಕಾರಣ ನಾನು ಇಲ್ಲಿ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ. ಈ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳ ಮೇನ್‌ಟೆನನ್ಸ್‌ಗಾಗಿ ಹೆಚ್ಚು ಹಣವನ್ನು ಕೊಡಬೇಕು. ಬೇರೆ ಯೋಜನೆಗಳಿಗೆ ಯಾವರೀತಿ ಹಣವನ್ನು ಕೊಡುತ್ತೀರಿ ಅದೇ ರೀತಿಯಲ್ಲಿ ಈ ಯೋಜನೆಗಳಿಗೂ ಹಣವನ್ನು ಕೊಡಬೇಕೆನ್ನುವ ವಿಚಾರವನ್ನು ಹೇಳುತ್ತಿದ್ದೇನೆ. ಅದರ ಜೊತೆಗೆ ಬೆಳಗಾವಿ ಜಿಲ್ಲೆ ಎಂದರೆ ಸಕ್ಕರೆಯ ಜಿಲ್ಲೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಅಲ್ಲಿ ಈಗಾಗಲೇ ಏಳು ಸಕ್ಕರೆ ಕಾರ್ಖಾನೆಗಳು ಇರುತ್ತವೆ. ಮತ್ತೆ ಎರಡು ಹೊಸ ಸಕ್ಕರೆ ಕಾರ್ಖಾನೆಗಳಿಗೆ ಲೈಸೆನ್ಸ್ ಸಿಕ್ಕಿದೆ. ಈ ಸಕ್ಕರೆ ಕಾರ್ಖಾನೆಗಳಿಗೆ ಹೋಗತಕ್ಕಂಥ ರಸ್ತೆಗಳು ತೀರ ಕೆಟ್ಟಿರುವುದರಿಂದ ಅದಕ್ಕೆ ಒಂದು ವಿಶೇಷವಾದ ಫಂಡ್‌ನ್ನು ಒದಗಿಸಿ ಈ ಕಾರ್ಖಾನೆಗಳಿಗೆ ಹೋಗಿಬರತಕ್ಕಂಥ ರಸ್ತೆಗಳನ್ನು ದುರಸ್ತಿ ಮಾಡಬೇಕೆನ್ನುವ ವಿಚಾರವನ್ನು ಈಗಾಗಲೆ ಎರಡು ಬಾರಿ ತಿಳಿಸಿಯಾಗಿದೆ. ಮಾನ್ಯ ಮಂತ್ರಿಗಳೂ ಕೂಡ ಒಪ್ಪಿಕೊಂಡಿದ್ದರು. ಆದ್ದರಿಂದ ಅದಕ್ಕಾಗಿ ಒಂದು ವಿಶೇಷವಾದಂಥ ಫಂಡ್‌ನ್ನು ಮಾಡಿ ಈ ೭ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ಬರುವಂತಹ ರಸ್ತೆಗಳನ್ನು ರಿಪೇರಿ ಮಾಡಬೇಕೆನ್ನುವ ಕೊನೆಯ ಮಾತನ್ನು ಹೇಳಿ, ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ಮಾನ್ಯ ಲೋಕೋಪಯೋಗಿ ಸಚಿವರು ಸದನದ ಮುಂದೆ ಏನು ಬೇಡಿಕೆಯನ್ನು ಇಟ್ಟಿದ್ದಾರೆ ಅದನ್ನು ಸ್ವಾಗತ ಮಾಡುತ್ತಾ, ಕೆಲವೇ ವಿಚಾರಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಏಕೆಂದರೆ, ನಾವೆಲ್ಲ ಮಲೆನಾಡಿನಿಂದ ಬಂದಂಥ ಜನರು, ಗುಡ್ಡಗಾಡಿನ ಪ್ರದೇಶಕ್ಕೆ ಸೇರಿದಂಥವರು. ಎಲ್ಲ ಮಾನ್ಯ ಸದಸ್ಯರು ಬಯಲುಸೀಮೆ ಬಗ್ಗೆ ಅಲ್ಲಿನ ರಸ್ತೆಗಳ ಬಗ್ಗೆ ಮತ್ತು ಇರಿಗೇಷನ್ ಬಗ್ಗೆ ಮಾತನಾಡಿದ್ದಾರೆ. ಆದರೆ ಮಲೆನಾಡಿನ ರಸ್ತೆಗಳ ಬಗ್ಗೆ ಅಥವಾ ಅಲ್ಲಿಯ ಸೇತುವೆಗಳ ಅಗತ್ಯದ ಬಗ್ಗೆ ಯಾರ ಹೆಚ್ಚು ಹೇಳಲಿಕ್ಕೆ ಹೋಗಲಿಲ್ಲ. ನಾನಾದರೂ ತಮ್ಮ ಮೂಲಕ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದು ಇಷ್ಟೆ. ಮಲೆನಾಡಿನ ರಸ್ತೆಗಳು ಮತ್ತು ಸೇತುವೆಗಳಿಗೆ ಹೆಚ್ಚಿನ ಹಣವನ್ನು ಒದಗಿಸಿಕೊಡಬೇಕು. ಕಾರಣವೇನೆಂದರೆ, ಈ ಮಲೆನಾಡು ಪ್ರದೇಶದಲ್ಲಿ ೬ ತಿಂಗಳಕಾಲ ಸದಾ ಮಳೆಯಿರುತ್ತದೆ. ನಿಜಕ್ಕೂ ಹೇಳುವುದಾದರೆ, ಚಿಕ್ಕಮಗಳೂರು ಪ್ರದೇಶ ಮತ್ತು ತೀರ್ಥಹಳ್ಳಿಯ ಕೆಲವು ಭಾಗಗಳಲ್ಲಿ ಮತ್ತು ಮಂಗಳೂರು ಜಿಲ್ಲೆಯಲ್ಲಿ ಮಳೆ ಯಾವಾಗಲೂ ಇರುತ್ತದೆ. ಆದರೆ ಇಲ್ಲಿ ಮಾತ್ರ ಮಳೆಯನ್ನೇ ಕಾಣುತ್ತಿಲ್ಲ. ನಾವು ಅಲ್ಲಿಂದ ಇಲ್ಲಿಗೆ ಬಂದರೆ ಬೇರೆ ಪ್ರಪಂಚಕ್ಕೆ ಬಂದೆವೆನೋ ಎನ್ನುವ ಅನುಭವ ನಮಗೆ ಆಗುತ್ತದೆ. ಇವತ್ತು ನಮ್ಮಲ್ಲಿ ರಸ್ತೆಗಳಿಗಾಗಿ ಎಷ್ಟೇ ದುಡ್ಡು ಹಾಕಿದರೂ ಸಹ ನೀರಿನಲ್ಲಿ ತೊಳೆದಂತಾಗುತ್ತದೆ. ರಸ್ತೆಗೆ ಜಲ್ಲಿ ಹಾಕಿ, ಟಾರ್ ಹಾಕಿದರೆ ಆ ರಸ್ತೆಗೆ ಹಾಕಿದ ಹಣ ಉಳಿಯುತ್ತದೆ. ಇಲ್ಲದಿದ್ದರೆ ಬರುವ ವರ್ಷವೇ ನೀರಿನಲ್ಲಿ ಕೊಚ್ಚಿಕೊಂಡು ಹೋಗುತ್ತದೆ. ಆದರಿಂದ ಇಂಥ ಕೆಲಸವಾಗ ಬಾರದೆನ್ನುವುದು ನಮ್ಮ ಮನವಿ. ಆದ್ದರಿಂದ ಹೆಚ್ಚಿನ ಹಣವನ್ನು ಮಲೆನಾಡು ಪ್ರದೇಶಕ್ಕೆ ಬಿಡುಗಡೆ ಮಾಡಬೇಕು. ಬಜೆಟ್‌ನಲ್ಲಿ ಕೊಟ್ಟಿರುವ ಹಣ ಬಹಳ ಕಡಿಮೆಯಾಗಿರುತ್ತವೆ. ಅದರಲ್ಲೂ ನನ್ನ ಕ್ಷೇತ್ರದಲ್ಲಿ ಹಲವಾರು ರಸ್ತೆಗಳು ಸೆಂಟ್ರಲ್ ರಿಲೀಫ್ ಫಂಡ್‌ನಲ್ಲಿ ಸೇರಿದೆ. ಅದರಲ್ಲಿ ೪೦-೫೦ ಲಕ್ಷ ರೂಪಾಯಿಗಳಿದ್ದರೂ ಸಹ ಈ ಸಾರಿ ಬಜೆಟ್‌ನಲ್ಲಿ ಹಣವನ್ನೇ ಪ್ರೊವೈಡ್ ಮಾಡದಿರುವುದು ಭಾರಿ ದುರಾದೃಷ್ಟಕರವೆಂದು ಅನಿಸುತ್ತದೆ. ಇವತ್ತು ಮುಖ್ಯವಾಗಿ ಹೇಳಬೇಕೆಂದರೆ, ಮಲೆನಾಡಿನಲ್ಲಾಗಲಿ ಯಾವುದೇ ರಸ್ತೆಗೆ ಮೇನ್‌ಟೆನೆನ್ಸ್ ಗ್ರಾಂಟ್ ಏನು ಕೊಡುತ್ತಿದ್ದಾರೆ ಅದರ ೯೦ ಪರ್ಸೆಂಟ್ ಹಣ ಗ್ಯಾಂಗ್‌ಮೆನ್‌ಗಳ ಕೂಲಿಗಾಗಿ ಹೋಗುತ್ತಿದೆ. ರಸ್ತೆಗಳ ಮೇನ್‌ಟೆನೆನ್ಸ್ ಏನೇನೂ ಆಗಿಲ್ಲ, ಆ ಭಾಗಕ್ಕೆ ಹೋದರೆ, ಟಾರ್ ರಸ್ತೆ ಸಹ ತೊಳೆದುಹೋಗಿ ಗುಂಡಿ ಗುಂಡಿಯಾಗಿದೆ. ಚುನಾವಣೆಯಾದ ನಂತರ ಮಾನ್ಯ ಮಂತ್ರಿಗಳಲ್ಲಿ ೫ ಕಿಲೋಮೀಟರ್ ರಸ್ತೆಯ ರೀ ಕೋಟಿಂಗಿಗೆ ಮಂಜೂರು ಮಾಡಿಸಿಕೊಂಡೆ. ಇದು ಅವರ ನೆನಪಿಗೆ ಬರಬಹುದು. ಪರಿಸ್ಥಿತಿ ಹೀಗಿರುವುದರಿಂದ ರಸ್ತೆಗಳಿಗೆ ಅಸ್ಫಾಲ್ಟ್ ಮಾಡಲು ಮತ್ತು ಮೇನ್‌ಟೆನೆನ್ಸ್‌ಗೆ ಮಾಡಲು ಹೆಚ್ಚಿನ ಗ್ರಾಂಟ್ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಮಲೆನಾಡಿನ ಕೆರೆಗಳ ಬಗ್ಗೆ ಹೇಳುವುದಾದರೆ, ಈ ಭಾಗದ ಕೆರೆಗಳಲ್ಲೆಲ್ಲ ತುಂಬ ಹೂಳು ತುಂಬಿಕೊಂಡಿದೆ. ಬಯಲು ಸೀಮೆಯಲ್ಲಿ ಮಳೆ ಬರದಿದ್ದರೆ ಕೆರೆಗಳು ಒಣಗಿ ಹೋಗುತ್ತವೆ. ನಾನು ತಿಳಿದಂತೆ, ಇಡೀ ರಾಜ್ಯದಲ್ಲಿ ಅರಸಿ ಕೆರೆ ಒಂದು ದೊಡ್ಡ ಕೆರೆ. ಅದು ಇವತ್ತು ಒಣಗಿ ನಿಂತಿದೆ. ಆದರೆ ನಮ್ಮಲ್ಲಿ ಕೆರೆಗಳಿದ್ದರೂ, ಸದಾಕಾಲ ಮಳೆ ಬಂದರೂ, ನೀರಿದ್ದರೂ ತುಂಬಿಕೊಂಡಿರುವ ಹೂಳನ್ನು

ತೆಗೆಯುವ ಕೆಲಸವನ್ನು ಇಲಾಖೆಯವರು ಮಾಡಲಿಲ್ಲ. ಆದ್ದರಿಂದ ನಿಜವಾಗಿಯೂ ಈ ಹೂಳನ್ನು ತೆಗೆಸುವ ಕಾರ್ಯವನ್ನು ಸರ್ಕಾರದವರು ಮಾಡಿದ್ದೇ ಆದರೆ ಹೆಚ್ಚಿನ ರೈತರಿಗೆ ಅನುಕೂಲವಾಗುತ್ತದೆ. ಈ ಕೆಲಸವನ್ನು ತಾವು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಲಿಫ್ಟ್ ಇರಿಗೇಷನ್ ಬಗ್ಗೆ ಹೇಳುವುದಾದರೆ, ನಮ್ಮ ಭಾಗದಲ್ಲಿ ಲಿಫ್ಟ್ ಇರಿಗೇಷನ ವರ್ಕ್ಸ್ ಅಂತೂ ಇಲ್ಲವೇ ಇಲ್ಲ. ನಾನು ಭಾರಿ ಖುಷಿಯಿಂದ ಒಬ್ಬ ಇಂಜಿನಿಯರ್ ಇದ್ದಾರೆಂದು ಟಿ.ಪಿ.ಎಸ್. ಮೀಟಿಂಗಿಗೆ ಅವರನ್ನು ಕರೆದೆ. ಇಲಾಖೆಯಿಂದ ಎಷ್ಟು ಲಿಫ್ಟ್ ಇರಿಗೇಷನ್ ಕೆಲಸಗಳನ್ನು ತೆಗೆದುಕೊಂಡಿದಾರೆ ಎಂದು ಪ್ರಧಾನರಿಗೆ ಕೇಳಿದ್ದಕ್ಕೆ ನಮ್ಮ ತಾಲ್ಲೂಕ್ಕಿನಲ್ಲಿ ಯಾವುದೇ ಒಂದು ಕೆಲಸವನ್ನು ತೆಗೆದುಕೊಂಡಿಲ್ಲವೆಂದು ಹೇಳಿದರು,

ನಮ್ಮ ಕ್ಷೇತ್ರದ ಉಡುಸೆ ಎಂಬ ಊರಿನ ಲಿಫ್ಟ್ ಇರಿಗೇಷನ್ ವರ್ಕ್ ಪ್ರಪೋಸ್ ಆದರೂ ಕೂಡಾ ಅದನ್ನು ಕೈಬಿಡಲಾಗಿದೆ. ನಮ್ಮ ಭಾಗದಲ್ಲಿ ಈ ಕೆಲಸಕ್ಕೆ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ನಾನು ಈ ಸದನದಲ್ಲಿ ಪ್ರಶ್ನೆ ಹಾಕಿ, ಕಳಸ—ಹೊರನಾಡು ರಸ್ತೆ ಬಹಳ ಪ್ರಮುಖವಾದ ರಸ್ತೆ ಏಕೆಂದರೆ ಅಲ್ಲಿ ಪ್ರಸಿದ್ಧವಾದ ಅನ್ನಪೂರ್ಣೇಶ್ವರಿ ಟೆಂಪಲ್ ಇದೆ, ಆ ರಸ್ತೆಯನ್ನು ದುರಸ್ತಿ ಮಾಡಬೇಕೆಂದು ಕೇಳಿದ್ದೇನೆ. ಪ್ರತಿವರ್ಷ ಸಾವಿರಾರು ಜನರು ಆ ಪುಣ್ಯ ಕ್ಷೇತ್ರಕ್ಕೆ ಬಂದು ಹೋಗುತ್ತಾರೆ. ಅಲ್ಲಿಗೆ ಬಂದ ಯಾತ್ರಾರ್ಥಿಗಳೆಲ್ಲ ಈ ಭಾಗದಿಂದ ಗೆದ್ದು ಹೋಗಿರುವ ಪ್ರನಿಧಿಗಳನ್ನು ಬೈದು ಹೋಗುತ್ತಾರೆ. ಇಂತಹ ಒಂದು ದೊಡ್ಡ ಕ್ಷೇತ್ರದಿಂದ ಯಾರು ಪ್ರತಿನಿಧಿಸುತ್ತಾರೆ ? ಇಷ್ಟು ವರ್ಷಗಳಾದರೂ ಇಂತಹ ಒಂದು ದೊಡ್ಡ ಭದ್ರಾ ನದಿಗೆ ಸೇತುವೆ ಮಾಡಿಲ್ಲ, ರಸ್ತೆ ದುರಸ್ತಿ ಮಾಡಿಲ್ಲವಾದ್ದರಿಂದ ಧೂಳು ಕುಡಿಯಬೇಕಾಗಿದೆಯೆಂದು ಶಾಪ ಹಾಕಿ ಹೋಗುತ್ತಾರೆ. ನಮಗೆ ಹಾಕಿದ ಶಾಪದಲ್ಲಿ ಸ್ವಲ್ಪ ಮಾನ್ಯ ಮಂತ್ರಿಯವರಿಗೆ ಮತ್ತು ಇಲಾಖೆಯವರಿಗೂ ತಲುಪತ್ತರೆಂದು ನಾನು ಅಂದುಕೊಂಡಿದ್ದೇನೆ. ೧೯೭೭ರಲ್ಲಿ ಇದಕ್ಕೆ ೨೪ ಲಕ್ಷ ರೂಪಾಯಿಗಳು ಮಂಜೂರಾಗಿ ಸೇತುವೆಯ ಶಂಕು ಸ್ಥಾಪನೆಯನ್ನೂ ಮಾಡಿದೆ ಆದರೆ ಆ ಕೆಲಸವನ್ನು ಅಪ್ಪರ್ ಭದ್ರಾ ಆಗುತ್ತದೆಂದು ಹೇಳಿ ಅಲ್ಲಿಗೆ ನಿಲ್ಲಿಸಿದರು. ಅದಕ್ಕೆ ಏನಾದರೂ ಆಲ್ಟರ್‌ನೇಟೀವ್ ಬ್ರಿಡ್ಜ್ ಮಾಡಬಹುದಾಗಿತ್ತು. ಅದಕ್ಕೆ ಈಗ ೪೦ ಲಕ್ಷ ರೂಪಾಯಿಗಳು ರಸ್ತೆ ಮತ್ತು ಸೇತುವೆಗಾಗಿ ಮಂಜೂರು ಆಗಿದೆ. ಆದರೆ ಈ ಕೆಲಸವನ್ನು ಇನ್ನೂ ಪ್ರಾರಂಭ ಮಾಡಿಲ್ಲ. ಆ ರಸ್ತೆಯನ್ನು ಆದಷ್ಟು ಜಾಗ್ರತೆ ಮಾಡಿಸಿಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಸದನದಲ್ಲಿ ಉತ್ತರ ಹೇಳಿದರು. ಆ ಕೆಲಸವನ್ನು ಪ್ರಾರಂಭಮಾಡಿಸುತ್ತೇವೆಂದು ಹೇಳಿದರು. ಆದರೆ ಆ ಕೆಲಸ ಇನ್ನೂ ಆಗಿಲ್ಲ. ಏಕೆಂದರೆ, ನಮ್ಮಲ್ಲಿ ಕೇವಲ ೬ ತಿಂಗಳು ಮಾತ್ರ ಈ ಇಲಾಖೆವತಿಯಿಂದ ಕೆಲಸ ಆಗುತ್ತದೆ. ಉಳಿದ ಕಾಲದಲ್ಲಿ ಮಳೆಯಿಂದಾಗಿ ಕೆಲಸ ಆಗದ ಕಾರಣ ಆದಷ್ಟು ಜಾಗ್ರತೆ ಬೇಸಿಗೆ ಟೈಮ್‌ನಲ್ಲಿ ಕೆಲಸ ಮಾಡಿಸಿದರೆ ಬಹಳ ಅನುಕೂಲವಾಗುತ್ತದೆಂದು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. ನನ್ನ ತಾಲ್ಲೂಕಿನಲ್ಲಿ ವೆಸ್ಟ್ರನ್ ಘಾಟ್ ಸ್ಕೀಮ್‌ನಲ್ಲಿ ೧೯೮೦ರಲ್ಲಿ ಹೇಮಾವತಿ ನದಿಗೆ ೫ ಫುಟ್ ಬ್ರಿಡ್ಜ್ ಸ್ಯಾಂಷನ್ ಆಗಿತ್ತು. ಇವತ್ತು ಆ ಫುಟ್ ಬ್ರಿಡ್ಜ್ ಟೆಂಡರ್ ಕಡಿಮೆ ಇದೆ ಎಂದು ಅದನ್ನು ಯಾರೂ ಅಕ್ಸೆಪ್ಟ್ ಮಾಡಿಕೊಂಡಿಲ್ಲ. ಅದು ಹಾಗೇ ಲ್ಯಾಪ್ಸ್ ಆಗಿದೆ. ಈ ಬಗ್ಗೆ ಮರು ಪರಿಶೀಲನೆ ಮಾಡಿ ವೆಸ್ಟ್ರನ್ ಘಾಟ್ ಸ್ಕೀಂನಲ್ಲಿ ಏನು ಫುಟ್ ಬ್ರಿಡ್ಜ್ ಸ್ಯಾಂಕ್ಷನ್ ಆಗಿತ್ತು ಅದನ್ನು ಕನ್ಸಿಡರ್‌ಮಾಡಿದರೆ ಒಳೆಯದಾಗುತ್ತದೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಜೊತೆಗೆ ಕಡೂರು—ಮಂಗಳೂರು ರಸ್ತೆ ಬಹಳ ಪ್ರಮುಖವಾದ ರಸ್ತೆ. ಏಕೆಂದರೆ, ಅದು ಮಲೆನಾಡು ಮೂಲಕ ಮಂಗಳೂರಿಗೆ ಮಾರ್ಗ ಮಾಡಿಕೊಡುತ್ತದೆ. ಈಗ ಈ ರಸ್ತೆಗೆ ಕೇಂದ್ರ ಸರ್ಕಾರದಿಂದ ಸುಮಾರು ೬೦ ಕೋಟಿ ರೂಪಾಯಿಗಳನ್ನು ಬಿಡುಗಡೆಮಾಡಿ ರಸ್ತೆ ವೈಡನಿಂಗ್ ಮಾಡುವುದಕ್ಕೆ ಕೆಲಸ ಪ್ರಾರಂಭ ಮಾಡಿದರು. ಈ ಮಧ್ಯದಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರಿಗೂ ಹಾಗೂ ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ವಿಭಾಗದವರಿಗೂ ಒಂದು ರೀತಿಯ ಮನಸ್ತಾಪ ಅಥವಾ ಅವರಲ್ಲಿ ಏನು ವ್ಯತ್ಯಾಸ ಇದೆ ಎಂದು ನನಗಂತೂ ಗೊತ್ತಾಗಲಿಲ್ಲ. ಅಲ್ಲಿ ಹಾನಿ ಏನೂ ಆಗಿಲ್ಲ, ಏಕೆಂದರೆ ಗುಡ್ಡದಿಂದ ಮಣ್ಣು ತೆಗೆದು ವೈಡನಿಂಗ್ ಮಾಡುವುದಕ್ಕೆ ಬೆಲೆ ಬಾಳುವ ಮರಗಳು ಹಾಳಾಗಿಲ್ಲ. ಆದರೆ ಅರಣ್ಯ ಇಲಾಖೆಯವರು ಮರಗಳು ನಾಶವಾಗುತ್ತಿದೆಯೆಂದು ಕೆಲಸಕ್ಕೆ ತೊಂದರೆಯಾಗುತ್ತದೆಂದು ಅಬ್ಜೆಕ್ಟ್ ಮಾಡಿರುವುದರಿಂದು ಈ ಕೆಲಸ ಅರ್ಧಮ್‌ಬರ್ಧದಲ್ಲಿ ನಿಂತಿದೆ. ನಾನು ಮೊನ್ನೆ ಮಂಗಳೂರಿನಿಂದ ಬಂದಾಗ ಅಲ್ಲಿ ನೋಡಿದ್ದೇನೆ. ಚಾರ್ಮುಡಿ ಘಾಟ್‌ನಿಂದ ಗುಡ್ಡಗುಡ್ಡವೇ ರಸ್ತೆಮಧ್ಯೆ ಬಂದು ಕೂತು ರಸ್ತೆ ಬ್ಲಾಕ್ಆಗಿ ಅಲ್ಲಿ ಸಾರ್ವಜನಿಕ ಸಂಚಾರಕ್ಕೆ ಅಡ್ಡಿಯಾಗಿದೆ. ಆ ರಸ್ತೆಯಲ್ಲಿ ಧರ್ಮಸ್ಥಳಕ್ಕೆ ನೂರಾರು ಪ್ರವಾಸೀಬಸ್‌ಗಳು ಹೋಗುತ್ತವೆ. ಮರ ಸಾಗಣೆ ಮಾಡುವ ಲಾರಿಗಳು ಓಡಾಡುತ್ತಿದ್ದು ಆ ರಸ್ತೆ ವೈಡನಿಂಗ್ ಮಾಡುವುದು ಅಗತ್ಯ ಇದೆ. ಈ ರಸ್ತೆ ಈಗ ಬ್ಲಾಕ್ ಆಗಿರುದರಿಂದ ಈ ರಸ್ತೆ

ಯಲ್ಲಿನ ಸಂಚಾರಕ್ಕೆ ತುಂಬಾ ತೊಡಕು ಆಗಿರುವುದರಿಂದ ಆದಷ್ಟು ಜಾಗ್ರತೆ ರಸ್ತೆ ಕಾಮಗಾರಿ ಕೆಲಸವನ್ನು ಅಥವಾ ರಿಪೇರಿ ಕೆಲಸವನ್ನು ಮಾಡಿ ಜನರಿಗೆ ಮತ್ತು ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ನಿಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಇವತ್ತು ಏನು ಗಡಿ ಪ್ರದೇಶಕ್ಕೆ ಅಂದರೆ "ಬಾರ್ಡರ್ ಏರಿಯ ಡೆವಲಪ್‌ಮೆಂಟ್‌ಗೆ" ಹೆಚ್ಚಿಗೆ ಹಣ ಕೊಡುತ್ತಿದ್ದೀರಿ ಮತ್ತು ಹೈದರಾಬಾದ್ ಭಾಗದ ಅಭಿವೃದ್ಧಿಗೆ "ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್" ಎಂದು ಅದಕ್ಕೆ ಹೆಚ್ಚಿಗೆ ಹಣ ಕೊಡುತ್ತಿದ್ದೀರೋ ಅದೇ ರೀತಿಯಲ್ಲಿ ಮಲೆನಾಡು ಭಾಗಕ್ಕೆ ಸ್ಪೆಷಲ್ ಗ್ರ್ಯಾಂಟ್ಸ್ ರಿಲೀಸ್ ಮಾಡಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು ಹೆಚ್ಚಿಗೆ ಮಾಡಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

(ಶ್ರೀಮತಿ ರೇಣುಕಾ ರಾಜೇಂದ್ರನ್ ಅವರು ಪೀಠವನ್ನಲಂಕರಿಸಿದರು)

† ಶ್ರೀ ಮನೋಹರ್ ಹನುಮಂತಪ್ಪ ತಹಶೀಲ್ದಾರ್ (ಹಾನಗಲ್).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಮಂಡಿಸಿದ ಬೇಡಿಕೆಗಳಿಗೆ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಕೆಲವು ಸಲಹೆಗಳನ್ನು ಮತ್ತು ನನ್ನ ಅನಿಸಿಕೆಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೆ, ನಮಗೆ ಒಂದು ಸಂತೋಷ ಏನೆಂದರೆ, ಈ ಬೃಹತ್ ಇಲಾಖೆಯನ್ನು ಹೊಂದಿದಂಥ ಮಂತ್ರಿಗಳು ಸ್ವತಃ ರೈತರಿದ್ದಾರೆ ಮತ್ತು ರೈತರ ಕಷ್ಟಗಳನ್ನು ಅರಿತವರಾಗಿದ್ದಾರೆ. ಜೊತೆಗೆ ರೈತರ ಬವಣೆ ಏನು ಎಂಬುದನ್ನು ತಿಳಿದುಕೊಂಡಂಥ ಸಚಿವರಾಗಿರುವುದರಿಂದ ಈ ಇಲಾಖೆಯನ್ನು ಅವರಿಗೆ ಕೊಟ್ಟಿರುವುದು ಉಚಿತವಾಗಿದೆ. ಅವರು ಅತ್ಯಂತ ದಕ್ಷರು ಮತ್ತು ಮಾತು ಕಡಿಮೆಯಾದರೂ ಕೆಲಸ ಹೆಚ್ಚು ಮಾಡುವ ಪ್ರವೃತ್ತಿಯುಳ್ಳ ಮಂತ್ರಿಗಳು ಸಿಕ್ಕಿದ್ದು ನಿಜಕ್ಕೂ ನಮ್ಮ ಸೌಭಾಗ್ಯ ಎಂದು ನಾನು ಅಂದುಕೊಳ್ಳುತ್ತೇನೆ. ದಕ್ಷತೆ ಯೋಗ್ಯತೆ ಇರುವ ಮಂತ್ರಿಯನ್ನು ಕೊಟ್ಟು ಕಡಿಮೆ ಹಣ ಕೊಟ್ಟರೆ ಅವರು ಕೆಲಸ ಮಾಡುವುದು ಹೇಗೆ ಎಂಬ ಪ್ರಶ್ನೆ ಬರುತ್ತದೆ ? ನಾನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಿಗೆ ಮತ್ತು ಹಣಕಾಸಿನ ಮಂತ್ರಿಗಳಿಗೆ ಕೇಳಿಕೊಳ್ಳುತ್ತೇನೆ. ರೈತರ ಬಗ್ಗೆ ಸಂಪೂರ್ಣ ಕಳಕಳಿ ಮಾನ್ಯ ಮಂತ್ರಿಗಳಿಗೆ ಇದೆ. ಅದರ ಸದುಪಯೋಗ ಕರ್ನಾಟಕಕ್ಕೆ ಆಗಬೇಕಾದರೆ ದಯವಿಟ್ಟು ಈ ಇಲಾಖೆಗೆ ಇನ್ನೂ ಹೆಚ್ಚು ಹಣವನ್ನು ಒದಗಿಸಿ. ಈಗ ಕೊಟ್ಟಿರುವುದು ಏನೇನೂ ಸಾಲದು. ಈ ರಾಜ್ಯದ ಬೊಕ್ಕಸದ ಅರ್ಧ ಹಣ ಕೊಟ್ಟರೂ ಈ ಇಲಾಖೆಯ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಹೆಚ್ಚು ಹಣವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಇನ್ನು ನೀರಾವರಿ ವಿಚಾರದಲ್ಲಿ ಕೆಲವು ಸಮಸ್ಯೆಗಳನ್ನು ಹೇಳುತ್ತಾ ಕರ್ನಾಟಕದಲ್ಲಿ ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದವರು ಐದಾರು ವರ್ಷಗಳಿಂದ ಸತತವಾಗಿ ಬರಗಾಲವನ್ನು ಅನುಭವಿಸುತ್ತಿದ್ದೇವೆ. ಅಲ್ಲಿ ರೈತರು ಬರಗಾಲದ ಬವಣೆಗೆ ಸಿಕ್ಕಿ ತತ್ತರಿಸಿ ಕಂಗಾಲಾಗಿದ್ದಾರೆ ಎಂಬ ವಿಚಾರ ಎಲ್ಲರಿಗೂ ಗೊತ್ತಿದೆ. ಎಂದೂ ಕಾಣದಂಥ ಭೀಕರ ಬರಗಾಲ ಉತ್ತರ ಕರ್ನಾಟಕದ ರೈತರನ್ನು ಒಕ್ಕಲೆಬ್ಬಿಸಿ ವಲಸೆ ಹೋಗುವ ಮಟ್ಟಕ್ಕೆ ತಂದಿದೆ. ಮೊದಲು ನಮ್ಮಲ್ಲಿ ಸಾಕಷ್ಟು ಮಳೆಯಾಗುತ್ತಿತ್ತು. ಈಗ ಮಳೆ ಪ್ರಮಾಣ ಅತ್ಯಂತ ಕಡಿಮೆಯಾಗಿ ಯಾವುದು ಬರಗಾಲ ಬೀಳುವ ಜಿಲ್ಲೆಗಳು ಎಂದು ಹೇಳುತ್ತಿದ್ದೆವೊ ಅಲ್ಲಿ ಅಂದರೆ ಬಿಜಾಪುರ, ಬೀದರ್, ಗುಲ್ಬರ್ಗ ಕಡೆ ಹೆಚ್ಚು ಮಳೆಯಾಗಿದೆಯೇ ಹೊರತು ಉತ್ತರ ಕರ್ನಾಟಕದಲ್ಲಿ ಹೆಚ್ಚು ಮಳೆಯಾಗುತ್ತಿಲ್ಲ. ಅದರಲ್ಲೂ ವಿಶೇಷವಾಗಿ ಹೆಚ್ಚು ಹೆಚ್ಚು ಯೋಜನೆಗಳು ನಮ್ಮ ಕಡೆ ಬಂದಿಲ್ಲ. ಆದ್ದರಿಂದ ದಯವಿಟ್ಟು ಈ ತಾರತಮ್ಯವನ್ನು ಗಮನಿಸಿ ಉತ್ತರ ಕರ್ನಾಟಕಕ್ಕೆ ಯೋಗ್ಯವಾದ ಪುರಸ್ಕಾರ ಸಿಗುವಂತೆ ಮಾಡಬೇಕೆಂದು ಕಳಕಳಿಯಿಂದ ಸಚಿವರನ್ನು ಕೇಳಿಕೊಳ್ಳುತ್ತೇನೆ ಇಲ್ಲಿ ರೈತರ ಪ್ರಶ್ನೆ ಇದೆ. ಇಲ್ಲಿ ಪಕ್ಷಭೇದ ಮರೆತು ಒಗ್ಗಟ್ಟಿನಿಂದ ರೈತರ ಬಗ್ಗೆ ಹೋರಾಡುವ ಕೆಲಸ ಮಾಡಬೇಕಾಗಿದೆ. ಬಹುತೇಕ ರೈತ ಸಮುದಾಯದ ಆಶೀರ್ವಾದದಿಂದ ಈ ಸದನದ ಒಳಗೆ ಪ್ರವೇಶಮಾಡಿದ ಜನ ನಾವು. ಅಂದ ಮೇಲೆ ಅವರ ಸಂಕಷ್ಟದಲ್ಲಿ ನಾವು ಪಾಲ್ಗೊಳ್ಳದೇಹೋದರೆ ಅವರ ಶಾಪಕ್ಕೆ ಗುರಿಯಾಗಬೇಕಾದ ಸಂದರ್ಭ ಬರುತ್ತದೆಂದು ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ. ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ, ಇಲ್ಲಿ ಕೆಲಸಗಳು ಆ ರೀತಿ ಇವೆ. ಉದಾಹರಣೆಗೆ ನಮ್ಮ ಹಾನಗಲ್ ತಾಲ್ಲೂಕಿನ ವೈಶಿಷ್ಟ್ಯ ಹೇಳಬೇಕೆಂದರೆ, ಒಂದು ಕಡೆ ಶಿವಮೊಗ್ಗ ಜಿಲ್ಲೆ, ಒಂದು ಕಡೆ ಕಾರವಾರ ಜಿಲ್ಲೆ, ಅದರ ಮೂಲೆಯಲ್ಲಿ ಇರುವ ಹಾನಗಲ್ ತಾಲ್ಲೂಕು ಡಿ.ಪಿ.ಎ.ಪಿ. ಯೋಜನೆಯಲ್ಲೂ ಒಳಗೊಂಡಿಲ್ಲ ಮತ್ತು ವೆಸ್ಟ್ರನ್ ಘಾಟ್ ಯೋಜನೆಯಲ್ಲೂ ಕೂಡ ಒಳಗೊಂಡಿಲ್ಲ. ಆದರೆ ನಮ್ಮ ಸುದೈವ ಏನೆಂದರೆ, ಅಲ್ಲಿ ಎರಡು ನದಿಗಳು ಹರಿಯುತ್ತದೆ.

ಒಂದು ವರದಾ ನದಿ. ಇನ್ನೊಂದು ಬವರ್ಣನದಿ. ಮಳೆಗಾಲದಲ್ಲಿ ಈ ಎರಡು ನದಿಗಳಲ್ಲಿ ಯಥೇಚ್ಛವಾಗಿ ನೆರೆ ಬರುತ್ತದೆ. ನಮ್ಮ ರೈತರು ಬರಗಾಲದಿಂದ ಬಳಲುತ್ತಿದ್ದರೂ, ಆ ನೀರನ್ನು ನೋಡುತ್ತಾರೆಯೇ ಹೊರತು ಅದನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡುವುದಕ್ಕಾಗುತ್ತಿಲ್ಲ. ಇದು ನಮ್ಮ ದುರ್ದೈವ. ವರದಾ ನದಿಗೆ ಅಣೆಕಟ್ಟು ಕಟ್ಟಿ ಅಮುಂಖೀನ ಹೆಚ್ಚು ಭೂಮಿಯನ್ನು ನೀರಾವರಿಗೆ ಒಳಪಡಿಸಬೇಕು ಎಂಬ ವಿಚಾರ ಹಿಂದಿನ ಸರ್ಕಾರದಲ್ಲಿತ್ತು. ಹಿಂದಿನ ಸರ್ಕಾರ ಅಂದರೆ ಬಹಳ ಹಿಂದಿನ ಸರ್ಕಾರ. ಆದರೆ ಆ ವಿಚಾರವನ್ನು ಕೈಬಿಟ್ಟರು.

ಯಾವುದೇ ಯೋಜನೆಗಳನ್ನು ವರದಾ ನದಿಯಲ್ಲಿ ಮಾಡಲಿಲ್ಲ. ಇದು ಅತ್ಯಂತ ಬೇಸರದಿಂದ ಹೇಳತಕ್ಕಂಥ ವಿಚಾರ. ಅನಂತರ ೧೯೮೦–೮೧ರಲ್ಲಿ ಮೂರು ಬ್ಯಾರೇಜಗಳನ್ನು ಮೂರು ಲಿಫ್ಟ್ ಇರಿಗೇಷನ್‌ಗಳನ್ನು ಮಂಜೂರು ಮಾಡಿದರು. ಇದು ಬಜೆಟ್‌ನಲ್ಲಿ ಬಂತು, ಎಸ್ಟಿಮೇಟ್ ಕೂಡ ಆಯಿತು. ಅದಕ್ಕೆ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಕೂಡ ಆಯಿತು. ಅಂದು ಲೋಕೋಪಯೋಗಿ ಮಂತ್ರಿಗಳಾಗಿದ್ದ ಶ್ರೀ ಕಾಗೋಡು ತಿಮ್ಮಪ್ಪನವರು ಬಂದು ಅಡಿಗಲ್ಲು ಸಮಾರಂಭ ಮಾಡತಕ್ಕಂಥ ಕೆಲಸ ಕೂಡ ಮುಗಿಯಿತು. ಆದರೆ ಇದುವರೆಗೂ ಅಂದರೆ ೧೦ ವರ್ಷಗಳಾದರೂ ಒಂದೇ ಒಂದು ಕಾಸನ್ನೂ ಕೂಡ ಅದಕ್ಕೆ ಹಾಕಿಲ್ಲ. ಈ ರೀತಿ ಮಲತಾಯಿ ಧೋರಣೆ ತೋರಿಸುವಂಥ ಕೆಲಸ ಏತಕ್ಕೆ? ವರದಾ ನದಿಯೋಜನೆಯಲ್ಲಿ ಈ ಮೂರು ಬ್ಯಾರೇಜಿಗಳನ್ನು ಮತ್ತು ಮೂರು ಲಿಫ್ಟ್ ಇರಿಗೇಷನ್‌ಗಳನ್ನು ಕಟ್ಟಿದರೆ, ನದಿಯ ದಂಡೆಯಲ್ಲಿರುವಂಥ ರೈತರು ಇದರ ಉಪಯೋಗವನ್ನು ಪಡೆದುಕೊಳ್ಳುತ್ತಾರೆ. ಲಿಫ್ಟ್ ಇರಿಗೇಷನ್ ತುರುವಳ್ಳಿ, ಲಿಫ್ಟ್ ಇರಿಗೇಷನ್, ವಾಸನ್, ಲಿಫ್ಟ್ ಇರಿಗೇಷನ್ ಮಕರಹಳ್ಳಿ, ಅಂದಿನಿಂದಲೂ ಇವು ಬಜೆಟ್‌ನಲ್ಲಿ ಬರುತ್ತಲೇ ಇವೆ. ಆದರೆ, ಹಣ ಮಾತ್ರ ಬ್ಯಾರೇಜುಗಳಿಗೂ ಇಲ್ಲ; ಲಿಫ್ಟ್ ಇರಿಗೇಷನ್‌ಗಳಿಗೂ ಇಲ್ಲ. ಸುಮ್ಮಸುಮ್ಮನೆ ಬಜೆಟ್‌ನಲ್ಲಿ ಹೆಸರುಗಳು ಬಂದರೆ, ಅಷ್ಟಕ್ಕೇ ನಾವು ತೃಪ್ತಿಯಾಗಬೇಕೆ? ಅದಕ್ಕೆ ಏನಾದರೂ ಹಣ ಒದಗಿಸಬಾರದೇ ಅದಕ್ಕೆ ಹಿಂದಿನ ಸರ್ಕಾರ ಒಂದು ಕಾಸನ್ನೂ ಕೂಡ ಹಾಕಲಿಲ್ಲ. ಕನಿಷ್ಟ ಪಕ್ಷ ಈ ಕೆಲಸಗಳಾದರೆ ನಮ್ಮ ಭಾಗದ ರೈತರಿಗೆ ಹೇಳುವುದಕ್ಕೆ ಸಾಧ್ಯವಾಗುತ್ತದೆ. ರೈತರು ಕೂಡ ನೋಡುತ್ತಿದ್ದಾರೆ. ಇಲ್ಲಿ ಯಥೇಚ್ಛವಾಗಿ ನೀರು ಹೋಗುತ್ತಿದ್ದರೂ ಒಂದು ಯೋಜನೆಯನ್ನೂ ಸರ್ಕಾರದಿಂದ ಮಾಡಲಿಲ್ಲ. ಯಾವ ಪ್ರತಿನಿಧಿಯನ್ನು ಆರಿಸಿ ಕಳಿಸಿದರೂ ನಮ್ಮ ಹಣೇ ಬರಹ ಇಷ್ಟೇ. ಯಾವ ಸರ್ಕಾರ ಬಂದರೂ ನಮ್ಮ ಹಣೇ ಬರಹ ಇಷ್ಟೇ ಎಂದು ಅಡಿಕೊಳ್ಳತಕ್ಕ ಪರಿಸ್ಥಿತಿ ಬಂದಿದೆ. ನೀರಾವರಿ ಬಗ್ಗೆ ರಾಜ್ಯದ ಸಮಗ್ರ ಚಿತ್ರ ತೆಗೆದುಕೊಂಡರೆ ೨೫ ಪರ್ಸೆಂಟ್‌ಗಿಂತ ಹೆಚ್ಚು ನೀರಾವರಿ ಇಲ್ಲ. ನೀರಾವರಿ ಆಗುವಂಥ ವ್ಯವಸ್ಥೆ ಇದ್ದಲ್ಲಿ ನೀವು ಮಾಡುವುದಿಲ್ಲ. ನಾನು ಬೃಹತ್ ನೀರಾವರಿ ಬಗ್ಗೆ, ಮಧ್ಯಮ ನೀರಾವರಿ ಬಗ್ಗೆ ಮಾತನಾಡುವುದಿಲ್ಲ. ಚಿಕ್ಕ ನೀರಾವರಿ ಮತ್ತು ಏತ ನೀರಾವರಿ ಬಗ್ಗೆ ಮಾತನಾಡುತ್ತೇನೆ. ಮತ್ತು ಕೊಳವೆ ಬಾವಿಗಳ ಮೂಲಕ ನೀರು ಉಣಿಸತಕ್ಕ ಸಾಮೂಹಿಕ ನೀರಾವರಿ ಕೆಲಸವನ್ನಾದರೂ ಕೈಗೆತ್ತಿಕೊಂಡರೆ, ಕನಿಷ್ಟ ನಮ್ಮ ರೈತ ಸಮುದಾಯಕ್ಕೆ ಸ್ವಲ್ಪ ಸಹಾಯವಾದೀತು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಛೇರ್ಮನ್:— ಇನ್ನು ಎರಡು ನಿಮಿಷದಲ್ಲಿ ಮುಗಿಸಿ. ಇನ್ನೂ ೫ ಜನ ಇದ್ದಾರೆ. ೬ ಗಂಟೆಗೆ ಮುಗಿಸಬೇಕು.

ಶ್ರೀ ಮನೋಹರ್ ಹನುಮಂತಪ್ಪ ತಹಶೀಲ್ದಾರ್:— ಈಗ ಏತ ನೀರಾವರಿ ಕಾರ್ಪೊರೇಷನ್ ಇದೆ. ಅದಕ್ಕೆ ೧೫ ಪರ್ಸೆಂಟ್ ವಂತಿಗೆಯನ್ನು ರೈತರು ಕೊಡಬೇಕಾಗಿತ್ತು. ಇನ್ನು ಮುಂದೆ ಈ ಹಣವನ್ನು ಸರ್ಕಾರವೇ ಭರಿಸುವುದೆಂದು ಮಾನ್ಯ ಲೋಕೋಪಯೋಗಿ ಮಂತ್ರಿಗಳು ಹೇಳಿದ್ದಾರೆ. ಇದು ಸಂತೋಷದ ವಿಷಯ. ಈ ಕಾರ್ಪೊರೇಷನ್‌ನ್ನು ವೈಂಡಪ್ ಮಾಡವೆ. ಹೆಚ್ಚು ಹಣವನ್ನು ಕೊಟ್ಟು ಎಲ್ಲ ನೀರಾವರಿ ಯೋಜನೆಗಳನ್ನು ಈ ಕಾರ್ಪೊರೇಷನ್ ಮೂಲಕ ಜಾರಿಗೆ ತರಬೇಕೆಂದು ಹೇಳುತ್ತೇನೆ. ಈಗ ಸರ್ಕಾರದವರು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ, ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಮಾಡಿದ್ದಾರೆ. ಅದೇ ರೀತಿ ಬಾಂಬೆ ಕರ್ನಾಟಕ ಅಭಿವೃದ್ಧಿ ಮಂಡಲಿ ಮಾಡಿ, ಹೆಚ್ಚಿಗೆ ಹಣ ಒದಗಿ ಕೊಡಬೇಕೆಂದು ಅಧ್ಯಕ್ಷರ ಮೂಲಕ ಸನ್ಮಾನ್ಯ ಮಂತ್ರಿಗಳನ್ನು ವಿನಂತಿಸಿಕೊಳ್ಳುತ್ತೇನೆ. ಹೈದರಾಬಾದ್ ಕರ್ನಾಟಕದ ಅಭಿವೃದ್ಧಿ ಮಂಡಲಿಗೆ ೪೦ ಕೋಟಿ ರೂಪಾಯಿಗಳನ್ನು ಕೊಟ್ಟು ಆ ಭಾಗದ ಅಭಿವೃದ್ಧಿಗೆ ಪರಿಶ್ರಮ ಪಡುತ್ತಿದ್ದೀರಿ. ಬಾಂಬೆ ಕರ್ನಾಟಕ ಪ್ರದೇಶದಲ್ಲಿ ದೊಡ್ಡ ದೊಡ್ಡ ಜಿಲ್ಲೆಗಳು ಬರುತ್ತವೆ. ಅವು ಧಾರವಾಡ, ಬಿಜಾಪುರ, ಹಾಗೂ ಬೆಳಗಾಂ ಜಿಲ್ಲೆಗಳು ೧೮–೨೦ ಎಂ.ಎಲ್.ಎ.ಗಳಿಂದ ಕೂಡಿರುವಂಥ ದೊಡ್ಡ ಜಿಲ್ಲೆಗಳು. ಇವುಗಳನ್ನು ಸಂಪೂರ್ಣವಾಗಿ ನೆಗ್‌ಲೆಕ್ಟ್ ಮಾಡಲಾಗಿದೆ. ಈ ರೀತಿ ಮಾಡಬಾರದು. ಎನ್ನುವುದು ನನ್ನ ಉದ್ದೇಶ ಮತ್ತೆ ನಮಗೆ ಅಂಕಿ ಅಂಶಗಳಿಂದ ಗೊತ್ತಾಗುತ್ತಿದೆ. ಕಾವೇರಿ ಯೋಜನೆಗಳಿಗೆ ೧೫೦ ಕೋಟಿ ಕೊಟ್ಟಿದ್ದೀರಿ; ಕೃಷ್ಣ

ಯೋಜನೆ ೫೦ ಕೋಟಿ ಕೊಟ್ಟಿದ್ದೀರಿ; ಈ ತಾರತಮ್ಯ ಏತಕ್ಕೆ ? ಈ ತಾರತಮ್ಯ ಹೋಗಬೇಕಾದರೆ, ಕನಿಷ್ಠಪಕ್ಷ ಬಾಂಬೆ ಕರ್ನಾಟಕ ಅಭಿವೃದ್ಧಿ ಮಂಡಲಿಯನ್ನು ತಾವು ಮಾಡದೇ ಹೋದರೆ ನಾವೂ ಕೂಡ ಬೇರೆಯವರ ಹಾಗೆ ಒತ್ತಾಯ ಮಾಡಬೇಕಾಗುತ್ತದೆ. ಹೆಚ್ಚಿನ ರೀತಿಯಲ್ಲಿ ಹೋರಾಟ ಮಾಡಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಮಾನ್ಯ ಹಣಕಾಸಿನ ಸಚಿವರು ನೀರಾವರಿ ಯೋಜನೆಗೆ ಹೆಚ್ಚು ಹಣವನ್ನು ಕೊಡುತ್ತೇವೆಂದು ಖಾಸಗಿಯಾಗಿ ಭರವಸೆ ಕೊಟ್ಟಿದ್ದಾರೆ. ಆ ಪ್ರಕಾರ, ಚೀಪ್ ಪಾಪ್ಯುಲಾರಿಟಿ ಯೋಜನೆಗಳನ್ನು ಕೈಬಿಟ್ಟು ಸಾಲಿಡ್ ಆಗಿರುವ ಯೋಜನೆಗಳಿಗೆ ರೈತರಿಗೆ ಬೇಕಾಗುವ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಗಮನ ಹರಿಸುತ್ತೇನೆಂದು ತಮ್ಮ ಮಾತಿನಲ್ಲಿ ಹೇಳಿದ್ದಾರೆ ಆದ್ದರಿಂದ ಹಣಕಾಸಿನ ಮಂತ್ರಿಗಳನ್ನು ಮತ್ತು ಮುಖ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ, ಹೆಚ್ಚು ಹಣವನ್ನು ಸಣ್ಣ ನೀರಾವರಿ ಮತ್ತು ಲಿಫ್ಟ್ ಇರಿಗೇಷನ್‌ಗೆ ಮೀಸಲಿಡಬೇಕೆಂದು ಹೇಳುತ್ತೇನೆ.

ಛೇರ್ಮನ್.—ಬೇಗ ಮುಗಿಸಿ. ಇಲ್ಲದಿದ್ದರೆ ನಾನು ಬೇರೆಯವರನ್ನು ಕರೆಯುತ್ತೇನೆ.

ಶ್ರೀ ಮನೋಹರ್ ಹನುಮಂತಪ್ಪ ತಹಶೀಲ್ದಾರ್:—ದಯವಿಟ್ಟು ಹತ್ತು ನಿಮಿಷ ಅವಕಾಶ ಕೊಡಿ. ವಿರೋಧ ಪಕ್ಷದ ಸದಸ್ಯರಾದ ಬನ್ನಿಕೋಡು ಅವರು ಅಪ್ಪರ್ ತುಂಗಾ ಯೋಜನೆ ನಮ್ಮ ಭಾಗಕ್ಕೂ ಬರುವಂತೆ ಮಾಡಬೇಕು. ಇದು ಕಡಿಮೆ ಖರ್ಚಿನಲ್ಲಿ ಹೆಚ್ಚು ಪ್ರದೇಶಕ್ಕೆ ಅನುಕೂಲವಾಗುವಂತಹ ಯೋಜನೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಹೆಚ್ಚು ವಿಸ್ತಾರವಾಗಿ ಮಾತನಾಡುತ್ತಿದ್ದೆ. ಅವರು ಸಾಕಷ್ಟು ವಿಚಾರ ಹೇಳಿರುವುದರಿಂದ ಅವರ ವಾದಕ್ಕೆ ಧ್ವನಿಗೂಡಿಸಿ ಆ ಯೋಜನೆಯನ್ನು ಖಂಡಿತ ತಾವು ಮಾಡಿಕೊಡಲೇಬೇಕು, ಇದರಿಂದ ನಮ್ಮ ರೈತ ಸಮುದಾಯಕ್ಕೆ ಅನುಕೂಲವಾಗುತ್ತದೆಂದು ನಾನು ಇನ್ನೊಮ್ಮೆ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಇನ್ನು ದೊಡ್ಡ ದೊಡ್ಡ ರಸ್ತೆಗಳನ್ನು ಮತ್ತು ದೊಡ್ಡ ದೊಡ್ಡ ಕೆರೆಗಳನ್ನು ಜಿಲ್ಲಾ ಪರಿಷತ್ತಿಗೆ ವಹಿಸಿದ್ದೀರಿ. ಜಿಲ್ಲಾ ಪರಿಷತ್ತಿನವರು ತಾವು ಮಾಡುವಹಾಗೆ ಇಲ್ಲ. ರಸ್ತೆಗಳೆಲ್ಲ ಪೂರ್ತಿ ಹಾಳಾಗಿವೆ ಆದ್ದರಿಂದ ಈ ರಸ್ತೆಗಳನ್ನು ಟೇಕನ್ ಓವರ್ ಮಾಡಬೇಕು. ನೂರು ಎಕರೆಗಿಂತ ಹೆಚ್ಚು ನೀರು ಪೂರೈಸುವ ಕೆರೆಗಳನ್ನು ಕೂಡ ಟೇಕನ್ ಓವರ್ ಮಾಡಿ ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳು ಆ ಕೆಲಸ ನಿರ್ವಹಿಸುವಂತೆ ಮಾಡಬೇಕು. ಹಿಂದೆ ಮೆಯಿಂಟ್‌ನೆನ್ಸ್ ಗ್ರ್ಯಾಂಟ್ ಎಂದು ಕೊಡುತ್ತಿದ್ದರು. ಅದರಲ್ಲಿ ಈಗ ತಾರತಮ್ಯ ಉಂಟಾಗಿದೆ. ನಮ್ಮ ಭಾಗದ ರಸ್ತೆಗಳಿಗೆ ಅನುಗುಣವಾಗಿ ಮೆಯಿಂಟ್‌ನೆನ್ಸ್ ಗ್ರ್ಯಾಂಟ್ ಕೊಡಬೇಕು. ಈಗ ಕೊಡುತ್ತಿರುವುದನ್ನು ಹೆಚ್ಚು ಮಾಡಬೇಕು, ಇಲ್ಲದಿದ್ದರೆ ತುಂಬಾ ತೊಂದರೆಯಾಗುತ್ತದೆ. ಇಲಾಖೆಯವರು ಕೆಲಸ ಮಾಡುವುದಕ್ಕಾಗುವುದಿಲ್ಲ. ಇನ್ನು ಏತ ನೀರಾವರಿ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಇವತ್ತು ನಮ್ಮಲ್ಲಿ ಕೆರೆಗಳಿವೆ ಆದರೆ ಹೂಳೆತ್ತಿಲ್ಲ ಏತ ನೀರಾವರಿ ಯೋಜನೆಗೆ ಅನುಕೂಲ ಇದೆ, ಆದರೆ ವ್ಯವಸ್ಥೆ ಮಾಡಿಲ್ಲ. ಇನ್ನು ಕೆಲವು ಕಡೆ ಗ್ರೌಂಡ್ ವಾಟರ್ ಜಾಸ್ತಿ ಇದೆ, ಆದರೆ ರೈತರಿಗೆ ಆ ನೀರಿನ ಉಪಯೋಗ ಪಡೆಯುವುದಕ್ಕೆ ಆಗುತ್ತಿಲ್ಲ. ಆದುದರಿಂದ ಸಾಮೂಹಿಕ ಕೊಳವೆ ಬಾವಿ ಯೋಜನೆಯನ್ನು ಜಾರಿಗೆ ತಂದು ಸರ್ಕಾರವೇ ಆ ಹಣವನ್ನು ಭರಿಸಿ ಅಥವಾ ಸಬ್ಸಿಡಿ ಕೊಟ್ಟು ಸುಲಭ ಕಂತುಗಳಲ್ಲಿ ವಾಪಸ್ಸು ಕಟ್ಟಲು ಅನುಕೂಲವಾಗುವಂತೆ ಮಾಡಬೇಕು. ಹೀಗೆ ಮಾಡಿದರೆ ನಿಜಕ್ಕೂ ಎಷ್ಟೋ ರೈತರು ಕನಿಷ್ಟಪಕ್ಷ ಒಪ್ಪೊತ್ತಿನ ಗಂಜಿಯನ್ನು ಇವತ್ತು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ''ರೈತ ಈ ದೇಶದ ಬೆನ್ನೆಲುಬು, ರೈತ ಒಕ್ಕದಿದ್ದರೆ ಜಗವೆಲ್ಲ ಬಿಕ್ಕುವುದು'' ಎಂದೆಲ್ಲ ಹೇಳಿ ಇವತ್ತು ರೈತನ ಬೆನ್ನೆಲುಬು ಮುರಿದಿದೆ. ಅದನ್ನು ಸುಧಾರಣೆ ಮಾಡುವುದಕ್ಕೆ ನಿಜವಾಗಿ ಸರ್ಕಾರಕ್ಕೆ, ಮಂತ್ರಿಗಳಿಗೆ, ಮುಖ್ಯಮಂತ್ರಿಗಳಿಗೆ ರೈತರ ಬಗ್ಗೆ ಅನುಕಂಪ ಇದ್ದರೆ ಈ ಯೋಜನೆಯನ್ನು ಜಾರಿಗೆ ತರಬೇಕೆಂದು ನಾನು ಕಳಕಳಿಯಿಂದ ಬೇಡಿಕೊಳ್ಳುತ್ತೇನೆ. ಎಂ.ಡಿ.ಆರ್. ರಸ್ತೆಗಳನ್ನು ಸ್ಟೇಟ್ ಹೈವೇಗೆ ಎತ್ತರಿಸಬೇಕು. ಇಲ್ಲದಿದ್ದರೆ ಮೇಯಿಂಟೇನ್ ಮಾಡುವುದಕ್ಕಾಗುವುದಿಲ್ಲ. ತಾಲ್ಲೂಕಿಗೆ ಕನಿಷ್ಟ ವರ್ಷಕ್ಕೆ ೧೦ ಕಿಲೋಮೀಟರ್ ಟಾರ್ ರಸ್ತೆಯನ್ನು ಮಾಡುವ ವ್ಯವಸ್ಥೆ ಮಾಡಬೇಕು. ಮಂಡಲಕ್ಕೆ ಕನಿಷ್ಟ ೫ ಕಿಲೋಮೀಟರ್ ಆಲ್ ವೆದರ್ ರೋಡ್ಸ್ ಮಾಡಬೇಕು. ಇಲ್ಲದಿದ್ದರೆ ನಾವು ಜನರಿಗೆ ಏನೂ ಸೌಲಭ್ಯ ಕೊಟ್ಟ ಹಾಗೆ ಆಗುವುದಿಲ್ಲ. ಅನೇಕ ಹಳ್ಳಿಯ ಜನರು ಇಲ್ಲಿಯವರೆಗೆ ಕೆಂಪು ಬಸ್ಸುಗಳನ್ನು ನೋಡುವ ಸೌಭಾಗ್ಯವನ್ನು ಪಡೆದಿಲ್ಲ. ಈ ಕೆಲಸವನ್ನು ಸರ್ಕಾರ ಬೇರೆ ಬೇರೆ ಯೋಜನೆಗಳಲ್ಲಿ ತೆಗೆದುಕೊಂಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಛೇರ್ಮನ್:— ನಿಮಗೆ ಇನ್ನು ಅವಕಾಶ ಇಲ್ಲ, ಕುಳಿತುಕೊಳ್ಳಿ, ಶಿವಶೇಖರಪ್ಪನವರೇ ನೀವು ಮಾತನಾಡಿ.

ಶ್ರೀ ಮನೋಹರ್ ಹನುಮಂತಪ್ಪ ತಹಶೀಲ್ದಾರ್:— ಇವತ್ತು ಈ ರಾಜ್ಯದಲ್ಲಿ ನಿರುದ್ಯೋಗಿ ಇಂಜಿನಿಯರುಗಳ ಸಂಖ್ಯೆ ಬಹಳಷ್ಟಾಗಿದೆ.

ಇವತ್ತು ಬೇಕಾದಷ್ಟು ಜಾಗಗಳು ಖಾಲಿಯಿವೆ. ರಿಕ್ರೂಟಮೆಂಟ್ ಅನ್ನು ಸರ್ಕಾರದವರು ಮಾಡಬೇಕು. ಇಲ್ಲದೇಹೋದರೆ ಕಛೇರಿಗಳಲ್ಲಿ ಇಂಜಿನಿಯರ್‌ಗಳು ಇರುವುದಿಲ್ಲ ನಿರುದ್ಯೋಗಿಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ. ಆದ್ದರಿಂದ ದಯವಿಟ್ಟು ನಿರುದ್ಯೋಗಿಗಳ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೆ ರಿಕ್ರೂಟ್‌ಮೆಂಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಇಲಾಖೆಯಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆಯುತ್ತಿದೆಯೆಂದು ಗೊತ್ತಿದೆ ಇಂಜಿನಿಯರ್‌ಗಳು ಕಂಟ್ರಾಕ್ಟರುಗಳು ಸೇರಿಕೊಂಡು ಸಾಕಷ್ಟು ಹಣವನ್ನು ಲೂಟಿ ಹೊಡೆಯುತ್ತಿದ್ದಾರೆ. ಬೇಕಾದಷ್ಟು ಭ್ರಷ್ಟಾಚಾರದ ಹಗರಣಗಳು ಇವೆ. ಇವುಗಳನ್ನು ತನಿಖೆ ಮಾಡುವುದಕ್ಕೆ ರಾಜ್ಯ ಮಟ್ಟದಲ್ಲಿ ಒಂದು ಹೈಪವರ್ ಕಮಿಟಿಯನ್ನು ಮಾಡಿ ಅದರ ಮುಖಾಂತರ ಹಗರಣಗಳ ವಿಚಾರಣೆ ನಡೆಸಬೇಕು. ರಾಜ್ಯದಲ್ಲಿ ಕೆಲಸಗಳ ಗುಣಮಟ್ಟ ಕಾಯ್ದುಕೊಳ್ಳುವ ದಿಶೆಯಲ್ಲಿ ತಾವು ಕೆಲಸವನ್ನು ಮಾಡುತ್ತಿದ್ದೀರಿ. ಇನ್ನೂ ನಾನು ಹೇಳುವಂತಹ ಅನೇಕ ವಿಷಯಗಳಿದ್ದವು. ನಮ್ಮ ಅಧ್ಯಕ್ಷರಿಗೆ ನಮ್ಮ ಬಗ್ಗೆ ಕೋಪ ಇದ್ದಹಾಗೆ ಕಾಣಿಸುತ್ತಿದೆ.

ಛೇರ್ಮನ್.—ನನಗೆ ಕೋಪ ಇಲ್ಲ. ತಾವು ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ, ಬೇರೆಯವರಿಗೆ ಅವಕಾಶ ಕೊಡಬೇಕು.

ಶ್ರೀ ಮನೋಹರ ಹನುಮಂತಪ್ಪ ತಹಶೀಲ್ದಾರ್.—ಮಾನ್ಯ ಅಧ್ಯಕ್ಷಿಣಿಯವರೆ, ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ಮತ್ತು ಮಾನ್ಯ ಮಂತ್ರಿಗಳಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಶಿವಶೇಖರಪ್ಪಗೌಡ. —ಶಿರವಾಳ.—(ಶಹಪುರ) ಸನ್ಮಾನ್ಯ ಅಧ್ಯಕ್ಷಣಿಯವರೆ, ಕಾಮಗಾರಿ ಮತ್ತು ನೀರಾವರಿ ಇಲಾಖೆಗಳ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ, ನನ್ನ ಮತದಾರ ಕ್ಷೇತ್ರದಲ್ಲಿ ಬರುತ್ತಿರುವ ಅತಿ ಪ್ರಾಮುಖ್ಯವಾದ ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲನೆಯಹಂತದ ಕೆಲಸದಬಗ್ಗೆ, ಅಲ್ಲಿ ಯಾವರೀತಿಯಲ್ಲಿ ಕೆಲಸ ನಡೆಯುತ್ತಿದೆ ಎನ್ನುವ ಬಗ್ಗೆ ಕೆಲವು ವಿಚಾರಗಳನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ೧೯೬೪ರಲ್ಲಿ ಈಗಿನ ಮುಖ್ಯಮಂತ್ರಿಗಳಾದ ಮಾನ್ಯ ವೀರೇಂದ್ರಪಾಟೀಲ್‌ರವರು ಲೋಕೋಪಯೋಗಿ ಇಲಾಖೆಯ ಸಚಿವರಾಗಿದ್ದಾಗ ದಿವಂಗತ ಲಾಲ್ ಬಹದ್ದೂರ್‌ಶಾಸ್ತ್ರಿಯವರನ್ನು ಕರೆಸಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಅಡಿಗಲ್ಲನ್ನು ಹಾಕಿಸಲಾಯಿತು. ೧೯೭೮ರಲ್ಲಿ ಜಾಗತಿಕ ಬ್ಯಾಂಕಿನ ಒಂದು ಸಹಾಯದಿಂದ ಈ ಕಾಮಗಾರಿಯ ಮೊದಲನೆಯ ಹಂತದ ಕೆಲಸ ಪ್ರಾರಂಭವಾಗಿ ಇವತ್ತು ಸುಮಾರು ೧ಲಕ್ಷ ಹೆಕ್ಟೇರ್ ಪ್ರದೇಶ ನೀರಾವರಿಯಾಗಿದೆ ಎನ್ನತಕ್ಕ ಮಾತನ್ನು ನಮ್ಮ ಸರ್ಕಾರದವರು ಹೇಳುತ್ತಿದ್ದಾರೆ. ನನ್ನ ಅನಿಸಿಕೆಯ ಪ್ರಕಾರ, ಅಷ್ಟು ನೀರಾವರಿಯಾಗಿಲ್ಲ. ಈಗ ಎರಡನೆಯ ಹಂತದ ಕೆಲಸ ವರ್ಲ್ಡ್ ಬ್ಯಾಂಕಿನ ಸಹಾಯದಿಂದ ನಡೆಯುತ್ತಿದೆ. ಇದು ಮುಖ್ಯವಾಗಿ ನಮ್ಮ ಮತದಾರ ಕ್ಷೇತ್ರಕ್ಕೆ ಬರುತ್ತಿರುವ ೬ನೆಯ ಡಿಸ್ಟ್ರಿಬ್ಯೂಟರಿ. ೧೯೮೩ರಲ್ಲಿ ಆಗಿನ ಕಾಮಗಾರಿ ಸಚಿವರಾದ ದೇವೇಗೌಡರು ಇದೇ ಮನೆಯಲ್ಲಿ ಶಹಪುರ ತಾಲ್ಲೂಕಿಗೆ ನೀರನ್ನು ಕೊಡುವ ಭರವಸೆಯನ್ನು ಕೊಟ್ಟಿದ್ದರು. ಅಲ್ಲದೆ ಅವರು ಭೀಮರಾಯನಗುಡಿಗೆ ಬಂದು ಶಹಪುರ ತಾಲ್ಲೂಕಿಗೆ ನೀರನ್ನು ಕೊಡುತ್ತೇವೆಂದು ಜನರ ಮಧ್ಯೆ ಘೋಷಣೆ ಮಾಡಿದರು. ಆದರೆ ೧೯೯೦ನೇ ಇಸವಿ ಬಂದರೂ ಇವತ್ತಿನವರೆಗೂ ನಮ್ಮ ತಾಲ್ಲೂಕಿಗೆ ನೀರು ಕೊಡಲಿಲ್ಲ. ನಮ್ಮ ರೈತರು ಇವತ್ತು ಕಣ್ಣೀರು ಸುರಿಸತಕ್ಕ ಪರಿಸ್ಥಿತಿ ಬಂದಿದೆ. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳನ್ನು ಕೇಳಿದಾಗ ಅವರು ಅಪ್ಪರ್ ಕೃಷ್ಣಾಗೆ ನಾನು ಭೇಟಿ ಕೊಡುತ್ತೇನೆ ಮುಖ್ಯವಾಗಿ ನಿಮ್ಮ ಶಹಪುರ ಭಾಗಕ್ಕೆ ನೀರನ್ನು ಕೊಡುವಂತಹ ವ್ಯವಸ್ಥೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದರು. ಆ ಪ್ರಕಾರ ಅವರು ನಾರಾಯಣಪುರ ಡ್ಯಾಮ್, ಆಲಮಟ್ಟಿ ಡ್ಯಾಮು ಮುಂತಾದ ಇಡೀ ಕೃಷ್ಣಾ ಮೇಲ್ದಂಡೆ ಪ್ರದೇಶದಲ್ಲಿ ಮೂರು ದಿವಸಗಳ ಕಾಲ ಕ್ಯಾಂಪ್ ಮಾಡಿ ಸ್ಟಡಿ ಮಾಡಿ ಬಂದಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಯಾವ ಮಂತ್ರಿಗಳೂ ಕೂಡ ಇಷ್ಟು ತಾಳ್ಮೆಯಿಂದ ಆ ಭಾಗದಲ್ಲಿ ನೋಡಲಿಲ್ಲವೆಂದು ಹೇಳಬೇಕಾಗುತ್ತದೆ. ೧೯೯೦ನೇ ಇಸವಿಯಲ್ಲೂ ಕೂಡ ನಮ್ಮ ತಾಲ್ಲೂಕಿಗೆ ನೀರನ್ನು ಕೊಡತಕ್ಕ ಪರಿಸ್ಥಿತಿಯಲ್ಲಿ ಇಲ್ಲ ಹೋದ ಅಸೆಂಬ್ಲಿಯಲ್ಲಿ ನಾನು ಈ ಬಗ್ಗೆ ಪ್ರಶ್ನೆ ಮುಖಾಂತರ ಸಚಿವರನ್ನು ಕೇಳಿದಾಗ, ಸಚಿವರು ಜುಲೈ ತಿಂಗಳಿನಲ್ಲಿ ನೀರು ಕೊಡುತ್ತೇವೆಂದು ಹೇಳಿದ್ದರು, ಈಗ ಜುಲೈ ತಿಂಗಳು ಬಂತು ನಮ್ಮ ಕಡೆಗೆ ನೀರು ಬರಲಿಲ್ಲ. ಕೊನೆಯ ಪಕ್ಷ ಅಕ್ಟೋಬರ್ ತಿಂಗಳಿನಲ್ಲಾದರೂ ಖಾರೀಫ್ ಮತ್ತು ರಬೀ ಬೆಳೆಗಳಿಗೆ ನೀರು ಕೊಡತಕ್ಕ ವ್ಯವಸ್ಥೆಯನ್ನು ತಾವು ಮಾಡುತ್ತೀರಿ ಎಂದು ನಾನು ನಂಬಿದ್ದೇನೆ. ನಮ್ಮ ಶಹಪುರ ೬ನೇ ಡಿಸ್ಟ್ರಿಬ್ಯೂಟರಿಯಲ್ಲಿ ಸುಮಾರು ೪೫ ಸಾವಿರ ಎಕರೆ ನೀರಾವರಿಯಾಗುತ್ತದೆ ನಾವು ಎಷ್ಟೋ ಸಲ ಈ ಬಗ್ಗೆ

ಕೇಳಿಕೊಂಡು ಬಂದಿದ್ದೇವೆ. ತಾವು ನಮ್ಮ ಬೇಡಿಕೆಯನ್ನು ಕಾರ್ಯಗತ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಎರಡನೇಯದಾಗಿ, ಈ ಎರಡನೇ ಹಂತದ ಕೆಲಸಕ್ಕೆ, ನಾನು ಮಾನ್ಯ ಸಚಿವರನ್ನು ತಮ್ಮ ಮೂಲಕ ವಿಚಾರ ಮಾಡುತ್ತಿದ್ದೇನೆ. ಈಗ ಕೆನಾಲ್ ಕೆಲಸಕ್ಕೆ ಸುಮಾರು ಹತ್ತು ಕೋಟಿ ರೂಪಾಯಿ ವ್ಯವಸ್ಥೆಯಲ್ಲಿ ಟೆಂಡರ್ ಮುಖಾಂತರ ವಾಟರ್ ಸಪ್ಲೈ ಸ್ಕೀಮ್‌ನ್ನು ತೆಗೆದುಕೊಂಡಿದ್ದಾರೆ. ಈ ಸ್ಕೀಮ್‌ಗಳಲ್ಲಿ ಅರ್ಧದಷ್ಟು ಕೆಲಸ ನಡೆಯುತ್ತಿದೆ. ಆದರೆ ಇವತ್ತು ನೀರು ಕೊಡಲಾಗದ ಪರಿಸ್ಥಿತಿಯಲ್ಲಿ ಟೆಂಡರ್ ಮೂಲಕ ಕರೆಯಲಾದ ಕೆಲಸಗಳು ನಿಂತಿವೆ. ಇದನ್ನು ಏಕೆ ಮಾಡಬೇಕಿತ್ತು ? ಇದರ ಬದಲಾಗಿ ಬೇರೆ ಕಂಟ್ರಾಕ್ಟರ್‌ಗಳಿಗೆ ದುಡ್ಡು ಕೊಟ್ಟಿದ್ದರೆ ಅವರೇ ನೀರು ಕೊಡಬಹುದಾಗಿತ್ತು. ಇದು ಬಹಳ ಮುಖ್ಯವಾದ ವಿಚಾರ ಇದೆ. ಮಾನ್ಯ ಸಚಿವರು ಇದರ ಬಗ್ಗೆ ವಿಚಾರ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇನ್ನೊಂದು ಮುಖ್ಯವಾದ ವಿಷಯ ಎಂದರೆ' ನಮ್ಮಲ್ಲಿ ಆರ್ಬಿಟ್ರೇಷನ್ ಮೂಲಕ ಈ ಕೇಸ್ ಮಾಡುತ್ತಿದ್ದಾರೆ. ಇದು ಕಂಟ್ರಾಕ್ಟರ್‌ಸ್‌ಗೆ ಲಾಭ ಆಗತಕ್ಕಂಥ ಕೆಲಸವಾಗಿದೆ. ಅರ್ಬಿಟ್ರೇಶನ್ ಏಕೆ ಬೇಕು ? ನಿರ್ದಿಷ್ಟವಾಗಿ ಟೆಂಡರ್‌ನಲ್ಲಿ ಹೇಳೋಣ. ಇಷ್ಟು ಹಣ ಇದೆ, ಇಷ್ಟರಲ್ಲೇ ನೀವು ಮಾಡಿರಿ, ಬೇಡವಾದರೆ ಬಿಡಿ ಎಂದು ಹೇಳುವುದು ಬಿಟ್ಟು ಈ ಆರ್ಬಿಟ್ರೇಶನ್ ಕ್ಲಾಸ್ ಇಟ್ಟಿರುವುದರಿಂದ ಸಿಕ್ಕಾಪಟ್ಟೆ, ಕೋಟ್ಯಾಂತರ ರೂಪಾಯಿ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಕಂಟ್ರಾಕ್ಟರ್‌ಗಳು ಲಾಭ ಪಡೆದುಕೊಂಡು ಎಲ್ಲಿ ಕಡೆಗೆ ಹೋಗಿದ್ದಾರೆ. ಆದರೆ ನಮ್ಮ ಕೆಲಸ ಮಾತ್ರ ಅಲ್ಲೇ ನಿಂತಿದೆ ೧೯೯೧ನೇ ಇಸವಿ ಬಂದರೂ ಕೂಡ ನೀರು ಕಾಣಲಾಗದ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಆದ್ದರಿಂದ ನಾನು ತಮಗೆ ಹೇಳುವುದೇನೆಂದರೆ, ಈ ಆರ್ಬಿಟ್ರೇಶನ್ ಕ್ಲಾಸ್ ಏನಿದೆ ಇದನ್ನು ತೆಗೆಯಬೇಕೆಂದು ನಿರ್ದಿಷ್ಟವಾಗಿ ಹೇಳಬಯಸುತ್ತೇನೆ. ಇದಾದನಂತರ ಭೂಸ್ವಾಧೀನ ಮಾಡತಕ್ಕಂಥ ಕೆಲಸ ನಮ್ಮಲ್ಲಿ ಬಹಳ ತ್ವರಿತಗತಿಯಲ್ಲಿ ನಡೆದಿದೆ. ಸುಮಾರಾಗಿ ನಮ್ಮಲ್ಲಿ ರೈತರಿಗೆ ಸಿಗತಕ್ಕಂಥ ಬೆಲೆ ಒಂದು ಎಕರೆಗೆ ೩ ಸಾವಿರದಿಂದ ೪ ಸಾವಿರ ರೂಪಾಯಿ ಮಾತ್ರ. ತಾವು ಯೋಚನೆ ಮಾಡಬೇಕು, ಇವತ್ತು ನೀರಾವರಿ ಬಂದನಂತರ ಆ ಪ್ರದೇಶದ ರೈತರ ಜಮೀನು ಯಾವ ರೇಟಿಗೆ ಹೋಗುತ್ತದೆ ? ಅವರಿಗೆ ಎಕರೆ ಮೂರು–ನಾಲ್ಕು ಸಾವಿರ ರೂಪಾಯಿ ಕೊಟ್ಟರೆ ಅವರು ಯಾವ ರೀತಿ ಬೇರೆ ಭೂಮಿಯನ್ನು ಪಡೆಯಬೇಕು ? ಇದರ ಬಗ್ಗೆ ಕೇಳಿದರೆ ರಿಜಿಸ್ಟ್ರೇಷನ್ ಯಾವ ರೀತಿ ಆಗಿದೆ ಅಷ್ಟೇ ಹಣ ಕೊಡುತ್ತೇವೆ ; ಹೆಚ್ಚಿಗೆ ಕೊಡುವುದಕ್ಕೆ ಆಗುವುದಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ. ಇದ್ದಂತಹ ಭೂಮಿಯನ್ನು ಕಳೆದುಕೊಂಡನಂತರ ಮುಂದೆ ಆ ರೈತರು ಬೇರೆ ಕಡೆಯಲ್ಲಿ ಭೂಮಿಯನ್ನು ಮಾಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಮಾಡಿಲ್ಲ, ತಮಗೆ ಹೇಳಬೇಕೆಂದರೆ, ಇಲ್ಲಿ ರಾಜಾಪುರತಾಂಡ ಅಂತ ಒಂದಿದೆ ಆ ತಾಂಡಾದಲ್ಲಿರತಕ್ಕಂಥ ಕೆಂಪು ಭೂಮಿಯನ್ನು ಸುಮಾರು ೪೦ ಎಕರೆ ಭೂಮಿಯನ್ನು ಅಕ್ವೈರ್ ಮಾಡಿಕೊಂಡಿದ್ದಾರೆ, ಆ ತಾಂಡಾ ಜನರಿಗೆ ೨ ಎಕರೆ, ೩ ಎಕರೆಗಿಂತ ಜಾಸ್ತಿ ಭೂಮಿ ಇಲ್ಲ. ಇದನ್ನು ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದೆ. ಈ ಭೂಮಿಯನ್ನು ಅವರಿಗೆ ಬಿಟ್ಟುಕೊಡಿ ; ವ್ಯವಸಾಯ ಬಿಟ್ಟು ಬೇರೆ ಉದ್ಯೋಗ ಮಾಡತಕ್ಕಂಥ ಪರಿಸ್ಥಿತಿಯಲ್ಲಿ ಅವರು ಇಲ್ಲ ಎಂದು ಹೇಳಿದೆ. ಅದಕ್ಕೆ ಅವರು ನಮಗೆ ಎಲ್ಲಿ ಭೂಮಿ ಇದೆ, ಅದನ್ನು ತೆಗೆದುಕೊಳ್ಳಲೇಬೇಕಾಗುತ್ತದೆ ಎಂದು ಹೇಳುತ್ತಾರೆ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ಈ ರಾಜಾಪುರ ತಾಂಡಾದಲ್ಲಿ ಏನು ಲಂಬಾಣಿ ಜನರು ಇದಾರೆ, ಅವರಿಗೆ ಅಷ್ಟು ಜಮೀನು ಹೋದರೆ ವ್ಯವಸಾಯ ಬಿಟ್ಟರೆ ಅವರಿಗೆ ಬೇರೆ ಉದ್ಯೋಗ ಇಲ್ಲ. ಅವರಿಗೆ ಕೊಡತಕ್ಕಂಥ ಪರಿಹಾರ ಎಷ್ಟು ಎಂದರೆ ಒಂದು ಎಕರೆಗೆ ಕೇವಲ ೩–೪ ಸಾವಿರ ರೂಪಾಯಿ ಅಷ್ಟೆ, ಈ ರೀತಿಯಾದರೆ ಅವರು ಹೇಗೆ ಬದುಕಬೇಕು ? ಇದು ಬಹಳ ಮಹತ್ವದ ಪ್ರಶ್ನೆ ಇದೆ. ಆದಕ್ಕಾಗಿ ನಾನು ಹೇಳುತ್ತೇನೆ. ಏನೆಂದರೆ, ಈ ಭೂಮಿಯನ್ನು ಉಳಿಸತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಇಲ್ಲದಿದ್ದರೆ ಘೋರವಾದ ಪಾಪ ಮಾಡಿದ ಕೆಲಸವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ.

ಕಡೆಯದಾಗಿ ಈ ಶಹಾಪುರ ತಾಲ್ಲೂಕಿನ ನಮ್ಮ ಭಾಗದ ರೈತರ ಒಂದು ಅನಿಸಿಕೆ ಪ್ರಕಾರ ತಾವು ಈ ವರ್ಷವೇ ನೀರು ಕೊಡಬೇಕು, ಶಹಪುರ ತಾಲ್ಲೂಕಿಗೆ ಈ ವರ್ಷವೇ ನೀರು ಕೊಡುತ್ತೇವೆ ಎಂದು ತಾವು ಇವತ್ತು ಘೋಷಣೆ ಮಾಡಬೇಕು. ನಮ್ಮ ಜನರಿಗೆ ನೀರು ಕೊಟ್ಟು ಏನೊಂದು ಗಾದೆ ಮಾತಿದೆ 'ಕೈ ಕೆಸರಾದರೆ ಬಾಯ್ ಮೊಸರು' ಅಂತಹ ಒಂದು ಸೌಭಾಗ್ಯವನ್ನು ನಮ್ಮ ಜನಕ್ಕೆ ಕೊಟ್ಟು, ಅವರ ಬಾಯಿ ಮೊಸರು ಆಗುವಂತೆ ಮಾಡಬೇಕೆಂದು ಹೇಳಿ, ಇವತ್ತಿನ ದಿವಸ ನನಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಡಾ॥ ಆರ್. ಬಿ. ಚೌಧರಿ (ಸಿಂಧಗಿ) —ಮಾನ್ಯ ಅಧ್ಯಕ್ಷಿಣಿಯವರೇ, ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆ ಮೇಲಿನ ಬೇಡಿಕೆಗಳನ್ನು ಮನ್ನಿಸುತ್ತಾ, ಒಂದೆರಡು ಮಾತುಗಳನ್ನು ನನ್ನ

ಮತಕ್ಷೇತ್ರವಾದ ಸಿಂಧಗಿಗೆ ಸಂಬಂಧಪಟ್ಟ ರಸ್ತೆಗಳ ಬಗ್ಗೆ ಹೇಳಬಯಸುತ್ತೇನೆ. ನನ್ನ ಮತಕ್ಷೇತ್ರದಲ್ಲಿ ಸುಮಾರು ೧೦೨ ಹಳ್ಳಿಗಳು ಬರುತ್ತವೆ. ಈ ೧೦೨ ಹಳ್ಳಿಗಳ ಪೈಕಿ, ೫೦ ಪರ್ಸೆಂಟ್ ಹಳ್ಳಿಗಳಿಗೆ ರಸ್ತೆಗಳೇ ಇಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಮಾನ್ಯಮಂತ್ರಿಗಳಿಗೆ ತಮ್ಮ ಮುಖಾಂತರ ಕೇಳಿಕೊಳ್ಳುವುದೇನೆಂದರೆ ಮೊದಲು ಈ ಹಳ್ಳಿಗಳಿಗೆ ರಸ್ತೆಗಳು ರಚನೆಯಾಗಬೇಕೆಂದು ಒತ್ತಿ ಒತ್ತಿ ಕೇಳಿಕೊಳ್ಳುತ್ತೇನೆ. ಈ ೫೦ ಪರ್ಸೆಂಟ್ ರಸ್ತೆಗಳೇನಿವೆ, ಇವು ರಸ್ತೆಗಳೇ ಅಲ್ಲ, ಹೆಸರಿಗೆ ಮಾತ್ರ ರಸ್ತೆಗಳಾಗಿವೆ. ಅವು ಯಾವ ಕಾಲದಲ್ಲಿ ರಿಪೇರಿ ಆಗಿದೆಯೋ ನಮಗೆ ಗೊತ್ತಿಲ್ಲ. ಇನ್ನು ಸಿಂಧಗಿ ತಾಲ್ಲೂಕಿನಲ್ಲಿ ಕಲ್ಕೇರಿ ಎಂಬ ಮುಖ್ಯವಾದ ಹೋಬಳಿ ಇದೆ. ಅದು ಸಿಂಧಗಿಯಿಂದ ೨೨ ಕಿಲೋಮೀಟರ್ ದೂರದಲ್ಲಿದೆ. ಈ ಹೋಬಳಿಗೆ ಜೀಪಿನಲ್ಲಿ ಅಥವಾ ಕಾರಿನಲ್ಲಿ ಹೋಗಬೇಕಾದರೆ ಒಂದೂವರೆ ಗಂಟೆಗಳ ಕಾಲ ಹಿಡಿಯುತ್ತದೆ. ಅಂದಮೇಲೆ ಆ ರಸ್ತೆಯ ಸ್ಥಿತಿ ಹೇಗಿರಬೇಕು ಎಂಬುದನ್ನು ತಾವು ಯೋಚನೆ ಮಾಡಬೇಕು. ಮುಖ್ಯವಾದ ರಸ್ತೆಯೇ ಈ ರೀತಿ ಇರಬೇಕಾದರೆ, ಉಳಿಕೆ ರಸ್ತೆಗಳು ಯಾವ ರೀತಿ ಇವೆ ಎಂಬುದನ್ನು ತಾವೇ ಊಹಿಸಿಕೊಳ್ಳಬಹುದು. ಜನವರಿ ತಿಂಗಳಲ್ಲಿ ಮಾನ್ಯ ಮಂತ್ರಿಗಳು ಅಲ್ಲಿಗೆ ಬಂದಾಗ, ಅಲ್ಲಿಯ ಜನತೆ ಈ ವಿಚಾರವನ್ನು ಅವರ ಗಮನಕ್ಕೆ ತಂದಿದ್ದಾರೆ. ಮಾನ್ಯಮಂತ್ರಿಗಳು ಈ ರಸ್ತೆಗಳನ್ನು ರಿಪೇರಿ ಮಾಡಿಸುತ್ತೇವೆ, ಹಾಗೂ ಸುಮಾರು ೫ ರಿಂದ ೮ ಕಿಲೋಮೀಟರ್‌ವರೆಗೆ ಡಾಂಬರೀಕರಣ ಮಾಡಿಸುವುದಾಗಿ ಭರವಸೆ ಕೊಟ್ಟಿದ್ದರು. ಆದರೆ ಇದುವರೆಗೂ ಯಾವ ರಿಪೇರಿ ಕೆಲಸವನ್ನೂ ಕೈಗೊಂಡಿಲ್ಲ. ಇದರಂತೆಯೇ ಇನ್ನೊಂದು ಮುಖ್ಯ ರಸ್ತೆ ಇದೆ. ಇದು ಸಿಂಧಗಿಯಿಂದ ಜೇವರ್ಗಿಗೆ ಹೋಗುವ ರಸ್ತೆ, ಇದನ್ನೂ ಕೂಡ ಹಾಗೆಯೇ ಬಿಟ್ಟಿದ್ದಾರೆ. ಅಲ್ಲಿಯ ಅಧಿಕಾರಿಗಳಿಂದ ಸಮರ್ಪಕವಾದ ಉತ್ತರ ದೊರಕುತ್ತಾ ಇಲ್ಲ. ಏಕೆ ಹಾಗೆ ಬಿಟ್ಟಿದ್ದಾರೆ ಎಂದು ಕೇಳಿದರೆ ಕಂಟ್ರಾಕ್ಟರು ಓಡಿ ಹೋಗಿದ್ದಾರೆಂದು ಹೇಳುತ್ತಾರೆ, ಅವರು ಯಾವ ಕಾರಣಕ್ಕಾಗಿ ಓಡಿ ಹೋಗಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಈ ರಸ್ತೆಯಲ್ಲಿ ಜನ ಸಂಚಾರ ಬಹಳ ಜಾಸ್ತಿ ಇದೆ, ವಾಹನಗಳ ಸಂಚಾರ ಕೂಡ ಬಹಳ ಜಾಸ್ತಿ ಇದೆ. ಇದು ಮುಖ್ಯವಾದ ರಸ್ತೆ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ಬೇಡಿಕೊಳ್ಳುವುದೇನೆಂದರೆ ಈ ರಸ್ತೆಯನ್ನು ಬೇಗನೆ ದುರಸ್ತಿ ಮಾಡಿಸಬೇಕು. ೪-೫ ತಿಂಗಳಿಂದ ಹಾಗೆಯೇ ಬಿದ್ದಿದೆ, ಅಲ್ಲಿಯ ಜನಗಳೂ ಕೂಡ ಸರ್ಕಾರಕ್ಕೆ ಕೇಳಿಕೊಳ್ಳುತ್ತಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಕೂಡಲೇ ಈ ರಸ್ತೆಯನ್ನು ರಿಪೇರಿ ಮಾಡಿಸಬೇಕು. ಇವತ್ತಿನ ದಿವಸ ಜಿಲ್ಲಾ ಪರಿಷತ್ತಿನವರು ಯಾವ ರಸ್ತೆಗಳ ಬಗ್ಗೆ ಕಾಳಜಿ ವಹಿಸಿಲ್ಲ. ಆದ್ದರಿಂದ ತಾವು ನಮಗೆ ರಸ್ತೆ ಮಾಡಿ ಕೊಟ್ಟರೆ, ನಮ್ಮ ಜನ ತಮ್ಮ ಉಪಕಾರವನ್ನು ಸ್ಮರಿಸುತ್ತಾರೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ, ಇದಲ್ಲದೆ, ಈ ನೀರಾವರಿ ಬಗ್ಗೆ ಹೇಳುವುದಾದರೆ ಇಂಡಿ ಬ್ರಾಂಚ್ ಕೆನಾಲ್ ಇದೆ. ಇದು ನಮ್ಮ ಸಿಂಧಗಿ ಮತ್ತು ಇಂಡಿ ಪಟ್ಟಣಗಳಿಗೆ ಮುಖ್ಯವಾದ ಒಂದು ಕೆನಾಲ್. ಈ ಕೆನಾಲ್ ಕೆಲಸ ನೋಡಿದರೆ, ಆಮೆ ವೇಗದಲ್ಲಿ ಸಾಗುತ್ತಿದೆ. ಶಹಾಪುರ, ಜೇವರ್ಗಿ ಕೆನಾಲ್‌ಗಳನ್ನು ನೋಡಿದರೆ ಅವು ತ್ವರಿತಗತಿಯಿಂದ ಸಾಗುತ್ತಿವೆ. ಆದರೆ ಈ ನಮ್ಮ ಇಂಡಿ ಬ್ರಾಂಚ್ ಕೆನಾಲ್ ಕೆಲಸ ಅಷ್ಟು ತ್ವರಿತಗತಿಯಿಂದ ಸಾಗುತ್ತಿಲ್ಲ. ಇನ್ನು ಬಿಜಾಪುರ ಜಿಲ್ಲೆ ನೀರಿನ ಬವಣೆಯಿಂದ ಬಳಲುತ್ತಿದೆ. ಅಲ್ಲಿ ನೀರಾವರಿ ಯೋಜನೆಗಳು ಇಲ್ಲ. ಇಂಥಾದ್ದರಲ್ಲಿ ಇಂಡಿ ಬ್ರಾಂಚ್ ಕೆನಾಲ್ ಸಲುವಾಗಿ ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ, ಈ ಕೆಲಸ ತ್ವರಿತಗತಿಯಿಂದ ಆಗಬೇಕು. ಈಗ ಕೇವಲ ಸೊನ್ನೆ ಕಿಲೋಮೀಟರಿನಿಂದ ೨೦ ಕಿಲೋಮೀಟರ್‌ವರೆಗೆ ಮಾತ್ರ ಕೆಲಸ ಆಗಿದೆ. ೨೦ ರಿಂದ ೬೦ ಕಿಲೋಮೀಟರ್‌ವರೆಗೆ ಕೆಲಸ ಮಾಡಲು ಟೆಂಡರ್ ಕರೆದು ಎಷ್ಟೋ ದಿವಸ ಆಯಿತು, ಆ ಕೆಲಸ ಮಾತ್ರ ನಡೆಯುತ್ತಾ ಇಲ್ಲ. ಇದು ಏಕೋ ನನಗೆ ಗೊತ್ತಾಗುತ್ತಾ ಇಲ್ಲ. ಇದಲ್ಲದೆ ಮಾನ್ಯ ಮಂತ್ರಿಗಳು ಜನವರಿಯಲ್ಲಿ ಬಂದಾಗ, ಆ ಭಾಗದ ರೈತರು ಅಲ್ಲಿ ಸುಮಾರು ಮೂರು ಕೋಟಿ ರೂಪಾಯಿ ಭ್ರಷ್ಟಾಚಾರ ನಡೆದಿದೆ ಎಂದು ಹೇಳಿದ್ದಾರೆ. ಮಾನ್ಯ ಬೈರೇಗೌಡರೂ ಕೂಡ ಇಂಡಿ ಬ್ರಾಂಚ್ ಕೆನಾಲ್ ಸಲುವಾಗಿ ಹೇಳಿದ್ದಾರೆ, ಇಲ್ಲಿ ಭ್ರಷ್ಟಾಚಾರ ಹೇಗೆ ನಡೆದಿದೆ ಎಂದರೆ, ಅಲ್ಲಿ ಕಾಲುವೆ ತೋಡುವ ಕೆಲಸಕ್ಕೆ ಸಂಬಂಧಿಸಿದ ಇಂಜಿನಿಯರ್, ಕಂಟ್ರಾಕ್ಟರ್ ಜೊತೆಯಲ್ಲಿ ಶಾಮೀಲಾಗಿ ಕಾಲುವೆಗೆ ಅಗೆದು ಹಾಕಿದ ಮಣ್ಣಿನ ಗುಡ್ಡೆಗಳನ್ನು ಕಲ್ಲು ಎಂದು ಗುರುತಿಸಿ ಆ ಕಲ್ಲುಗಳನ್ನು ಜೋಡಿಸಿ ಅದನ್ನು ಕಲ್ಲಿನ ರಾಶಿ ಎಂದು ಸಾಬೀತು ಮಾಡಲು ಹೊರಟಿದ್ದಾರೆಂದು ಅಲ್ಲಿನ ಜನರು ಹೇಳುತ್ತಾರೆ. ಇದರ ಬಗ್ಗೆ ಹಾರ್ಡ್ ರಾಕ್ ಮೆಷರ್‌ಮೆಂಟ್ ರಿಜಿಸ್ಟರ್‌ನ್ನು ನೋಡಿದರೆ ಗೊತ್ತಾಗುತ್ತದೆ. ಇದರಲ್ಲಿ ಸುಮಾರು ೩ ಕೋಟಿ ರೂಪಾಯಿಗಳಷ್ಟು ಭ್ರಷ್ಟಾಚಾರವಾಗಿದೆಯೆಂದು ಆ ಭಾಗದ ಜನರು ಬಹಳ ಮಾತನಾಡಿಕೊಳ್ಳುತ್ತಿದ್ದಾರೆ. ಅಲ್ಲಿಯ ಕೆಲಸವು ಮಂದಗತಿಯಲ್ಲಿ ಸಾಗುವುದಕ್ಕೆ ಇದೂ ಒಂದು ಕಾರಣವಾಗಿದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆದಿದೆ. ಆದ್ದರಿಂದ ಇದನ್ನೆಲ್ಲಾ ಕೂಲಂಕಷವಾಗಿ ತನಿಖೆ ಮಾಡಿಸಿ ತಪ್ಪಿತಸ್ಥರ ಮೇಲೆ ಉಗ್ರ ಕ್ರಮ ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇನ್ನು

ಕೊನೆಯದಾಗಿ, ನಮ್ಮ ಜಿಲ್ಲೆಗೆ ಮಳೆ ಬರುವುದೇ ಬಹಳ ಕಡಿಮೆ. ಮಳೆ ಬಂದಾಗ ಆ ನೀರನ್ನು ಹಿಡಿದಿಡಲು ನಾಲಾ ಬಂಡಿಂಗ್ ಅಥವಾ ನಾಲಾ ಬಂದಾರಗಳನ್ನು ನಿರ್ಮಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸಲ ಮಳೆ ಬಹಳ ಚೆನ್ನಾಗಿ ಆಯಿತು, ನಾಲಾ ಬಂದಾರಗಳನ್ನು ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಕಟ್ಟಿದ್ದರೆ ನಮ್ಮ ಬಿಜಾಪುರ ಜಿಲ್ಲೆಗೆ, ಸಿಂಧಗಿ ತಾಲ್ಲೂಕಿಗೆ, ಬಹಳ ಅನುಕೂಲವಾಗುತ್ತಿತ್ತು. ಸಿಂಧಗಿ ತಾಲ್ಲೂಕಿನಲ್ಲಿ ಸುಮಾರು ೭೦ ಹಳ್ಳಿಗಳು ಇವೆ. ಇಲ್ಲೆಲ್ಲಾ ನಾಲಾ ಬಂದಾರಗಳನ್ನು ಮಾಡಿದರೆ ನಮಗೆ ಅತ್ಯಂತ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುವಕ್ಕೆ ಬಯಸುತ್ತೇನೆ. ಇದರ ಜೊತೆಗೆ ಬಿಜಾಪುರ ಬಹಳ ಹಿಂದುಳಿದ ಪ್ರದೇಶವಾಗಿದೆ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಬೋರ್ಡ್ ಮಾಡಿದ ರೀತಿಯಲ್ಲಿ ಬಾಂಬೆ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ನ್ನು ಮಾಡಿದರೆ ಬಿಜಾಪುರ ಜಿಲ್ಲೆಯ ಅಭಿವೃದ್ಧಿಗೆ ಅನುಕೂಲವಾಗುತ್ತದೆ. ಮಾನ್ಯ ಲೋಕೋಪಯೋಗಿ ಮಂತ್ರಿಗಳು ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿ ಸಹಾ ಆಗಿದ್ದಾರೆ. ಅವರು ನಮ್ಮ ಜಿಲ್ಲೆಯಲ್ಲಿರುವ ಸಾಕಷ್ಟು ಸಮಸ್ಯೆಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ನಾವು ನೀರಿನ ಸಲುವಾಗಿ ಎಷ್ಟು ಬವಣೆ ಪಡುತ್ತಿದ್ದೇವೆಂಬುದೂ ಸಹಾ ಅವರಿಗೆ ತಿಳಿದಿದೆ. ನಮ್ಮ ಬಿಜಾಪುರ ಜಿಲ್ಲೆಯಲ್ಲಿರುವ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸೂಕ್ತ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಬೇಕೆಂದು ಕಳಕಳಿಯಿಂದ ಮಾನ್ಯ ಮಂತ್ರಿಗಳಿಗೆ ಅಧ್ಯಕ್ಷರ ಮೂಲಕ ಕೇಳಿಕೊಂಡು ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಸಿದ್ಧಮಾದಯ್ಯ (ಕೊಳ್ಳೇಗಾಲ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಲೋಕೋಪಯೋಗಿ ಮಂತ್ರಿಗಳು ತಂದಿರತಕ್ಕ ಬೇಡಿಕೆಗಳು ಏನಿವೆ ಅವುಗಳನ್ನು ನಾನು ಸ್ವಾಗತ ಮಾಡುತ್ತಾ, ನಮ್ಮ ತಾಲ್ಲೂಕಿನ ಬಗ್ಗೆ ನಾಲ್ಕು ಮಾತುಗಳನ್ನು ಮಾತ್ರ ಆಡಲಿಕ್ಕೆ ನಾನು ಇಷ್ಟಪಡುತ್ತೇನೆ. ನಮ್ಮ ತಾಲ್ಲೂಕಿನ ರೋಡ್‌ಗಳ ವಿಚಾರ ಬಂದಾಗ, ನಮ್ಮಲ್ಲಿ ಮೈಸೂರಿಂ ಮತ್ತು ಮಹದೇಶ್ವರ ಬೆಟ್ಟದವರೆಗೆ ಇರುವ ರಸ್ತೆಗೆ ಸ್ಟೇಟ್ ಹೈವೇ ಎಂದು ಹೆಸರು ಮಾತ್ರ ಇಟ್ಟಿದ್ದಾರೆ. ಆದರೆ, ಕೆಲಸಕಾರ್ಯಗಳು ಮಾತ್ರ ೧೦ ವರ್ಷಗಳಿಂದ ಏನೂ ನಡೆದಿಲ್ಲ, ಒಂದು ಸಾರಿ ನಮ್ಮ ಸಾಹೇಬರು ನಮ್ಮ ಕ್ಷೇತ್ರಕ್ಕೆ ಪ್ರವಾಸ ಬಂದಿದ್ದರು. ಆಗ ಅವರಿಗೆ ಧೂಳು ಕುಡಿಯುವ ಕೆಲಸ ಸಿಕ್ಕಿತ್ತು, ಆದ್ದರಿಂದ ಸ್ಟೇಟ್ ಹೈವೇ ರೋಡ್‌ಗಳನ್ನು ತಕ್ಷಣದಲ್ಲೇ ಅಭಿವೃದ್ಧಿ ಪಡಿಸಿಕೊಡಬೇಕೆಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮತ್ತು ಹಿಂದೆ ಮಾನ್ಯ ಚೆನ್ನಬಸಪ್ಪನವರು ಲೋಕೋಪಯೋಗಿ ಮಂತ್ರಿಗಳಾಗಿದ್ದಾಗ ಸ್ಟೇಟ್ ಹೈವೇ ಪಕ್ಕದಲ್ಲಿ ಹಳ್ಳಿಗಳು ಏನಿವೆ, ಅವುಗಳು ರೋಡ್‌ಗೆ ಪಕ್ಕದಲ್ಲೇ ಇರುವುದರಿಂದ ಮತ್ತು ರೋಡ್‌ನ ಪಕ್ಕದಲ್ಲಿರುವ ಜಮೀನುಗಳು ಬಡವರು ಮತ್ತು ಹರಿಜನರದ್ದಾಗಿರುವುದರಿಂದ. ಆ ರೋಡ್‌ಗಳನ್ನು ಅಗಲ ಮಾಡುವಾಗ ಈ ಕಡೆ ೧೦ ಅಡಿ, ಆ ಕಡೆ ೧೦ ಅಡಿ ಜಮೀನನ್ನು ವಶಪಡಿಸಿಕೊಂಡು, ಆ ಜಮೀನಿಗೆ ತಕ್ಕಂತೆ ಪರಿಹಾರವನ್ನು ಕೊಟ್ಟು ರೋಡ್‌ಗಳನ್ನು ಅಗಲ ಮಾಡಬೇಕೆಂದು ಒಂದು ಆಜ್ಞೆ ಹೊರಡಿಸಿದ್ದರು. ಅದು ಮೆಚ್ಚತಕ್ಕಂಥಾದ್ದು. ಅದು ಸ್ವಲ್ಪಕಾಲ ನಡೆಯಿತು. ಆಮೇಲೆ ಯಾರೋ ಪುಣ್ಯಾತ್ಮರು ಈ ಕೆಲಸಕ್ಕೆ ಸ್ಟೇ ಮಾಡಿಸಿಬಿಟ್ಟರು. ಆ ಕೆಲಸಗಳು ಅಲ್ಲಿಗೇ ನಿಂತುಹೋಗಿವೆ. ಈಗ ಆ ರೋಡ್‌ಗಳಲ್ಲಿ ತಿರುಗಾಡತಕ್ಕ ಬಸ್‌ಗಳ ಸಂಖ್ಯೆ ಜಾಸ್ತಿಯಾಗಿವೆ. ಮೋಟಾರ್ ಸೈಕಲ್‌ಗಳು ಜಾಸ್ತಿಯಾಗಿವೆ, ಪ್ರತಿಯೊಂದೂ ವಾಹನಗಳು ವಿಪರೀತ ಜಾಸ್ತಿಯಾಗಿವೆ. ತಾಲ್ಲೂಕುಗಳಿಗೆ ಹೋಗುವಂಥ ರೋಡ್‌ಗಳು ಬಹಳ ಚಿಕ್ಕದಾಗಿ ಅನೇಕ ಸಮಸ್ಯೆಗಳು ಇವೆ. ಸಣ್ಣ ಸಣ್ಣ ರೋಡ್‌ಗಳ ಪಕ್ಕದಲ್ಲಿರುವ ಮನೆಗಳನ್ನು ಹೊಡೆಸಿ, ಅದಕ್ಕೆ ತಕ್ಕಂತಹ ಪರಿಹಾರ ಕೊಟ್ಟು ರೋಡ್‌ಗಳನ್ನು ಅಗಲ ಮಾಡಿ ಸರಿಯಾದ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ನನ್ನ ಕ್ಷೇತ್ರದಲ್ಲಿ ಎರಡು ತಾಲ್ಲೂಕುಗಳು ಸೇರುತ್ತವೆ. ಆ ಎರಡು ತಾಲ್ಲೂಕುಗಳಲ್ಲಿ ರೋಡುಗಳು ಯಾವುದೂ ಇಲ್ಲವೇ ಇಲ್ಲ. ಮಾನ್ಯ ಮಂತ್ರಿಗಳು ಒಂದು ರಿಪೋರ್ಟ್ ಕೊಟ್ಟರು ಸುಮಾರು ೪೧೦ ಕೆಲಸಗಳು ಆಗಿವೆ, ಸುಮಾರು ೭೪ ಲಕ್ಷ ರೂಪಾಯಿಗಳು ಖರ್ಚು ಆಗಿದೆ ಎಂದು ಒಂದು ರಿಪೋರ್ಟ್ ಕೊಟ್ಟರು. ಆದರೆ ಅಲ್ಲಿ ಹೋಗಿ ನೋಡಿದಾಗ ಒಂದು ಮುಳ್ಳು ಗಿಡವನ್ನೂ ಕೂಡ ಕಟ್ ಮಾಡಿಲ್ಲ. ಆ ರೋಡಿಗೆ ಜಿಲ್ಲಾ ಪರಿಷತ್ತಿನವರು ಒಂದು ಮಕ್ಕರಿ ಮಣ್ಣು ಸಹ ಹಾಕಿಲ್ಲ. ಎಲ್ಲಾ ಕಡೆ ಬಿಲ್ ಮಾಡಿಕೊಂಡು ತಿಂದುಕೊಂಡು ಹೊರಟು ಹೋಗಿದ್ದಾರೆ. ದಯಮಾಡಿ ಇದನ್ನು ಗಮನಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇ ರೀತಿ ಎಳಂದೂರು ತಾಲ್ಲೂಕಿನಲ್ಲಿ ಎರಡು ಕೆರೆಗಳು ಮಾತ್ರ ಇದೆ. ಆ ಕೆರೆಗಳು ಹೂತು ಹೋಗಿ ಯಾವ ಕಡೆಯಿಂದಲೂ ನೀರು ಬರುವುದಕ್ಕೆ ಸಾಧ್ಯವಿಲ್ಲ. ಅದರ ಕೆಳಗಡೆ ಇರತಕ್ಕ ಜಮೀನುಗಳಿಗೆ ನೀರು ಸಿಗಲಿಕ್ಕೆ ಸಾಧ್ಯವಿಲ್ಲ. ದಯಮಾಡಿ ತಾವು ಈ ಬಗ್ಗೆ ಎನ್‌ಕ್ವೈರಿ ಮಾಡಿಸಿ. ಅವಕಾಶವಿದ್ದರೆ ಆ ಕೆರೆಗಳಲ್ಲಿರುವ ಹೂಳನ್ನು ತೆಗೆಸಿಕೊಡಿ ಇಲ್ಲವಾದರೆ ಈ ಎರಡೂ ಕೆರೆಗಳಿಗೆ ಕಬಿನಿ ನೀರು ಬರುವಂತಹ ವ್ಯವಸ್ಥೆ ಮಾಡಬೇಕೆಂದು

ನಾನು ಕೇಳಿಕೊಳ್ಳುತ್ತೇನೆ. ಇನ್ನು ಕೊಳ್ಳೇಗಾಲ ತಾಲ್ಲೂಕಿನಲ್ಲಿ ತೆನಗೆರೆಕಟ್ಟೆ ಎಂದು ಒಂದು ಇದ್ದೆ. ಇದು ಬಹಳ ಶಿಥಿಲ ಸ್ಥಿತಿಯಲ್ಲಿದೆ. ಇದು ಶಿವನಸಮುದ್ರದ ಎಲೆಕ್ಟ್ರಿಕ್ ಉತ್ಪಾದನೆಗೆ ಸಹಾಯ ಮಾಡುವಂತಹ ಒಂದು ಕಟ್ಟೆ. ತಾವು ಈ ಕಟ್ಟೆಯನ್ನು ಪರಿಶೀಲನೆ ಮಾಡಿ ದುರಸ್ತಿ ಮಾಡಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಕಟ್ಟೆಗೆ ಒಂದು ತೂಬು ಇಟ್ಟಿದ್ದಾರೆ. ಸತ್ಯಗಾಲದ ಸುಮಾರು ೫೦೦ ಎಕರೆ ಜಮೀನಿಗೆ ನೀರು ಹೋಗಲಿಕ್ಕೆ ಒಂದು ತೂಬನ್ನು ಇಟ್ಟಿದ್ದಾರೆ, ಈಗ ಈ ತೂಬು ಮುಳಗಡೆ ಆಗಿ ಹೂತು ಹೋಗಿದೆ. ಆದ್ದರಿಂದ ತಕ್ಷಣ ಇದನ್ನು ದುರಸ್ತಿ ಮಾಡಿಕೊಟ್ಟರೆ ಸುಮಾರು ೫೦೦ ಎಕರೆ ಜಮೀನಿಗೆ ನೀರಾವರಿಯಾಗುತ್ತದೆ. ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ. ಇದನ್ನು ದುರಸ್ತಿ ಮಾಡಿಸಿಕೊಟ್ಟರೆ ಅಲ್ಲಿನ ರೈತರು ಬೆಳೆ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಈ ವರ್ಷದಲ್ಲಿಯೇ ಆ ಕೆಲಸ ಮಾಡತಕ್ಕಂಥ ವ್ಯವಸ್ಥೆಯಾಗಬೇಕು ಎಂದು ನಾನು ಕೇಳಿ ಕೊಳ್ಳುತ್ತೇನೆ. ಇನ್ನು ಕೊಳ್ಳೇಗಾಲ ಟೌನ್‌ನಲ್ಲಿ ಎರಡು ಕೆರೆಗಳು ಇವೆ. ಆ ಕೆರೆಗಳಲ್ಲಿ ಹೂಳುತುಂಬಿ ಕೊಂಡು ಮಳೆ ಬಂದರೆ ಮಾತ್ರ ನೀರು ಬರುತ್ತವೆ. ಈಗ ಆ ಕೆರೆಗಳನ್ನು ರೆವಿನ್ಯೂ ಇಲಾಖೆಯಿಂದ ನೀರಾವರಿ ಇಲಾಖೆಗೆ ವಹಿಸಿ ಕೊಟ್ಟಿದ್ದಾರೆ. ತಮಗೂ ಈ ಬಗ್ಗೆ ರಿಪೋರ್ಟ್ ಬಂದಿರಬಹುದು. ದಯಮಾಡಿ ಹೊಂಗಳ ಕೆರೆ ಮತ್ತು ತಟ್ಟೆ ಕೆರೆ ಈ ಎರಡು ಕೆರೆಗಳನ್ನು ಅಲ್ಲಿರುವ ಮುನಿಸಿಪಾಲಿಟಿಗೆ ವಹಿಸಿ ಕೊಡುವ ವ್ಯವಸ್ಥೆ ಮಾಡಿಕೊಟ್ಟರೆ ಒಳ್ಳೆಯದು. ಇದರಿಂದ ಪಟ್ಟಣದ ಅಭಿವೃದ್ಧಿ ಕೆಲಸಗಳಾದ ಬಸ್ಸು ನಿಲ್ದಾಣ ಮತ್ತು ಸೈಟ್ ಇಲ್ಲದೆ ಇರುವವರಿಗೆ ಸೈಟ್ ಕೊಡುವುದಕ್ಕೆ ಅನುಕೂಲವಾಗುತ್ತದೆ. ದಯಮಾಡಿ ತಾವು ತಮ್ಮ ಇಲಾಖೆಗೆ ತಿಳಿಸಿ, ಮುನಿಸಿಪಾಲಿಟಿಗೆ ಇದನ್ನು ವರ್ಗ ಮಾಡಿಸಿಕೊಡಬೇಕೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಕಾಡ ಯೋಜನೆ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ, ಕಾಡ ಯೋಜನೆ ಬಗ್ಗೆ ಸ್ವಲ್ಪ ದೂರಿದೆ. ಎಳಂದೂರು ತಾಲ್ಲೂಕಿನಲ್ಲಿ ಮಂಚಯ್ಯ ಎನ್ನುವ ಒಬ್ಬ ಇಂಜಿನೀಯರ್ ಇದ್ದಾರೆ. ಇವರು ಈ ಕಾಡ ಯೋಜನೆಯಡಿಯಲ್ಲಿ ಒಂದು ತೊಟ್ಟಿ ಕಟ್ಟುವುದು ಅಥವಾ ಚಾನಲ್‌ಗೆ ಮಣ್ಣೆರಚುವುದು ಮಾತ್ರ ಮಾಡತಕ್ಕಂಥಾದ್ದು. ಇದರಲ್ಲಿ ಸುಲಲಿತವಾಗಿ ಕೆಲಸಗಳನ್ನು ಮಾಡಿಲ್ಲ. ಹಣ ದುರುಪಯೋಗ ಆಗಿದೆ. ಆದ್ದರಿಂದ ದಯಮಾಡಿ ಅವರ ಮೇಲೆ ತಾವು ಆಕ್ಷನ್ ತೆಗೆದುಕೊಳ್ಳಬೇಕು. ಆ ಕೆಲಸ ಪರಿಪೂರ್ಣವಾಗಿ ನಡೆದಿಲ್ಲ. ತಾವು ಸಹ ಒಂದು ಸಾರಿ ಅಲ್ಲಿಗೆ ಬಂದಿದ್ದಾಗ ತಮಗೆ ತಿಳಿಸಿದ್ದೇವೆ. ಅಲ್ಲಿ ಆಗಿರುವ ಕೆಲಸ ನೋಡಿದರೆ ಕಣ್ಣೀರು ಬರುತ್ತದೆ. ಮಾನ್ಯ ಸದಸ್ಯರು ಒಬ್ಬರು ಹೇಳಿದರು. ಜಿಲ್ಲಿನಲ್ಲಿ ಕೆಲಸ ಮಾಡಿದ್ದೇವೆಂದು ತೋರಿಸಿ ಹಣ ಹೊಡೆಯುವುದು. ಆದರೆ ಎಲ್ಲಾ ಕೆಲಸಗಳನ್ನು ಮಾರ್ಚಿ ತಿಂಗಳಲ್ಲಿಯೇ ಮಾಡುತ್ತಾರೆ. ಮಾರ್ಚಿ ತಿಂಗಳಲ್ಲಿ ಮಾಡುವಂತ ಪ್ರಮೇಯವೇನು ಇದೆ. ಎಲ್ಲವನ್ನು ಆ ಟೈಮ್‌ನಲ್ಲಿಯೇ ಮಾಡಬೇಕೇ ? ಅಲ್ಲ ರಾತ್ರೋರಾತ್ರಿ ಮಂಗಮಾಯ ಮಾಡಿ ಹಣ ಹೊಡೆಯುವುದು, ದಯಮಾಡಿ ಇದನ್ನು ತಪಿಸತಕ್ಕಂಥ ವ್ಯವಸ್ಥೆ ಮಾಡಬೇಕು. ನಾನು ಮೊದಲೇ ಪ್ರಸ್ತಾಪ ಮಾಡಿದ ಎರಡು ಕೆರೆಗಳ ವಿಚಾರದಲ್ಲಿ ಅಂದರೆ ಯಳಂದೂರು ತಾಲೂಕಿನ ಒಂದು ಅಂಬಳೆ ಕೆರೆ ಮತ್ತೊಂದು ಗೌಡಳ್ಳಿ ಕೆರೆ ಈ ಎರಡು ಕೆರೆಗಳು ಹೂತು ಹೋಗಿವೆ. ದಯಮಾಡಿ ಆ ಕೆರೆಗಳನ್ನು ಸರಿಯಾಗಿ ವ್ಯವಸ್ಥೆ ಮಾಡಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಾನು ಇನ್ನೂ ಮಾತನಾಡತಕ್ಕಂಥ ಅನೇಕ ವಿಚಾರಗಳು ಇದ್ದವು. ಜಿಲ್ಲಾ ಪರಿಷತ್ತಿನವರು ಮಾಡಿರತಕ್ಕಂಥ ರಸ್ತೆ ಕೆಲಸಗಳನ್ನು ನೋಡಿದರೆ ಕಣ್ಣೀರು ಬರುತ್ತದೆ. ಜಿಲ್ಲಾ ಪರಿಷತ್ತಿನವರು ರೋಡ್ ಮಾಡಿರುವುದು ಸರಿಯಾಗಿಲ್ಲ. ಆ ರಸ್ತೆಯಲ್ಲಿ ಸೈಕಲ್ ಹೋಗಲು ಸಾಧ್ಯವಿಲ್ಲ. ಜೊತೆಗೆ ರಸ್ತೆ ತಿರುಗಾಡಲು ಕೂಡ ಸಾಧ್ಯವಿಲ್ಲ. ಸೈಡ್‌ನಲ್ಲೇ ಹೋಗಬೇಕಾದ ಪರಿಸ್ಥಿತಿ ಇದೆ. ಸರ್ಕಾರದ ವತಿಯಿಂದ ಈಗ ಹೇಳಿರತಕ್ಕ ಎರಡು ಕೆರೆಗಳನ್ನು ನಮ್ಮ ಪುರಸಭೆಗೆ ವಹಿಸಿಕೊಡಬೇಕು. ಇದರ ಜೊತೆಗೆ ಯಳಂದೂರು ತಾಲ್ಲೂಕಿನಲ್ಲಿರತಕ್ಕ ಎರಡು ಕೆರೆಗಳಲ್ಲಿ ಹೂಳು ತೆಗೆಸಬೇಕು. ಸಾಧ್ಯವಾದರೆ ಕಬಿನಿ ಚಾನಲ್ ಮಾಡಿಸಿಕೊಡಬೇಕು. ಮೊದಲನೆ ಹಂತದ ಕಬಿನಿ ಚಾನಲ್ ಕೆಲಸ ಮಧ್ಯದಲ್ಲಿ ನಿಂತು ಹೋಗಿದೆ. ಒಂದು ಬಂಡೆ ಸಿಕ್ಕಿತೆಂದು ಕೆಲಸವನ್ನು ನಿಲ್ಲಿಸಿದ್ದಾರೆ. ಆ ಕೆಲಸ ಇನ್ನೂ ಮುಂದುವರಿದಿಲ್ಲ. ಅಲ್ಲಿಂದ ೪೨-೪೩ಕ್ಕೆ ನೀರು ಬರಬೇಕಾಗಿದೆ ದಯಮಾಡಿ ಆದಷ್ಟು ಬೇಗ ಈ ಕೆಲಸವನ್ನು ಮಾಡಿಸಬೇಕು. ಸತ್ಯಗಾಲದ ಚಾನಲ್ ವಿಷಯದ ಬಗ್ಗೆ ಈ ತಿಂಗಳಿನಲ್ಲಿ ಒಂದು ವ್ಯವಸ್ಥೆ ಮಾಡಿಸಿಕೊಟ್ಟರೆ ಸಾವಿರಾರು ಜನರಿಗೆ ಉಪಯೋಗವಾಗುತ್ತದೆ. ಅದು ಒಂದು ದೊಡ್ಡ ಗ್ರಾಮ ಆಗಿದೆ. ದಯಮಾಡಿ ಅದನ್ನು ಮಾಡಿಸಿಕೊಡಬೇಕು. ರೋಡ್ಸ್ ವಿಚಾರದಲ್ಲಿ ನಾನು ಪಟ್ಟಿಕೊಟ್ಟಿದ್ದೇವೆ. ತಾವು ಮಾಡಿಸಿಕೊಡುತ್ತೀರೆಂದು ಭರವಸೆ ಕೊಟ್ಟಿದ್ದೀರಿ, ಅದರ ಬಗ್ಗೆ ಚರ್ಚೆ ಮಾಡುವುದು ಬೇಕಿಲ್ಲ. ದಯಮಾಡಿ ಇಷ್ಟು ಕೆಲಸವನ್ನು ಮಾಡಿಸಿಕೊಡಬೇಕೆಂದು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್.—ಈಗ ಶ್ರೀ ಎಂ. ಪುಟ್ಟಸ್ವಾಮಿಗೌಡರು ೫ ನಿಮಿಷ ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್.—ಉತ್ತರವನ್ನು ಸೋಮವಾರ ಕೊಡಲಿ, ಅವತ್ತು ಬೆಳಿಗ್ಗೆ ೯ ಗಂಟೆಗೆ ಸೇರುತ್ತೇನೆ.

ಛೇರ್ಮನ್.—ಉತ್ತರ ೬ ಗಂಟೆಗೆ ಶುರು ಮಾಡಬೇಕೆಂದು ಸಭಾಧ್ಯಕ್ಷರು ಹೇಳಿದ್ದರು, ಆದರೆ ಅನೇಕ ಮಾನ್ಯ ಸದಸ್ಯರುಗಳು ಅವರವರ ಕ್ಷೇತ್ರಕ್ಕೆ ಸಂಬಂಧಪಟ್ಟ ಬೇಡಿಕೆಗಳನ್ನು ಸಚಿವರ ಗಮನಕ್ಕೆ ತರಲಿ ಎಂಬ ಉದ್ದೇಶದಿಂದ ನಾನು ಈ ಸಮಯವನ್ನು ಹೆಚ್ಚು ಮಾಡಿ ಮಾನ್ಯ ಸದಸ್ಯರುಗಳಿಗೆ ಅವಕಾಶ ಮಾಡಿಕೊಡುತ್ತಿದ್ದೇನೆ.

ಶ್ರೀ ಎಂ. ಪಿ. ವೆಂಕಟೇಶ್.—ಮಂತ್ರಿಗಳು ಉತ್ತರವನ್ನು ಸೋಮವಾರ ಕೊಡಲಿ.

ಶ್ರೀ ವಾಟಾಳ್ ನಾಗರಾಜ್.—ತಮ್ಮ ನಿರ್ಧಾರವನ್ನು ಸ್ವಾಗತಿಸುತ್ತೇನೆ. ತಾವು ದಯಮಾಡಿ ನಮ್ಮ ಮನವಿಯನ್ನು ಸ್ವೀಕರಿಸಿ ಇವತ್ತು ೬-೩೦ರತನಕ ಕುಳಿತುಕೊಳ್ಳೋಣ, ಆದರೆ ಉತ್ತರವನ್ನು ಸೋಮವಾರ ಬೆಳಿಗ್ಗೆ ೯ ಗಂಟೆಗೆ ಕೊಡಲಿ.

ಛೇರ್ಮನ್.—ಮಂತ್ರಿಗಳಿಗೆ ಸೋಮವಾರ ಬೇರೆ ಕೆಲಸ ಇದೆಯೆಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಅವರು ಸೋಮವಾರ ಉತ್ತರ ನೀಡಲು ಒಪ್ಪಿಕೊಂಡಿದ್ದಾರೆ.

ಛೇರ್ಮನ್.—ಮಂತ್ರಿಗಳು ಹೇಳಿಲ್ಲ, ನೀವೇ ಹೇಳುತ್ತಿದ್ದೀರಿ. ಇದರ ಬಗ್ಗೆ ಎರಡು ದಿವಸ ಚರ್ಚೆಯಾಗಿದೆ. ಈಗ ಶ್ರೀ ಎಂ. ಪುಟ್ಟಸ್ವಾಮಿ ಗೌಡರು ಮಾತನಾಡಲಿ.

† ಶ್ರೀ ಎಂ. ಪುಟ್ಟಸ್ವಾಮಿ ಗೌಡ (ಕೃಷ್ಣರಾಜಪೇಟೆ).—ಮಾನ್ಯ ಅಧ್ಯಕ್ಷಿಣಿಯವರೇ, ೧೯೮೦-೮೧ ನೇ ಸಾಲಿಗೆ ಲೋಕೋಪಯೋಗಿ ಇಲಾಖೆಯವರು ಮಂಡಿಸಿರುವ ಬೇಡಿಕೆಗಳು ಏನು ಇವೆ ಅವುಗಳನ್ನು ನಾನು ಹೃತ್ಪೂರ್ವಕವಾಗಿ ಬೆಂಬಲಿಸುತ್ತಾ, ನನ್ನ ಕೆಲವು ಅನಿಸಿಕೆಗಳನ್ನು ನನಗೆ ಕೊಟ್ಟಿರುವ ಅವಧಿಯಲ್ಲಿ ಸನ್ಮಾನ್ಯ ಸಚಿವರ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಬಹಳಷ್ಟು ಜನ ಸಣ್ಣ ನೀರಾವರಿ ವಿಚಾರದ ಬಗ್ಗೆ ಬಹಳ ವಿಸ್ತಾರವಾಗಿ ಮಾತನಾಡಿದ್ದಾರೆ. ಲೋಕೋಪಯೋಗಿ ಇಲಾಖೆಯಲ್ಲಿ ಏನಾದರೂ ಉಪೇಕ್ಷೆಗೊಳಗಾಗಿರತಕ್ಕಂಥ ಒಂದು ಇಲಾಖೆಯೆಂದರೆ, ಅದು ಸಣ್ಣ ನೀರಾವರಿ ಇಲಾಖೆ ಕಾರಣ ಇಷ್ಟೆ ಅವರ ನಿರ್ವಾಹಣಾ ಮುಂಗಡ ಪತ್ರದಲ್ಲಿ ಈ ರೀತಿ ಇದೆ. ಹಳೆ ಮೈಸೂರು ರಾಜ್ಯದಲ್ಲಿ ಸುಮಾರು ೨೫ ಸಾವಿರಕ್ಕೂ ಮೀಗಿಲಾದ ಸಣ್ಣ ನೀರಾವರಿ ಕೆರೆಗಳು ಇದ್ದುವು, ಆದರೆ ಬೊಂಬಾಯಿ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಗಳಲ್ಲಿ ಇವುಗಳ ಸಂಖ್ಯೆ ಬಹಳಷ್ಟು ಕಡಿಮೆ ಇದ್ದವು. ರಾಜ್ಯದಲ್ಲಿ ಪಂಚವಾರ್ಷಿಕ ಯೋಜನೆಯನ್ನು ಪ್ರಾರಂಭಿಸುವ ಮೊದಲು ಸಣ್ಣ ನೀರಾವರಿ ಕಾಮಗಾರಿಗಳಿಂದ ಸುಮಾರು ೪.೫೫ ಲಕ್ಷ ಹೆಕ್ಟೇರುಗಳಷ್ಟು ಭೂ ಪ್ರದೇಶ ನೀರಾವರಿಗೆ ಒಳಪಟ್ಟಿತ್ತು ಎಂದು ಇದೆ. ಎಲ್ಲಾ ಸಣ್ಣ ನೀರಾವರಿ ಯೋಜನೆಗಳ ಪ್ರದೇಶವನ್ನು ಜಿಲ್ಲಾ ಪರಿಷತ್ತಿಗೆ ವಹಿಸಿದ್ದಾರೆ. ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಒಳಗೊಂಡ ಕೆರೆಗಳ ಪರಿಸ್ಥಿತಿ ಏನಾಗಿದೆ ಎಂಬುದನ್ನು ಹೇಳುತ್ತೇನೆ. ಮೊದಲು ವರ್ಷದಲ್ಲಿ ಎರಡು ಬೆಳೆ ಬೆಳೆಯಲು ಅವಕಾಶವಾಗುತ್ತಿತ್ತು. ಈಗ ಕೇವಲ ಮೂರು ತಿಂಗಳು ಮಾತ್ರ ನೀರು ಶೇಖರಣೆ ಮಾಡುತ್ತಿರುವ ಪರಿಸ್ಥಿತಿ ಬಂದು ಕೇವಲ ಒಂದು ಬೆಳೆಗೆ ಸಾಕಾಗುವಷ್ಟು ನೀರನ್ನು ಅವು ಒದಗಿಸುತ್ತಿಲ್ಲ. ಇಂತಹ ಪರಿಸ್ಥಿತಿ ಬಂದೊದಗಿದೆ. ಜೊತೆಗೆ ಹಳೆ ಕೆರೆಗಳು ಅಂದರೆ ೧೦೦ ವರ್ಷಕ್ಕೆ ಮೇಲ್ಪಟ್ಟು ಕೆರೆಗಳ ಅಚ್ಚುಕಟ್ಟು ಕಾಲುವೆ ಪ್ರದೇಶಗಳು ಹಾಳು ಹೋಗಿ ಆ ನೀರು ಕೊನೆಯ ಪ್ರದೇಶಕ್ಕೆ ಹೋಗುವ ಸಂದರ್ಭಗಳು ಬಹಳಷ್ಟು ಕಡಿಮೆಯಾಗಿದೆ. ಈ ಎಲ್ಲಾ ದೃಷ್ಟಿಯಿಂದ ನಾನು ಮಾನ್ಯ ನೀರಾವರಿ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ. ತಾವು ಏನು ಈ ಜಿಲ್ಲಾ ಪರಿಷತ್ತಿಗೆ ಕಾಯಿದೆ ಮುಖೇನ ವರ್ಗ ಮಾಡಿದ್ದೀರಿ ಅವರು ಆ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಮಂಡ್ಯ ಜಿಲ್ಲಾ ಪರಿಷತ್ತಿನವರು ತಮ್ಮ ೧೯೮೮-೮೯ ರ ವಾರ್ಷಿಕ ವರದಿಯಲ್ಲಿ ಏನು ಹೇಳಿದ್ದಾರೆಂಬುದನ್ನು ಸಭೆಯ ಗಮನಕ್ಕೆ ತರುತ್ತೇನೆ. ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದ ಮೇಲೆ ಹಿಂದಿನ ನೀರಾವರಿ ಇಲಾಖೆಯಲ್ಲಿ ಒಟ್ಟು ೧೪೯೫೬.೫೪ ಹೆಕ್ಟೇರ್ ಅಚ್ಚುಕಟ್ಟು ಹೊಂದಿರುವ ೬೬೬ ಸಣ್ಣ ನೀರಾವರಿ ಕೆರೆಗಳು ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ವರ್ಗಾವಣೆ ಆಗಿವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ.

೬-೧೦ ಪಿ.ಎಂ.

ನೀರಾವರಿಗೆ ಎಷ್ಟು ಕೊಟ್ಟಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಸಣ್ಣ ನೀರಾವರಿಗೆ ೨೭೦೨ ನೇ ಶೀರ್ಷಿಕೆಯಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಈ ಒಂದು ಲಕ್ಷ ರೂಪಾಯಿಗಳನ್ನು ಜಿಲ್ಲಾಪರಿಷತ್ತಿನವರು ಖರ್ಚು ಮಾಡುವುದಕ್ಕೆ ಸಾಧ್ಯವಾಗದೇ ಅವರು ಎಷ್ಟು ಖರ್ಚು ಮಾಡಿದ್ದಾರೆಂದರೆ, ಕೇವಲ ೩೭ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ೭೭೭ ಸಣ್ಣ ಕೆರೆಗಳನ್ನು ಹೊಂದಿರತಕ್ಕ ಒಂದು ಜಿಲ್ಲಾ ಪರಿಷತ್ತಿಗೆ ಸರ್ಕಾರದವರು ಕೊಟ್ಟಿರುವ ೧ ಲಕ್ಷ ರೂಪಾಯಿಯಲ್ಲಿ ಅವರು ಕೇವಲ ೩೭ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇಂಥಾ ದಕ್ಷತೆ ಇರತಕ್ಕಂಥ ಜಿಲ್ಲಾಪರಿಷತ್ತಿನ ವ್ಯಾಪ್ತಿಗೆ ೭೭೭ ಕೆರೆಗಳನ್ನು ವಹಿಸಿದ್ದೀರಿ, ಇದು ನಿಜವಾಗಲೂ ಸಣ್ಣ ನೀರಾವರಿಗೆ ಕೊಟ್ಟಂಥ ಪ್ರೋತ್ಸಾಹ ಅಲ್ಲ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಮಾಡುತ್ತೇನೆ, ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ೫೦ ಕ್ಕಿಂತ ಮೇಲ್ಪಟ್ಟ ಕೆರೆಗಳನ್ನು ಏನು ವಹಿಸಿದ್ದೀರಿ. ಆ ಎಲ್ಲಾ ಕೆರೆಗಳನ್ನು ಮತ್ತೆ ಸಣ್ಣ ನೀರಾವರಿ ಇಲಾಖೆಯವರು ವಾಪಸ್ ತೆಗೆದುಕೊಳ್ಳಬೇಕೆಂದು ಮತ್ತು ಆ ಕೆಲಸವನ್ನು ಪುನರುಜ್ಜೀವನ ಗೊಳಿಸಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ ಪಂಚವಾರ್ಷಿಕ ಯೋಜನೆಗಳು ಬಂದ ಮೇಲೆ ಸಣ್ಣ ನೀರಾವರಿ ಯೋಜನೆಗಳನ್ನು ನಾವು ಕಡೆಗಣಿಸಿದ್ದೇವೆ. ಇನ್ನೂ ಮೇಲಾದರೂ ಸಣ್ಣ ನೀರಾವರಿ ಯೋಜನೆಗಳಿಗೆ ಹೆಚ್ಚು ತೀವ್ರತೆಯಿಂದ ಗಮನಹರಿಸಬೇಕು ಹಾಗೂ ಎಲ್ಲಾ ಕೆರೆಗಳನ್ನು ಪುನರುಜ್ಜೀವನಗೊಳಿಸಬೇಕು ಎನ್ನತಕ್ಕ ಮಾತನ್ನು ನಾನು ಒತ್ತಿ ಹೇಳುವುದಕ್ಕೆ ಇಚ್ಛೆ ಮಾಡುತ್ತೇನೆ. ಏತಕ್ಕೆಂದರೆ, ಭಾರಿ ನೀರಾವರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ಮಾಡುವ ಭರದಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು ನಾವು ಸಾಕಷ್ಟು ನಿಕೃಷ್ಟ ಮಾಡಿ ಇದರಿಂದ ನೀರಾವರಿ ಆಗುತ್ತಿದ್ದ ಪ್ರದೇಶಗಳನ್ನು ಕಡೆಗಣಿಸಿದ್ದೇವೆ. ಇನ್ನು ೧೦ ವರ್ಷ ಬಿಟ್ಟರೆ ಎಲ್ಲಾ ಕೆರೆಗಳು ಹೂತು ಹೋಗಿ ಆ ಕೆರೆಗಳನ್ನು ಯಾರಾದರೂ ಪ್ರಭಾವಿತ ರಾಜಕಾರಣಿಗಳು ದರಖಾಸ್ತು ಮುಖೇನ ಹಿಡಿದು ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದ್ದರಿಂದ ದಯಮಾಡಿ ಈ ಪುರಾತನ ಕೆರೆಗಳು ಏನಿವೆ ಇವುಗಳನ್ನು ಜೀರ್ಣೋದ್ಧಾರ ಮಾಡಬೇಕು. ಎಷ್ಟೇ ಖರ್ಚಾದರೂ ಯೋಚನೆ ಮಾಡದೆ ಕೆರೆಗಳ ಕೆಲಸಗಳನ್ನು ಮಾಡಿಸಬೇಕು. ಹಿಂದಿನ ಕಾಲದಲ್ಲಿ ಯಾವ ರೀತಿ ಕೆರೆಗಳನ್ನು ಉಪಯೋಗ ಮಾಡಿಕೊಂಡು ಜನರು ಸಂಪತ್ಭರಿತವಾಗಿ ಬದುಕುತ್ತಿದ್ದರೋ ಅದೇ ರೀತಿ ಇನ್ನು ಮುಂದೆಯೂ ಬದುಕುವ ರೀತಿಯಲ್ಲಿ ರೂಪಿಸಿಕೊಳ್ಳುವುದಕ್ಕೆ ಸರ್ಕಾರ ಹೆಚ್ಚು ಒತ್ತು ಕೊಟ್ಟು ಕೆಲಸ ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆ ಮಾಡುತ್ತೇನೆ. ಹಾಗೆಯೇ ರಸ್ತೆಗಳು ಮತ್ತು ಸೇತುವೆಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ, ನಮ್ಮ ಕ್ಷೇತ್ರದ ಬಗ್ಗೆ ಹೇಳುವುದಾದರೆ, ನಮ್ಮ ತಾಲ್ಲೂಕಿನಲ್ಲಿ ರಸ್ತೆಗಳು ಬಹಳ ದುಸ್ಥಿಯಲ್ಲಿವೆ. ಲೋಕೋಪಯೋಗಿ ಇಲಾಖೆಯ ವಶದಲ್ಲಿ ಯಾವ ರಸ್ತೆಗಳು ಇದ್ದವೋ ಅವುಗಳ ವ್ಯಾಪ್ತಿ ಕಡಿಮೆಯಾಗಿವೆ. ಕಡಿಮೆ ಏಕಾಯಿತೆಂದು ಕೇಳಿದರೆ, ಲೋಕೋಪಯೋಗಿ ಇಲಾಖೆಯಲ್ಲಿ ಎರಡು ತಾಲ್ಲೂಕಿಗೆ ಒಂದು ಉಪ ವಿಭಾಗವನ್ನು ಮಾಡಿದ್ದಾರೆ. ಆಡಳಿತ ವಿಕೇಂದ್ರೀಕರಣ ಬೇಕೆಂದು ಹೇಳಿಕೊಂಡು ಹೋದಂಥ ಜನ ಲೋಕೋಪಯೋಗಿ ಇಲಾಖೆಯನ್ನು ಕೇಂದ್ರೀಕರಿಸುತ್ತಿದ್ದೇವೆ. ಎರಡು ತಾಲ್ಲೂಕಿಗೆ ಒಂದು ಲೋಕೋಪಯೋಗಿ ಇಲಾಖೆಯನ್ನು ಮಾಡಿ ೩ ದಿವಸ ಇಲ್ಲಿ ಕೆಲಸ ಮಾಡುವುದು, ೩ ದಿವಸ ಇನ್ನೊಂದು ತಾಲ್ಲೂಕಿನಲ್ಲಿ ಕೆಲಸ ಮಾಡುವುದು, ಹೀಗಾಗಿ ಜನತೆಗೆ ಬಹಳ ತೊಂದರೆಯಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಮಾಡುತ್ತಿದ್ದೇನೆ. ಜೊತೆಗೆ ಈ ಸಣ್ಣ ನೀರಾವರಿಗೆ ಏನು ಮಾಡಿದ್ದಾರೆಂದರೆ, ಮಂಡ್ಯಾ ಜಿಲ್ಲೆಗೆ ಒಂದು ಉಪ ವಿಭಾಗವನ್ನು ಮಾಡಿ ಸಣ್ಣ ನೀರಾವರಿ ಇಲಾಖೆಯನ್ನು ಅಲ್ಲಿಗೆ ವರ್ಗಾವಣೆ ಮಾಡಿದ್ದಾರೆ, ಮೈಸೂರು ವೃತ್ತಕ್ಕೆ ವಿಭಾಗವನ್ನು ವರ್ಗಾಯಿಸಿದ್ದಾರೆ. ನಮ್ಮಲ್ಲಿ ಸುಮಾರು ೧೩ ಸಾವಿರ ಎಕರೆ ಸಣ್ಣ ನೀರಾವರಿ ವ್ಯಾಪ್ತಿಗೆ ಬರುತ್ತದೆಂದು ಅಂದಾಜು ಇದೆ. ೧೩ ಸಾವಿರ ಎಕರೆ ಸಣ್ಣ ನೀರಾವರಿ ಇರತಕ್ಕಂಥ ಜಾಗದಲ್ಲಿರುವ ಒಬ್ಬ ರೈತ ಅಸಿಸ್ಟೆಂಟ್ ಇಂಜಿನಿಯರ್: ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರನ್ನು ನೋಡುವುದಕ್ಕೆ ಸುಮಾರು ೬೦ ಕಿಲೋ ಮೀಟರ್ ದೂರದ ಊರಿಗೆ ಹೋಗಬೇಕಾದ ಪರಿಸ್ಥಿತಿ ಬಂದಿದೆ. ಯಾರ ಉಪಯೋಗಕ್ಕಾಗಿ ಈ ವರ್ಗಾವಣೆಯನ್ನು ಕೇಂದ್ರೀಕರಿಸಿ ಜಿಲ್ಲಾ ಕೇಂದ್ರದಲ್ಲಿ ಇಟ್ಟಿದ್ದಾರೆ ಎನ್ನುವುದು ನನಗಂತೂ ಅರ್ಥವಾಗುತ್ತಿಲ್ಲ. ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಸಣ್ಣ ನೀರಾವರಿಯನ್ನು ಮೊದಲು ಇದ್ದ ಹಾಗೆ ಲೋಕೋಪಯೋಗಿ ಇಲಾಖೆಗೆ ವಹಿಸಿಕೊಟ್ಟು ತಾಲ್ಲೂಕಿಗೆ ಒಂದು ನೀರಾವರಿ ಅಥವಾ ಲೋಕೋಪಯೋಗಿ ಇಲಾಖೆ ಪೂರ್ಣ ರೂಪದಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು, ಕಛೇರಿಗಳನ್ನು ಕೇಂದ್ರೀಕೃತ ಆಗತಕ್ಕಂಥ

ವ್ಯವಸ್ಥೆಯನ್ನು ತಪ್ಪಿಸಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ದಯಮಾಡಿ ರೈತರ ಕಷ್ಟಗಳನ್ನು ತಾವು ಅರ್ಥ ಮಾಡಿಕೊಳ್ಳಬೇಕು ರೈತನ ಮನೆ ಬಾಗಿಲಿಗೆ ಎಲ್ಲಾ ಸೌಲಭ್ಯವನ್ನು ಕೊಡುತ್ತೇವೆಂದು ಒಂದು ಕಡೆ ಹೇಳುತ್ತಾ, ಇನ್ನೊಂದು ಕಡೆ ಇಲಾಖೆಗಳನ್ನು ಜಿಲ್ಲಾ ಕೇಂದ್ರಗಳಲ್ಲಿ ಕೇಂದ್ರೀಕರಿಸುವುದು ಸೂಕ್ತವಲ್ಲ. ಪ್ರತಿಯೊಂದು ತಾಲ್ಲೂಕಿಗೂ ಒಂದೊಂದು ನೀರಾವರಿ ಇಲಾಖೆಯನ್ನಾಗಲೀ ಅಥವಾ ಲೋಕೋಪಯೋಗಿ ಇಲಾಖೆಯನ್ನಾಗಲೀ ಮಾಡಿ ಕೆಲಸವು ಪೂರ್ಣ ರೂಪದಲ್ಲಿ ಕೆಲಸ ಆಗುವಂತೆ ಮಾಡಬೇಕು. ಇನ್ನೊಂದು ಮಾತನ್ನು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಕಟ್ಟೇಹಳ್ಳಿ ಮತ್ತು ಕಟ್ಟೇಕ್ಯಾತನಹಳ್ಳಿ ಬಳಿ ಹೇಮಾವತಿ ನದಿಗೆ ಅಡ್ಡಲಾಗಿ ಒಂದು ಸೇತುವೆ ನಿರ್ಮಾಣವಾಗುತ್ತಿದೆ. ಈ ಸೇತುವೆ ನಿರ್ಮಾಣವಾಗುವುದಕ್ಕಿಂತ ಮುಂಚೆ ಮತ್ತು ನಿರ್ಮಾಣವಾದ ಮೇಲೆ ವರ್ಷಕ್ಕೆ ಕನಿಷ್ಟ ೪ ರಿಂದ ೧೦ ಜನ ನೀರಿನಲ್ಲಿ ಕೊಚ್ಚಿ ಹೋಗುತ್ತಿದ್ದಾರೆ. ನಾನು ಇದನ್ನು ಉತ್ಪ್ರೇಕ್ಷೆ ಮಾಡಿ ಹೇಳುತ್ತಿಲ್ಲ.

ಸುಮಾರು ಒಂದೂವರೆ ವರ್ಷದ ಹಿಂದೆ ತಮ್ಮ ಜೀವನ ನಿರ್ವಹಣೆಗಾಗಿ ನದಿ ದಾಟುವಾಗ ಆರು ಜನರು ದೋಣಿ ದುರಂತಕ್ಕೆ ತುತ್ತಾಗಿ ಹೋದರು. ಹೀಗೆ ಅಲ್ಲಿ ಜನರು ಸಾಯುತ್ತಾ ಇದ್ದರೂ ೧೦ ವರ್ಷಗಳಾದರೂ ಆ ಕೆಲಸ ಇನ್ನೂ ಪೂರ್ಣವಾಗಲಿಲ್ಲ ಅಂದರೆ ನಾವು ನಿಜವಾಗಿಯೂ ತಲೆತಗ್ಗಿಸಬೇಕಾಗುತ್ತದೆ. ಈ ಮಾತನ್ನು ನಾನು ಬಹಳ ಸಂಕಟದಿಂದ ಹೇಳುತ್ತಾ ಇದ್ದೇನೆ. ೨೧ನೇ ತಾರೀಖಿನ ದಿವಸ ನಾನು ಈ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಒಂದು ಪ್ರಶ್ನೆಯನ್ನು ಕೇಳುತ್ತಿದ್ದಾಗ ಅದೇ ನಮ್ಮ ಪ್ರದೇಶದಲ್ಲಿ ಎರಡು ಹೆಣಗಳನ್ನು ಇಟ್ಟುಕೊಂಡು ಅವರ ಬಂಧುಗಳು ಕಾಯುತ್ತಾ ಇದ್ದರು ಎನ್ನುವುದನ್ನು ಕೇಳಿ ನನಗೆ ಕಣ್ಣೀರು ಬಂತು. ಆದುದರಿಂದ ದಯಮಾಡಿ ಈಗಲೂ ಕೂಡ ತಮಗೆ ಯಾವುದೇ ತೊಂದರೆಗಳು ಇದ್ದರೂ ಕೂಡ ರೈತರ ಹಿತ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಆದಷ್ಟು ಬೇಗ ಈ ಕೆಲಸವನ್ನು ಮಾಡಿಸಿ ಕೊಡಬೇಕು, ಮತ್ತೆ ಈ ಕೆಲಸವನ್ನು ಮುಗಿಸಿಕೊಡಬೇಕು ಎಂದು ನಾನು ರೈತರ ಪರವಾಗಿ ಕೇಳಿಕೊಳ್ಳುತ್ತೇನೆ ಇನ್ನು ಸಣ್ಣ ಸಣ್ಣ ಕೆಲಸಗಳ ಬಗ್ಗೆ ಹೇಳುವುದಾದರೆ ೧೯೮೩-೮೪ರಲ್ಲಿ ನಾನು ಶಾಸಕನಾಗಿದ್ದಾಗ ಒಂದು ರಸ್ತೆಯನ್ನು ಈ ಇಲಾಖೆಯ ವ್ಯಾಪ್ತಿಯಲ್ಲಿ ಅಂದರೆ ಆಯವ್ಯಯದಲ್ಲಿ ಸೇರಿಸಿದ್ದಾರೆ. ಅಕ್ಕೀಬಾಳ ರೈಲ್ವೇ ಸ್ಟೇಶನ್‌ನಿಂದ ಸಿಂಗನಹಳ್ಳಿಗೆ ಹೋಗತಕ್ಕಂಥ ರಸ್ತೆಯದು. ಆ ಕಡೆಯಿಂದ ಅಂದರೆ ಕೆ. ಆರ್. ನಗರದಿಂದ ಬಂದಂಥ ರಸ್ತೆ ಡಾಂಬರ್‌ರೋಡ್ ಆಗಿ ಸುಸಜ್ಜಿತವಾದಂಥ ರಸ್ತೆ ಅದರ ನಡುವೆ ೪ ಕಿ. ಮೀ. ಗಳ ಅಂತರ ಏನಿದೆ ಅದನ್ನು ೧೯೮೪ರಲ್ಲಿ ಆಯವ್ಯಯದಲ್ಲಿ ಸೇರಿಸಿದ್ದು ಅದಕ್ಕೆ ಮೂರು ಲಕ್ಷ ರೂಪಾಯಿಗಳ ಒಂದು ಅಂದಾಜು ಮಾಡಲಾಗಿತ್ತು. ಆದರೆ ಇವೊತ್ತಿನವರೆಗೂ ಈ ಕೆಲಸವು ಪೂರ್ಣವಾಗಿಲ್ಲ. ಈ ಮೂರು ಲಕ್ಷ ರೂಪಾಯಿಗಳ ವೆಚ್ಚದ ಒಂದು ಸಣ್ಣ ಕೆಲಸವನ್ನು ಪೂರ್ತಿ ಮಾಡಿಸುವುದಕ್ಕೆ ಈ ಇಲಾಖೆಗೆ ಎಂಟು ವರ್ಷಗಳು ಬೇಕೆ ? ಈಗಲೂ ಕೂಡ ಕೇಳಿದರೆ, ಅದಕ್ಕೆ ತಾಂತ್ರಿಕ ತೊಂದರೆಗಳು ಇವೆ ಎಂದು ಗುಮಾಸ್ತರುಗಳು ಹೇಳುತ್ತಾರೆ. ಸಂಬಂಧಪಟ್ಟವರು ಬೇರೆ ಬೇರೆ ಕಾರಣಗಳನ್ನು ತೋರಿಸುತ್ತಾರೆಯೇ ಹೊರತು ಕೆಲಸವನ್ನು ಮುಗಿಸುವತ್ತ ಗಮನ ಕೊಟ್ಟಿಲ್ಲ. ಈ ಎಸ್ಟಿಮೇಟ್‌ನ್ನು ಸ್ಥಗಿತ ಮಾಡಿದಂಥಾದ್ದನ್ನು ನಾನಂತೂ ಒಪ್ಪುವುದಿಲ್ಲ. ಯಾವುದೇ ತಾಂತ್ರಿಕ ದೋಷ ಇದ್ದರೂ ಕೂಡ ಇಲಾಖೆಯವರು ಸೂಕ್ತ ಪರಿಶೀಲನೆ ಮಾಡಿ, ಯಾರು ತಪ್ಪಿತಸ್ಥರು ಇದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಆದರೆ ಈ ಕೆಲಸವನ್ನು ತ್ವರಿತವಾಗಿ ಮಾಡಿ ಕೊಡಬೇಕು. ಹಿಂದಿನ ಮಾನ್ಯ ಲೋಕೋಪಯೋಗಿ ಸಚಿವರು ಕೂಡ ಅದೇ ಕ್ಷೇತ್ರದಿಂದ ಬಂದವರು. ಅವರು ಪ್ರತಿ ತಿಂಗಳಲ್ಲಿಯೂ ಕೂಡ ನಮ್ಮ ತಾಲ್ಲೂಕನ್ನು ಹಾದು ಹೋಗುತ್ತಾ ಇದ್ದರು. ಜೊತೆಗೆ ನಮ್ಮ ಮಂಡಳ ಪ್ರಧಾನರ ಆಯ್ಕೆಯಲ್ಲಿಯೂ ಕೂಡ ಪಾತ್ರ ವಹಿಸಿದ್ದರು. ಇಂತಹ ಪರಿಸ್ಥಿತಿ ಇರುವಾಗ ಕಳೆದ ಆರು ತಿಂಗಳುಗಳಿಂದ ಮಾನ್ಯ ಲೋಕೋಪಯೋಗಿ ಸಚಿವರನ್ನು ನಮ್ಮ ತಾಲ್ಲೂಕಿಗೆ ಬನ್ನಿ ಎಂದು ಕರೆಯುತ್ತಿದ್ದೇವೆ. ಅವರಿಗೆ ಏನು ಭಯ ಇದೆಯೋ ತಿಳಿಯುತ್ತಾ ಇಲ್ಲ ಅವರು ನಮ್ಮ ತಾಲ್ಲೂಕಿನಲ್ಲಿ ಕಾಲು ಇಡುವುದಕ್ಕೆ ಯಾಕೋ ಇಷ್ಟಪಡುತ್ತಾ ಇಲ್ಲ. ಅವರು ಏನಾದರೂ ನಮ್ಮ ತಾಲ್ಲೂಕಿಗೆ ಬಂದು ಹೋಗುವುದಾದರೆ ನಾನು ಇಲ್ಲಿ ಮಾತನಾಡುವಂತಹ ಪ್ರಯತ್ನ ಮಾಡುವುದಿಲ್ಲ. ಅಲ್ಲಿಯೇ ಅವರಿಗೆ ಎಲ್ಲವನ್ನೂ ತಿಳಿಸಿ ಸ್ಥಳ ತೋರಿಸಿ ಕಷ್ಟಸುಖಗಳನ್ನು ಮನವರಿಕೆ ಮಾಡಿ ಏನಿದ್ದರೂ ಅಲ್ಲೇ ಪರಿಹರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತೆ ಅವರು ಹೋಗುವಾಗ ನ್ಯಾಶನಲ್ ಹೈವೇ ಮೇಲೆ ಹೋಗುವುದನ್ನು ಬಿಟ್ಟು ಒಂದೊಂದು ಸಲ ಶ್ರೀರಂಗಪಟ್ಟಣದ ಮೇಲೆ ಹಾದು ಕೆ. ಆರ್. ಪೇಟೆ ಮೂಲಕ ಹೊಳೆನರಸೀಪುರಕ್ಕೆ ಹೋಗುವ ಕೃಪೆ ಮಾಡಬೇಕು. ಅವರಿಗೆ ನಮ್ಮ ಪೂರ್ಣ ಸಹಕಾರ ಇದೆ. ಮಾನ್ಯ ಸಚಿವರು ತುಂಬಾ ನಿಷ್ಠಾವಂತರೂ, ದಕ್ಷತೆಯುಳ್ಳವರೂ, ಪ್ರಾಮಾಣಿಕರೂ ಆಗಿದ್ದಾರೆ. ಅವರು ಆಡಳಿತದಲ್ಲಿ ಇರುವ ನ್ಯೂನ್ಯತೆಗಳನ್ನು ಬಗೆಹರಿಸಿಕೊಳ್ಳಬೇಕು.

ಸಮಸ್ಯೆಗಳನ್ನು ಸಮಸ್ಯೆಗಳಾಗಿ ಉಳಿಯಲು ಬಿಡಬಾರದು, ಬೇಗ ಪರಿಹರಿಸಬೇಕು. ನಮ್ಮ ತಾಲ್ಲೂಕಿನಲ್ಲಿ ಬಹಳಷ್ಟು ರಸ್ತೆಗಳು ತುಂಬಾ ಕೆಟ್ಟು ಹೋಗಿವೆ. ನಾಗಮಂಗಲ ಅಕ್ಕಿಬಾಳ ಮೇಜರ್ ಡಿಸ್ಟ್ರಿಕ್ಟ್ ರೋಡ್ ಇದೆ. ಅದಕ್ಕೆ ೨೦ ವರ್ಷಗಳ ಹಿಂದೆ ಟಾರ್ ಹಾಕಿಸಿರುವಂಥಾದ್ದು. ಅದನ್ನು ಇವೊತ್ತಿನವರೆಗೂ ಯಾರೂ ಮುಟ್ಟಲಿಲ್ಲ ಹಾಗೆಯೇ ಹಾಳಾಗಿ ಇದೆ. ಇಂಥ ಅನೇಕ ರಸ್ತೆಗಳು ನಮ್ಮಲ್ಲಿವೆ. ದಯಮಾಡಿ ಈ ಎಲ್ಲ ನ್ಯೂನ್ಯತೆಗಳನ್ನು ಬಗೆಹರಿಸಬೇಕು. ಲೋಕೋಪಯೋಗಿ ಇಲಾಖೆ ಮತ್ತು ನೀರಾವರಿ ಇಲಾಖೆಯನ್ನು ಪುನರ್‌ನವೀಕರಣ ಮಾಡಬೇಕು. ಪ್ರಾರಂಭದಲ್ಲಿ ಇದ್ದ ಹಾಗೆ ದಕ್ಷ ಇಲಾಖೆಯಾಗಿ ಇಡಬೇಕು. ಜಿಲ್ಲಾಪರಿಷತ್‌ಗೆ ವಹಿಸಿರತಕ್ಕಂಥ ಕೆಲಸಗಳು ಏನಿವೆ ಎಂಡಿಆರ್ ಮತ್ತು ಓಡಿಆರ್ ರೋಡ್‌ಗಳನ್ನು ಕೂಡ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕು, ಒಟ್ಟಿನಲ್ಲಿ ಲೋಕೋಪಯೋಗಿ ಇಲಾಖೆಯು ಚೆನ್ನಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು. ಎಲ್ಲಾ ಇಲಾಖೆಗಳಿಗಿಂತಲೂ ಲೋಕೋಪಯೋಗಿ ಆಡಳಿತ ಸಿಬ್ಬಂದಿಯು ತುಂಬಾ ದುಬಾರಿ ಇದೆ. ೩ ಜನರು ಚೀಫ್ ಇಂಜಿನೀಯರ್‌ಗಳು ಇದ್ದಾರೆ. ಇದೊಂದು ಬೃಹತ್ ಇಲಾಖೆಯಾಗಿದೆ. ಈ ಇಲಾಖೆ ಮತ್ತೆ ಕೇಂದ್ರೀಕರಿಸಿಕೊಂಡು ಹೋಗುವುದು ಸೂಕ್ತವಲ್ಲ. ದಯಮಾಡಿ ಹೈಲೆವೆಲ್ ಅಧಿಕಾರಿಗಳ ಸಂಖ್ಯೆಯನ್ನು ಕಡಿಮೆ ಮಾಡಿ. ಕೆಳಹಂತದಲ್ಲಿ ಕೇಂದ್ರೀಕರಿಸುವ ಪ್ರಯತ್ನವನ್ನು ಮಾತ್ರ ಮಾಡಬೇಡಿ. ನಮ್ಮ ತಾಲ್ಲೂಕಿನಲ್ಲಿರುವ ಎಲ್ಲಾ ಕಾಮಗಾರಿಗಳ ಕೆಲಸವನ್ನು ತ್ವರಿತವಾಗಿ ಆದ್ಯತೆ ಪೂರೈಸುವುದಕ್ಕೆ ಮಾನ್ಯ ಲೋಕೋಪಯೋಗಿ ಸಚಿವರು ಸಹಕಾರ ನೀಡಬೇಕೆಂದು ಕೇಳಿಕೊಳುತ್ತಾ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟ ತಮ್ಮನ್ನು ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ (ಬೇಲೂರು).—ಸಭಾಧ್ಯಕ್ಷಿಣಿಯವರೇ, ಸಮಯ ಸಾಲದು, ಆದ್ದರಿಂದ ಸಂಕ್ಷಿಪ್ತವಾಗಿ ಕೆಲವು ಮಾತುಗಳನ್ನು ಹೇಳುತ್ತೇನೆ. ಇವತ್ತು ನಮ್ಮ ರಾಜ್ಯದ ನೀರಾವರಿ ಯೋಜನೆಗಳಿಗೆ ಸಂಪನ್ಮೂಲ ಇಲ್ಲದೆ ಇರುವಾಗ ಕಾವೇರಿ ಜಲವಿವಾದ ಇಂದು ಪಂಚಾಯಿತ್ತಿಗೆ ಹೋಗಿದೆ. ಸಂಪನ್ಮೂಲ ರೂಢಿಸಿ ಈ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಹಿಂದಿನ ಸರ್ಕಾರಗಳು ಸಾಕಷ್ಟು ಹಣ ಒದಗಿಸದೆ ಇದ್ದುದರಿಂದ ಆ ಯೋಜನೆಗಳು ಕುಂಠಿತವಾಗಿವೆ. ೧೯೬೫ರಲ್ಲಿ ಹೇಮಾವತಿ ಹಾರಂಗಿ ಕಬಿನಿ ಪ್ರಾರಂಭವಾದುವು, ಇವತ್ತಿನವರೆಗೂ ನಡೆಯುತ್ತಿವೆ, ಇನ್ನೂ ಪೂರೈಸಿಲ್ಲ. ಕಾರಣವೇನೆಂದರೆ ಸಂಪನ್ಮೂಲಗಳ ಕೊರತೆ ಈ ಸಂಪನ್ಮೂಲಗಳ ಕೊರತೆ ನೀಗಲು ನಾನು ಒಂದು ಸಲಹೆ ಕೊಡಬೇಕೆಂದಿದ್ದೇನೆ. ನಮ್ಮ ರಾಜ್ಯದಲ್ಲಿ ಹಿಂದೆ ಸಾಲು ಮರಗಳನ್ನು ಬೇಕಾದಷ್ಟು ಹಾಕಿದ್ದೇನೆ. ಅವು ನೂರಾರು ವರ್ಷಗಳಿಂದ ಇವೆ ನೂರು ವರ್ಷಕ್ಕೆ ಮೇಲ್ಪಟ್ಟ ಸಾಲು ಮರಗಳು ಅಲ್ಲೇ ಒಣಗಿ ಯಾರಿಗೂ ಉಪಯೋಗಕ್ಕೆ ಬಾರದಂಥ ರೀತಿಯಲ್ಲಿವೆ. ಹಿಂದಿನ ಸರ್ಕಾರದವರು ರಸ್ತೆಗಳ ಬದಿಯಲ್ಲಿ ಯಥೇಚ್ಛವಾಗಿ ಹೊಸ ಗಿಡಗಳನ್ನು ನೆಟ್ಟು ತೋರಿಸಿದ್ದಾರೆ. ಅವುಗಳಲ್ಲಿ ಎಷ್ಟೋ ಬೆಳೆದು ನಿಂತಿವೆ. ಈ ಸಾಲು ಮರಗಳಲ್ಲಿ ಕೆಲವು ದೀರ್ಘಾವಧಿಯಲ್ಲಿ ಬೆಳೆಯತಕ್ಕ ಮರಗಳು, ಇನ್ನು ಕೆಲವು ಅಲ್ಪಾವಧಿ ಮರಗಳು, ಹಿಂದಿನ ಹಳೇ ಮರಗಳನ್ನು ಗುರುತು ಮಾಡಿ ಆಯಸ್ಸು ಪೂರ್ಣವಾಗಿವೆ ಎನ್ನುವಂಥವನ್ನು ಹರಾಜು ಹಾಕಿ ಸರ್ಕಾರದ ಖಜಾನೆಗೆ ದುಡ್ಡು ತುಂಬಿಕೊಂಡು ಅದರಿಂದ ನೀರಾವರಿ ಕೆಲಸಗಳನ್ನು ಮಾಡುವುದರಲ್ಲಿ ತಪ್ಪೇನೂ ಇಲ್ಲ. ಏಕೆಂದರೆ, ಎಲ್ಲಿ ಹೊಸ ಸಾಲುಮರ ಹಾಕುತ್ತಾ ಬಂದಿದ್ದಾರೋ ಅಂತಹ ಕಡೆ ಹಳೇ ಮರಗಳನ್ನು ಕಡಿಯುವುದರಲ್ಲಿ ಯಾವ ತೊಂದರೆಯೂ ಇಲ್ಲ. ಇದರಿಂದ ನಮ್ಮ ನೀರಾವರಿ ಯೋಜನೆಗಳಿಗೆ ಸಾಕಷ್ಟು ಹಣ ಸಿಗುತ್ತದೆ. ವರ್ಲ್ಡ್ ಬ್ಯಾಂಕನ್ನೂ ಸಹ ಕೇಳುವ ಪರಿಸ್ಥಿತಿಯಿಲ್ಲ.

ನಮ್ಮ ಬೇಲೂರು ತಾಲ್ಲೂಕಿನಲ್ಲಿ ಯಗಚಿ ಯೋಜನೆ ಪ್ರಾರಂಭವಾಗಿ ಸುಮಾರು ಮೂರು ವರ್ಷದಿಂದ ನಡೆಯುತ್ತಿದೆ. ಇದರಿಂದ ಸುಮಾರು ೫೩ ಸಾವಿರ ಎಕರೆ ನೀರಾವರಿಯಾಗುತ್ತದೆಂದು ಅಂದಾಜು ತಯಾರು ಮಾಡಿದ್ದಾರೆ. ಹಾಗೂ ಅಂದಿನ ನೀರಾವರಿ ಸಚಿವರು ಹಳೇಬೀಡು ಮತ್ತು ಹಗರೆ ಮಾದಿಹಳ್ಳಿ ಹೋಬಳಿಗಳಿಗೆ ನೀರು ಕೊಡುವುದಕ್ಕಾಗಿ ಒಂದು ಸರ್ವೆ ಮಾಡಿಸಿದರು ೨೪ ಸಾವಿರ ಎಕರೆ ಅರೆ ಖುಷ್ಕಿ ಬೆಳೆಗೆ ನೀರಾವರಿ ಆಗುತ್ತದೆಂದು ನಿರ್ಧಾರ ಆಯಿತು. ಆ ಸರ್ವೆಯನ್ನು ಆಡಳಿತ ಮಂಜೂರಾತಿಗಾಗಿ ಸರ್ಕಾರಕ್ಕೆ ಕೊಟ್ಟು ಅದು ಮಂಜೂರಾತಿಯಾಗಿದೆ ಅಲ್ಲೇ ನಿಂತಿದೆ, ಇದು ಆಗಬೇಕು ಆ ಎರಡು ಹೋಬಳಿಗಳೂ ಇವತ್ತು ಬರಗಾಲಕ್ಕೆ ಸಿಕ್ಕಿವೆ. ಇಡೀ ರಾಜ್ಯದಲ್ಲಿ ಎಲ್ಲ ಕಡೆ ಮಳೆಯಾದರೂ ಆ ಪ್ರದೇಶದಲ್ಲಿ ಮಳೆಯಿಲ್ಲ ಇವತ್ತು. ಕುಡಿಯಲು ನೀರಿಲ್ಲ. ಅಲ್ಲಿ ಬರಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇನೆ. ಆದ್ದರಿಂದ ಇಂತಹ ಅಗತ್ಯವಾದ ಭಾಗಕ್ಕೆ ನೀರನ್ನು ಕೊಡದೆ ಎಲ್ಲೋ ನೀರನ್ನು ತೆಗೆದುಕೊಂಡು ಹೋಗುತ್ತೇವೆ ಎನ್ನುವಂಥ ವಾದ ಸರಿಯಲ್ಲ. ಅವರು ನೀರನ್ನು ಎಲ್ಲಿಗೆ ಬೇಕಾದರೂ ತೆಗೆದುಕೊಂಡು ಹೋಗಲಿ

ಆದರೆ ಬೇಲೂರು ತಾಲ್ಲೂಕಿನಲ್ಲಿ ಅಣೆಕಟ್ಟೆ ಬೇಲೂರು ತಾಲ್ಲೂಕಿನ ಭೂಮಿ ಮುಳುಗಿಸಿ ಬೇಲೂರು ತಾಲ್ಲೂಕಿನ ಭೂಮಿಗೆ ನೀರನ್ನು ಕೊಡದೆ ಬೇರೆ ಕಡೆ ತೆಗೆದುಕೊಂಡು ಹೋಗತಕ್ಕಂಥ ಕ್ರಮ ಸರಿಯಲ್ಲ. ಬೇರೆ ತಾಲ್ಲೂಕುಗಳವರಿಗೆ ಕರ್ನಾಟಕದಲ್ಲಿ ಏನು ಹಕ್ಕಿದೆಯೋ ಅಷ್ಟೇ ಹಕ್ಕು ಬೇಲೂರು ಜನರಿಗೂ ಇದೆ. ಆದ್ದರಿಂದ ಬೇಲೂರಿನ ನೀರನ್ನು ಬೇಲೂರಿಗೆ ಕೊಟ್ಟು ನಂತರ ನೀವು ಎಲ್ಲಿಗೆ ಬೇಕಾದರೂ ತೆಗೆದುಕೊಂಡು ಹೋಗಿ. ಈ ಮಾತನ್ನು ಮಾನ್ಯ ಸಚಿವರು ಗಮನದಲ್ಲಿಟ್ಟುಕೊಳ್ಳಬೇಕು.

ಈ ವರ್ಷ ಈ ನೀರಾವರಿ ಯೋಜನೆಗಳಿಗಾಗಿ ನಮ್ಮ ರಾಜ್ಯ ಸರ್ಕಾರದ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ನಮ್ಮ ನೀರಾವರಿ ಮಂತ್ರಿಗಳು ಸುಮಾರು ೩೫೦ ಕೋಟಿ ರೂಪಾಯಿಯನ್ನು ನಾವು ಖರ್ಚು ಮಾಡುತ್ತೇವೆ ಎಂದು ಹೇಳಿದ್ದಾರೆ. ನಾವು ನಿಜವಾಗಿಯೂ ಅವರನ್ನು ಅಭಿನಂದಿಸಬೇಕು. ಏಕೆಂದರೆ, ವರ್ಷಕ್ಕೆ ೬೦-೭೦ ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದಂಥ ಸಂದರ್ಭದಲ್ಲಿ ಇವರು ಬಹಳ ಧೈರ್ಯ ತೆಗೆದುಕೊಂಡು ೩೫೦ ಕೋಟಿ ರೂಪಾಯಿಗಳನ್ನು ನೀರಾವರಿಗಾಗಿ ಖರ್ಚು ಮಾಡುತ್ತೇವೆ ಎಂದು ನಿರ್ಧಾರ ತೆಗೆದುಕೊಂಡಿರತಕ್ಕಂಥದ್ದು ನಿಜಕ್ಕೂ ಅಭಿನಂದನೀಯ. ಈಗ ಪಶ್ಚಿಮ ಘಟ್ಟಗಳ ಯೋಜನೆ ಈ ಪಶ್ಚಿಮ ಘಟ್ಟಗಳ ಯೋಜನೆ ಇವತ್ತು ಒಂದು ಕಡೆ ಒಂದು ನಿಗದಿಯಾದ ಡಿಪಾರ್ಟ್‌ಮೆಂಟ್‌ನಲ್ಲಿ ಇಲ್ಲ. ಅದು ಎಲ್ಲಾ ಹರಿದು ಹಂಚಿಹೋಗಿದೆ. ತಾವು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ ಹೇಗೆ ಮಾಡಿದ್ದೀರೋ ಹಾಗೆ ಪಶ್ಚಿಮ ಘಟ್ಟಗಳ ಯೋಜನೆಗೆ ಸೇರಿದ ಐದಾರು ಜಿಲ್ಲೆಗಳ ಅಭಿವೃದ್ಧಿಗೆ ಈ ಪಶ್ಚಿಮ ಘಟ್ಟಗಳ ಡೆವಲಪ್‌ಮೆಂಟ್ ಬೋರ್ಡ್ ಎಂದು ಒಂದು ಬೋರ್ಡ್‌ನ್ನು ಮಾಡಬೇಕು. ಏಕೆಂದರೆ ಮಲೆನಾಡಿನಲ್ಲಿ ರಸ್ತೆಗಳೇ ಜೀವನಾಡಿ. ರಸ್ತೆಗಳು ಇಲ್ಲದೇ ಅದರಲ್ಲಿಯೂ ಮಳೆಗಾಲದ ನಾಲ್ಕೈದು ತಿಂಗಳು ಮಲೆನಾಡಿನಲ್ಲಿ ಹೋಗಲಿಕ್ಕೆ ಆಗುವುದಿಲ್ಲ. ಇಂಥ ಪರಿಸ್ಥಿತಿ ಇರುವಾಗ ಈ ಮಲೆನಾಡಿನ ಅಭಿವೃದ್ಧಿಗಾಗಿ ಈ ಡೆವಲಪ್‌ಮೆಂಟ್ ಬೋರ್ಡ್ ಅಗತ್ಯ. ಬಯಲು ಸೀಮೆಯಲ್ಲಿ ರಸ್ತೆಗಳಾಗಿವೆ. ಟಾರ್ ರಸ್ತೆಗಳಾಗಿವೆ, ಮತ್ತೆ ಎಲ್ಲಾ ತರಹದ ವಾಹನಗಳ ಸೌಕರ್ಯಕ್ಕೂ ಅವಕಾಶ ಇದೆ. ಏತಕ್ಕೆ ಆ ರೀತಿ ಇದೆ ಎಂದರೆ, ಬರಗಾಲ ಬಂದಾಗಲೆಲ್ಲಾ ಈ ಸ್ಕೇರ್‌ಸಿಟಿ ದುಡ್ಡನ್ನು ಬಯಲು ಸೀಮೆಗೆ ಕೊಟ್ಟು ಇವರು ಎಲ್ಲಾ ರಸ್ತೆಗಳನ್ನು ಮಾಡಿಕೊಂಡಿದ್ದಾರೆ. ಸರ್ವಋತು ರಸ್ತೆಗಳೆಂದು ಹಳ್ಳಿ ಹಳ್ಳಿಯಲ್ಲಿಯೂ ರಸ್ತೆಗಳು ಇದೆ, ಆದರೆ ಮಲೆನಾಡಿನಲ್ಲಿ ಇನ್ನೂ ಅಭಿವೃದ್ಧಿಯಾಗಿಲ್ಲ. ಈ ದೃಷ್ಟಿಯಿಂದ ಪಶ್ಚಿಮ ಘಟ್ಟದ ಯೋಜನೆಯಲ್ಲಿ ಒಂದು ಅಭಿವೃದ್ಧಿ ನಿಗಮ ಅಥವಾ ಮಂಡಲಿಯನ್ನು ಮಾಡಿ ಈ ಮಂಡಲಿ ಮುಖಾಂತರ ಹಣವನ್ನು ಖರ್ಚು ಮಾಡುವುದಾದರೆ, ಅದು ಯೋಜನಾಬದ್ಧವಾಗಿ ಖರ್ಚಾಗಿ ಪಶ್ಚಿಮ ಘಟ್ಟಗಳ ಅಭಿವೃದ್ಧಿಯಾಗುತ್ತದೆ ಮತ್ತು ಮಲೆನಾಡಿನ ಅಭಿವೃದ್ಧಿಯಾಗುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಬೇಲೂರು ತಾಲ್ಲೂಕಿನಲ್ಲಿ ರಸ್ತೆಗಳು ಬಹಳ ಕೆಟ್ಟು ಹೋಗಿ ದುಸ್ಥಿತಿಯಲ್ಲಿವೆ. ಈ ರಸ್ತೆಗಳನ್ನು ದುರಸ್ತಿ ಮಾಡುವುದಕ್ಕೆ ಮಾನ್ಯ ಸಚಿವರು ಪ್ರಯತ್ನ ಮಾಡಬೇಕು. ಅಲ್ಲಿರುವ ಈ ಒಂದು ರಸ್ತೆ ನೂರು ವರ್ಷಗಳ ಹಿಂದೆ ಮಾಡಿರತಕ್ಕಂಥ ರಸ್ತೆ. ಇದು ಮೊದಲು ಚಿಕ್ಕಮಗಳೂರು ಮಂಡಿಕೇರಿ ರಸ್ತೆಯಾಗಿತ್ತು. ಈ ರಸ್ತೆಯಲ್ಲಿ ಬೇಲೂರಿನಿಂದ ಬಾಗೆಹ್ಯಾಂಡ್ ಪೋಸ್ಟ್‌ವರೆಗೂ ಹೋಗುವ ಮಧ್ಯದಲ್ಲಿ ಐದು ಕಿಲೋಮೀಟರ್ ರಸ್ತೆಗೆ ಟಾರ್ ಹಾಕಿಲ್ಲ ಅದು ನೂರು ವರ್ಷದ ಹಳೆಯ ಕಾಲದ ರಸ್ತೆಯಾಗಿದೆ. ಸ್ವಾತಂತ್ರ್ಯ ಬಂದು ೪೩ ವರ್ಷಗಳಾದರೂ ಐದು ಕಿಲೋ ಮೀಟರ್ ಟಾರ್ ಹಾಕದೇ ಇರತಕ್ಕಂಥದ್ದು ನಿಜವಾಗಿಯೂ ನಂಬಿಕೆಗೇಡು. ನಾವು ತಲೆ ತಗ್ಗಿಸಬೇಕು. ಎಂತೆಂಥ ಹಳ್ಳಿಗಳ ರಸ್ತೆಗಳಿಗೆಲ್ಲಾ ಟಾರ್ ಹಾಕಿದ್ದಾರೆ. ಗಲ್ಲಿ ಗಲ್ಲಿಯಲ್ಲಿಯೂ ಕೂಡಾ ಟಾರನ್ನು ಹಾಕಿದ್ದಾರೆ. ಆದರೆ ಇಂತಹ ಮುಖ್ಯವಾದ ರಸ್ತೆಯ ಐದು ಕಿಲೋ ಮೀಟರ್‌ಗೆ ಟಾರ್ ಹಾಕುವುದಕ್ಕೆ ಆಗಿಲ್ಲ. ಇಲ್ಲಿಯ ಜನರು ಪಾಪ ಮಾಡಿರುತ್ತಾರೆಯೋ? ಇಲ್ಲಿಯವರೆಗೂ ಎಷ್ಟೋ ಜನ ಮಂತ್ರಿಗಳು ಬಂದು ಹೋದರು. ಇವರೆಲ್ಲರಿಗೂ ಹೇಳಿ ಆಗಿದೆ, ಇಷ್ಟು ವರ್ಷಗಳಾದರೂ ಕೂಡಾ ಇತ್ತ ಗಮನವನ್ನು ಕೊಡದೇ ಇರತಕ್ಕಂಥದು ಬಹಳ ದುರದೃಷ್ಟ. ಈ ಬಗ್ಗೆ ಮಾನ್ಯ ಸಚಿವರು ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಮತ್ತೆ ಬೇಲೂರು, ಹಳೇಬೀಡು ಶ್ರವಣಬೆಳಗೊಳ ಇವುಗಳು ಪ್ರವಾಸಿ ಕೇಂದ್ರಗಳು. ಈ ಪ್ರವಾಸಿ ಕೇಂದ್ರಗಳಿಗೆ ಜಗತ್ತಿನ ನಾನಾ ಭಾಗಗಳಿಂದ ಪ್ರವಾಸಿಗರು ಬರುತ್ತಾರೆ. ಈ ರಾಜ್ಯದ ಪ್ರವಾಸಿಗಳು, ದೇಶದ ಪ್ರವಾಸಿಗಳು, ಅಂತರರಾಷ್ಟ್ರೀಯ ಪ್ರವಾಸಿಗಳು ಬಸ್‌ಗಳಲ್ಲಿ, ಕಾರುಗಳಲ್ಲಿ ಬರುತ್ತಾರೆ. ಈ ಕೇಂದ್ರಕ್ಕೆ ಹೋಗತಕ್ಕಂಥ ರಸ್ತೆಗಳ ಅವ್ಯವಸ್ಥೆ ಬಹಳ ಹೆಚ್ಚಾಗಿದೆ. ಈ ರಸ್ತೆಗಳನ್ನು ಕೊನೆಯ ಪಕ್ಷ ನಮ್ಮ ಕರ್ನಾಟಕದ ಮರ್ಯಾದೆಯನ್ನು ಉಳಿಸಿಕೊಳ್ಳುವುದಕ್ಕಾದರೂ ನೀವು ಈ ರಸ್ತೆಗಳನ್ನು ಯೋಗ್ಯ ರೀತಿಯಲ್ಲಿ ಇಡಬೇಕು. ಸರ್ವಋತು ರಸ್ತೆಗಳನ್ನಾಗಿ ಮಾಡಬೇಕು, ಈ ಪ್ರವಾಸಿಗಳಿಂದ ದೇಶಕ್ಕೆ, ದೇಶದ ಬೊಕ್ಕಸಕ್ಕೆ ದುಡ್ಡು ಬರುತ್ತದೆ. ಟ್ಯಾಕ್ಸ್ ಮುಖಾಂತರ ನಾನಾ ವಿಧದಲ್ಲಿ ದುಡ್ಡು ಬರುತ್ತದೆ. ಆದ್ದರಿಂದ ಈ ರಸ್ತೆಗಳನ್ನು ದುರಸ್ತಿ ಮಾಡಬೇಕು, ಈ ರಸ್ತೆ ಸರ್ವಋತು ರಸ್ತೆ ಆಗುವ ಹಾಗೆ.

ಮಾಡಬೇಕು. ಹೊರಗಡೆಯಿಂದ ಬರತಕ್ಕಂಥ ಜನರಿಗೆ ಈ ರಸ್ತೆಗಳ ಅವ್ಯವಸ್ಥೆ ಮುಟ್ಟಬಾರದು ಮತ್ತೆ ಕೆಲವು ರಸ್ತೆಗಳು ಅಂಕುಡೊಂಕಾಗಿವೆ. ಇದರಿಂದ ವಾಹನ ಅಪಘಾತಗಳು ನಡೆಯುತ್ತಲೇ ಇರುತ್ತವೆ. ವಾಹನ ಅಪಘಾತಗಳು ಎಲ್ಲಿ ನಡೆಯುತ್ತಿದೆ ಎಂದು ತಿಳಿದು ಅಲ್ಲಿ ಸ್ವಲ್ಪ ರಸ್ತೆಗಳನ್ನು ನೇರವಾಗಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇದರಿಂದ ಎಷ್ಟೋ ಜನರ ಪ್ರಾಣ ರಕ್ಷಣೆ ಆಗುತ್ತದೆ. ವಾಹನಗಳು ಕೂಡ ಉಳಿಯುತ್ತವೆ. ಈಗ ಬಹಳ ಹೊತ್ತು ಆಗಿದೆ, ಹೆಚ್ಚು ಕಾಲ ತೆಗೆದುಕೊಳ್ಳದೇ ಜಮೀನು ಮುಳುಗಡೆ ರೈತರಿಗೆ ಪರಿಹಾರ ಕೊಡುವ ಬಗ್ಗೆ ಮಾತ್ರ ಹೇಳುತ್ತೇನೆ. ಅವರಿಗೆ ಪರಿಹಾರ ಕೊಡುವುದು ಬಹಳ ನಿಧಾನವಾಗಿದೆ. ಪರಿಹಾರ ಕೊಡತಕ್ಕ ಕಾರ್ಯದ ಕಾಲದಲ್ಲಿ ಸರಿಯಾದ ಯೋಗ್ಯ ಆಫೀಸರ್‌ನ್ನು ಅಲ್ಲಿಗೆ ಹಾಕಬೇಕು. ಆತ ಏನು ನಿರ್ಣಯ ಮಾಡುತ್ತಾನೆ. ಆ ನಿರ್ಣಯದ ಪ್ರಕಾರ ಆ ಜನರಿಗೆ ಪರಿಹಾರ ಸಿಕ್ಕಬೇಕು ಇವೊತ್ತು ಏನು ಆಗಿದೆ ಅಂದರೆ, ನಮ್ಮ ಕೈಗಾರಿಕೆಗಳು ಬೇಕಾದಷ್ಟು ಲಾಸ್ ಆಗಿದೆ. ಅಲ್ಲಿ ಯಾರನ್ನು ಹಾಕುತ್ತಾರೆ. ಎಂದರೆ ಈ ಐಎಎಸ್ ಅಧಿಕಾರಿಗಳನ್ನು ಹಾಕುತ್ತಾರೆ. ಇವರು ಲೋಕವನ್ನೇ ಬಲ್ಲರು, ಲೋಕವನ್ನೇ ತಿಳಿದವರು ಎನ್ನುವ ದೃಷ್ಟಿಯಿಂದ ಇವರನ್ನು ಹಾಕುತ್ತಾರೆ. ಕೈಗಾರಿಕೆಗಳಲ್ಲಿ ಇವರಿಗೆ ಎಬಿಸಿಡಿ ಗೊತ್ತಿಲ್ಲದೇ ಇದ್ದರೂ ಸಹ ನಷ್ಟವಾಗಿ ಇರತಕ್ಕ ಕೈಗಾರಿಕೆಗಳಿಗೆ ಇವರನ್ನು ಅಡ್ಮಿನಿಸ್ಟ್ರೇಟರ್ ಅಥವಾ ಮ್ಯಾನೇಜಿಂಗ್ ಡೈರೆಕ್ಟರ್ ಅನ್ನಾಗಿ ಹಾಕುತ್ತಾರೆ. ಅವರು ಲೂಟಿ ಹೊಡೆದು ಆ ಕೈಗಾರಿಕೆ ಪೂರ್ಣವಾಗಿ ಲಾಸ್ ಆಗುವ ರೀತಿಯಲ್ಲಿ ಮಾಡುತ್ತಾರೆ, ಹಾಗೆಯೇ ಭೂ ಸ್ವಾಧೀನದ ಅಧಿಕಾರಿಗಳು. ಇವರು ರೈತರ ಬಗ್ಗೆ ಅತಂಕ ಇಲ್ಲದೇ ಇರತಕ್ಕವರು. ರೈತರ ಬಗ್ಗೆ ಯೋಚನೆ ಮಾಡದೇ ಇರತಕ್ಕವರು, ಇಂತಹ ಅಧಿಕಾರಿಗಳನ್ನು ಹಾಕುತ್ತಾರೆ. ರೈತರನ್ನು ಇವರು ಕೊಳ್ಳೆ ಹೊಡೆಯುತ್ತಾರೆ, ರೈತರಿಂದ ಪರ್ಸೆಂಟೇಜ್ ವಸೂಲಿ ಮಾಡ ತ್ತಾರೆ. ಆದ್ದರಿಂದ ಈ ಮುಳುಗಡೆ ಪ್ರದೇಶ ರಾಜ್ಯದಲ್ಲಿ ಎಲ್ಲಿಯಾದರೂ ಇರಲಿ, ನಮ್ಮದು ಇರಲಿ. ಬೇರೆಯವರದ್ದು ಇರಲಿ ಇಂತಹ ಕಡೆ ರೈತರ ಬಗ್ಗೆ ಸ್ವಲ್ಪ ಕಳಕಳಿ ಇರತಕ್ಕ ಯೋಗ್ಯ ಅಧಿಕಾರಿಗಳನ್ನು ಹಾಕಿದರೆ ಆ ರೈತರು ಉದ್ಧಾರವಾಗುತ್ತಾರೆ. ಹಳೇಬೀಡು ಮತ್ತು ಮಾದೀಹಳ್ಳಿ ಬರಗಾಲ ಪ್ರದೇಶಗಳಾಗಿ ಹೋಗಿವೆ. ಇವಕ್ಕೆ ನೀರು ಕೊಡತಕ್ಕ ಕೆಲಸವನ್ನು ತಾವು ಮಾಡಬೇಕು. ನಿಮ್ಮ ಉತ್ತರದಲ್ಲಿ ಈ ಬಗ್ಗೆ ಹೇಳಬೇಕೆಂದು ಕೇಳಿಕೊಂಡು ಮಾನ್ಯ ಸಭಾಧ್ಯಕ್ಷರಿಗೆ ನಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

Announcement

CHAIRMAN.— Here is an announcement to this House. The Business Advisory Committee at its meeting held today (on 7-7-1990) have decided that the Assembly to meet at 9 A.M daily from 9th July, 1990 onwards and to transact the business as detailed below:—

Monday, 9th July, 1990

Discussion and Voting on the demands pertaining to the Minister for planning, Law & Parliamentary Affairs and also the Minister for Finance and Excise i.e., demand Nos. 44, 38, 37, 25, 21, 17, 18, 19, 20, and 22 and also Consideration and Passing of the Karnataka Land Reforms (Amendment) Bill, 1990.

Tuesday, 10th July, 1990

Discussion and Voting on demands pertaining to the Minister for Rural Development and Panchayati Raj and Information and Publicity, Minister for Forest and Animal Husbandry, Minister for dgriculture and Horticulture i.e., demand Nos. 57, 58, 29, 4, 24, 13 Aan 2.

Wednesday, the 11th and Thursday the 12th July, 1990

i) Discussion and voting on the demands pertaining to the Chief Minister i.e. 39, 40, 41, 42, 43, 27 and 28.

ii) consideration and passing of Appropriation Bill.

Friday, the 13th July 1990.

Official/Non-official business

† ಶ್ರೀ ಎ. ಕೆ. ಅನಂತಕೃಷ್ಣ (ಶಿವಾಜಿನಗರ). – ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಲೋಕೋಪಯೋಗಿ ಸಚಿವರು ತಂದಿರತಕ್ಕ ಬೇಡಿಕೆಗಳ ಮೇಲೆ ಚರ್ಚೆ ಮಾಡುವ ಈ ಸಂದರ್ಭದಲ್ಲಿ ಅವರ ಬೇಡಿಕೆಗೆ ಮನ್ನಣೆ ಕೊಡುತ್ತಾ ನಾನು ಬೆಂಗಳೂರು ನಗರಕ್ಕೆ ಸಂಬಂಧ ಪಟ್ಟಂತೆ ಕೆಲವು ವಿಷಯಗಳಿಗೆ ಸೀಮಿತವಾಗಿ ಹೇಳಬಯಸುತ್ತೇನೆ. ಬೆಂಗಳೂರು ನಗರದಾದ್ಯಂತ ಲೋಕೋಪಯೋಗಿ ಇಲಾಖೆಯ ಒಂದು ಎಲ್ಲೆಯೊಳಗೆ ಸಾಕಷ್ಟು ಕಟ್ಟಡಗಳು ಇವೆ. ಆಸ್ಪತ್ರೆಗಳಿಗೆ, ವಿದ್ಯಾಶಾಲೆಗಳಿಗೆ ಸರ್ಕಾರದ ಕಛೇರಿಗಳಿಗೆ ಸೇರಿದ ಮತ್ತು ಇತರೆ ಕಟ್ಟಡಗಳು ಇವೆ ಇನ್ನೂ ಹೊಸ ಕಟ್ಟಡಗಳನ್ನೂ ಕೂಡ ಕಟ್ಟುತ್ತಿದ್ದಾರೆ. ಬೆಂಗಳೂರು ನಗರ ಇಡೀ ವಿಶ್ವದಲ್ಲಿಯೇ ಒಂದು ಸುಂದರವಾದ ನಗರ ಎಂಬ ಖ್ಯಾತಿಯನ್ನು ಪಡೆದಿದೆ. ಇಂತಹ ಒಂದು ಸುಂದರ ಉದ್ಯಾನನಗರ ಎಂದು ಖ್ಯಾತಿ ಪಡೆದಂಥ ಈ ನಗರದಲ್ಲಿ ಲೋಕೋಪಯೋಗಿ ಇಲಾಖೆಯವರು ಈ ಸುಂದರತೆಯನ್ನು, ಈ ವಿಶ್ವಖ್ಯಾತಿಯಾದಂಥ ವ್ಯಕ್ತಿತ್ವವನ್ನು ಉಳಿಸುವುದರಲ್ಲಿ ವಿಫಲರಾಗಿದ್ದಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಬಹಳ ವಿಷಾಧದಿಂದ ಹೇಳಬೇಕಾಗಿದೆ. ಬೆಂಗಳೂರು ನಗರದಲ್ಲಿ ವಿಧಾನಸೌಧ ಮತ್ತು ಹೈಕೋರ್ಟ್ ಬಿಲ್ಡಿಂಗ್ಸ್ ಹಾಗೆಯೇ ಕೆಲವು ಕಟ್ಟಡಗಳನ್ನು ಬಿಟ್ಟರೆ ಉಳಿದ ಕಟ್ಟಡಗಳಲ್ಲಿ ಯಾವುದೇ ರೀತಿಯಾದ ಬೆಂಗಳೂರು ನಗರದ ಸುಂದರತೆಯನ್ನು, ಅದರ ವ್ಯಕ್ತಿತ್ವವನ್ನು ಕಾಪಾಡುವಂಥ ಒಂದು ಎನ್‌ವೈರನ್‌ಮೆಂಟಲ್ ಡೆವಲಪ್‌ಮೆಂಟ್ಸ್ ಸರಿಯಾಗಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ತಮಗೆಲ್ಲ ಗೊತ್ತಿರುವ ಹಾಗೆ ಕೆಲವು ವರ್ಷಗಳ ಕೆಳಗೆ ವಿಶ್ವೇಶ್ವರಯ್ಯನವರ ಹೆಸರನ್ನು ಉಳಿಸುವಂಥ ರೀತಿಯಲ್ಲಿ ಒಂದು ಕಟ್ಟಡವನ್ನು ಕಟ್ಟಿದಾಗ ಬೆಂಗಳೂರು ನಗರದ ಸ್ಕೈಲೇನಾಗಿರಲಿ, ಅದರ ಸುಂದರತೆನೇ ಆಗಿರಲಿ, ಅದರ ಪರಿಸರವೇ ಆಗಿರಲಿ ಅವಕ್ಕೆಲ್ಲಾ ಧಕ್ಕೆ ಬರುವಂಥ ಒಂದು ಕಟ್ಟಡವನ್ನು ಅಂಬೇಡ್ಕರ್ ವೀಧಿಯಲ್ಲಿ ಕಟ್ಟಿದ್ದಾರೆ. ಆದರೆ ಅದರ ಪಕ್ಕದಲ್ಲಿ ಕೇಂದ್ರ ಸರ್ಕಾರದವರು ಹೆಡ್ ಪೋಸ್ಟ್ ಆಫೀಸನ್ನು ಕಟ್ಟಿದ್ದಾರೆ. ಅದನ್ನು ನೋಡಿದರೆ ನಮ್ಮ ಲೋಕೋಪಯೋಗಿ ಇಲಾಖೆಯವರು ಬೆಂಗಳೂರು ನಗರದ ವ್ಯಕ್ತಿತ್ವವನ್ನು ಉಳಿಸುವಂಥ ರೀತಿಯಲ್ಲಿ ಎಷ್ಟು ಶ್ರದ್ಧೆಯಿಂದ ನಿಷ್ಠೆಯಿಂದ ಕೆಲಸವನ್ನು ಮಾಡುತ್ತಾ ಇದ್ದಾರೆಂದು ನಮಗೆ ಅರ್ಥವಾಗುತ್ತದೆ. ಈ ವಿಷಯವನ್ನು ಮಾನ್ಯ ಮಂತ್ರಿಯವರು ತೀವ್ರವಾಗಿ ಗಮನಕ್ಕೆ ತೆಗೆದುಕೊಳ್ಳಬೇಕು. ಇನ್ನು ಮುಂದಾದರೂ ಕಟ್ಟಡಗಳನ್ನು ಕಟ್ಟಬೇಕಾಗಿದ್ದರೆ ಬೆಂಗಳೂರು ನಗರದ ಸುಂದರತೆಯನ್ನು ಮತ್ತು ಅದರ ವಿಶ್ವಖ್ಯಾತಿಯನ್ನು ಉಳಿಸುವಂಥ ರೀತಿಯಲ್ಲಿ ಸರಿಯಾದ ಆರ್ಕಿಟೆಕ್ಚರ್ ಸಹಾಯಪಡೆದು ಕಟ್ಟಡಗಳನ್ನು ಕಟ್ಟಬೇಕು. ಅಲ್ಲದೆ ಕಟ್ಟಡಗಳನ್ನು ಕಟ್ಟುವಾಗ ಸಾಕಷ್ಟು ಗ್ರೀನರಿ ಅದರಲ್ಲಿರಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಾ ಇದ್ದೇನೆ. ಬೆಂಗಳೂರು ನಗರಾದ್ಯಂತ ಏನು ನಮ್ಮ ಲೋಕೋಪಯೋಗಿ ಇಲಾಖೆಯ ಕಟ್ಟಡಗಳಿವೆ ಅದು ಶಾಲೆಯಾಗಿರಲಿ, ಆಸ್ಪತ್ರೆಯೇ ಆಗಿರಲಿ, ಯಾವುದೇ ಆಗಲಿ ಹೋಗಿ ನೋಡಿದರೆ ಗೊತ್ತಾಗುತ್ತದೆ. ಅಲ್ಲಿ ಫಂಕ್ಷನಲ್ ಆಸ್ಪೆಕ್ಟ್ಸ್ ಎಂದು ಹೇಳುತ್ತಾರೆ. ಫಂಕ್ಷನಲ್ ಬಿಲ್ಡಿಂಗ್ಸ್ ಎಂದು ಬಹಳ ಚೆನ್ನಾಗಿ ಹೇಳುತ್ತಾರೆ, ಸೋಷಿಯಲ್ ಅಂಡ್ ಕಮ್ಯುನಿಟಿ ಸರ್ವಿಸಸ್ ಅಂಡ್ ಎಕನಾಮಿಕ್ ಸರ್ವಿಸಸ್ ಎಂದು ಹೇಳುತ್ತಾರೆ. ಅದು ಆಬ್ಜೆಕ್ಟೀವ್ ಅಷ್ಟೆ. ಈ ಕಟ್ಟಡಗಳನ್ನು ಏನು ಕಟ್ಟಿದ್ದಾರೆ ಅದನ್ನು ಯಾವ ಉಪಯೋಗಕ್ಕೆ ಕಟ್ಟಿದ್ದಾರೆ ಎನ್ನುವುದಕ್ಕೆ ಒಂದು ಗುರಿ ಹೇಳಿದ್ದಾರೆ. ಈ ಗುರಿ ಸಾಧನೆಯಾಗಿದೆಯೇ ಎಂದು ಕೇಳುತ್ತೇನೆ. ಇದು ನನ್ನ ವಿಚಾರವಲ್ಲ, ಈ ರಿಪೋರ್ಟ್‌ನಲ್ಲಿದೆ. ನಾನು ಮೊನ್ನೆ ಪ್ರಶ್ನೋತ್ತರ ಸಮಯದಲ್ಲಿ ಬೇರೆ ವಿಷಯವಾಗಿ ಕೆಲವು ಶಾಲೆಗಳ ವಿಷಯ ಹೇಳಿದೆ. ನನ್ನ ಕ್ಷೇತ್ರದಲ್ಲಿಯೇ ಸುಮಾರು ೩೦–೪೦ ಸರ್ಕಾರದ ಕಟ್ಟಡಗಳಿವೆ ಶಾಲೆಗಳ ಕಟ್ಟಡಗಳು ಸಾಕಷ್ಟು ಇವೆ. ಆ ಶಾಲೆಗಳಿಗೆ ಹೋಗಿದ್ದೇ ಆದರೆ ಅಲ್ಲಿ ವಿದ್ಯಾಭ್ಯಾಸ ಪಡೆಯುವಂಥ ಮಕ್ಕಳಿಗೆ ಬೇಸಿಕ್ ಮಿನಿಮಂ ಸರ್ವೀಸ್ ಎಂದು ಏನು ಹೇಳುತ್ತೇವೆ, ಅದು ಟಾಯ್ಲೆಟ್ ಆಗಿರಲಿ, ಕುಡಿಯುವ ನೀರು ಆಗಿರಲಿ, ಲೈಟ್ ಆಗಿರಲಿ ಯಾವುದೇ ಅನುಕೂಲಗಳಿಲ್ಲ. ಅವನ್ನು ನೋಡುವವರು ಯಾರೂ ಇಲ್ಲ. ಮಲ್ಟಿಪರ್ಪಸ್ ಸರ್ವಿಸಸ್‌ಗೆ ಇಂಜಿನಿಯರ್ಸ್ ಇದ್ದಾರೆಂದು ಹೇಳಿಕೊಳ್ಳುತ್ತಾರೆ. ವಾರಕ್ಕೊಂದು ಸಾರಿ ನೋಡುತ್ತಾರೆಂದು ಹೇಳಿಕೊಳ್ಳುತ್ತಾರೆ. ಆದರೆ ವರ್ಷಕ್ಕೊಂದು ಸಲ ನೋಡುವಂಥವರು ಕೂಡ ಇಲ್ಲ. ನಮ್ಮ ಕಾರ್ಪೋರೇಷನ್‌ನಲ್ಲಿ ಒಂದು ವ್ಯಂಗ್ಯವಾದ ಗಾದೆ ಇದೆ. ಹಳೆ ಕಲ್ಲು, ಹೊಸ ಬಿಲ್ಲು, ಎಂದು ಇದೆ. ಹಾಗೆ ಈ ಇಲಾಖೆಯ ನೂರಾರು ಕಟ್ಟಡಗಳು ಬೆಂಗಳೂರು ನಗರದಾದ್ಯಂತ ಏನಿವೆ ಅವಕ್ಕೆ ಪ್ರತಿವರ್ಷ ಆನ್ಯುವಲ್ ರಿಪೇರ್ಸ್ ಮೆಂಟೆನೆನ್ಸ್ ಎಂದು ಬಿಲ್ಲುಗಳು ಬರುತ್ತಾ ಇರಬಹುದು ಎಂದು ಕಾಣುತ್ತದೆ. ನಾನು ನೋಡಿಲ್ಲ. ತಪ್ಪಿದ್ದರೆ ಕ್ಷಮಿಸಬೇಕು ನಾನು ತಿದ್ದಿಕೊಳ್ಳುತ್ತೇನೆ. ಆದರೆ ಹಳೆಯ ಕಟ್ಟಡಗಳಿಗೆ ಯಾವ ರಿಪೇರಿ, ಯಾವ ಮೆಂಟೆನೆನ್ಸ್ ಇಲ್ಲದೆ ಖರ್ಚಂತೂ ಕಾಣುತ್ತಾ ಇರುತ್ತದೆ. ಈ ಬಜೆಟ್‌ನಲ್ಲೂ

ಕೂಡ ಕಾಣುತ್ತದೆ. ಆದರೆ ಅಲ್ಲಿ ಏನೊಂದು ಪ್ರಗತಿಯನ್ನು ಸಾಧಿಸಿದ್ದಾರೆ, ಏನು ಸೌಲಭ್ಯಗಳನ್ನು ಕೊಟ್ಟಿದ್ದಾರೆ ಎನ್ನುವುದನ್ನು ಹೋಗಿ ನೋಡುವವರು ಯಾರಾದರೂ ಇದ್ದಾರೆಯೇ. ಅದನ್ನು ರಿಪೋರ್ಟ್ ಮಾಡುವವರು ಯಾರಾದರೂ ಇದ್ದಾರೆಯೇ, ತಪ್ಪು ಮಾಡಿದರೆ ಅದನ್ನು ತನಿಖೆಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವವರು ಯಾರಾದರೂ ಇದ್ದಾರೆಯೇ ಎನ್ನುವ ಒಂದು ದೊಡ್ಡ ಸಂಶಯಾಸ್ಪದವಾದ ಮಾತನ್ನು ಬಹಳ ದುಃಖದಿಂದ ನಾನು ಹೇಳುತ್ತಾ ಇದ್ದೇನೆ. ಏಕೆಂದರೆ, ಸರ್ಕಾರದ ಕಟ್ಟಡದಲ್ಲಿ ಶಾಲೆಗಳಿದ್ದರೆ ಆ ಶಾಲೆಗಳಿಗೆ ಹೋಗುವವರೆಲ್ಲ ಬಡಮಕ್ಕಳು.

೬-೪೦ ಪಿ.ಎಂ.

ಆ ಬಡ ಮಕ್ಕಳಿಗೆ ಕೊಡಬೇಕಾದಂಥ ಸೌಕರ್ಯಗಳನ್ನು ಹಾಗೂ ಸೌಲಭ್ಯಗಳನ್ನು ಕೊಡದಿದ್ದರೆ ನಾವು ಎಂತಹ ಆಡಳಿತವನ್ನು ನಡೆಸುತ್ತಿದ್ದೇವೆ, ಎಂತಹ ನಿಯಂತ್ರಣವನ್ನು ಇಟ್ಟುಕೊಂಡು ಸೌಲಭ್ಯಗಳನ್ನು ಬಡ ಮಕ್ಕಳ ಪ್ರಗತಿಗಾಗಿ ಕೊಡುತ್ತಿದ್ದೇವೆಯೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಇದನ್ನು ಮಾನ್ಯ ಮಂತ್ರಿಗಳು ಬಹಳ ತೀವ್ರವಾಗಿ ಯೋಚನೆ ಮಾಡಬೇಕು.

ಇನ್ನು ಆಸ್ಪತ್ರೆ ಕಟ್ಟಡಗಳು. ಬೋರಿಂಗ್ ಆಸ್ಪತ್ರೆಗೆ ಹೋಗಿ ನೋಡಿ. ಎಷ್ಟೊಂದು ಓವರ್ ಕ್ರೌಡಿಂಗ್ ಇದೆ. ಅದೇ ರೀತಿ ವಿಕ್ಟೋರಿಯ ಆಸ್ಪತ್ರೆಗೆ ಹೋಗಿ ನೋಡಿ. ಎಷ್ಟೊಂದು ಓವರ್ ಕ್ರೌಡಿಂಗ್ ಇದೆ. ಇರುವ ಕಟ್ಟಡವನ್ನು ವಿಸ್ತರಣೆ ಮಾಡುವುದಾಗಲಿ, ಹೊಸ ಕಟ್ಟಡವನ್ನು ಕಟ್ಟುವುದಾಗಲಿ ಇಲ್ಲ, ಇರುವುದನ್ನೇ ಸೂಕ್ತವಾಗಿ ಮೈನ್‌ಟೈನ್ ಮಾಡುವುದಾಗಲಿ ಇಲ್ಲ. ಇದರ ಬಗ್ಗೆ ವಿಶೇಷವಾಗಿ ತೀವ್ರವಾಗಿ, ಸಮಗ್ರವಾಗಿ ಯೋಜನೆಯನ್ನು ಹಾಕಿಕೊಂಡು ಏನಾದರೂ ಮಾಡಿದರೆ ಜನತೆಗೆ ಒಳ್ಳೆಯ ಕೆಲಸವನ್ನು ಮಾಡುವುದಕ್ಕಾಗುತ್ತದೆ. ಅವರಿಗೆ ಸೇವೆಯನ್ನು ಮಾಡುವುದಕ್ಕಾಗುತ್ತದೆ. ಇಲ್ಲದಿದ್ದರೆ ಕೇವಲ ಡಿಪಾರ್ಟ್‌ಮೆಂಟ್ ಇರುತ್ತದೆ, ಎಸ್ಟಾಬ್ಲಿಷ್‌ಮೆಂಟ್ ಇರುತ್ತದೆ. ಅವರಿಗೆ ಬೇಕಾದಷ್ಟು ಹಣವನ್ನು ನಾವು ಒದಗಿಸಿ ಕೊಡುತ್ತೇವೆ. ಯೋಜನೆಗಳನ್ನು ಹಾಕುತ್ತೇವೆ ; ಖರ್ಚು ಮಾಡುತ್ತೇವೆ. ಆದರೆ ಜನಗಳಿಗೆ ಮಾತ್ರ ಅನುಕೂಲವಾಗುವುದಿಲ್ಲ. ಆದ್ದರಿಂದ ಎಂ. ಇ. ಎಸ್. ಎನ್ನುವಾಗ ಮನಿ ಈಟಿಂಗ್ ಸರ್ವಿಸ್ ಅಂತ ನಾವು ಚಿಕ್ಕವರಿದ್ದಾಗ ಹೇಳುತ್ತಿದ್ದೆವು. ಈಗ ಪಿ.ಡಬ್ಲ್ಯು.ಡಿ. ಇಲಾಖೆಗೂ ಅದೇ ರೀತಿಯ ಕೆಟ್ಟ ಹೆಸರು ಬಂದು ಬಿಟ್ಟಿದೆ. ಅದನ್ನು ತಪ್ಪಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಹಾಗೆಯೇ ಬೆಂಗಳೂರು ನಗರದಂತಹ ಸುಂದರವಾದ ಮುಖಕ್ಕೆ ಮೊಡವೆ ಬಂದರೆ. ಸುಂದರವಾದ ಮುಖದ ಗತಿ ಏನಾಗುತ್ತದೆ ? ಎಷ್ಟು ವಿಕಾರ ಸ್ವರೂಪವಾಗುತ್ತದೆಂಬುದನ್ನು ಹೇಳಬೇಕಾದ ಮತ್ತು ಅದನ್ನು ವಿಶ್ಲೇಷಣೆ ಮಾಡಬೇಕಾದ ಅವಶ್ಯಕತೆ ಇಲ್ಲ. ಅದೇ ರೀತಿ ಬೆಂಗಳೂರು ನಗರದಲ್ಲಿ ಕೆಲವು ಕಟ್ಟಡಗಳು ಇವೆ. ಸರ್ಕಾರದ ಕಟ್ಟಡಗಳನ್ನು ಕಟ್ಟಬೇಕಾದರೆ ಬೆಂಗಳೂರು ನಗರದ ಸುಂದರತೆಯನ್ನು ಹೆಚ್ಚು ಮಾಡುವ ರೀತಿಯಲ್ಲಿ ಅದಕ್ಕೆ ಯಾವುದೋ ಒಂದು ಟೀಮ್ ಆಫ್ ಆರ್ಕಿಟೆಕ್ಟ್ಸ್ ಅಂತ ಹೇಳಿ ಎನ್‌ವೈರನ್‌ಮೆಂಟಲಿಸ್ಟ್ಸ್ ಅಡ್ವೈಸನ್ನು ತೆಗೆದುಕೊಂಡು ಸ್ಟಡಿ ಮಾಡಿ, ಅಸೆಸ್ ಮಾಡಿ, ರಿಪೋರ್ಟ್ ಮಾಡಿ ಅವರ ರೆಕಮೆಂಡೇಷನ್ ತೆಗೆದುಕೊಂಡು ಮಾಡಿದ್ದೇ ಆದರೆ, ಬೆಂಗಳೂರು ನಗರದ ಸುಂದರತೆಯನ್ನು ಅದರ ಒಂದು ಹವಾಮಾನವನ್ನು, ಅದರ ಒಂದು ಪರಿಸರವನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಶೇಷಾದ್ರಿ ಮೆಮೋರಿಯಲ್ ಕಟ್ಟಡ ಪಕ್ಕದಲ್ಲೇ ಇದೆ. ಅದು ಹಳೇ ಕಾಲದಿಂದ ಬಂದಂತಹ ಕಟ್ಟಡ. ಅದರ ಆರ್ಕಿಟೆಕ್ಚರನ್ನು ಬದಲಾವಣೆ ಮಾಡಿ ಎಂದು ನಾನು ಹೇಳುವುದಿಲ್ಲ. ಏಕೆಂದರೆ, ನನಗೂ ಒಂದು ರೀತಿಯಲ್ಲಿ ಹಳೇ ಹಳೇ ಆರ್ಕಿಟೆಕ್ಚರ್ ಮೇಲೆ ಎಷ್ಟು ಅಭಿಮಾನ ಇರಬೇಕೋ ಅಷ್ಟು ಇದೆ. ಆ ಒಂದು ಕಟ್ಟಡ ಎಂತಹ ಒಂದು ಒಳ್ಳೆಯ ಪ್ರದೇಶದಲ್ಲಿದೆ, ಎಷ್ಟು ಆಕರ್ಷಣೀಯವಾದ ಕ್ಷೇತ್ರದಲ್ಲಿದೆ ಎಂಬುದನ್ನು ಗಮನಿಸಬೇಕು. ಅದನ್ನು ಯಾವ ರೀತಿ ಜನರಿಗೆ ಮತ್ತಷ್ಟು ಆಕರ್ಷಣೆ ಬರುವ ಹಾಗೇ ಮಾಡಬೇಕೋ, ಆ ಒಂದು ಪ್ರಯತ್ನವನ್ನು ನಾವು ಮಾಡುತ್ತಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ನನ್ನನ್ನು ಕೆಲವು ಜನ ಇದು ಏನು ಬಿಲ್ಡಿಂಗ್ ಅಂತ ಕೇಳುತ್ತಾರೆ. ಇದನ್ನು ಯಾವಾಗ ಕಟ್ಟಿದ್ದು, ಯಾರಿಗೆ ಕಟ್ಟಿದ್ದು ಅಂತ ಕೇಳುತ್ತಾರೆ. ಯಾರು ಈ ಶೇಷಾದ್ರಿ, ಎಲ್ಲಿಂದ ಬಂದವರು ಅಂತ ಕೇಳುತ್ತಾರೆ. ಅದ ಮೇಲೆ ನಾವು ಬೆಂಗಳೂರು ನಗರದಲ್ಲಿ ಚಿಕ್ಕ ವಯಸ್ಸಿನಲ್ಲಿದ್ದಾಗಲೂ ಬೆಂಗಳೂರು ನಗರಕ್ಕೆ ಈ ಒಂದು ಶೇಷಾದ್ರಿ ಮೆಮೋರಿಯಲ್ ಹಾಲ್ ಒಂದು ಲ್ಯಾಂಡ್ ಮಾರ್ಕ್. ಅಂತಹ ಒಂದು ಲ್ಯಾಂಡ್ ಮಾರ್ಕ್ ಎನ್ನುವ ಕಟ್ಟಡಕ್ಕೆ ಯಾವ ರೀತಿಯ ಎನ್‌ವೈರನ್‌ಮೆಂಟ್‌ನ್ನು ಅಭಿವೃದ್ಧಿ ಪಡಿಸಬೇಕೆಂಬುದನ್ನು ಪಿ ಡಬ್ಲ್ಯು. ಡಿ. ಖಾತೆಯವರೇ ಮಾಡಬೇಕು. ನಾವು ನಗರಸಭೆಯಲ್ಲಿದ್ದರೆ ಅವರಿಗೆ ಹೇಳಬಹುದಾಗಿತ್ತು. ಹಾಗೆಯೇ ಕೆ. ಆರ್. ಸರ್ಕಲ್‌ನಲ್ಲಿ ವಿಶ್ವೇಶರಯ್ಯನವರ ಹೆಸರಿನಲ್ಲಿ ಟೆಕ್ನಾಲಾಜಿಕಲ್ ಇನ್‌ಸ್ಟಿಟ್ಯೂಟ್ ಇದೆ. ಅಲ್ಲೇ ವಿಶ್ವೇಶ್ವರಯ್ಯನವರ ಸ್ಟ್ಯಾಚ್ಯು ಇದೆ. ಅದರ ಸುತ್ತ ಮುತ್ತ ನೋಡಿ. ಅದಕ್ಕೆ ಪಾರ್ಕೂ ಇಲ್ಲ. ನೋಡುವುದಕ್ಕೇ ಆಗುವುದಿಲ್ಲ. ಸರ್.ಎಂ. ವಿಶ್ವೇಶ್ವರಯ್ಯನವರ ಪ್ರಖ್ಯಾತ ಇಂಜಿನೀಯರ್

ಇಂಜಿನೀಯರ್ ಸ್ಟೇಟ್‌ಮೆಂಟ್. ನಮ್ಮ ರಾಜ್ಯಕ್ಕೆ ದಿವಾನರಾಗಿದ್ದವರು. ಅವರ ಒಂದು ಸ್ಟ್ಯಾಚು, ಸುತ್ತಮುತ್ತ ನೋಡಿದರೆ ಅದು ಬೆಂಗಳೂರು ನಗರದ ಸುಂದರತೆಗೆ ಬೆಲೆ ಇಲ್ಲದ ಹಾಗೆ ಆಗಿದೆ. ನಿಮ್ಮ ಪಿ. ಡಬ್ಲ್ಯೂ. ಡಿ. ಇಲಾಖೆಯವರು ಅದನ್ನು ಯಾವ ರೀತಿ ಗಮನಿಸಬೇಕೋ ಅದರಂತೆ ಗಮನಿಸಿ ಮಾಡುತ್ತಿಲ್ಲ. ನಾವು ಯಾರಿಗೆ ಯಾವ ರೀತಿಯ ಗೌರವವನ್ನು ಕೊಡಬೇಕೋ ಅದನ್ನು ಗಮನಿಸುತ್ತಿಲ್ಲ. ಈ ನಗರದ ದೃಷ್ಟಿಯಲ್ಲೂ ಯೋಚನೆ ಮಾಡುತ್ತಿಲ್ಲ. ಆದ್ದರಿಂದ ಪಿ.ಡಬ್ಲ್ಯೂ.ಡಿ. ಯಿಂದ ಬೆಂಗಳೂರು ನಗರಕ್ಕೆ ನಾನಾ ದೃಷ್ಟಿಯಲ್ಲಿ ಬಹಳ ಅನ್ಯಾಯ ಆಗುತ್ತಿದೆ ಎಂದು ಈ ಸಂದರ್ಭ ದಲ್ಲಿ ಹೇಳುತ್ತಿದ್ದೇನೆ. ಇದನ್ನೆಲ್ಲ ಮಾನ್ಯ ಮಂತ್ರಿಗಳು ಗಮನಿಸಿ, ಸರಿಯಾದ ರೀತಿಯಲ್ಲಿ ಇನ್ನು ಮೇಲಾದರೂ ಸರಿಯಾದ ಯೋಜನೆಗಳನ್ನು ಹಾಕಿ, ಇಂಜಿನೀಯರ್ಸ್ ಎಷ್ಟು ಜನ ಇದ್ದಾರೆ, ಇದನ್ನೆಲ್ಲಾ ಮೈನ್‌ಟೈನ್ ಮಾಡುವಂತಹ ಜನ, ಇವನ್ನೆಲ್ಲಾ ನೋಡಿಕೊಂಡು ಒಂದು ರಿಪೋರ್ಟ್ ಕೊಟ್ಟು, ಅದನ್ನು ಮಾಡುವ ಬಗ್ಗೆ ಯೋಜನೆಯನ್ನು ಹಾಕಿ ಕೆಲಸ ಮಾಡಿ ಅದರ ಬಗ್ಗೆ ಪ್ರೊಗ್ರೆಸ್ ರಿಪೋರ್ಟ್ ಕೊಡುವ ರೀತಿಯಲ್ಲಿ ಮಾಡಿದರೆ, ಬೆಂಗಳೂರು ನಗರದಲ್ಲಿ ಲೋಕೋಪಯೋಗಿ ಇಲಾಖೆ ಇದೆ, ಆ ಇಲಾಖೆ ಬೆಂಗಳೂರು ನಗರದ ಸುಂದರತೆ ಕಡೆ ಗಮನ ಕೊಟ್ಟು ಕೆಲಸ ಮಾಡುತ್ತಿದೆ ಎಂದು ಅರ್ಥ ವಾಗುತ್ತದೆ, ಮತ್ತೊಂದು ವಿಷಯವನ್ನು ತಮಗೆ ಹೇಳುತ್ತಿದ್ದೇನೆ. ಬೆಂಗಳೂರು ನಗರಕ್ಕೆ ಪಿ.ಡಬ್ಲ್ಯೂ. ಡಿ. ಇಲಾಖೆಯವರ ಮತ್ತೊಂದು ಕಾಂಟ್ರಿಬ್ಯೂಷನ್ ಇದೆ. ಅದು ಏನೆಂದರೆ ಯಾವ ಇಂಜಿನಿಯರ್ಸ್ ನಮ್ಮ ಬೆಂಗಳೂರು ಬಿಟ್ಟು ಹೊರಗಡೆ ಎಲ್ಲೂ ಕೆಲಸ ಮಾಡುವುದಕ್ಕೆ ಸಿದ್ಧರಿಲ್ಲ. ಅವರು ಬೆಂಗಳೂರು ನಗರಕ್ಕೆ ಬರಬೇಕು, ಬೆಂಗಳೂರಿನಲ್ಲಿರುವ ಆಸ್ತಿ-ಪಾಸ್ತಿಗಳನ್ನು ನೋಡಿ, ತಮ್ಮದೇ ಆಸ್ತಿ-ಪಾಸ್ತಿಗಳನ್ನು ಮಾಡಿಕೊಳ್ಳಬೇಕೆಂಬ ರೀತಿಯಲ್ಲಿ ಹೆಗ್ಗಣಗಳ ಹಾಗೆ ಬಂದು ಇಲ್ಲಿ ಸೇರಿ ಕೊಳ್ಳುತ್ತಿದ್ದಾರೆ. ನಾನು ಹಿಂದೆ ಒಂದು ಸಾರಿ ಹೇಳಿದ್ದೆ. ಮಾನ್ಯ ಮಂತ್ರಿಗಳಿಗೆ ಬೇಜಾರಾಗಬಹುದು. "Bangalore is gradually getting converted" ಅಂತ ನಾನು ಮೇಯರ್ ಆಗಿದ್ದಾಗ ಹೇಳುತ್ತಿದ್ದೆ. ಈಗ ಹೇಳುತ್ತಿದ್ದೇನೆ Bangalore is fast getting converted as a junk-yard of the State, ಅಂತ ಹೇಳುತ್ತಿದ್ದೇನೆ.

ಈ ಮಾತನ್ನು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಏಕೆಂದರೆ, ಬೆಂಗಳೂರು ನಗರಕ್ಕೆ ನಾವು ದುಡಿದಂತವರು. ಸೇವೆ ಮಾಡಿದಂತವರು ಬೆಂಗಳೂರು ನಗರದಲ್ಲಿ ಯಾರಿಗೆ ಒಂದು ಕೆಪಾಸಿಟಿ ಇರುವುದಿಲ್ಲ ಎಬಿಲಿಟಿ ಇರುವುದಿಲ್ಲ, ಸೆನ್ಸ್ ಆಫ್ ಕಮಿಟ್‌ಮೆಂಟ್ ಇರುವುದಿಲ್ಲ ಅವರಿಗೆ ಯಾವ ಒಂದು ನಿಷ್ಠೆ, ದಕ್ಷತೆ ಇರುವುದಿಲ್ಲ, ಅಂತಹವರನ್ನು ಹಾಕಿದರೆ, ಅದೂ ವಿಶ್ವೇಶ್ವರಯ್ಯನವರ ಸ್ಟ್ಯಾಚೂ ಇರುವಂಥ ಈ ಒಂದು ಊರಿನಲ್ಲಿ ಈ ನಗರದಲ್ಲಿ ಹಾಕಿದರೆ ಅವರು ಯಾವ ಕೆಲಸವನ್ನು ಮಾಡದೇ ಹೋದರೆ ಇದರ ಕ್ಯುಮ್ಯುಲಿಟೀವ್ ಎಫೆಕ್ಟ್ ಬೆಂಗಳೂರು ನಗರದಲ್ಲಿ ಏನಾಗುತ್ತದೆ ಎನ್ನುವುದನ್ನು ಆಡಳಿತವನ್ನು ವಹಿಸಿ ಕೊಂಡಿರುವಂಥ ಮಾನ್ಯ ಮಂತ್ರಿಗಳು ಅರ್ಥಮಾಡಿಕೊಳ್ಳಬೇಕು. ಅವರ ಕೈಕೆಳಗೆ ಇರುವಂಥ ಸೆಕ್ರೆಟರಿಗಳು ಅರ್ಥ ಮಾಡಿಕೊಳ್ಳಬೇಕು, ಚೀಫ್ ಇಂಜಿನಿಯರ್‌ಗಳು ಅರ್ಥ ಮಾಡಿಕೊಳ್ಳಬೇಕು. ಬೆಂಗಳೂರು ನಗರಕ್ಕೆ ಇವರನ್ನು ಕಳುಹಿಸುವಾಗ ನಾನು ಹಿಂದೆ ಹೇಳಿದ್ದೆ. Identify the best of the people amongst the engineers. ಅವರನ್ನು ಹಾಕಿ ಎಂದು ಹೇಳಿದ್ದೆ. ಇಲ್ಲಿ ಬಂದು ಸೇರಿದಂಥ ಇಂಜಿನಿಯರ್‌ಗಳ ಮನೋಭಾವ ಹೀಗಿರುತ್ತದೆ. ಕಾರ್ಪೊರೇಷನ್‌ಗೆ ಬರಬೇಕು, ದುಡ್ಡು ಮಾಡಬೇಕು. ಕಾರ್ಪೊರೇಷನ್‌ನಲ್ಲಿ ವಿರೋಧ ಬಂದರೆ ಬಿಡಿಎ.ಗೆ ಹೋಗಬೇಕು, ಅಲ್ಲಿ ದುಡ್ಡು ಮಾಡಬೇಕು. ಅಲ್ಲಿ ವಿರೋಧ ಬಂತು ಅಂದರೆ, ವಾಟರ್ ಸಪ್ಲೈ ಬೋರ್ಡ್‌ಗೆ ಹೋಗಬೇಕು, ಅಲ್ಲಿ ದುಡ್ಡು ಮಾಡಬೇಕು, ಅಲ್ಲಿ ವಿರೋಧ ಬಂತು ಅಂದರೆ ಸ್ಲಮ್‌ಕ್ಲಿಯರೆನ್ಸ್ ಬೋರ್ಡ್‌ಗೆ ಹೋಗಬೇಕು. ಹೀಗೆ ಎಲ್ಲೆಲ್ಲಿ ಅವಕಾಶ ಇದೆ ಅಲ್ಲೆಲ್ಲಾ ಹೋಗಬೇಕು. ಯೂನಿವರ್ಸಿಟಿಗಳಾದರೂ ಪರವಾಯಿಲ್ಲ, ಈ ಇಂಜಿನಿಯರ್‌ಗಳಿಗೆ ಎಲ್ಲೆಲ್ಲಿ ಜಾಗ ಇದೆ ಆ ಎಲ್ಲಾ ಜಾಗಗಳಿಗೂ ಹೋಗಿ ಸೇರಿಕೊಳ್ಳಬೇಕು. ಅವರು ಯಾವುದೇ ಜಾಗವನ್ನು ಬಿಡುವುದಿಲ್ಲ. ನಾಳೆ ಮುಖ್ಯ ಇಂಜಿನಿಯರ್‌ಗಳಾದರೆ, ಅವರಿಗೆ ಬಹಳಷ್ಟು ಅನುಭವ ಇದೆ ಎಂದು ಭಾವಿಸಿಕೊಂಡಿದ್ದಾರೇನೋ ಗೊತ್ತಿಲ್ಲ. ಈ ಒಂದು ಹೆಗ್ಗಣಗಳಾದಂಥ ಇಂಜಿನಿಯರ್‌ಗಳನ್ನು ತಾವು ಶೋಧನೆ ಮಾಡಿ ಇವರು ಎಲ್ಲೆಲ್ಲಿದ್ದಾರೆ ಬೆಂಗಳೂರು ನಗರಕ್ಕೆ ಎಷ್ಟು ಅನ್ಯಾಯವಾಗುತ್ತಿದೆ. ಈ Cumulative disasterous effect for Bangalore. A planned growth or to sustain its beauty or its reputation at international level ಅದನ್ನು ಉಳಿಸಿಕೊಳ್ಳಬೇಕಾದರೆ, ತಕ್ಷಣ ಯಾವ ಯಾವ ಇಂಜಿನಿಯರ್ ಎಷ್ಟೆಷ್ಟು ವರ್ಷಗಳಿಂದ ಬೆಂಗಳೂರು ನಗರದಲ್ಲಿ ಇದ್ದಾರೆ ಯಾವ ಯಾವ ಇಲಾಖೆಯಲ್ಲಿ ಕೆಲಸ ಮಾಡಿದ್ದಾರೆ. ಯಾವ ಕೆಲಸ ಮಾಡಿ ಒಳ್ಳೆಯ ಹೆಸರು ತೆಗೆದುಕೊಂಡಿದ್ದಾರೋ ಅಥವಾ ಕೆಟ್ಟ ಹೆಸರನ್ನು ತೆಗೆದುಕೊಂಡಿದ್ದಾರೋ ಎನ್ನುವುದರ ಬಗ್ಗೆ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ತೆಗೆದುನೋಡಿದರೂ ಪರವಾಯಿಲ್ಲ. ಡೈರೆಕ್ಟಾಗಿ ಬೇರೆ ಇನ್‌ವೆಸ್ಟಿಗೇಟ್

ಮಾಡಿ ತಮ್ಮ ರಿಪೋರ್ಟ್ ತೆಗೆದುಕೊಳ್ಳುವುದಾದರೂ ಪರವಾಯಿಲ್ಲ. ಈ ಕೆಲಸವನ್ನು ಮಾಡದೆ ಹೋದರೆ Bangalore will die as a city without any life. It makes life of people of Bangalore miserable, ಇದನ್ನು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಬೆಂಗಳೂರು ನಗರದಲ್ಲಿ ಸರಿಯಾದ ರೀತಿಯಲ್ಲಿ ಸೇವೆ ಮಾಡದೇ ಇರುವ ಇಂಜಿನಿಯರುಗಳನ್ನು ಸಾಧ್ಯವಾದಷ್ಟು ಬೆಂಗಳೂರಿನಿಂದ ಹೊರಗಡೆ ಕಳುಹಿಸುವಂಥ ಕೆಲಸವನ್ನು ಮಾನ್ಯ ಮಂತ್ರಿಗಳು ಮಾಡಿದರೆ, ಬೆಂಗಳೂರು ನಗರದ ೪೦ ಲಕ್ಷ ಜನರ ಮಾತ್ರ ಬೇರೆ ಕಡೆಗಳಿಂದ ಬೆಂಗಳೂರಿಗೆ ವಾಸ ಮಾಡಲಿಕ್ಕೆ ಬರುವವರ ಹಾಗೂ ಇಲ್ಲಿ ಉದ್ಯೋಗ ಮಾಡುವವರೆಲ್ಲರ ಒಂದು ಆಶೀರ್ವಾದವನ್ನು ತಾವು ಪಡೆಯುತ್ತೀರಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ರಸ್ತೆಗಳ ವಿಷಯ ಹೇಳುವುದಾದರೆ ನಮ್ಮಲ್ಲಿ ನ್ಯಾಷನಲ್ ಹೈವೇ, ಸ್ಟೇಟ್ ಹೈವೇ ಇದೆ. ಅದಕ್ಕೆ ಸಂಬಂಧಪಟ್ಟಂತೆ ಬೆಂಗಳೂರಾದ್ಯಂತ ಈ ರಸ್ತೆಗಳಿಂದ ಲಿಂಕ್ ರೋಡ್ಸ್ ಇವೆ. ಬೇರೆ ರಾಜ್ಯಗಳಿಂದ ಬರುವ ವಾಹನಗಳು, ಮತ್ತು ಬೇರೆ ಜಿಲ್ಲೆಗಳಿಂದ ಬರುವಂಥ ವಾಹನಗಳು, ಎಲ್ಲದಕ್ಕೂ ಬೆಂಗಳೂರು ನಗರದಲ್ಲಿ ಓಡಾಡುತ್ತಿರಬೇಕಾದರೆ ಬೆಂಗಳೂರು ನಗರದ ರಸ್ತೆಗಳನ್ನು ಮೇನ್‌ಟೈನ್ ಮಾಡುವಂಥ ಶಕ್ತಿ, ಬೆಂಗಳೂರು ನಗರ ಪಾಲಿಕೆಗೆ ಬಹಳ ಕಡಿಮೆಯಾಗುತ್ತಿದೆ. ಬೆಂಗಳೂರು ನಗರದಲ್ಲಿ ಇಷ್ಟೊಂದು ವಾಹನಗಳು ಓಡಾಡುತ್ತಿರಬೇಕಾದರೆ ಬೆಂಗಳೂರು ನಗರಪಾಲಿಕೆ ಮೇಲೆ ಬಹಳಷ್ಟು ಆರ್ಥಿಕ ಭಾರ ಬಿದ್ದು. ಬೇರೆ ಅಭಿವೃದ್ಧಿ ಕಾರ್ಯಗಳಿಗೆ ಧಕ್ಕೆ ಬರುವಂಥ ರೀತಿಯಲ್ಲಿ ನಡೆಯುತ್ತಾ ಇರಬೇಕಾದರೆ ರಾಜ್ಯ ಸರ್ಕಾರ, ಪಿಡಬ್ಲ್ಯುಡಿಯಿಂದ ಕೂಡ ಸಾಧ್ಯವಾದಷ್ಟು ಹಣವನ್ನು ನಗರಸಭೆಗೆ ಕೊಡುವಂಥ ಕೆಲಸವನ್ನು ಮಾಡಬೇಕು. ಇಲ್ಲದೇ ಹೋದರೆ, ಬೆಂಗಳೂರು ನಗರಪಾಲಿಕೆ ಅತಿ ಶೀಘ್ರವಾಗಿ ಇಂತಹ ಕೆಲಸಗಳನ್ನು ಮಾಡಲಿಕ್ಕೆ ಆಗುವುದಿಲ್ಲ. ಆದ್ದರಿಂದ ಅದರ ಬಗ್ಗೆ ಗಮನಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಗೆಯೇ ಬೆಂಗಳೂರು ನಗರದ ಒಳಗಡೆ ಹೆವಿ ವೆಹಿಕಲ್ಸ್, ಬೇರೆ ರಾಜ್ಯಗಳಿಂದ ಬರುವಂತಹವು ಆಗಲಿ, ಬೇರೆ ಜಿಲ್ಲೆಗಳಿಂದ ಬರುವಂತಹವು ಓಡಾಡುತ್ತವೆ. ಈಗ ನಾವು ಸರ್ಕ್ಯುಲರ್ ರೋಡ್ ಎಂದು ಹೇಳುತ್ತೇವೆ, ರಿಂಗ್ ರೋಡ್ ಎಂದು ಹೇಳುತ್ತೇವೆ ಅದೇ ರೀತಿ ನಾನಾ ರೀತಿಯ ಹೆಸರುಗಳನ್ನು ಹೇಳುತ್ತೇವೆ. ಆ ಹೆವಿ ವೆಹಿಕಲ್ಸ್ ಆ ರಸ್ತೆಯಲ್ಲಿ ಓಡಾಡಿ ಬೆಂಗಳೂರು ನಗರದ ಒಳಗೆ ಬರದ ರೀತಿಯಲ್ಲಿ ಏನು ಮಾಡಬೇಕೊ ಆ ಕೆಲಸವನ್ನು ಮಾಡುತ್ತಿಲ್ಲ. ಅಲ್ಲಿಯೂ ಸಹ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ರಸ್ತೆಗಳನ್ನು ಮಾಡುತ್ತಿದ್ದೇವೆ. ಇಲ್ಲಿರುವ ರಸ್ತೆಗಳನ್ನು ಹಾಳು ಮಾಡುತ್ತಿದ್ದೇವೆ. ಹೊಸ ರಸ್ತೆಗಳನ್ನು ಮಾಡುವಂಥಾದ್ದಕ್ಕೂ ದುಡ್ಡು ಖರ್ಚಾಗುತ್ತಿದೆ. ಈಗ ಬೆಂಗಳೂರು ನಗರದ ಒಳಗಡೆ ಇರತಕ್ಕ ರಸ್ತೆಗಳನ್ನು ಉಳಿಸಿಕೊಳ್ಳುವುದಕ್ಕೂ ನಮಗೆ ಸಾಧ್ಯವಿಲ್ಲದಂತಾಗುತ್ತಿದೆ. ಆದ್ದರಿಂದ, ಇದರ ಬಗ್ಗೆ ಒಂದು ಸಮಗ್ರವಾದಂಥ ಯೋಜನೆ ಹಾಕಿ ಯಾವರೀತಿಯಲ್ಲಿ ಡೀವಿಯೇಷನ್ ರೋಡ್ಸ್ ಮಾಡಬೇಕು, ಯಾವ ರೀತಿಯಲ್ಲಿ ಡೈವರ್ಸ್ ರೋಡ್ಸ್ ಮಾಡಬೇಕು, ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಬೆಂಗಳೂರು ನಗರಕ್ಕೆ ಎಷ್ಟು ಸೇವೆಯನ್ನು ಲೋಕೋಪಯೋಗಿ ಇಲಾಖೆಯಿಂದ ಮಾಡುವುದಕ್ಕೆ ಆಗುತ್ತದೆಯೋ ಅಷ್ಟನ್ನು ಮಾಡಬೇಕೆಂದು ಹೇಳುತ್ತೇನೆ. ಬೆಂಗಳೂರು ನಗರದ ಜನತಾ ಪ್ರತಿನಿಧಿಗಳನ್ನು ಬರಮಾಡಿಕೊಂಡು ಬೆಂಗಳೂರಿನಲ್ಲಿ ಕಷ್ಟ ಏನಿದೆ, ಲೋಕೋಪಯೋಗಿ ಇಲಾಖೆಯಿಂದ ಏನು ಅನ್ಯಾಯವಾಗುತ್ತದೆ. ಏನು ತೊಂದರೆಯಾಗುತ್ತದೆ ಎನ್ನುವ ವಿಷಯವನ್ನು ಅರ್ಥ ಮಾಡಿಕೊಂಡು. ಬೆಂಗಳೂರು ನಗರಪಾಲಿಕೆ ಮತ್ತು ಲೋಕೋಪಯೋಗಿ ಇಲಾಖೆ ಒಡಂಬಡಿಕೆಗೆ ಬಂದು ಸರಿಯಾದ ಒಂದು ಪ್ರಗತಿದಾಯಕವಾದ ಕೆಲಸವನ್ನು ಮಾಡಬೇಕೆಂದು ಹೇಳಿ, ಇಷ್ಟು ಸಮಯ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ, ತಮಗೆಲ್ಲರಿಗೂ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್ —ಇಲ್ಲಿಗೆ ಲೋಕೋಪಯೋಗಿ ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆ ಮುಕ್ತಾಯವಾಯಿತು. ಈಗ ಸಭೆ ಮುಂದುವರಿದು ದಿನಾಂಕ ೯-೭-೧೯೯೦ ರಂದು ಸೋಮವಾರ ಬೆಳಿಗ್ಗೆ ೯.೦೦ ಗಂಟೆಗೆ ಮತ್ತೆ ಸೇರುತ್ತದೆ.

(ಸದನವು ಸಂಜೆ ೭.೦೦ ಗಂಟೆಗೆ ಮುಕ್ತಾಯವಾಗಿ ಮತ್ತೆ ಸೋಮವಾರ (೯-೭-೧೯೯೦) ಬೆಳಿಗ್ಗೆ ೯.೦೦ ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು.)